ಮಂಗಳೂರು
ಬುಧವಾರ, 25 ಮಾರ್ಚ್ 2026
ಸಂಪುಟ 48, ಸಂಚಿಕೆ 6 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪಾಕ್ ಅತ್ಯಂತ ಮಾಲಿನ್ಯ ದೇಶ | ೦೭
ಇರಾನ್ ಮೇಲೆ 3 ಸಾವಿರ ದಾಳಿ! | ೦೭
ನುಸುಳುಕೋರರನ್ನು ಅಧಿಕಾರಿಗಳಿಗೊಪ್ಪಿಸಿ | ೦೭

ಲೋಕಸಭಾ ಕ್ಷೇತ್ರ 543ರಿಂದ 816 ಕ್ಷೇತ್ರಗಳಿಗೆ ವಿಸ್ತರಣೆ

ಮಹಿಳೆಯರಿಗೆ 273 ಕ್ಷೇತ್ರಗಳ ಮೀಸಲು?



ವಿಶೇಷ ಅಧಿವೇಶನ?

ಮೂಲಗಳ ಪ್ರಕಾರ, ಸರ್ಕಾರದ ಮಟ್ಟದಲ್ಲಿ ಈಗಾಗಲೇ ವಿಶೇಷ ಅಧಿವೇಶನ ಬಗ್ಗೆ ಚರ್ಚೆ ನಡೆದಿದೆ. ಹಾಗೆಯೇ, ಸೋಮವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಎನ್‌ಡಿಎ ಮತ್ತು ಕಾಂಗ್ರೆಸ್ ಹಾಗೂ ಟಿಎಂಸಿ ಪಕ್ಷಗಳನ್ನು ಹೊರತುಪಡಿಸಿ ಉಳಿದ ಪಕ್ಷಗಳ ಸಭಾ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ ಎನ್ನಲಾಗುತ್ತಿದೆ. ಆದರೆ, ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್, ಟಿಎಂಸಿ ಜತೆ ಚರ್ಚೆಗೆ ಇನ್ನಷ್ಟು ಸಮಯಾವಕಾಶ ಮತ್ತು ಹಾಲಿ ವಿಧಾನಸಭೆ ಚುನಾವಣೆ ಸಿದ್ಧತೆಯಲ್ಲಿ ಭಾಗಿಯಾಗುತ್ತಿರುವುದರಿಂದ ಈ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡನೆಯಾಗುವುದಿಲ್ಲ ಎನ್ನಲಾಗುತ್ತಿದೆ. ಇದಕ್ಕಾಗಿ, ವಿಶೇಷ ಅಧಿವೇಶನ ಕರೆಯುವ ಸಾಧ್ಯತೆಗಳಿವೆ ಎನ್ನಲಾಗಿದೆ.



ಹೊಸದಿಲ್ಲಿ: ಮಹಿಳಾ ಮೀಸಲು ಕಾಯ್ದೆ ಜಾರಿಗೆ ತರುವ ದಿಸೆಯಲ್ಲಿ ಕೇಂದ್ರ ಸರ್ಕಾರ ದೊಡ್ಡ ಹೆಜ್ಜೆ ಇಡಲು ಸಜ್ಜಾಗಿದ್ದು, ಇಂದಿನ 543 ಲೋಕಸಭಾ ಕ್ಷೇತ್ರಗಳನ್ನು ಪುನರ್‌ರಚಿಸಿ, ಒಟ್ಟು ಸದಸ್ಯರ ಸಂಖ್ಯೆಯನ್ನು 816ಕ್ಕೆ ಏರಿಸುವ ಮಹತ್ವಾಕಾಂಕ್ಷಿ ಯೋಜನೆ ರೂಪಿಸಲಾಗಿದೆ. ಇದರ ಭಾಗವಾಗಿ ಮಹಿಳೆಯರಿಗೆ 273 ಕ್ಷೇತ್ರಗಳನ್ನು ಮೀಸಲಿಡಲು ಕೇಂದ್ರ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಯನ್ನು ಶೀಘ್ರ ಜಾರಿಗೆ ತರಲು, ಕ್ಷೇತ್ರ ಮರುವಿಂಗಡಣೆ ಪೂರ್ಣಗೊಳ್ಳುವ ಮೊದಲೇ 2 ಪ್ರತ್ಯೇಕ ಮಸೂದೆಗಳನ್ನು ಮಂಡಿಸಲು ಸರ್ಕಾರ ಸನ್ನದ್ಧವಾಗಿದೆ. ಒಂದು ಸಂವಿಧಾನ ತಿದ್ದುಪಡಿ ಮಸೂದೆ ಮೂಲಕ ನಾರಿ ಶಕ್ತಿ ವಂದನ್ ಅಧಿನಿಯಮದಲ್ಲಿ ತಿದ್ದುಪಡಿ ಮಾಡಲಾಗುವುದಾದರೆ, ಮತ್ತೊಂದು ಸಾಮಾನ್ಯ ಮಸೂದೆ ಮೂಲಕ ಡಿಲಿಮಿಟೇಶನ್ ಕಾಯ್ದೆಯಲ್ಲಿ ಬದಲಾವಣೆ ತರಲಾಗುತ್ತದೆ. ಸದ್ಯ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಇರುವುದರಿಂದ ಮತ್ತು ಬಜೆಟ್ ಅಧಿವೇಶನ ಮುಗಿಯಲು ಕೆಲವೇ ದಿನ ಬಾಕಿಯಿದ್ದು, ಈಗ ತಿದ್ದುಪಡಿ ಮಸೂದೆ ಮಂಡಿಸಿ ಅನುಮೋದನೆ ಕಷ್ಟವಾಗುವ ಸಾಧ್ಯತೆ ಇರುವುದರಿಂದ ಚುನಾವಣೆ ಮುಗಿದ ಮೇಲೆ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ. ➡ಪುಟ ೪

ಏನು ಬದಲಾವಣೆ?

ಪ್ರಸ್ತುತ 543 ಕ್ಷೇತ್ರಗಳಿಂದಲೇ ಹೊಸ 273 ಕ್ಷೇತ್ರಗಳನ್ನು ಬೇರ್ಪಡಿಸುವ ಸಾಧ್ಯತೆ ಇದೆ. ಅಂದರೆ, ಇಂದಿನ ಕ್ಷೇತ್ರಗಳನ್ನೇ ಪುನರ್‌ವಿಂಗಡಿಸಿ ಮಹಿಳೆಯರಿಗೆ ಮೀಸಲಾದ ಕ್ಷೇತ್ರಗಳನ್ನು ರೂಪಿಸುವುದು ಪ್ರಮುಖ ಆಯ್ಕೆಯಾಗಿದೆ. ಆದರೆ, ಎಸ್‌ಸಿ ಮತ್ತು ಎಸ್‌ಟಿ ಮೀಸಲು ಕ್ಷೇತ್ರಗಳಂತೆ ಮಹಿಳೆಯರಿಗೆ ಮೀಸಲಾತಿ ನಿಗದಿಪಡಿಸಲು ಸ್ಪಷ್ಟ ಮಾನದಂಡ ಇಲ್ಲದಿರುವುದು ಸವಾಲಾಗಿ ಪರಿಣಮಿಸಿದೆ. ಇದಕ್ಕಾಗಿ ಲಾಟರಿ ವಿಧಾನ ಬಳಸಿ 273 ಕ್ಷೇತ್ರಗಳನ್ನು ಆಯ್ಕೆ ಮಾಡುವ ಸಾಧ್ಯತೆಯೂ ಪರಿಗಣನೆಯಲ್ಲಿದೆ. ರಾಜ್ಯ ವಿಧಾನಸಭೆಗಳಲ್ಲೂ ಶೇ.33 ಮಹಿಳಾ ಮೀಸಲಾತಿಯನ್ನು 'ಪ್ರೋ ರಾಟಾ' ಸೂತ್ರದಲ್ಲಿ ಜಾರಿಗೆ ತರಲು ಯೋಜನೆಯಿದೆ.

2011ರ ಜನಗಣತಿ ಆಧಾರ

ಕ್ಷೇತ್ರ ಮರುವಿಂಗಡಣೆಗೆ 2011ರ ಜನಗಣತಿ ಅಂಕಿಅಂಶಗಳನ್ನು ಆಧಾರವಾಗಿಡಲಾಗುತ್ತದೆ. ಏಕೆಂದರೆ ಪ್ರಸ್ತುತ ಜನಗಣತಿ ಇನ್ನೂ



ಪೂರ್ಣಗೊಂಡಿಲ್ಲ. ಮಹಿಳಾ ಮೀಸಲು ಕಾಯ್ದೆ ಈಗಾಗಲೇ ಸಂವಿಧಾನ ತಿದ್ದುಪಡಿಯ ಮೂಲಕ ಅಂಗೀಕೃತವಾಗಿದ್ದರೂ, ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೇ ಅದು ಜಾರಿಗೆ ಬರಲಿದೆ.

2029ರಿಂದ ಜಾರಿ ಸಾಧ್ಯತೆ

• ಪುಟ ೪

ಹಿಂದು, ಬೌದ್ಧ, ಸಿಖ್‌ರಿಗೆ ಮಾತ್ರ ಅನ್ವಯ

ಮತಾಂತರವಾದ್ರೆ ಮೀಸಲಾತಿ ಸಿಗಲ್ಲ



» ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿ ಮೀಸಲು ಹಕ್ಕಿಗಾಗಿ ಬೇಡಿಕೆ
» ಸ್ಪಷ್ಟವಾಗಿ ನಿರಾಕರಿಸಿದ ಸುಪ್ರೀಂ ಕೋರ್ಟ್

ಹೊಸದಿಲ್ಲಿ: ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯೊಬ್ಬರು ಹಿಂದು, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಬಿಟ್ಟು ಬೇರೆ ಧರ್ಮಕ್ಕೆ ಮತಾಂತರವಾದರೆ, ಅವರು ಮತಾಂತರವಾದ ಕ್ಷಣದಿಂದಲೇ ತಮ್ಮ ಪರಿಶಿಷ್ಟ ಜಾತಿ(ಎಸ್‌ಸಿ) ಸ್ಥಾನಮಾನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನ್ಮೋಹನ್ ಅವರ ಪೀಠವು, ಆಂಧ್ರ ಪ್ರದೇಶ ಹೈಕೋರ್ಟ್ ನೀಡಿದ ಆದೇಶವನ್ನು ಸಮರ್ಥಿಸಿ ಈ ತೀರ್ಪು ಪ್ರಕಟಿಸಿದೆ.

ನ್ಯಾಯಾಲಯ ಹೇಳುವಂತೆ, ಸಂವಿಧಾನದ 1950ರ ಪರಿಶಿಷ್ಟ ಜಾತಿಗಳ ಆದೇಶದ 3ನೇ ವಿಧಿಯ ಪ್ರಕಾರ, ಹಿಂದೂ, ಸಿಖ್ ಅಥವಾ ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಬೇರೆ ಧರ್ಮ ಅನುಸರಿಸುವವರನ್ನು ಪರಿಶಿಷ್ಟ ಜಾತಿಯ ಸದಸ್ಯರನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ, ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಕ್ಷಣದಿಂದಲೇ ವ್ಯಕ್ತಿ ತನ್ನ ಎಸ್‌ಸಿ ಸ್ಥಾನಮಾನವನ್ನು ತಕ್ಷಣ ಮತ್ತು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ.

ಇದೇ ವೇಳೆ, ಪರಿಶಿಷ್ಟ ಜನಾಂಗ(ಎಸ್‌ಟಿ) ಕುರಿತು ಕೂಡ ನ್ಯಾಯಾಲಯ ಸ್ಪಷ್ಟನೆ ನೀಡಿದ್ದು, ಧರ್ಮಾಂತರವಾದ ನಂತರ ವ್ಯಕ್ತಿಯ ಮೂಲ ಜನಾಂಗದ ಆಚಾರ-ವಿಚಾರಗಳು, ಸಂಪ್ರದಾಯಗಳು ಮತ್ತು ಜೀವನಶೈಲಿ ನಿಧಾನವಾಗಿ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಅಂತಹ ಸಂದರ್ಭಗಳಲ್ಲಿ, ವ್ಯಕ್ತಿ ತನ್ನ ಮೂಲ ಜನಾಂಗದೊಂದಿಗೆ ಗುರುತಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಹೇಳಿದೆ.

ಎಸ್‌ಸಿ ಸ್ಥಾನಮಾನ ಕಳೆದುಕೊಂಡ ನಂತರ, ಮೀಸಲು, ಕಾನೂನು ರಕ್ಷಣೆ, ವಿಶೇಷ ಸೌಲಭ್ಯಗಳು ಸೇರಿದಂತೆ ಎಲ್ಲಾ ವಿಧದ ಹಕ್ಕುಗಳು ತಕ್ಷಣವೇ ರದ್ದಾಗುತ್ತವೆ ಎಂದು ಸುಪ್ರೀಂ ಹೇಳಿದೆ.

ಈ ಸಂದರ್ಭದಲ್ಲಿ, 1950ರ ಆದೇಶದ ಇತಿಹಾಸವನ್ನು ಉಲ್ಲೇಖಿಸಿದ ನ್ಯಾಯಾಲಯ, ಆರಂಭದಲ್ಲಿ ಪರಿಶಿಷ್ಟ ಜಾತಿ ಸ್ಥಾನಮಾನವನ್ನು ಹಿಂದುಗಳಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು ಎಂದು ತಿಳಿಸಿದೆ. ➡ಪುಟ ೪

ಸ್ವಯಂಘೋಷಣೆ ಮಾತ್ರ ಸಾಲದು

ಒಬ್ಬ ವ್ಯಕ್ತಿ ಮತ್ತೆ ಹಿಂದು, ಸಿಖ್ ಅಥವಾ ಬೌದ್ಧ ಧರ್ಮಕ್ಕೆ ಮತಾಂತರವಾದಲ್ಲಿ, ಅವನು ಪರಿಶಿಷ್ಟ ಜಾತಿ ಸ್ಥಾನಮಾನ ವನ್ನು ಮರಳಿ ಪಡೆಯಲು 3 ಪ್ರಮುಖ ಅಂಶಗಳನ್ನು ಸಾಬೀತುಪಡಿಸಬೇಕಾಗುತ್ತದೆ. ಮೂಲವಾಗಿ ಪರಿಶಿಷ್ಟ ಜಾತಿಗೆ ಸೇರಿದವನಾಗಿರುವುದು, ನಿಜವಾದ ಪುನರ್ಮತಾಂತರ ನಡೆದಿರುವುದು ಮತ್ತು ಆತನನ್ನು ಮೂಲ ಸಮುದಾಯವು ಮತ್ತೆ ಸ್ವೀಕರಿಸಿರುವುದು ಎಂಬುದು ಸ್ಪಷ್ಟವಾಗಬೇಕು. ಕೇವಲ ಸ್ವಯಂ ಘೋಷಣೆ ಮಾತ್ರ ಸಾಕಾಗುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ: ಮೃಗಶಿರ

ದಿನದ ಮಾತು

ಚಿತೆ ಹೆಣವನ್ನು ಸುಡುತ್ತದೆ. ಚಿಂತೆ ಬದುಕಿರುವವರನ್ನು ಸುಡುತ್ತದೆ.
▲ ಲೋಕೋಕ್ತಿ

ಸಾಧಕನಿಗೆ ಬಾಧಕವಾಗುವ ಲೋಕವಾಸನೆ

ಪದ ಸಂಚಲನ
• ವಿಶ್ವನಾಥ ಸುಂಕಸಾಳ
• ಪುಟ ೬

ಕಿರುಸುದ್ದಿ

ಅಭಿಮಾನಿಗಳ ನೆನಪಿಗಾಗಿ 11 ಆಸನ ಮೀಸಲು

ಬೆಂಗಳೂರು: ಕಳೆದ ವರ್ಷ ವಿಜಯೋತ್ಸವ ವೇಳೆ ಪ್ರಾಣ ಕಳೆದುಕೊಂಡಿದ್ದ 11 ಅಭಿಮಾನಿಗಳ ನೆನಪಿಗಾಗಿ ಚಿನ್ನಸ್ವಾಮಿಯಲ್ಲಿ ನಡೆಯುವ ಐದೂ ಆರ್‌ಸಿಬಿ ತವರು ಪಂದ್ಯದ ವೇಳೆ 11 ಆಸನಗಳನ್ನು ಖಾಲಿ ಬಿಡುವುದಾಗಿ ಫ್ರಾಂಚೈಸಿ ತಿಳಿಸಿದೆ. ಕ್ರೀಡಾಂಗಣಕ್ಕೆ ಪಂದ್ಯಗಳು ಮರಳಿದ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಾಹಕ ರಾಜೇಶ್ ಮೆನನ್, ನಾವು ಆ ದುರಂತ ಮರೆಯುವುದಿಲ್ಲ. 11 ಜನರು ನಮ್ಮ ಪಯಣದಲ್ಲಿ ಇದ್ದೇ ಇರುತ್ತಾರೆ. ಚಿನ್ನಸ್ವಾಮಿಯಲ್ಲಿ ನಡೆಯುವ 5 ಪಂದ್ಯಗಳಲ್ಲಿ 11 ಆಸನಗಳನ್ನು ಖಾಲಿ ಬಿಡಲಾಗುವುದು. ಮೊದಲ ಪಂದ್ಯಕ್ಕೂ ಮುನ್ನ ಅಭ್ಯಾಸದ ವೇಳೆ ನಮ್ಮ ತಂಡದ ಎಲ್ಲಾ ಆಟಗಾರರು 11 ಎಂಬ ಸಂಖ್ಯೆಯೊಂದಿಗೆ ಮೈದಾನಕ್ಕಿಳಿಯುತ್ತಾರೆ. ಅಲ್ಲದೆ ಪಂದ್ಯದ ವೇಳೆ ಕೈಗೆ ಕಪ್ಪು ಬ್ಯಾಂಡ್ ಕೂಡ ಧರಿಸುತ್ತಾರೆ ಎಂದರು.

• ಪುಟ ೧೧

ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕಿದೆ: ಸುಪ್ರೀಂ

• ಪುಟ ೭

ಬಿಕ್ಕಟ್ಟಿನ ನಡುವೆಯೂ ಇಂಧನ ಪೂರೈಕೆ ಭರವಸೆ

• ಪುಟ ೭

ಸೇನಾ ವಿಮಾನ ಪತನ 66 ಮಂದಿ ಸಾವು

• ಪುಟ ೭

ಶೇ.5 ಕುಟುಂಬಗಳಿಗಷ್ಟೇ 100 ದಿನಗಳ ಉದ್ಯೋಗ

• ಪುಟ ೫

ಇಂದಿನಿಂದ ಮೈಸೂರಲ್ಲಿ ಆರೆಸ್ಸೆಸ್ ಶೈಕ್ಷಣಿಕ ಸಮ್ಮೇಳನ

• ಪುಟ ೫

ಆರೋಗ್ಯಕರ ಗ್ರಾ.ಪಂ. ರೇಸ್‌ನಲ್ಲಿ ವಂಡ್ಸೆ ಗ್ರಾ.ಪಂ.

• ಪುಟ ೭

ಎಐಎಡಿಎಂಕೆ ಪ್ರಣಾಳಿಕೆಯಲ್ಲಿ ಉಚಿತ ಫ್ರಿಡ್ಜ್!

• ಪುಟ ೭

ಪರಿಷತ್‌ನಲ್ಲೂ ಕರ್ನಾಟಕ ವಿವಾಹ ವಿಧೇಯಕ 2026 ಅಂಗೀಕಾರ

ಮರ್ಯಾದಾ ಹತ್ಯೆಗೆ ಕಡಿವಾಣ

ರಾಜ್ಯ ಸರ್ಕಾರದ ಮಹತ್ವದ ಹೆಜ್ಜೆ

ವಿಧಾನಪರಿಷತ್: ರಾಜ್ಯದಲ್ಲಿ ಸಾಮಾಜಿಕ ಸಾಮರಸ್ಯವನ್ನು ಎತ್ತಿಹಿಡಿಯುವ ಮತ್ತು ಮರ್ಯಾದಾ ಹತ್ಯೆ ಯಂತಹ ಅಮಾನವೀಯ ಕೃತ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಹತ್ವದ ಹೆಜ್ಜೆಯನ್ನಿಟ್ಟಿದೆ.

ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕ-2026ನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲ್ ಅವರು ವಿಧಾನಪರಿಷತ್ತಿನ ಕಲಾಪದ ವೇಳೆ ಮಂಡಿಸುತ್ತಾ ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಬಗ್ಗೆ ವಿವರಿಸಿದರು. ಕರ್ನಾಟಕ ರಾಜ್ಯದಲ್ಲಿ ಜಾತಿ-ಆಧಾರಿತ ತಾರತಮ್ಯವು ನಿರಂತರವಾಗಿ, ಅಂತರ್ಜಾತಿ ವಿವಾಹಗಳ ಮೂಲಕ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಅಡ್ಡಿಯಿದೆ. ➡ಪುಟ ೪




ಪ್ರಮುಖ ಉದ್ದೇಶಗಳು

12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಇವ ನಮ್ಮವ ಇವ ನಮ್ಮವ ಎಂಬ ಸಮಾನತೆಯ ಸಂದೇಶದಿಂದ ಪ್ರೇರಿತವಾಗಿರುವ ಈ ಕಾಯ್ದೆಯು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ➡ಪುಟ ೪

ಸುಪ್ರೀಂ ತೀರ್ಪಿನಂತೆ ಚಿಕಿತ್ಸೆ ಸ್ಥಗಿತ | 13 ವರ್ಷಗಳ ಕೋಮಾ ಕೊನೆ

ಹರೀಶ್ ರಾಣಾ ಬದುಕು ಅಂತ್ಯ

ದೇಶದ ಮೊದಲ ಪ್ಯಾಸಿವ್ ದಯಾಮರಣ ಪ್ರಕರಣ



ಹೊಸದಿಲ್ಲಿ: ದೇಶದಲ್ಲಿ ಮೊದಲ ಬಾರಿಗೆ ಪ್ಯಾಸಿವ್ ದಯಾಮರಣಕ್ಕೆ ಅನುಮತಿ ಪಡೆದ ವ್ಯಕ್ತಿ ಹರೀಶ್ ರಾಣಾ (31) ಮಂಗಳವಾರ ದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು ಎಂದು ಮೂಲಗಳು ತಿಳಿಸಿವೆ. 2013ರಿಂದಲೇ ಕೋಮಾ ಸ್ಥಿತಿಯಲ್ಲಿದ್ದ ಹರೀಶ್ ರಾಣಾ, ಕಳೆದ 13 ವರ್ಷಗಳಿಂದ ಜೀವಮರಣ ಹೋರಾಟ ನಡೆಸುತ್ತಿದ್ದರು. ಮಾ.14ರಂದು ಘಾಜಿಯಾಬಾದ್‌ನ ಮನೆಯಿಂದ ಅವರನ್ನು ಏಮ್ಸ್‌ನ ಡಾ.ಅಂಬೇಡ್ಕರ್ ಇನ್ಸಿಟ್ಯೂಟ್ ರೋಟರಿ ಕ್ಯಾನ್ಸರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು.

ಮಾ.11ರಂದು ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದ್ದು, ಹರೀಶ್ ರಾಣಾಗೆ ಪ್ಯಾಸಿವ್ ದಯಾಮರಣಕ್ಕೆ ಅನುಮತಿ ನೀಡಿತ್ತು. ಪಂಜಾಬ್ ವಿಶ್ವವಿದ್ಯಾಲಯದ ಬಿ.ಟೆಕ್ ವಿದ್ಯಾರ್ಥಿಯಾಗಿದ್ದ ಅವರು 2013ರಲ್ಲಿ ನಾಲ್ಕನೇ ಮಹಡಿಯ ಬಾಲ್ಕನಿಯಿಂದ ಬಿದ್ದು ತೀವ್ರ ತಲೆಗೆ ಗಾಯಗೊಂಡಿದ್ದು, ಅಗಿನಿಂದಲೇ ಕೋಮಾದಲ್ಲಿದ್ದರು.

ವೈದ್ಯಕೀಯವಾಗಿ ಅವರಿಗೆ ಕೃತಕ ಆಹಾರ ಹಾಗೂ ಕೆಲವೊಮ್ಮೆ ಆಮ್ಲಜನಕ ಸಹಾಯ ನೀಡಲಾಗುತ್ತಿತ್ತು. ಆದರೆ ಆಸ್ಪತ್ರೆಗೆ ದಾಖಲಾದ ಬಳಿಕ ಹಂತ ಹಂತವಾಗಿ ಪೋಷಕಾಂಶ ನೀಡುವ ಚಿಕಿತ್ಸೆ ಸ್ಥಗಿತಗೊಳಿಸಲಾಯಿತು. ಜೀವನಾಂತ್ಯದಲ್ಲಿ ಮಾನವೀಯ ಗೌರವ ಕಾಪಾಡುವಂತೆ ವಿಶೇಷ ಯೋಜನೆ ರೂಪಿಸಿ, ಜೀವಾಧಾರ ಚಿಕಿತ್ಸೆ ಹಿಂಪಡೆಯುವಂತೆ ಏಮ್ಸ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಈ ಪ್ರಕ್ರಿಯೆಯನ್ನು ಜಾರಿಗೊಳಿಸಲು ಡಾ. ಸೀಮಾ ಮಿಶ್ರಾ ನೇತೃತ್ವದಲ್ಲಿ ವಿಶೇಷ ವೈದ್ಯಕೀಯ ತಂಡವನ್ನು ರಚಿಸಲಾಗಿತ್ತು.

ಕಾಶ್ಮೀರ ಪ್ರತ್ಯೇಕತಾವಾದಿ ಅಂದ್ರಾಬಿಗೆ ಜೀವಾವಧಿ

ಯುಎಪಿಎ ಪ್ರಕರಣದಲ್ಲಿ ದಿಲ್ಲಿ ಕೋರ್ಟ್ ತೀರ್ಪು



ಹೊಸದಿಲ್ಲಿ: ಜಮ್ಮು -ಕಾಶ್ಮೀರದಲ್ಲಿನ ದೇಶ ವಿರೋಧಿ ಚಟುವಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡಿರುವ ದಿಲ್ಲಿ ಕೋರ್ಟ್, ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕಿ ಹಾಗೂ ದುಖ್ತರಾನ್-ಎ-ಮಿಲ್ಲತ್ ಮುಖ್ಯಸ್ಥೆ ಆಸಿಯಾ ಅಂದ್ರಾಬಿಗೆ ಜೀವಾವಧಿ ಕಾರಾಗೃಹ ಶಿಕ್ಷೆ ವಿಧಿಸಿದೆ. ಇದೇ ಪ್ರಕರಣದಲ್ಲಿ ಆಕೆಯ ಸಹಚರರಾದ ಸೋಫಿ ಫಹ್ಮೀದಾ ಮತ್ತು ನಹಿದಾ ನಸ್ರೀನ್ ಅವರಿಗೆ ತಲಾ 30 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ಜ.14ರಂದು ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಹಾಗೂ ದೇಶದ ವಿರುದ್ಧ ಯುದ್ಧ ನಡೆಸಲು ಸಂಚು ರೂಪಿಸಿದ ಆರೋಪ ಸೇರಿದಂತೆ ಹಲವು ವಿಧಿಗಳಲ್ಲಿ ಮೂವರನ್ನೂ ನ್ಯಾಯಾಲಯ ದೋಷಿಗಳೆಂದು ತೀರ್ಪು ನೀಡಿತ್ತು. ➡ಪುಟ ೪

ಯುದ್ಧದಿಂದ ಜಾಗತಿಕ ಇಂಧನ ಬಿಕ್ಕಟ್ಟು: ಮೋದಿ


ಪರಿಸ್ಥಿತಿ ದುರ್ಲಾಭ ಬೇಡ



ಹೊಸದಿಲ್ಲಿ: ಪಶ್ಚಿಮ ಏಷ್ಯಾ ಸಮರ ಸೃಷ್ಟಿಸಿರುವ ಬಿಕ್ಕಟ್ಟುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ನಿಟ್ಟಿನಲ್ಲಿ ಇಂಧನ, ಪೂರೈಕೆ ವ್ಯವಸ್ಥೆ ಮತ್ತು ರಸಗೊಬ್ಬರ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಪೂರಕ ಕಾರ್ಯತಂತ್ರ ರಚಿಸಲು, ಏಳು ಉನ್ನತಾಧಿಕಾರ ಸಮಿತಿ ರಚಿಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರಕಟಿಸಿದ್ದಾರೆ. ಪಶ್ಚಿಮ ಏಷ್ಯಾದ ಯುದ್ಧವು ಜಾಗತಿಕವಾಗಿ ಗಂಭೀರ ಸ್ವರೂಪದ ಇಂಧನ ಬಿಕ್ಕಟ್ಟನ್ನು ಹುಟ್ಟುಹಾಕಿದೆ ಎಂದವರು ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ಬಿಕ್ಕಟ್ಟಿನ ದುರ್ಲಾಭ ಪಡೆಯಲೆತ್ನಿಸಿದರೆ ಜೋಕೆ ಎಂದು ದುಷ್ಕರ್ಮಿಗಳಿಗೆ ಕಟು ಎಚ್ಚರಿಕೆ ನೀಡಿರುವ ಪ್ರಧಾನಿ ಮೋದಿ ಇಂಧನ, ಎಲ್‌ಪಿಜಿಗಳ ಕಾಳಸಂತೆ ಮಾರಾಟ, ಅಕ್ರಮ ದಾಸ್ತಾನುಗಳನ್ನು ಕಾರ್ಯಾಚರಣೆ ಮುಖೇನ ಪತ್ತೆ ಹಚ್ಚುವಂತೆ ರಾಜ್ಯ ಸರಕಾರಗಳಿಗೆ ಸೂಚನೆ ನೀಡಿದ್ದಾರೆ.

ಸಮಗ್ರ ಕಾರ್ಯತಂತ್ರ: ಎಲ್ಲಾ ಲಭ್ಯ ಮೂಲಗಳಿಂದ ಅನಿಲ, ಕಚ್ಚಾ ತೈಲಗಳ ಖರೀದಿಗೆ ಸರಕಾರ ಪ್ರಯತ್ನಿಸುತ್ತಿದೆ. ಈ ಪ್ರಯತ್ನಗಳು ಮುಂದಿನ ದಿನಗಳಲ್ಲಿ ನಿರಂತರ ನೆಲೆಯಲ್ಲಿ ಮುಂದುವರಿಯಲಿವೆ. ➡ಪುಟ ೪



ಯಾವುದೇ ಸವಾಲು ಎದುರಿಸಲು ಸಿದ್ಧರಾಗಿರಿ

ರಕ್ಷಣಾ ಸಚಿವರ ಮೇಲೆ ಆರೋಪ ಹೊರಿಸಿದ ಟ್ರಂಪ್!

ಇಂದು ಸರ್ವಪಕ್ಷ ಸಭೆ

• ಪುಟ ೪

ಎಂಟು ಗಂಟೆಯೊಳಗೆ ಟಿಕೆಟ್ ರದ್ದು: ಹಣ ಮರುಪಾವತಿ ಇಲ್ಲ

» ರೈಲು ಹೊರಡುವ 8 ಗಂಟೆಯೊಳಗೆ ರದ್ದು ಮಾಡಿದರೆ ಹಣ ವಾಪಸ್ಸಿಲ್ಲ
» ರೈಲ್ವೆ ಸಚಿವ ಅಶ್ವಿನಿ ವೈಷ್ಣವ್‌ರಿಂದ ಹೊಸ ನಿಯಮ ಪ್ರಕಟ

ಹೊಸದಿಲ್ಲಿ: ರೈಲು ಹೊರಡುವ ಎಂಟು ಗಂಟೆಯೊಳಗೆ ಟಿಕೆಟ್ ರದ್ದು ಮಾಡಿದರೆ ಮರುಪಾವತಿ ಇರುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ಘೋಷಿಸಿದ್ದಾರೆ. ಈ ಮೊದಲು ನಾಲ್ಕು ಗಂಟೆಯ ಮಿತಿ ಇದ್ದು, ಇದನ್ನು ಈಗ ಎಂಟು ಗಂಟೆಗೆ ಏರಿಕೆ ಮಾಡಲಾಗಿದೆ. ಈ ಎಲ್ಲ ಹೊಸ ಮರುಪಾವತಿ ನಿಯಮಗಳು ಏ.1ರಿಂದ ಜಾರಿಗೆ ಬರಲಿವೆ.



ಹೊಸ ಮರುಪಾವತಿ ಶ್ರೇಣಿ

- 72 ಗಂಟೆಗೂ ಮೊದಲು ರದ್ದು - ನಿಗದಿತ ರದ್ದತಿ ಶುಲ್ಕ ಹೊರತುಪಡಿಸಿ ಸಂಪೂರ್ಣ ಮರುಪಾವತಿ
- 72ರಿಂದ 24 ಗಂಟೆ ನಡುವೆ ರದ್ದು-ಶೇ. 25 ಕಡಿತ
- 24ರಿಂದ 8 ಗಂಟೆ ನಡುವೆ -50% ಕಡಿತ ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,22,000(2,27,000) ಅಪರಂಜಿ ಚಿನ್ನ: 13,840(14,175) ಆಭರಣ ಚಿನ್ನ: 12,865(13,180) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 74,068(1,372↑) ಎನ್‌ಎಸ್‌ಇ 22,912(399↑) $1=₹93.98

ಕಿರುಸುದ್ದಿ

ಇಂದು ಚಿದಂಬರ ಬೈಕಂಪಾಡಿಗೆ ಗೌರವಾರ್ಪಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಅವರನ್ನು ಮಂಗಳೂರು ಪ್ರೆಸ್ ಕ್ಲಬ್ ವತಿಯಿಂದ ಇಂದು (ಮಾ.25) ಬೆಳಗ್ಗೆ 11ಕ್ಕೆ ನಗರದ ಪತ್ರಿಕಾ ಭವನದಲ್ಲಿ ಸನ್ಮಾನಿಸಲಾಗುವುದು. ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಕೆ. ಆನಂದ ಶೆಟ್ಟಿ ಸನ್ಮಾನ ನೆರವೇರಿಸಲಿದ್ದಾರೆ.



ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು ಭಾಗವಹಿಸುವರು ಎಂದು ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಎನ್‌ಡಿಎ ಅಭ್ಯರ್ಥಿ ಮನೆ ಮನೆ ಪ್ರಚಾರ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಮಾ.25ರಂದು ಗೃಹಸಂಪರ್ಕದೊಂದಿಗೆ ಮತಯಾಚನೆ ನಡೆಸಲಿದ್ದಾರೆ. ಬೆಳಗ್ಗೆ 7 ಗಂಟೆಗೆ ಮಧೂರು ಪೂರ್ವ ವಲಯ, 9.30ಕ್ಕೆ ಮಧೂರು ಪಶ್ಚಿಮ ವಲಯ, ಮಧ್ಯಾಹ್ನ 12 ಗಂಟೆಗೆ ಮಧೂರು ಪೂರ್ವ ವಲಯ, ಅಪರಾಹ್ನ 2.30ರಿಂದ ಮುನಿಸಿಪಾಲಿಟಿ ವೆಸ್ಟ್ ಏರಿಯಾ, ಸಂಜೆ 5ರಿಂದ ಮೊಗ್ರಾಲ್ ಪುತ್ತೂರು ಭಾಗದಲ್ಲಿ ಗೃಹಸಂಪರ್ಕ ನಡೆಸಿ ಮತಯಾಚಿಸಲಿದ್ದಾರೆ.

ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿ : ಸವಾರ ಮೃತ್ಯು

ಸುಳ್ಯ: ನಿಂತಿಕಲ್ಲು ಕೆನರಾ ಬ್ಯಾಂಕ್ ಬಳಿ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿಯಾಗಿ ಸವಾರ ಮೃತಪಟ್ಟ ಘಟನೆ ಮಂಗಳವಾರ ಸಂಜೆ ನಡೆದಿದೆ. ಸುಳ್ಯ ಮೆಸ್ಕಾಂನಲ್ಲಿ ಗುತ್ತಿಗೆ ಆಧಾರದಲ್ಲಿ ಮೀಟರ್ ರೀಡಿಂಗ್ ಕೆಲಸ ನಿರ್ವಹಿಸುತ್ತಿದ್ದ ಲೋಕನಾಥ (35) ಕರ್ತವ್ಯ ಮುಗಿಸಿ ಮನೆಗೆ ತೆರಳುತ್ತಿದ್ದಾಗ ನಿಂತಿಕಲ್ಲು ಕೆನರಾ ಬ್ಯಾಂಕ್ ಬಳಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಗಂಭೀರ ಗಾಯಗೊಂಡು ಅವರನ್ನು ಸುಳ್ಯದ ಖಾಸಗಿ ಆಸ್ಪತ್ರೆಗೆ ಕರೆ ತರಲಾಗಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಮೃತರು ತಾಯಿ ಹಾಗೂ ಸಹೋದರಿಯರನ್ನು ಅಗಲಿದ್ದಾರೆ.



ಬೈಕ್‌ಗೆ ಟಿಪ್ಪರ್ ಲಾರಿ ಡಿಕ್ಕಿ: ಸವಾರ ಸಾವು

ಕಾರ್ಕಳ: ಟಿಪ್ಪರ್ ಲಾರಿ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಕಾರ್ಕಳ ತಾಲೂಕಿನ ಮಾಳ ಘಾಟಿಯಲ್ಲಿ ಮಂಗಳವಾರ ಮುಂಜಾನೆ ಸಂಭವಿಸಿದೆ. ಬೈಕ್ ಸವಾರ ಬಜಗೋಳಿ ದಿಡಿಂಬಿರಿ ನಿವಾಸಿ ನವೀನ್ (45) ಎಂದು ತಿಳಿದುಬಂದಿದೆ. ಮೃತ ಬೈಕ್ ಸವಾರ ನವೀನ್ ಅವರು ಬಜಗೋಳಿಯಲ್ಲಿ ವೆಲ್ಡಿಂಗ್ ಕೆಲಸ ಮಾಡುತ್ತಿದ್ದು, ಇವರು ಹಾವು ಹಿಡಿಯುವ ಹವ್ಯಾಸ ರೂಢಿಸಿಕೊಂಡಿದ್ದರು. ಮಂಗಳವಾರ ಬೆಳಗ್ಗೆ ಹಾವನ್ನು ಹಿಡಿದು ಕಾಡಿಗೆ ಬಿಡುವ ಸಲುವಾಗಿ ತನ್ನ ಸ್ನೇಹಿತನ ಜೊತೆ ಬೈಕ್‌ನಲ್ಲಿ ಹೊರಟಿದ್ದರು. ಇನ್ನೇನು ಮಾಳ ಚೆಕ್‌ಪೋಸ್ಟ್ ದಾಟಿ ಕುದುರೆಮುಖ ಅಭಯಾರಣ್ಯದಲ್ಲಿ ಹಾವನ್ನು ಬಿಡಲು ಹೋಗುತ್ತಿದ್ದಾಗ ತಿರುವಿನಲ್ಲಿ ಕಾರ್ಕಳ ಕಡೆಗೆ ಯಮ ವೇಗದಲ್ಲಿ ಬರುತ್ತಿದ್ದ ಟಿಪ್ಪರ್ ನೇರವಾಗಿ ಬೈಕಿಗೆ ಅಪ್ಪಳಿಸಿದೆ. ಅಪಘಾತದ ರಭಸಕ್ಕೆ ನವೀನ್ ಅವರು ರಸ್ತೆಗೆ ಎಸೆಯಲ್ಪಟ್ಟು ಸ್ಥಳದಲ್ಲೇ ಮೃತಪಟ್ಟಿದ್ದು ಸಹಸವಾರ ಗಾಯಗೊಂಡಿದ್ದಾರೆ. ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ತಲೆಮರೆಸಿದ್ದ ಆರೋಪಿ ಸೆರೆ

ಬಂಟ್ವಾಳ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಟ್ವಾಳ ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ. ವೀರಕಂಬ ಗ್ರಾಮದ ನಿವಾಸಿ ಮಹಮ್ಮದ್ ಅಶ್ರಫ್ (38) ಬಂಧಿತ ಆರೋಪಿ. ವಾರಂಟ್ ಜಾರಿಯಾಗಿದ್ದರೂ, ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಇದೀಗ ಬಂಟ್ವಾಳ ನಗರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ದ್ವಿಚಕ್ರ ವಾಹನ ಕಳವು

ಬಂಟ್ವಾಳ: ಬಿ.ಸಿ.ರೋಡು ಸಮೀಪದ ಪರ್ಲಿಯಾ ಪಿಡಬ್ಲ್ಯುಡಿ ವಸತಿಗೃಹದಲ್ಲಿ ನಿಲ್ಲಿಸಲಾಗಿದ್ದ ಅಮ್ಮುಂಜೆ ಗ್ರಾಮ ಪಂಚಾಯತ್ ಪಿಡಿಒ ಅವರ ಆಕ್ಟಿವಾ ಹೋಂಡಾ ವಾಹನವನ್ನು ಕಳವುಗೈದ ಘಟನೆ ಬೆಳಕಿಗೆ ಬಂದಿದೆ. ಪಿಡಿಒ ನಯನ ಕುಮಾರಿ ಎನ್. ಅವರ ಆಕ್ಟಿವಾ ಹೋಂಡಾ ಕಳವುಗೈಯಲಾಗಿದ್ದು, ಈ ಬಗ್ಗೆ ಬಂಟ್ವಾಳ ನಗರ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.



ಅಂತಾರಾಷ್ಟ್ರೀಯ ಕ್ರಿಕೆಟ್‌ನ ಮಾಜಿ ಆಟಗಾರ ಹಾಗೂ ಪ್ರಸಕ್ತ ಕ್ರಿಕೆಟ್ ವೀಕ್ಷಕ ವಿವರಣೆಕಾರರಾದ ವಿಜಯ್ ಭಾರದ್ವಾಜ್ ಅವರು ಮಂಗಳವಾರ ಕೃಷ್ಣಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಮಾಡಿ ಪರ್ಯಾಯ ಶ್ರೀಪಾದರಿಂದ ಅನುಗ್ರಹ ಮಂತ್ರಾಕ್ಷತೆ ಪಡೆದು ಭೋಜನಪ್ರಸಾದ ಸ್ವೀಕರಿಸಿದರು.

ಯುವಕರನ್ನು ಕೊಲೆಗೈಯ್ಯಲೆತ್ನಿಸಿದ ಪ್ರಕರಣ

8 ಮಂದಿಯ ಆರೋಪಿಗಳ ಬಂಧನ

ಮುಳ್ಳೇರಿಯ: ಕಬಡ್ಡಿ ಪಂದ್ಯಾಟದ ಸ್ಥಳದಲ್ಲಿ ನಡೆದ ಹೊಡೆದಾಟವನ್ನು ತಡೆಯಲು ಯತ್ನಿಸಿದ ದ್ವೇಷದಿಂದ ಯುವಕರ ಮೇಲೆ ಹಲ್ಲೆ ನಡೆಸಿ ಕೊಲೆಗೈಯ್ಯಲು ಪ್ರಯತ್ನಿಸಲಾಯಿತೆಂಬ ಪ್ರಕರಣದಲ್ಲಿ ಎಂಟು ಮಂದಿ ಆರೋಪಿಗಳನ್ನು ಆದೂರು ಪೊಲೀಸರು ಬಂಧಿಸಿದ್ದಾರೆ.

ಆದೂರು ಬರ್ತಕುನ್ನು ಹೌಸ್‌ನ ಸಿ.ಆರ್. ತಾಜುದ್ದೀನ್ (36), ಅಬ್ದುಲ್ ಸತ್ತಾರ್ (30), ಸಿ.ಎ. ನಗರದ ಅಬ್ಬಾಸ್ ಫೈಸಲ್ ಎ.ಪಿ. (32), ಮುಹಮ್ಮದ್ ಸುರಕ್ಕಾತ ವೈ.ಎಂ. (35), ಆದೂರು ಬಣ್ಣಾಂತಬಾಡಿಯ ಬಿ.ಮುಹಮ್ಮದ್ ರಫೀಕ್ (32), ಆದೂರು ಮುಕ್ಕೂರು ಹೌಸ್‌ನ ಆಶಿಕ್ (29), ಕುಂಟಾರು ಮಞಂಪಾರೆ ಹೌಸ್‌ನ ಎ.ಕೆ.ಅಬ್ದುಲ್ ರಹ್ಮಾನ್ ಅಕ್ಸಲ್ (19), ಸಿ.ಎ.ನಗರದ ಮುಹಮ್ಮದ್ ಹಾಸಿಫ್ (28) ಎಂಬಿವರು ಬಂತ ಆರೋಪಿಗಳಾಗಿದ್ದಾರೆ. ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಆರೋಪಿಗಳಿಗೆ ಎರಡು ವಾರಗಳ ರಿಮಾಂಡ್ ವಿಧಿಸಲಾಗಿದೆ. ಮುಳ್ಳೇರಿಯ ಮೈಂದಪಾರೆಯ ಸುಲೈಮಾನ್ ಪಾರೀಸ್ (34) ನೀಡಿದ ದೂರಿನ ಪ್ರಕಾರ ದಾಖಲಿಸಿಕೊಂಡ ಪ್ರಕರಣದಲ್ಲಿ ಇದೀಗ ಬಂಧಿತರಾದವರು ಆರೋಪಿಗಳಾಗಿದ್ದಾರೆಂದು ಆದೂರು ಪೊಲೀಸರು ತಿಳಿಸಿದ್ದಾರೆ.

» ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಆರೋಪಿಗಳಿಗೆ ಎರಡು ವಾರಗಳ ರಿಮಾಂಡ್ ವಿಧಿಸಲಾಗಿದೆ.

» ಮಾರ್ಚ್ 4ರಂದು ರಾತ್ರಿ 10.30ಕ್ಕೆ ಮುಳ್ಳೇರಿಯ ಮದೀನ ಹೋಟೆಲ್ ಸಮೀಪ ಪ್ರಕರಣಕ್ಕೆ ಕಾರಣವಾದ ಘಟನೆ ನಡೆದಿತ್ತು.

ಮಾರ್ಚ್ 4ರಂದು ರಾತ್ರಿ 10.30ಕ್ಕೆ ಮುಳ್ಳೇರಿಯ ಮದೀನ ಹೋಟೆಲ್ ಸಮೀಪ ಪ್ರಕರಣಕ್ಕೆ ಕಾರಣವಾದ ಘಟನೆ ನಡೆದಿತ್ತು. ಫೆಬ್ರವರಿ 28ರಂದು ಕಬಡ್ಡಿ ಪಂದ್ಯಾಟ ಸ್ಥಳದಲ್ಲಿ ನಡೆದ ಹೊಡೆದಾಟವನ್ನು ತಡೆಯಲು ಯತ್ನಿಸಿದ ದ್ವೇಷದಿಂದ ದೂರುಗಾರ ಹಾಗೂ ಸ್ನೇಹಿತರ ಮೇಲೆ ಹಲ್ಲೆಗೈದು ಗಾಯಗೊಳಿಸಿರುವುದಾಗಿ ದೂರಲಾಗಿದೆ. ಆದೂರು ಎಸ್‌ಐ ಜೋನ್, ಪೊಲೀಸರಾದ ಮಧು, ಸುಜೇಶ್ ಎಂಬಿವರು ಆರೋಪಿಗಳನ್ನು ಬಂಧಿಸಿದ ತಂಡದಲ್ಲಿದ್ದರು.

ಶ್ರೀ ಕೋದಂಡ ರಾಮ ದೇವಾಲಯದಲ್ಲಿ ಶ್ರೀರಾಮೋತ್ಸವ, ಪುನರ್ ಪ್ರತಿಷ್ಠಾಪನಾ ಮಹೋತ್ಸವ

ಸಂಭ್ರಮಕ್ಕೆ ಮಲ್ಲಿಕಾರ್ಜುನ ನಗರ ಸಜ್ಜು

ಮಡಿಕೇರಿ: ಶ್ರೀಕೋದಂಡ ರಾಮೋತ್ಸವ ಸಮಿತಿ ವತಿಯಿಂದ ಮಡಿಕೇರಿಯ ಮಲ್ಲಿಕಾರ್ಜುನ ನಗರದ ಶ್ರೀ ಕೋದಂಡ ರಾಮ ದೇವಾಲಯದಲ್ಲಿ 37ನೇ ವರ್ಷದ ಶ್ರೀರಾಮೋತ್ಸವ ಹಾಗೂ ದ್ವಿತೀಯ ವರ್ಷದ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಮಾ.26 ಮತ್ತು 27 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಕೋದಂಡ ರಾಮೋತ್ಸವ ಸಮಿತಿಯ ಅಧ್ಯಕ್ಷ ಕೆ.ಎಂ.ಗಣೇಶ್ ಅವರು, ಎರಡು ದಿನಗಳ ಕಾಲ ನಡೆಯುವ ಧಾರ್ಮಿಕ ವಿಧಿ ವಿಧಾನಗಳ ಕುರಿತು ಮಾಹಿತಿ ನೀಡಿದರು.

ಮಾ.26ರಂದು ಸಂಜೆ 5 ಗಂಟೆಗೆ ಶ್ರೀರಾಮೋತ್ಸವದ ಅಂಗವಾಗಿ ಮಡಿಕೇರಿಯ ಗಾಂಧಿ ಮೈದಾನದಿಂದ ನಗರದಲ್ಲಿ ಭವ್ಯ ಮೆರವಣಿಗೆ ಸಾಗಲಿದೆ. ಮೆರವಣಿಗೆ ಸಂದರ್ಭ ವಿಶೇಷಪಲ್ಲಕ್ಕಿಯಲ್ಲಿ ಆಸೀನಗೊಂಡ ಶ್ರೀಕೋದಂಡ ರಾಮ ಪರಿವಾರ ಉತ್ಸವ ಮೂರ್ತಿಯನ್ನು ಹೊತ್ತು ನಗರದ ಪ್ರಮುಖ ರಸ್ತೆಗಳಲ್ಲಿ ತೆರಳಲಾಗುತ್ತದೆ. ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತಕ್ಕೆ ಸಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ವಿವಿಧ ಆಕರ್ಷಕ ನೃತ್ಯ, ಚಂಡೆ ವಾದ್ಯ ಸಹಿತ ಸಾಂಸ್ಕೃತಿಕ ಕಲಾತಂಡಗಳು, ಕಲಶ ಹೊತ್ತ ಮಹಿಳೆಯರು, ವಿವಿಧ ತಂಡಗಳಿಂದ ಭಜನೆಯೊಂದಿಗೆ ಮೆರವಣಿಗೆ ಸಾಗಲಿದೆ. ಮಹದೇವಪೇಟೆಯ ಬನ್ನಿ ಮಂಟಪದವರೆಗೆ ತೆರಳಿ ಅಲ್ಲಿಂದ ಶ್ರೀ ಕೋದಂಡ ರಾಮ ದೇವಾಲಯವನ್ನು ಸೇರಲಿದೆ.



ಮಾ.27 ರಂದು ಬೆಳಗ್ಗೆ 8 ಗಂಟೆಯಿಂದ ದೇವಾಲಯದ ಆವರಣದಲ್ಲಿ ಕ್ಷೇತ್ರ ತಂತ್ರಿಯವರಾದ ವೇದಮೂರ್ತಿ ಶ್ರೀಕೃಷ್ಣ ಉಪಾಧ್ಯ ಅವರ ನೇತೃತ್ವದಲ್ಲಿ ಶ್ರೀರಾಮ ನವಮಿ ಮತ್ತು ದೇವಾಲಯದ ಪುನರ್ ಪ್ರತಿಷ್ಠಾಪನಾ ಉತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ ವೈದಿಕ ಕಾರ್ಯಗಳು ಜರುಗಲಿವೆ. ಆ ದಿನ ಗುರು ಗಣಪತಿ ಹೋಮ, ಮಹಾ ಸಂಕಲ್ಪ, ಮಹಾ ಗಣಪತಿ ಹೋಮ, ನವಗ್ರಹ ಹೋಮ, ರಾಮ ತಾರಕ ಹೋಮ, ತತ್ವಕಲಾ ಹೋಮ, ಶಾಂತಿ ಹೋಮ, ಪೂರ್ಣಾಹುತಿ, ಪಂಚಾಮೃತ ಅಭಿಷೇಕ, ನವಕ ಪ್ರಧಾನ, ಕಲಶಾಭಿಷೇಕ, ಕುಂಭಾಭಿಷೇಕ ನಡೆಯಲಿದೆ. ಅಲ್ಲದೆ ದೇವಾಲಯ ಆವರಣದಲ್ಲಿ ದೇವ ನರ್ತನ ಕಾರ್ಯಕ್ರಮವಿದೆ.

ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಮಂತ್ರಾಕ್ಷತೆ, ತೀರ್ಥ ಪ್ರಸಾದ ನಡೆಯಲಿದೆ. ಆ ನಂತರ ದೇವಾಲಯ ಆವರಣದಲ್ಲಿ ಕೋಸಂಬರಿ- ಪಾನಕ ವಿತರಣೆಯಾಗಲಿದೆ. ಅಲ್ಲದೆ, ಭಕ್ತಾದಿಗಳಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿದೆ. ಸಂಜೆ 5 ರಿಂದ 7 ರವರೆಗೆ ವಿವಿಧ ಭಜನಾ ತಂಡಗಳಿಂದ ಭಜನೆ ನಡೆಸಲಾಗುತ್ತದೆ. ಬಳಿಕ ಸಂಜೆ 7 ಗಂಟೆಗೆ ಬೆಂಗಳೂರು ಹಲಸೂರುವಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಶ್ರೀ ಬೋಧಸ್ವರೂಪಾನಂದಜಿ ಮಹಾರಾಜ್ ಅವರಿಂದ ಧಾರ್ಮಿಕ ಪ್ರವಚನ ನಡೆಯಲಿದೆ. ಸುಮಾರು 5 ಸಾವಿರ ಭಕ್ತರು ಸೇರುವ ನಿರೀಕ್ಷೆ ಇದೆ ಎಂದು ಕೆ.ಎಂ.ಗಣೇಶ್ ವಿವರಿಸಿದರು.

ಕಾರ್ಯಕ್ರಮ ರದ್ದು

ವಿದ್ಯಾರ್ಥಿಗಳಿಗೆ 10ನೇ ತರಗತಿ ಪರೀಕ್ಷೆ ನಡೆಯುತ್ತಿರುವ ಕಾರಣ ಮಾ.28 ರಂದು ಸಂಜೆ ಗಾಂ ಮೈದಾನದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ. ಮಾ.25 ರಂದು ಕ್ರೀಡಾ ಸಮಿತಿಯ ವತಿಯಿಂದ ಶ್ರೀ ಕೋದಂಡ ರಾಮ ದೇವಾಲಯದ ಆವರಣದಲ್ಲಿ ರಂಗೋಲಿ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ ಎಂದರು.

ಶ್ರೀಕೋದಂಡ ರಾಮ ದೇವಾಲಯ ಟ್ರಸ್ಟ್‌ನ ಪ್ರಧಾನ ಸಲಹೆಗಾರ ಜಿ.ರಾಜೇಂದ್ರ ಅವರು ಮಾತನಾಡಿ, ಕಳೆದ 37 ವರ್ಷಗಳಿಂದ ಶ್ರೀರಾಮನವಮಿಯನ್ನು ಅತ್ಯಂತ ಅದ್ದೂರಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ರಾಮನವಮಿ ಆಚರಣೆಯ ಪರಿಕಲ್ಪನೆಯನ್ನು ಮೊದಲು ಹುಟ್ಟು ಹಾಕಿದ್ದು ಶ್ರೀಕೋದಂಡ ರಾಮ ದೇವಾಲಯ ಎಂದು ತಿಳಿಸಿದರು.

ಶ್ರೀಕೋದಂಡ ರಾಮೋತ್ಸವ ಸಮಿತಿ ವತಿಯಿಂದ ನಡೆಯುವ ರಾಮೋತ್ಸವದಲ್ಲಿ ಎಲ್ಲಾ ಸಮುದಾಯದ ಮಂದಿ ಪಾಲ್ಗೊಳ್ಳಲಿದ್ದಾರೆ. ರಾಜಕೀಯ ರಹಿತವಾಗಿ, ಯಾವುದೇ ಪ್ರಚೋದನೆ ಇಲ್ಲದೆ ಸೌಹಾರ್ದಯುತವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಅನ್ನಸಂತರ್ಪಣೆಗಾಗಿ ಭಕ್ತರಿಂದ ಅಭೂತಪೂರ್ವ ಸಹಕಾರ ದೊರೆಯುತ್ತಿದೆ ಎಂದರು.

ಲಕ್ಷ್ಮಣ, ಸೀತಾ ಹಾಗೂ ಆಂಜನೇಯ ಸಹಿತರಾಗಿ ಮಲ್ಲಿಕಾರ್ಜುನ ನಗರದಲ್ಲಿ ನೆಲೆ ನಿಂತಿರುವ ಶ್ರೀಕೋದಂಡರಾಮನಲ್ಲಿ ವಿಶ್ವಶಾಂತಿಗಾಗಿ ಪ್ರಾರ್ಥಿಸಲಾಗಿದೆ. ವಿಶ್ವ ಕಲ್ಯಾಣಕ್ಕಾಗಿ ಪ್ರಾರ್ಥಿಸುವುದು ನಮ್ಮ ಸಂಕಲ್ಪವಾಗಿದೆ. ರಾಮೋತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಜಿ.ರಾಜೇಂದ್ರ ಮನವಿ ಮಾಡಿದರು.

ಟ್ರಸ್ಟ್‌ನ ಮಾಜಿ ಅಧ್ಯಕ್ಷ ಹೆಚ್.ಮಂಜುನಾಥ್ ಅವರು ಮಾತನಾಡಿ, ಶ್ರೀಕೋದಂಡ ರಾಮ ದೇವಾಲಯ ಅತ್ಯಂತ ಶಕ್ತಿಶಾಲಿ ಕ್ಷೇತ್ರವಾಗಿದ್ದು, ಹೊರ ರಾಜ್ಯ ಮತ್ತು ಹೊರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ. ಮಾ.26 ರಂದು ನಡೆಯುವ ಮೆರವಣಿಗೆಯಲ್ಲಿ ವಿವಿಧ ಮಂಟಪಗಳು ಹಾಗೂ ಪಲ್ಲಕ್ಕಿ ಸೇವೆ ಗಮನ ಸೆಳೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ವಿ.ಎಸ್.ವಿನೋದ್ ಕುಮಾರ್, ಶ್ರೀಕೋದಂಡ ರಾಮ ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಎನ್.ನಂಜುಂಡ ಹಾಗೂ ಶ್ರೀಕೋದಂಡ ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ ಉಪಸ್ಥಿತರಿದ್ದರು.

'ಅಪ್ಪೆ ಬೇರ್‌ದ ತುಳುನಾಡ್' ವಿಷಯಾಧಾರಿತ ರಾಷ್ಟ್ರೀಯ ತುಳು ವಿಚಾರಗೋಷ್ಠಿ ಪ್ರಬಂಧ ಆಹ್ವಾನ

ಮುಲ್ಕಿ: ತುಳುನಾಡಿನ ತಾಯಿ ಮೂಲ ಸಂಸ್ಕೃತಿ, ಆಚಾರ-ವಿಚಾರ ಮತ್ತು ದೈವ ಪರಂಪರೆಯನ್ನು ಆಧಾರವಾಗಿಟ್ಟುಕೊಂಡು ನಡೆಯುವ 'ಅಪ್ಪೆ ಬೇರ್‌ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿ ಮೇ 24ರಂದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ನಡೆಯಲಿದೆ. ಈ ವಿಚಾರಗೋಷ್ಠಿಯ ಅಂಗವಾಗಿ ಸಂಶೋಧಕರು, ಲೇಖಕರು, ವಿದ್ಯಾರ್ಥಿಗಳು ಹಾಗೂ ತುಳು ಅಭಿಮಾನಿಗಳಿಗೆ ಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಬಂಧ ಸಲ್ಲಿಸಲು ಕೊನೆಯ ದಿನಾಂಕ ಏ. 25. 'ಅಪ್ಪೆ ಬೇರ್‌ದ ತುಳುನಾಡ್' ವಿಷಯಕ್ಕೆ ಸಂಬಂಧಿಸಿದ ಪ್ರಬಂಧ ವಿಷಯಗಳು: ಮಾತೃಮೂಲ ಪದ್ಧತಿ ಸಂಬಂಧಪಟ್ಟ ಅಧ್ಯಯನ, ಅಳಿಯ ಸಂತಾನ ಪದ್ಧತಿ, ಮಾತೃಮೂಲ ಆಚರಣೆ ಜೀವನ ಪದ್ಧತಿ ಮತ್ತು ನಂಬಿಕೆಗಳು, ತುಳುನಾಡಿನ ಜನಪದ ಕಥೆಗಳಲ್ಲಿ ಮಾತೃ ಮೂಲ ಪದ್ಧತಿಗಳು, ಮಾತೃಮೂಲ ಪದ್ಧತಿ ನಿನ್ನೆ, ಇಂದು, ನಾಳೆ, ಮಾತೃಮೂಲ ಪದ್ಧತಿ 'ಏನು? ಯಾಕೆ? ಹೇಗೆ?', ಮಾತೃಮೂಲ ಸಂಸ್ಕೃತಿ ಮತ್ತು ಜೀವನ ಶೈಲಿಯ ವಿಶ್ಲೇಷಣೆ, ಈ ಸೆಮಿನಾರಿನ ಮೂಲಕ ತುಳುನಾಡಿನ ಪರಂಪರೆ, ಸಂಸ್ಕೃತಿ ಮತ್ತು ನಂಬಿಕೆಗಳನ್ನು ಅಧ್ಯಯನ ಹಾಗೂ ಸಂಶೋಧನಾ ದೃಷ್ಟಿಯಿಂದ ಸಮಾಜಕ್ಕೆ ಪರಿಚಯಿಸುವ ಮಹತ್ವದ ವೇದಿಕೆ ರೂಪುಗೊಳ್ಳಲಿದೆ. ಆಸಕ್ತರು ತಮ್ಮ ಪ್ರಬಂಧಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಿ ಈ ಅಪೂರ್ವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ವಿನಂತಿಸಲಾಗಿದೆ.

ಬೈಕ್‌ಗಳ ಡಿಕ್ಕಿ: ಇಬ್ಬರು ಸವಾರರು ಪಾರು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಸಮೀಪದ ಕಾರ್ನಾಡ್ ಬೈಪಾಸ್ ಬಳಿ ಬೈಕುಗಳ ನಡುವೆ ಅಪಘಾತ ಸಂಭವಿಸಿದ್ದು ಇಬ್ಬರು ಸವಾರರು ಅಲ್ಪಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶ ಪಾರಾಗಿದ್ದಾರೆ. ಗಾಯಾಳು ಬೈಕ್ ಸವಾರರನ್ನು ಚಿತ್ರಾಪು ನಿವಾಸಿ ಪ್ರಕಾಶ್ (52) ಮತ್ತು ಸುರತ್ಕಲ್ ಸಮೀಪದ ತಡಂಬೈಲು ನಿವಾಸಿ ಸೊಹೈಲ್ ಎಂದು ಗುರುತಿಸಲಾಗಿದೆ. ಗಾಯಾಳು ಸೊಹೇಲ್ ಉಡುಪಿ ಕಡೆಯಿಂದ ಸುರತ್ಕಲ್ ಕಡೆಗೆ ಹೋಗುತ್ತಿದ್ದು, ಈ ಸಂದರ್ಭ ಕಾರ್ನಾಡ್ ಒಳ ರಸ್ತೆಯಿಂದ ಹೆದ್ದಾರಿ ಕ್ರಾಸ್ ಮಾಡಿ ಚಿತ್ರಾಪು ಕಡೆಗೆ ಹೋಗುತ್ತಿದ್ದ ಬೈಕ್ ನಡುವೆ ಕಾರ್ನಾಡ್ ಬೈಪಾಸ್ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ.

» ಅಪಘಾತದ ಸಂದರ್ಭ ಬಿದ್ದಿದ್ದ ಬೈಕನ್ನು ಮಾರುದ್ದ ಎಳೆದುಕೊಂಡು ಹೋದ ಕಂಟೈನರ್

ಅಪಘಾತದ ಸಂದರ್ಭ ಎರಡು ಬೈಕ್‌ಗಳು ಜಖಂಗೊಂಡಿದ್ದು, ಇಬ್ಬರು ಸವಾರರು ಪವಾಡಸದೃಶ ಪಾರಾಗಿದ್ದಾರೆ. ಈ ಸಂದರ್ಭ ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಕಂಟೈನರ್ ಹೆದ್ದಾರಿಯಲ್ಲಿ ಅಪಘಾತದ ಸಂದರ್ಭ ಬಿದ್ದಿದ್ದ ಬೈಕನ್ನು ಮಾರುದ್ದ ಎಳೆದುಕೊಂಡು ಹೋಗಿದೆ.

ಸ್ಥಳಕ್ಕೆ ಮುಲ್ಕಿ ಹಾಗೂ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಎರಡು ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಿದ್ದಾರೆ.

'ಹೆಲ್ತಿ ವುಮನ್ ಇನಿಶಿಯೇಟಿವ್: ಅನೇಮಿಯಾ ಜಾಗೃತಿ, ತಪಾಸಣೆ'

ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜ್



ಪುತ್ತೂರು: ಸಂತ ಫಿಲೋಮಿನಾ (ಸ್ವಾಯತ್ತ) ಕಾಲೇಜಿನಲ್ಲಿ ಯುವ ರೆಡ್ ಕ್ರಾಸ್ ಹಾಗೂ ಆರೋಗ್ಯ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ 'ಹೆಲ್ತಿ ವುಮನ್ ಇನಿಶಿಯೇಟಿವ್: ಅನೇಮಿಯಾ ಜಾಗೃತಿ ಮತ್ತು ತಪಾಸಣೆ' ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಅನೇಮಿಯಾ ಕುರಿತು ಜಾಗೃತಿ ಮೂಡಿಸುವ ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದ ಪುತ್ತೂರಿನ ಪತ್ರಾವೊ ಆಸ್ಪತ್ರೆಯ ಜನರಲ್ ಸರ್ಜನ್ ಜ್ಞಾನ ತೇಜಸ್ವಿ ಸಿಕ್ವೇರಾ ಅವರು ಅನೇಮಿಯಾ ಕುರಿತು ಸಮಗ್ರ ಮಾಹಿತಿ ನೀಡಿ, ಅನೇಮಿಯಾದ ಕಾರಣಗಳು, ಲಕ್ಷಣಗಳು ಮತ್ತು ತಡೆಗಟ್ಟುವ ವಿಧಾನಗಳನ್ನು ವಿವರಿಸಿ ಐರನ್ ಮತ್ತು ಪೋಷಕಾಂಶಗಳಿಂದ ಸಮೃದ್ಧವಾದ ಸಮತೋಲನ ಆಹಾರದ ಅಗತ್ಯತೆ ಹಾಗೂ ನಿಯಮಿತ ಆರೋಗ್ಯ ತಪಾಸಣೆ ಬಗ್ಗೆ ತಿಳಿಸಿದರು.

» ಸುಮಾರು 300 ವಿದ್ಯಾರ್ಥಿಗಳು ಕಾರ್ಯಕ್ರಮದಿಂದ ಪ್ರಯೋಜನ ಪಡೆದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆಂಟನಿ ಪ್ರಕಾಶ್ ಮೊಂತೆರೊ ದೈಹಿಕ ಹಾಗೂ ಮಾನಸಿಕ ಆರೋಗ್ಯ ಎರಡೂ ಮುಖ್ಯವೆಂದು ತಿಳಿಸಿ ವಿದ್ಯಾರ್ಥಿಗಳು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಮತ್ತು ಅಗತ್ಯವಿದ್ದಾಗ ವೈದ್ಯಕೀಯ ಸಲಹೆ ಪಡೆಯಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಉಪ ಪ್ರಾಂಶುಪಾಲ ಡಾ. ವಿಜಯ ಕುಮಾರ್ ಮೊಳೆಯಾರ್, ಯುವ ರೆಡ್ ಕ್ರಾಸ್ ಸಂಯೋಜಕಿ ಡಾ. ಡಿಂಪಲ್ ಜೆನ್ನಿಫರ್ ಫರ್ನಾಂಡಿಸ್ ಹಾಗೂ ಆರೋಗ್ಯ ಕೇಂದ್ರ ಸಂಯೋಜಕಿ ಶಶಿಪ್ರಭಾ ಉಪಸ್ಥಿತರಿದ್ದರು. ಮನೀಶ್ ಮತ್ತು ತಂಡ ಪ್ರಾರ್ಥಿಸಿದರು. ವಿಶ್ಮಿತ್ ವಿದೀಪ್ ಸ್ವಾಗತಿಸಿ, ಕೃಷ್ಣ ವಂಶಿ ವಂದಿಸಿದರು. ಶೇಖ್ ಮೊಹಮ್ಮದ್ ಫಹೀಮ್ ಕಾರ್ಯಕ್ರಮ ನಿರ್ವಹಿಸಿದರು.

ಸುಮಾರು 300 ವಿದ್ಯಾರ್ಥಿಗಳು ಕಾರ್ಯಕ್ರಮದಿಂದ ಪ್ರಯೋಜನ ಪಡೆದರು.

ಇದು ಕಡಬ ತಾಲೂಕಿನ ಬಿಳಿನೆಲೆ ಗ್ರಾಮದ ಜನತಾ ಕಾಲೊನಿಯ ಒಂದು ಕುಟುಂಬದ ವ್ಯಥೆಯ ಕಥೆ

ಕಣ್ಣೀರ ಕಡಲಲ್ಲಿ ನೆಮ್ಮದಿಯ ಬದುಕಿಗಾಗಿ ಶೋಧ...

ಪುತ್ತೂರು: ನಿತ್ಯ ಕಣ್ಣೀರ ಕಡಲಲ್ಲೇ ತೇಲಾಡುತ್ತಿರುವ ಕುಟುಂಬ ಅದು. ಈ ಕುಟುಂಬಕ್ಕೆ ನೆಮ್ಮದಿ ಅನ್ನುವುದೇ ಮರೀಚಿಕೆಯಾಗಿದೆ. ಕುಟುಂಬಕ್ಕೆ ಆಸರೆಯಾಗಿದ್ದವರೆಲ್ಲ ಮನೆಯಲ್ಲೇ ಜೀವನ ಕಳೆಯುವಂತಾಗಿದ್ದು, ಒಂದಲ್ಲ ಒಂದು ಕಾಯಿಲೆಗೆ ತುತ್ತಾಗಿ ನರಕಯಾತನೆ ಅನುಭವಿಸುತ್ತಿದ್ದಾರೆ. ಇದು ಕಡಬದ ತಾಲೂಕಿನ ಬಿಳಿನೆಲೆ ಗ್ರಾಮದ ಜನತಾ ಕಾಲೊನಿಯ ಒಂದು ಕುಟುಂಬದ ಕಥೆ.

ದಟ್ಟ ರಬ್ಬರ್ ಕಾಡಿನ ಪಕ್ಕದಲ್ಲಿ ಮೂರು ಸೆಂಟ್ಸ್ ಜಾಗದಲ್ಲಿ ಸಣ್ಣ ಗುಡಿಸಲು ನಿರ್ಮಿಸಿ ವಾಸಿಸುತ್ತಿರುವ ಈ ಅಣ್ಣ ತಮ್ಮಂದಿರ ಹೆಸರು ಸೋಮಶೇಖರ್ ಮತ್ತು ಶಿವಪ್ರಸಾದ್. ಅಣ್ಣ ಶಿವಪ್ರಸಾದ್ ಹುಟ್ಟಿನಿಂದಲೇ ಅಂಗವೈಕಲ್ಯಕ್ಕೆ ತುತ್ತಾದರೆ, ತಮ್ಮ 2006ರಲ್ಲಿ ನಡೆದ ಅಪಘಾತದಲ್ಲಿ ಕಾಲಿಗೆ ಗಂಭೀರ ಗಾಯಗೊಂಡು ಬಳಿಕ ಕೆಲಸಕ್ಕೆ ಹೋಗದಂತಹ ಪರಿಸ್ಥಿತಿ. ಇವರಿಬ್ಬರ ಈ ಸಂಕಟದ ನಡುವೆ ಅವರ ತಾಯಿ ವಯೋವೃದ್ಧರಾಗಿದ್ದು ಅವರಿಬ್ಬರನ್ನು ನೋಡಿಕೊಳ್ಳಲಾಗದಂತಹ ಪರಿಸ್ಥಿತಿ. ಇಷ್ಟೆಲ್ಲ



ಕಷ್ಟದ ಪರಿಸ್ಥಿತಿಯ ನಡುವೆಯೂ ಶಿವಪ್ರಸಾದ್ ಅವರ ಸಹೋದರ ಸೋಮಶೇಖರ್ ಅವರಿಗೆ ಅಂಗವೈಕಲ್ಯದ ನಡುವೆ ಇದೀಗ ಕ್ಯಾನ್ಸರ್ ಎಂಬ ಮಹಾಮಾರಿ ನಾಲ್ಕನೇ ಹಂತಕ್ಕೆ ತಲುಪಿರುವುದು ಈ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದೆ.

ಸೋಮಶೇಖರ್ ಅವರಿಗೆ ಇದೀಗ ಕ್ಯಾನ್ಸರ್ ಎಂಬ ಮಹಾಮಾರಿ ಅಂಟಿಕೊಂಡಿದ್ದು, ಅವರ ಚಿಕಿತ್ಸೆಗೆ ಈ ಕುಟುಂಬ ಪರದಾಡುತ್ತಿದೆ. ಈ ಹಿಂದೆ ಅಂಗವೈಕಲ್ಯವನ್ನು ಮೆಟ್ಟಿ ನಿಂತಿದ್ದ ಸೋಮಶೇಖರ್, ಇದೀಗ ಕ್ಯಾನ್ಸರ್‌ಗೆ ತುತ್ತಾಗಿರುವುದು ಅವರ ಮನೆಯವರಿಗೆ ಇನ್ನಿಲ್ಲದ ಸಂಕಟಕ್ಕೆ ದೂಡಿ ಹಾಕಿದೆ. ಕ್ಯಾನ್ಸರ್ ಚಿಕಿತ್ಸೆಗೆ ನಿತ್ಯ ಹಣಕಾಸಿನ ಸಮಸ್ಯೆ ಉಂಟಾಗಿದ್ದು, ಸಾಲದ ಕಡಲಲ್ಲಿ ತೇಲಾಡುವಂತಾಗಿದೆ. ಅವರ ಪರಿಸ್ಥಿತಿಯನ್ನು ಕಂಡು ಕುಟುಂಬ ಕಣ್ಣೀರಿನಲ್ಲಿ ಮುಳುಗಿದೆ. ಸದ್ಯ ಅವರ ಕುಟುಂಬಕ್ಕೆಂದು ಯಾವುದೇ ವರಮಾನವಿಲ್ಲ. ಆದರೆ, ಶಿವಪ್ರಸಾದ್ ಅವರ ಪತ್ನಿಯ ಸಣ್ಣ ಪುಟ್ಟ ಮನೆ ಕೆಲಸದ ದುಡಿಮೆಯಿಂದ ಜೀವನ ಸಾಗುತ್ತಿದೆ. ಮನೆಗೆ ಆಧಾರಸ್ತಂಭವಾಗಿದ್ದ ಶಿವಪ್ರಸಾದ್ ಅವರು ಅಪಘಾತದ ಬಳಿಕ ಕೆಲಸಕ್ಕೂ ಹೋಗದ ಪರಿಸ್ಥಿತಿ ಒಂದೆಡೆಯಾದರೆ ಸಹೋದರ ಸೋಮಶೇಖರ್ ಅವರ ಸ್ಥಿತಿ ಇನ್ನೂ ಕಷ್ಟಕರ. ಈ ಹಿನ್ನಲೆಯಲ್ಲಿ ದಾನಿಗಳು ಮುಂದೆ ಈ ಕುಟುಂಬ ಸಹಾಯಹಸ್ತಕ್ಕಾಗಿ ಕೈಚಾಚಿದೆ.

ಕುಟುಂಬಕ್ಕೆ ಬೇಕಿದೆ ನೆರವು

ಸದ್ಯ ಸೋಮಶೇಖರ್ ಅವರಿಗೆ ವಿಶೇಷ ಚೇತನರ ಮಾಸಿಕ ವೇತನ ರೂ.1200 ದೊರಕುತ್ತಿದ್ದು, ಇದು ಅವರ ಯಾವುದೇ ಚಿಕಿತ್ಸೆಗೂ ಸಾಕಾಗಲಾರದು. ಅವರ ಕುಟುಂಬದ ಪರಿಸ್ಥಿತಿಯನ್ನು ಸುಧಾರಿಸಲು ಶಾಸಕರು, ಅಧಿಕಾರಿಗಳನ್ನು ಸಂಪರ್ಕಿಸುವ ಪ್ರಯತ್ನ ನಡೆದಿದೆ. ಆದರೆ, ಯಾವುದೇ ಪ್ರಯೋಜನ ಆಗಿಲ್ಲ. ಈ ನಿಟ್ಟಿನಲ್ಲಿ ದಾನಿಗಳು ಮುಂದೆ ಬಂದು ಬಿಳಿನೆಲೆಯ ಈ ಮುಗ್ಧ, ಕಡು ಬಡತನದ ಕುಟುಂಬಕ್ಕೆ ನೆರವಾಗಬೇಕಿದೆ. ನೆರವು ನೀಡುವವರು ಶಿವಪ್ರಸಾದ್, ಎಸ್/ಒ ಚೆಲ್ಲಪ್ಪನ್, ಅಕೌಂಟ್ ನಂಬರ್: **44938349798**, ಐಎಫ್‌ಎಸ್‌ಸಿ ಕೋಡ್: ಎಸ್‌ಬಿಐಎನ್**0040953**, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಡಬ ಬ್ರ್ಯಾಂಚ್, ದಕ್ಷಿಣ ಕನ್ನಡ. ದೂರವಾಣಿ: **8861024880**

ವಿದ್ಯುತ್ ತಂತಿಗೆ ಏಣಿ ಸ್ಪರ್ಶ: ಯುವಕನ ದಾರುಣ ಸಾವು

ಕುಂದಾಪುರ: ನಿರ್ಮಾಣ ಹಂತದ ಮನೆಯೊಂದರ ಗಾರೆ ಕೆಲಸದ ಮಾಡುತ್ತಿದ್ದ ವೇಳೆ ಕಬ್ಬಿಣದ ಏಣಿಯನ್ನು ಮತ್ತೊಂದೆಡೆ ಸ್ಥಳಾಂತರಿಸುವಾಗ ಮನೆ ಹಿಂಭಾಗದಲ್ಲಿ ಹಾದುಹೋಗಿದ್ದ ವಿದ್ಯುತ್ ತಂತಿಗೆ ಏಣಿ ಸ್ಪರ್ಶವಾದ ಪರಿಣಾಮ ಶಾಕ್ ತಗುಲಿ ಯುವಕನೋರ್ವ ಮೃತಪಟ್ಟ ಘಟನೆ ಕುಂದಾಪುರದ ಕಡ್ಗಿಮನೆ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ಕುಂದಾಪುರ ತಾಲೂಕಿನ ಮೂಡ್ಲಕಟ್ಟೆ ಸಮೀಪದ ಕಂದಾವರ ಸಾಂತಾವರ ನಿವಾಸಿ ಮುತ್ತ-ಗಂಗಾ ದಂಪತಿಗಳ ಪುತ್ರ ಶಿವರಾಜ್ (35) ಮೃತ ದುರ್ದೈವಿ. ಇವರು ಕಳೆದ 15 ವರ್ಷಗಳಿಂದ ಗಾರೆ ವೃತ್ತಿಮಾಡಿಕೊಂಡಿದ್ದರು.

ಘಟನೆ ವಿವರ:

ಕುಂದಾಪುರ ಹೊರವಲಯದ ಕಡ್ಗಿಮನೆ ರಸ್ತೆಯ ಕೊನೆಯಲ್ಲಿ ಪ್ರವೀಣ್ ಖಾರ್ವಿ ಎನ್ನುವರ ನಿರ್ಮಾಣ ಹಂತದಲ್ಲಿರುವ ಮನೆಯ ಗಾರೆ ಕೆಲಸಕ್ಕೆ ಸೋಮವಾರ ಶಿವರಾಜ್ ಹಾಗೂ ಇತರರು ಬಂದಿದ್ದು ತನ್ನ ಜೊತೆ ಕೆಲಸ ಮಾಡುವ ಇನ್ನಿಬ್ಬರು ಕೆಲಸಗಾರರೊಂದಿಗೆ ಕಬ್ಬಿಣದ ಏಣಿಯನ್ನು ಬೇರೆ ಕಡೆಗೆ ಹೊತ್ತೊಯ್ಯುವಾಗ ಆಕಸ್ಮಿಕವಾಗಿ ಏಣಿ ಆಯತಪ್ಪಿ ಅಲ್ಲಿಯೇ ಹಾದು ಹೋಗಿರುವ ವಿದ್ಯುತ್ ತಂತಿಗೆ ತಾಗಿ ವಿದ್ಯುತ್ ಶಾಕ್ ತಗುಲಿದ್ದರಿಂದ ಶಿವರಾಜ್ ತೀವ್ರ ಅಸ್ವಸ್ಥಗೊಂಡಿದ್ದರು. ತಕ್ಷಣ ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಲ್ಲಾಗಲೇ ಶಿವರಾಜ್ ಮೃತಪಟ್ಟಿದ್ದರು. ಘಟನೆಯಲ್ಲಿ ಇನ್ನಿಬ್ಬರು ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ಮೃತ ಶಿವರಾಜ್ ಅವಿವಾಹಿತರಾಗಿದ್ದರು.

ಕುಂದಾಪುರ ನಗರ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಪುಷ್ಪಾ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರ ಸಹೋದರ ನೀಡಿದ ದೂರಿನಂತೆ ಕುಂದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಶ್ರೀನಿವಾಸ ಶೆಣೈಗೆ ಉನ್ನತ ಶ್ರೇಣಿಯೊಂದಿಗೆ ಬಂಗಾರದ ಪದಕ



• **ಮೂಡಬಿದಿರೆ:** ಬೆಂಗಳೂರಿನ ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸಾಯನ್ಸ್ ನಡೆಸಿದ ಅಂತಿಮ ಪರೀಕ್ಷೆಯಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯದ ವೈದ್ಯಕೀಯ ವಿದ್ಯಾರ್ಥಿ ಶ್ರೀನಿವಾಸ ಶೆಣೈ ಉನ್ನತ ಶ್ರೇಣಿಯೊಂದಿಗೆ ಬಂಗಾರದ ಪದಕವನ್ನು ಪಡೆದು 2025–26 ನೇ ಸಾಲಿನ ಬೆಸ್ಟ್ ಔಟ್ ಗೋಯಿಂಗ್ ಡಾಕ್ಟರ್ ಎಂಬ ಗೌರವವನ್ನು ಪಡೆದಿದ್ದಾರೆ. ಇವರು ಕೆಸರುಗದ್ದೆ ಶ್ರೀರಾಮ ಮಂದಿರ ಬಳಿಯ ನಿವಾಸಿ ಕೃಷ್ಣ ಶೆಣೈ ಮತ್ತು ರವಿಕಲಾ ದಂಪತಿಯ ಪುತ್ರ. ಶ್ರೀರಾಮ ಭಜನಾ ಮಂದಿರ ಮಂಡಳಿಯ ಅಧ್ಯಕ್ಷ ರಾಜೇಶ್ ಕಾಮತ್ ಅಭಿನಂದಿಸಿದ್ದಾರೆ.

ಅಖಿಲ ಭಾರತ ಮಟ್ಟದ ಅಂತರ್ ವಿವಿ ಕರಾಟೆ ಸ್ಪರ್ಧೆಗೆ ಆಯ್ಕೆ



• **ಕುಂದಾಪುರ:** ಭೋಪಾಲ್‌ನ ಎಸ್‌ಎಜಿಇ ವಿವಿಯಲ್ಲಿ ನಡೆದ ದಕ್ಷಿಣ–ಪಶ್ಚಿಮ ವಲಯ ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿದ ಕುಂದಾಪುರ ಕೋಟೇಶ್ವರದ ಕಾಳಾವರ ಶ್ರೀ ವರದರಾಜ ಎಂ. ಶೆಟ್ಟಿ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ಬಿ.ಎ. ವಿದ್ಯಾರ್ಥಿ ಭರತ್ ಬಸಪ್ಪ ಹೂಗಾರ್ ಕಂಚಿನ ಪದಕ ಪಡೆದು, ಅಸ್ಸಾಂನ ದಿಬ್ರುಗಢ ವಿವಿಯಲ್ಲಿ ನಡೆಯಲಿರುವ ಅಖಿಲ ಭಾರತ ಮಟ್ಟದ ಅಂತರ್ ವಿವಿ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಯ ಸಾಧನೆಯನ್ನು ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ, ಬೋಧಕ ಹಾಗೂ ಬೋಧಕೇತರರು, ವಿದ್ಯಾರ್ಥಿಗಳು, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪೋಷಕ ಸಂಘದವರು, ಹಳೆ ವಿದ್ಯಾರ್ಥಿಗಳು ವಿದ್ಯಾರ್ಥಿಯನ್ನು ಅಭಿನಂದಿಸಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯ ಪವರ್‌ಲಿಫ್ಟಿಂಗ್‌ನಲ್ಲಿ ರಂಜಿತ್‌ಗೆ ಬೆಳ್ಳಿ ಪದಕ



• **ಪುತ್ತೂರು:** ಮಂಗಳೂರಿನ ಸ್ಕೂಲ್ ಆಫ್ ಸೋಷಿಯಲ್ ವರ್ಕ್ ರೋಶ್ನಿ ನಿಲಯದಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾಲಯದ ಅಂತರ್ ಕಾಲೇಜ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪುತ್ತೂರಿನ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ತೃತೀಯ ಬಿಎ ವಿದ್ಯಾರ್ಥಿ ರಂಜಿತ್ ಬೆಳ್ಳಿ ಪದಕ ಗೆದ್ದಿದ್ದಾರೆ.



ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿ ಗೀತಾ ಕೆ. ಬಿ. ಶೆಟ್ಟಿ ಅವರು ಕುಟುಂಬಸ್ಥ ರೊಂದಿಗೆ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೆ ಭೇಟಿ ನೀಡಿದರು. ದೇವಳದ ವ್ಯವಸ್ಥಾಪನಾ ಸಮಿತಿ ಮತ್ತು ಅಭಿವೃದ್ಧಿ ಸಮಿತಿಯಿಂದ ಗೌರವಿಸಲಾಗಿ, ಪ್ರಾರ್ಥಿಸಿ ಅಮ್ಮನ ಅನುಗ್ರಹ ಪ್ರಸಾದವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ದೇವಳದ ಅಭಿವೃದ್ಧಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ ಮೊದಲಾದವರು ಉಪಸ್ಥಿತರಿದ್ದರು.

ದ.ಕ. ರೆಡ್‌ಕ್ರಾಸ್ ಚೇರ್ಮನ್‌ಆಗಿ ಸಿಎ ಶಾಂತಾರಾಮ ಶೆಟ್ಟಿ ಪುನರಾಯ್ಕೆ



• **ಮಂಗಳೂರು:** ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ 2026–29ನೇ ಸಾಲಿನ ಚೇರ್ಮನ್ ಆಗಿ ಸಿಎ ಶಾಂತಾರಾಮ ಶೆಟ್ಟಿ ಆಯ್ಕೆಯಾಗಿದ್ದಾರೆ.

ವೈಸ್ ಚೇರ್ಮನ್ ಆಗಿ ಡಾ. ಬಿ.ಸಚ್ಚಿದಾನಂದ ರೈ, ಖಜಾಂಚಿಯಾಗಿ ಗುರುದತ್ ನಾಯಕ್ ಆಯ್ಕೆಯಾಗಿದ್ದಾರೆ.

ದ.ಕ.ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ದರ್ಶನ್.ಎಚ್.ವಿ. ಅವರು ಆಡಳಿತ ಮಂಡಳಿ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿ ಶುಭ ಹಾರೈಸಿದರು.

ನೂತನವಾಗಿ ಚುನಾಯಿತರಾದ ಸಿಎ ಶಾಂತಾರಾಮ ಶೆಟ್ಟಿ, ಡಾ. ಬಿ.ಸಚ್ಚಿದಾನಂದ ರೈ, ಗುರುದತ್ ನಾಯಕ್, ಡಾ.ಸತೀಶ್ ರಾವ್, ಯತೀಶ್ ಬೈಕಂಪಾಡಿ, ಪುಷ್ಪರಾಜ್ ಜೈನ್, ಡಾ.ಸುಮನ ಬಿ., ಪಿ.ಬಿ.ಹರೀಶ್ ರೈ, ಸಚೇತ್ ಸುವರ್ಣ ಮತ್ತು ರಾಘವೇಂದ್ರ ರಾವ್ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಚೇರ್ಮನ್ ಹಾಗೂ ವಿವಿಧ ಉಪ ಸಮಿತಿಗಳಿಗೆ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು.

ಸಿಎ ಶಾಂತಾರಾಮ ಶೆಟ್ಟಿ ಅವರು ಸತತ 4ನೇ ಅವಧಿಗೆ ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಆಗಿ ಆಯ್ಕೆಯಾಗಿದ್ದು, ಪ್ರಸ್ತುತ ಅವರು ನವ ದಿಲ್ಲಿಯ ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ನಿರ್ವಹಣಾ ಮಂಡಳಿ ಸದಸ್ಯರಾಗಿದ್ದಾರೆ.

ಬಿಇ ಪದವೀಧರಗೆ ಸಾಂಪ್ರದಾಯಿಕ ವೃತ್ತಿಯ ಸೆಳೆತ | ಯಶಸ್ವಿಯಾಯಿತು ವಿವಿಧ ಪ್ರಯೋಗ

ಇಲ್ಲಿ ಕುಂಬಾರಿಕೆಗೆ ಟೆಕ್ನಾಲಜಿಯ ಟಚ್!

▸ **ಗಣೇಶ್ ನಾಯಕ್, ಸಾಣೂರು**



ದಿಗಂತ ವಿಶೇಷ

• **ಕಾರ್ಕಳ:** ಬಿಇ ಪದವಿ ಪಡೆದರೂ ಸಾಂಪ್ರದಾಯಿಕ ವೃತ್ತಿಗೆ ಮರಳಿದ ಯುವಕನೊಬ್ಬ, ಆಧುನಿಕ ತಂತ್ರಜ್ಞಾನ (ವಿದ್ಯುತ್ ಚಕ್ರ, ಹೊಸ ವಿನ್ಯಾಸ) ಬಳಸಿ ಮಣ್ಣಿನ ಪಾತ್ರೆಗಳಿಗೆ ಹೊಸ ರೂಪ ನೀಡಿ ಯಶಸ್ವಿಯಾದ ಕಥೆ ಇದು.

ಅವರೀಗ ಕಾಲಕ್ಕೆ ತಕ್ಕಂತೆ ಮಣ್ಣಿನಲ್ಲಿ ವಿಭಿನ್ನ ವಸ್ತು ಮಾಡುತ್ತಾ ಪಾರಂಪರಿಕ ವೃತ್ತಿ ಕೈ ಬಿಡದೇ ಅದನ್ನೇ ಬಂಡವಾಳವಾಗಿಸಿ ಜೀವನ ಸಾಗಿಸುತ್ತಿದ್ದಾರೆ.

ಹೌದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಸಾಣೂರು ಗ್ರಾಮದ ಶಂಕರ್ ಕುಲಾಲ್, ಕುಂಬಾರಿಕೆಯಲ್ಲಿ ಜೀವನ ಕಟ್ಟಿಕೊಂಡು ಸೈ ಅನಿಸಿಕೊಂಡಿದ್ದಾರೆ. ಮಣ್ಣಿನಲ್ಲಿ ಶುರುವಾದ ಇವರ ಕುಟುಂಬ ಜೀವನ ಇಂದಿಗೂ ಮಣ್ಣಿನಲ್ಲಿಯೇ ಇರುವುದು ನಿಜಕ್ಕೂ ಖುಷಿ ಪಡುವ ವಿಚಾರ.

ಕೇವಲ ವೃತ್ತಿಯಲ್ಲ, ಇದು ಕಲೆ

ಕುಂಬಾರಿಕೆ ಎನ್ನುವುದು ಕೇವಲ ಮಣ್ಣಿನ ಪಾತ್ರೆ ಮಾಡುವ ವೃತ್ತಿಯಲ್ಲ, ಅದೊಂದು ಅದ್ಭುತ ಕಲೆ. ದೂರದ ಊರಿನಿಂದ ಮಣ್ಣನ್ನು ತಂದು, ಹದಮಾಡಿ, ಚಕ್ರದ (ತಗೋರಿ) ಸಹಾಯದಿಂದ ಬೆರಳುಗಳ ಚಾಕಚಕ್ಯತೆಯಿಂದ ಬಗೆಬಗೆಯ ಪಾತ್ರೆಗಳನ್ನು ಸೃಷ್ಟಿಸುವ ಕಲೆಗಾರಿಕೆ ಇದಾಗಿದೆ. ಮಣ್ಣಿನ ಮಡಕೆ ಸೇರಿದಂತೆ ತರಹ ತರಹದ ವಸ್ತುಗಳ ತಯಾರಿಕೆಗೆ ಈ ಹಿಂದೆ ಕಟ್ಟಿಗೆಯ ತಿಗುರಿ ಬಳಸಲಾಗುತ್ತಿತ್ತು. ಇದನ್ನು ಕೈಯಿಂದ ಬಡಿಗೆ ಮೂಲಕ ತಿರುಗಿಸುವ ಸಾಹಸ ಮಾಡಬೇಕಿತ್ತು. ಜತೆಗೆ ಈ ಕೆಲಸದಲ್ಲಿ ತೊಡಗಿರುವವರಿಗೆ ಅನಾರೋಗ್ಯವೂ ಎದುರಾಗುತ್ತಿತ್ತು.

ಇಲ್ಲಿಗೂ ಸಿಕ್ಕಿತು ಆಧುನಿಕತೆ ಹೊಡೆತ

ಬರಬರುತ್ತ ಆಧುನಿಕತೆ ಹೊಡೆತಕ್ಕೆ ವೃತ್ತಿ ನೆಲಕಚ್ಚಿ ಹಲವರು ಕುಂಬಾರಿಕೆಯನ್ನೆ ತೊರೆದ ನಿದರ್ಶನಗಳು ಸಾಕಷ್ಟಿವೆ. ಇದೀಗ ಇಲೆಕ್ಟ್ರಿಕಲ್ ಹಾಗೂ ಸೋಲಾರ್ ಮೂಲಕವೂ ವೀಲ್ ಮಷಿನ್ ಕಾರ್ಯ ನಿರ್ವಹಿಸುತ್ತದೆ. ವಿನೂತನ ಯಂತ್ರದಲ್ಲಿ ಹಣತೆ, ಮಡಕೆ, ಕುಡಿಕೆ, ಹೂಜಿ, ಕಟಿಂಗ್ ಪಾಟ್, ಫ್ಲಾವರ್ ಪಾಟ್, ವಾಟರ್‌ಪಾಟ್, ಜಗ್, ಗ್ಲಾಸ್, ಕಪ್, ಚೆಹಾಕಿತ್ತಲಿ, ಗಂಟೆ, ಸಣ್ಣಮಿನಾರ್, ದೂಪದ ಪಾತ್ರೆ, ಹೀಗೆ ಹತ್ತು ಹಲವು ವಸ್ತುಗಳನ್ನು ತಯಾರಿಸಬಹುದಾಗಿದೆ. ಇಲೆಕ್ಟ್ರಿಕ್ ಪ್ರೆಸ್ ಮೆಷಿನ್ ಮೂಲಕ ತಯಾರಾಗುವ ತುಳಸಿ ಕಟ್ಟೆ ಹಾಗೂ ಅಡುಗೆ ಸ್ಟೌವ್‌ಗಳಿಗೆ ಇದೀಗ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆಯೂ ಇದೆ.

ಕುಟುಂಬಗಳು ಕಣ್ಮರೆ

ಕೆಲ ಕುಂಬಾರರು ಮಡಿಕೆ ಕುಡಿಕೆಗಳನ್ನು ಮಾಡುವುದನ್ನು ಬಿಟ್ಟು ಮಣ್ಣಿನ ಇತರೆ ಅಲಂಕಾರಿಕ ವಸ್ತುಗಳು, ಹಾಗೂ ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಗೌರಿ, ಗಣೇಶ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಮತ್ತೆ ಕೆಲವರು ಕುಲ ಕಸುಬು ಬಿಟ್ಟು ಬೇರೆ ಉದ್ಯೋಗದತ್ತ ಮುಖ ಮಾಡಿದ್ದರೆ ಮತ್ತೆ ಕೆಲವರು ಕುಂಬಾರ ವೃತ್ತಿಯನ್ನು ಮಾಡಲಾಗದ ಪರಿಸ್ಥಿತಿಯಲ್ಲಿ ಇದ್ದಾರೆ.

> **ನಮ್ಮ ಕುಂಬಾರಿಕೆ ಉದ್ಯೋಗದಲ್ಲೂ ಆಧುನಿಕತೆ ಅಳವಡಿಸಿಕೊಳ್ಳುವ ಅಗತ್ಯವಿದೆ. ಅದಕ್ಕೆ ಸರ್ಕಾರ ಯೋಜನೆಗಳನ್ನು ರೂಪಿಸಿ ತರಬೇತಿ ನೀಡಬೇಕು. ಉತ್ಪಾದನೆ, ಮಾರಾಟಕ್ಕೆ ಜಾಗ ನೀಡಬೇಕು. ತಲೆಮಾರುಗಳಿಂದ ಮಣ್ಣನ್ನೇ ನಂಬಿ ಕುಂಬಾರಿಕೆ ವೃತ್ತಿಯಲ್ಲೇ ಬದುಕು ಕಟ್ಟಿಕೊಂಡಿದ್ದೇವೆ. ಲಾಭವಿಲ್ಲದಿದ್ದರೂ ಕುಲಕಸುಬನ್ನು ಬಿಡಲು ಮನಸೊಪ್ಪದೇ, ಜೀವನ ನಿಭಾಯಿಸುವಷ್ಟು ಆದಾಯಕ್ಕೆ ಕೊರತೆಯಿಲ್ಲ ಎಂಬ ನಂಬಿಕೆಯಿಂದ ಕುಂಬಾರಿಕೆಯನ್ನು ಮುಂದುವರಿಸಿದ್ದೇವೆ.**
> ■ ಶಂಕರ್ ಕುಲಾಲ್ ಸಾಣೂರು, ಕಾರ್ಕಳ

ಕುಂಬಾರಿಕೆ ಸೊರಗುತ್ತಿದೆ

ಲಾಲು ಪ್ರಸಾದ ಯಾದವ್ ರೈಲ್ವೆ ಸಚಿವರಾಗಿದ್ದಾಗ ಮಣ್ಣಿನ ಲೋಟದಲ್ಲೇ ಚಹಾ ನೀಡಬೇಕು ಎಂದು ಆದೇಶ ನೀಡಿ ಕುಂಬಾರಿಕೆ ಪ್ರೋತ್ಸಾಹಿಸಿದ್ದರು. ಸರಕಾರ ಕುಂಬಾರಿಕೆಗೆ ಹೆಚ್ಚಿನ ಸಾಲ ನೀಡುವ ಜತೆಗೆ ಕುಂಬಾರರು ತಯಾರಿಸಿದ ಸಾಮಗ್ರಿಗಳನ್ನು ನಿಗದಿತ ಬೆಲೆಗೆ ಕೊಂಡುಕೊಳ್ಳಬೇಕು. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಕ್ಯಾಂಟೀನ್, ಪ್ರವಾಸಿ ತಾಣ ಮತ್ತಿತರ ಸ್ಥಳಗಳಲ್ಲಿ ಮಣ್ಣಿನ ಲೋಟಾದಲ್ಲಿ ಚಹಾ ಮತ್ತು ನೀರು ನೀಡುವ ವ್ಯವಸ್ಥೆ ಮಾಡಿ ಕುಂಬಾರಿಕೆಗೆ ಪ್ರೋತ್ಸಾಹಿಸಬೇಕು. ಇಂದು ಕಡಿಮೆ ಬೆಲೆಯ ಚೀನಿ ಮಣ್ಣಿನ ಹಣತೆಗಳ ಮುಂದೆ ದೇಸಿ ಮಣ್ಣಿನ ಹಣತೆಗಳನ್ನು ಕೇಳುವವರೇ ಇಲ್ಲದಂತಾಗಿದೆ. ಇದರಿಂದ ಕುಂಬಾರಿಕೆ ಸೊರಗುತ್ತಿದೆ.

▸ ಆರೋಗ್ಯಕ್ಕೆ ಹಾನಿಕಾರಕ...

ಇದೀಗ ರಸ್ತೆ ಬದಿಯಲ್ಲಿ ಮಾರಾಟ ಆಗುತ್ತಿರುವ ಮಣ್ಣಿನ ಪಾತ್ರೆಗಳು ಕನ್ಯಾಕುಮಾರಿ ಕಡೆಯಲ್ಲಿ ಕೆರೆಯ ಮಣ್ಣಿನಲ್ಲಿ ತಯಾರಾಗುತ್ತಿರುವುದರಿಂದ ಈ ಪಾತ್ರೆಯಲ್ಲಿ ಮಾಡಿದ ಅಡುಗೆಯು ಸ್ಲೋ ಪಾಯಿಸನ್ ಆಗಿರುವುದರಿಂದ ಇಲ್ಲಿನ ಮಣ್ಣಿನ ಪಾತ್ರೆಯಲ್ಲಿ ಅಡುಗೆ ಮಾಡಿ ತಮ್ಮ ಆರೋಗ್ಯ ಕಾಪಾಡಿ ಎಂದು ಶಂಕರ್ ಕುಲಾಲ್ ಹೊಸದಿಗಂತಕ್ಕೆ ತಿಳಿಸಿದ್ದಾರೆ. ಪ್ಲಾಸ್ಟಿಕ್, ಫೈಬರ್ ಕಬ್ಬಿಣದ ವಸ್ತುಗಳಿಂದ ತಯಾರಿಸಿದ ಸಾಮಗ್ರಿಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿರುವುದರಿಂದ ಕುಂಬಾರಿಕೆ ಕ್ಷೀಣಿಸುತ್ತಿದೆ. ಹೀಗೆ ಮುಂದುವರಿದರೆ ಮುಂದೊಂದು ದಿನ ಮಣ್ಣಿನ ಪಾತ್ರೆ, ಹಣತೆಗಳು ಇತಿಹಾಸ ಪುಟ ಸೇರಬಹುದು ಎಂಬ ಆತಂಕ ಜನತೆಯನ್ನು ಕಾಡುತ್ತಿದೆ.

ನೆರವು ಬೇಕಾಗಿದೆ

ಒಟ್ಟಿನಲ್ಲಿ ಆಧುನಿಕ ವಸ್ತುಗಳ ಮಾರಾಟದ ಭರಾಟೆಯಲ್ಲಿ ತಲೆತಲಾಂತರಗಳಿಂದ ಬಂದ ಮಡಕೆ, ಕುಡಿಕೆಗಳ ಬೇಡಿಕೆ ಕಳೆದುಕೊಂಡಿದೆ. ಮಡಕೆಗಳಿಗೆ ಮಾರುಕಟ್ಟೆಯೇ ಇಲ್ಲದಂತಾಗಿರುವ ಹಿನ್ನೆಲೆಯಲ್ಲಿ ಈ ವೃತ್ತಿ ಅವಲಂಬಿಸಿದ್ದ ಕುಟುಂಬಗಳು ಕಣ್ಮರೆಯಾಗುತ್ತಿವೆ. ಒಂದು ಕಾಲದಲ್ಲಿ ಗಡಿಗೆ, ಒಲೆ, ಹಣತೆ, ಬಿಂದಿಗೆ, ಮಗಿ, ತತ್ತರಾಣಿಗಿ, ರೊಟ್ಟಿ ಹಂಚು, ಹಣ ಕೂಡಿಡುವ ಕುಡಿಕೆ ಸೇರಿದಂತೆ ಮಣ್ಣಿನಿಂದ ತಯಾರಿಸಿದ ವಸ್ತುಗಳು ಕುಟುಂಬಕ್ಕೆ ಅಗತ್ಯಗಳಾಗಿದ್ದವು. ಆದರಿಂದ ಅವುಗಳನ್ನು ಕೇಳುವವರೇ ಇಲ್ಲದಂತಾಗಿದ್ದು, ಕುಂಬಾರಿ ವೃತ್ತಿ ನಂಬಿದವರ ಬದುಕು ಅತಂತ್ರವಾಗಿದೆ. ಅವರ ಸಂಖ್ಯೆಯೂ ಕ್ಷೀಣಿಸುತ್ತಿದೆ. ಕುಂಬಾರ ಜನಾಂಗದಲ್ಲಿ ಕುಲಕಸುಬು ಮಾಡುವವರಿಗೆ ಸಾಲ, ಕೌಶಲ್ಯ ತರಬೇತಿ ನೀಡಿ ಉತ್ತೇಜಿಸುವ ಜೊತೆಗೆ ಅವರನ್ನು ಆರ್ಥಿಕವಾಗಿ ಬಲ ತುಂಬಲು ಸಹಾಯಧನ ಒದಗಿಸುವುದು. ಕುಂಬಾರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೇರಿದಂತೆ ಸಮುದಾಯದ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಗಾಗಿ ಇನ್ನಾದರೂ ಕರ್ನಾಟಕ ಕುಂಬಾರ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಇಂತಹ ಮೂಲ ಕಸುಬು ಉಳಿಸುವ ನಿಟ್ಟಿನಲ್ಲಿ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಮೂಲಕ ಕುಂಬಾರರ ನೆರವಿಗೆ ನಿಲ್ಲಬೇಕಾಗಿದೆ.

ಮಾ.26ರಿಂದ 29ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ

ಶ್ರೀ ರಾಮೋತ್ಸವಕ್ಕೆ ಸಜ್ಜಾಗಿದೆ ಕದ್ರಿ



• **ಮಂಗಳೂರು:** ವಿಶ್ವಹಿಂದು ಪರಿಷತ್ ಮತ್ತು ಶ್ರೀ ರಾಮೋತ್ಸವ ಸಮಿತಿ ಮಂಗಳೂರು ವತಿಯಿಂದ ಮಾ.26ರಿಂದ 29ರವರೆಗೆ ನಗರದ ಕದ್ರಿ ಮೈದಾನದಲ್ಲಿ 25ನೇ ವರ್ಷದ ಶ್ರೀ ರಾಮೋತ್ಸವ ನಡೆಯಲಿದೆ.

ಈ ಬಾರಿ ಶ್ರೀ ರಾಮೋತ್ಸವದ ರಜತ ವರ್ಷಾಚರಣೆ ಅಂಗವಾಗಿ ನಾಲ್ಕು ದಿನಗಳ ಕಾಲ ಅದ್ದೂರಿಯಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಾ.26ರಂದು ಸಂಜೆ 4.30ಕ್ಕೆ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಿಂದ ಕದ್ರಿ ಮೈದಾನಕ್ಕೆ ಶ್ರೀರಾಮ, ಸೀತಾ, ಲಕ್ಷ್ಮಣ, ಹನುಮಂತ ದೇವರ ರಜತ ಮೂರ್ತಿಗಳ ಭವ್ಯ ಶೋಭಾಯಾತ್ರೆ ನಡೆಯಲಿದೆ. ಸಂಜೆ 5ರಿಂದ ಕದ್ರಿ ಮೈದಾನದ ವೇದಿಕೆಯಲ್ಲಿ ಭಜನೆ ನೆರವೇರಲಿದೆ ಎಂದು ರಾಮೋತ್ಸವ ಸಮಿತಿ ಗೌರವಾಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಮೋತ್ಸವಸಮಿತಿಕಾರ್ಯಾಧ್ಯಕ್ಷಸುದರ್ಶನ್‌ಮೂಡುಬಿದಿರೆ ಮಾತನಾಡಿ ಕಾರ್ಯಕ್ರಮ ಬಗ್ಗೆ ವಿವರ ನೀಡಿದರು.

▸▸ ಮಾ.27ರ ಕಾರ್ಯಕ್ರಮ

ಬೆಳಗ್ಗೆ 8ಕ್ಕೆ ಗಣಪತಿ ಹೋಮ, ಗೋಪೂಜೆ, ದೇವರ ಪ್ರತಿಷ್ಠೆ, 9ಕ್ಕೆ ಧ್ವಜಾರೋಹಣ, 9.30ಕ್ಕೆ ಲೋಕಕಲ್ಯಾಣಾರ್ಥವಾಗಿ ಶ್ರೀರಾಮ ತಾರಕ ಮಂತ್ರ ಹೋಮ, ಮಧ್ಯಾಹ್ನ 12ಕ್ಕೆ ಹೋಮ ಪೂರ್ಣಾಹುತಿ, ಮಹಾಪೂಜೆ, ಮಧ್ಯಾಹ್ನ 1ರಿಂದ ಅನ್ನಸಂತರ್ಪಣೆ, ಮಧ್ಯಾಹ್ನ 2ರಿಂದ ಕುಣಿತ ಭಜನಾ ಸ್ಪರ್ಧೆ ನಡೆಯಲಿದೆ.

ಸಂಜೆ 6ಕ್ಕೆ ಧಾರ್ಮಿಕ ಸಭೆಯಲ್ಲಿ

ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ಕ್ಯಾಂಪ್ಕೊ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ದೀಪ ಪ್ರಜ್ವಲನೆ ಮಾಡುವರು. ಡಾ.ಎಂ.ಬಿ. ಪುರಾಣಿಕ್ ಅಧ್ಯಕ್ಷತೆ ವಹಿಸುವರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಸಹಕಾರ್ಯವಾಹ ಪಿ.ಎಸ್. ಪ್ರಕಾಶ್, ಶಾಸಕರಾದ ವೇದವ್ಯಾಸ ಕಾಮತ್, ಯಶ್‌ಪಾಲ್ ಸುವರ್ಣ, ಕಿಶೋರ್‌ಕುಮಾರ್ ಪುತ್ತೂರು, ವಿಧಾನ ಪರಿಷತ್ ಮಾಜಿ ಸದಸ್ಯ ಹರೀಶ್‌ಕುಮಾರ್, ಗಣ್ಯರು ಭಾಗವಹಿಸುವರು.

ರಾತ್ರಿ 8ಕ್ಕೆ ಮಹಾಪೂಜೆ, ಬಳಿಕ ಪರಮಾತ್ಮ ಪಂಜುರ್ಲಿ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

▸▸ ಮಾ. 28ರ ಕಾರ್ಯಕ್ರಮ

ಬೆಳಗ್ಗೆ 8ಕ್ಕೆ ಪ್ರಾತಃಪೂಜೆ, 9ಕ್ಕೆ ವಿಶ್ವಶಾಂತಿಗಾಗಿ ನರಸಿಂಹ ಹೋಮ, 9.30ರಿಂದ ಭಜನೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಸಂಜೆ 4ರಿಂದ ಸನಾತನ ನಾಟ್ಯಾಲಯ ತಂಡದಿಂದ ನೃತ್ಯ ವೈಭವ ನಡೆಯಲಿದೆ.

ಸಂಜೆ 6ಕ್ಕೆ ಧಾರ್ಮಿಕ ಸಭೆಯಲ್ಲಿ

ಸುಬ್ರಹ್ಮಣ್ಯ ಸಂಪುಟ ನರಸಿಂಹ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡುವರು. ಉದ್ಯಮಿ ಜಿತೇಂದ್ರ ಎಸ್. ಕೊಟ್ಟಾರಿ ಅಧ್ಯಕ್ಷತೆ ವಹಿಸುವರು. ಹಿರಿಯ ವಕೀಲ ಪಿ.ಪಿ. ಹೆಗ್ಡೆ ದೀಪ ಪ್ರಜ್ವಲನೆ ಮಾಡುವರು. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕರಾದ ರಾಜೇಶ್ ನ್ಯಾಕ್, ಡಾ.ವೈ.ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಹಿರಿಯ ವಕೀಲ ಮಹೇಶ್ ಕಜೆ, ಗಣ್ಯರು ಭಾಗವಹಿಸುವರು. ರಾತ್ರಿ 7.30ಕ್ಕೆ ರಂಗಪೂಜೆ, 8ಕ್ಕೆ ಮಹಾಪೂಜೆ, 8.15ರಿಂದ ಛತ್ರಪತಿ ಶಿವಾಜಿ ನಾಟಕ ನಡೆಯಲಿದೆ ಎಂದರು.

▸▸ ಮಾ.29ರ ಕಾರ್ಯಕ್ರಮ

ಬೆಳಗ್ಗೆ 8ಕ್ಕೆ ಪ್ರಾತಃ ಪೂಜೆ, 9ಕ್ಕೆ ವಿಹಿಂಪ ಬಾಲಸಂಸ್ಕಾರ ಕೇಂದ್ರದ ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಮಹಾಪೂಜೆ, 12.15ಕ್ಕೆ 'ದೃಢನಾರಿ ಸದೃಢ ಭಾರತ' ಮಹಿಳಾ ವಿಚಾರ ಗೋಷ್ಠಿ, ಮಧ್ಯಾಹ್ನ 1ಕ್ಕೆ ದುರ್ಗಾವಾಹಿನಿ ಮಂಗಳೂರು ಜಿಲ್ಲೆವತಿಯಿಂದ ನೃತ್ಯರೂಪಕ 'ನಶಾ ಮುಕ್ತ ಯುವ' ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದಿಂದ ಗಾನ ಸಂಭ್ರಮ ನಡೆಯಲಿದೆ.

ಸಂಜೆ 6ಕ್ಕೆ ಧಾರ್ಮಿಕ ಸಭೆಯಲ್ಲಿ

ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ ಆಶೀರ್ವಚನ ನೀಡುವರು. ಮಾಜಿ ಸಚಿವ ಕೃಷ್ಣ ಜೆ.ಪಾಲೆಮಾರ್ ಅಧ್ಯಕ್ಷತೆ ವಹಿಸುವರು. ಹಿರಿಯ ವಕೀಲ ಅರುಣ್ ಶ್ಯಾಮ್ ದೀಪ ಪ್ರಜ್ವಲನೆ ಮಾಡುವರು. ವಿಹಿಂಪ ಕೇಂದ್ರೀಯ ಕೋಶಾಧ್ಯಕ್ಷ ಮತ್ತು ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ದೀಪಕ್‌ರಾಜ್ ಗೋಪಾಲ್, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲು, ಶಾಸಕರಾದ ಸುರೇಶ್ ಶೆಟ್ಟಿ ಗುರ್ಮೆ, ಉಮಾನಾಥ ಕೋಟ್ಯಾನ್, ಹರೀಶ್ ಪೂಂಜ, ಗಣ್ಯರು ಭಾಗವಹಿಸುವರು.

ರಾತ್ರಿ 8ಕ್ಕೆ ಮಹಾಪೂಜೆ, 8.30ಕ್ಕೆ ರಾವಣ ದಹನ, ಆಕರ್ಷಕ ಸುಡುಮದ್ದು ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ವಿಶ್ವಹಿಂದು ಪರಿಷತ್ ಜಿಲ್ಲಾಧ್ಯಕ್ಷ ಎಚ್.ಕೆ. ಪುರುಷೋತ್ತಮ, ರಾಮೋತ್ಸವ ಸಮಿತಿ ಅಧ್ಯಕ್ಷ ಸುನೀಲ್ ಆಚಾರ್, ವೈದಿಕ ಸಮಿತಿಯ ಪೊಳಲಿ ಗಿರಿಪ್ರಕಾಶ್ ತಂತ್ರಿ, ಪ್ರಧಾನ ಸಂಚಾಲಕ ಗೋಪಾಲ್ ಕುತ್ತಾರ್, ಕಾರ್ಯದರ್ಶಿ ರವಿ ಅಸೈಗೋಳಿ, ಉಪಸ್ಥಿತರಿದ್ದರು.

ಮನಪಾ ವತಿಯಿಂದ ಬಾವಿಗಳನ್ನು ಸ್ವಚ್ಛಗೊಳಿಸಲು ಒತ್ತಾಯ | ಕೊಳವೆಬಾವಿ ನೀರು ಅವಲಂಬಿಸಿರುವ ಜನತೆ

ಪಚ್ಚನಾಡಿಯಲ್ಲಿ ನೀರಿನ ಸಮಸ್ಯೆ ವಿಪರೀತ

▸ **ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

ಮಂಗಳೂರು: ಎತ್ತರದ ಪ್ರದೇಶ, ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ಬರುತ್ತಿಲ್ಲ.. ತುಂಬೆಯಿಂದ ಸರಬರಾಜು ಆಗುವ ನೀರಿನ ಪ್ರಮಾಣವೇ ಕಡಿಮೆ.. ಐದು ವರ್ಷದ ಹಿಂದೆ ದಿನಕ್ಕೆ 14 ಗಂಟೆ ನೀರು ಪಂಪಿಂಗ್ ಆಗುತ್ತಿದ್ದರೆ, ಈಗ ಕೇವಲ 8 ಗಂಟೆ ಮಾತ್ರ ಪಂಪಿಂಗ್ ಆಗುತ್ತಿದೆ..

ಇದು ಮನಪಾ ಪಚ್ಚನಾಡಿ ವಾರ್ಡ್‌ನ ಜನತೆಯ ಕೂಗು. ಪಚ್ಚನಾಡಿಯ ಸಂತೋಷ್‌ನಗರ, ಬೋಂದೆಲ್ ಪರಿಸರ, ಶಿವಾಜಿನಗರ, ಕುರ್ಸುಗುಡ್ಡೆ, ಶ್ರೀನಿವಾಸ ನಗರ, ಮುಗ್ರೋಡಿ, ಪಚ್ಚನಾಡಿ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಪಚ್ಚನಾಡಿ ನಿರಾಶ್ರಿತರ ಕೇಂದ್ರದಲ್ಲೂ ನೀರಿಲ್ಲದೆ ಅಲ್ಲಿನ ನಿವಾಸಿಗಳು ತೊಂದರೆಗೆ ಒಳಗಾಗಿದ್ದಾರೆ. ಮನಪಾ ಟ್ಯಾಂಕ್‌ನಿಂದ ಸಮರ್ಪಕವಾಗಿ ನೀರು ಪೂರೈಕೆಯಾಗದೇ ಇಡೀ ಪಚ್ಚನಾಡಿ ವಾರ್ಡ್‌ನಲ್ಲಿ ನೀರಿನ ಸಮಸ್ಯೆಯಿದೆ. ನೀರು ಬರುವಲ್ಲಿ ಪ್ರಮಾಣ ಕಡಿಮೆ, ಕೆಲವೆಡೆ ಎರಡು ದಿನಕ್ಕೊಮ್ಮೆ ನೀರು, ಇನ್ನೂ ಕೆಲವೆಡೆ ಪ್ರೆಶರ್ ಇಲ್ಲ. ವಾರ್ಡ್‌ನ ಬಹುತೇಕ ಪ್ರದೇಶ ಕೊಳವೆ ಬಾವಿ ನೀರು ಅವಲಂಬಿತವಾಗಿದೆ.

ಈ ವಾರ್ಡ್‌ಗೆ ಮೂರು ಸ್ಥಳಗಳಿಂದ ನೀರು ಪೂರೈಕೆ ಆಗುತ್ತಿದೆ. ಮೇರಿಹಿಲ್ ಪಂಪ್‌ಹೌಸ್‌ನಿಂದ ಪಚ್ಚನಾಡಿ ಪಂಪ್‌ಹೌಸ್ ಮೂಲಕ ಪಂಪಿಂಗ್, ಮೇರಿಹಿಲ್‌ನಿಂದ ಗಂಧಕಾಡು ಟ್ಯಾಂಕ್‌ಗೆ ಪೂರೈಕೆಗೊಂಡು ಅಲ್ಲಿಂದ ಗ್ರಾವಿಟಿ ಮೂಲಕ ಹಾಗೂ ಕಾವೂರು ಪಂಪ್‌ಹೌಸ್‌ನಿಂದ ಬೋಂದೆಲ್ ಪ್ರದೇಶಕ್ಕೆ ಪಂಪಿಂಗ್ ಮೂಲಕ ನೀರು ಸರಬರಾಜು ಆಗುತ್ತಿದೆ. ಐದು ವರ್ಷಗಳ ಹಿಂದೆ ಇಲ್ಲಿ ದಿನಕ್ಕೆ 14ಗಂಟೆಗಳ ಕಾಲ ನೀರು ಪಂಪಿಂಗ್ ಆಗುತ್ತಿತ್ತು. ಈಗ 8–9 ಗಂಟೆ ಮಾತ್ರ ಪಂಪಿಂಗ್ ಆಗುತ್ತಿದೆ. ಪೂರೈಕೆ ಅವಧಿ ಹಾಗೂ ನೀರಿನ ಪ್ರಮಾಣ ಕಡಿಮೆಯಾದ ಕಾರಣ ಪ್ರೆಶರ್ ಇಲ್ಲದೆ ಎಲ್ಲ ಸಂಪರ್ಕಗಳಿಗೆ ನೀರು ಪೂರೈಕೆ ಆಗುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ನಾಳೆ ವಾರ್ಡ್ -20
ತಿರುವೈಲು ಪರಿಸರದ ಸ್ಥಿತಿಗತಿ



ವಾರ್ಡ್ ನಂಬರ್
ಪಚ್ಚನಾಡಿ 19

ಪಚ್ಚನಾಡಿ ಸಂತೋಷ್‌ನಗರದಲ್ಲಿ ನೀರಿಗಾಗಿ ಹೊಸ ಕೊಳವೆಬಾವಿ ಕೊರೆಯಿಸಲಾಗಿದೆ

ಬಾವಿ ಶುಚಿಗೊಳಿಸಿ

'ಪಚ್ಚನಾಡಿ ವಾರ್ಡ್‌ನಲ್ಲಿ ಸರ್ಕಾರಿ ಬಾವಿಗೆ ಪಂಪ್ ಅಳವಡಿಸಿದರೆ ನೀರಿನ ಸಮಸ್ಯೆ ಸ್ವಲ್ಪಮಟ್ಟಿಗೆ ನೀಗಿಸಬಹುದು. ಈಗಾಗಲೇ ಸಂತೋಷ್ ನಗರದಲ್ಲಿ ಮೂರು ಹಾಗೂ ದೇವಿನಗರದಲ್ಲಿ ಒಂದು ಸರ್ಕಾರಿ ಬಾವಿಯನ್ನು ಶುಚಿಗೊಳಿಸಿ ನೀರು ಬಳಕೆಗೆ ವ್ಯವಸ್ಥೆ ಮಾಡಲಾಗಿದೆ. ಗಂಧಕಾಡುವಿನಲ್ಲಿ ಸರಕಾರಿ ಬಾವಿಯನ್ನು ಮನಪಾ ವತಿಯಿಂದ ಕ್ಲೀನ್ ಮಾಡಿಸಿಕೊಟ್ಟರೆ ನೀರು ಬಳಕೆ ಸಾಧ್ಯವಾಗಲಿದೆ. ಮನಪಾ ಅಧಿಕಾರಿಗಳು ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು' ಎಂದು ನಿಕಟಪೂರ್ವ ಕಾರ್ಪೋರೇಟರ್ ಸಂಗೀತಾ ಆರ್. ನಾಯಕ್ ಒತ್ತಾಯಿಸಿದ್ದಾರೆ.

▸ ಟ್ಯಾಂಕರ್ ನೀರಿಲ್ಲ

ಪಚ್ಚನಾಡಿ ವಾರ್ಡ್‌ನಲ್ಲಿ ಭಾರಿ ಪ್ರಮಾಣದಲ್ಲಿ ನೀರಿನ ಸಮಸ್ಯೆಯಿದ್ದರೂ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಇಲ್ಲಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಆಗುತ್ತಿಲ್ಲ. ಮಂಗಳೂರು ಉತ್ತರ ವಿಧಾನ ಸಭಾ ಕ್ಷೇತ್ರದ ಮನಪಾ ವ್ಯಾಪ್ತಿಗೆ ಎರಡು ಟ್ಯಾಂಕರ್ ಮಾತ್ರ ಇದ್ದು, ಪಚ್ಚನಾಡಿ ವಾರ್ಡ್‌ಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಅಪರೂಪ.

ಕೊಳವೆಬಾವಿ ನೀರು ಅವಲಂಬನೆ

ಪಚ್ಚನಾಡಿ ವಾರ್ಡ್‌ನ ಬಹುತೇಕ ಪ್ರದೇಶ ಬೋರ್‌ವೆಲ್ ನೀರು ಅವಲಂಬಿತವಾಗಿದೆ. ವಾರ್ಡ್‌ನಲ್ಲಿ 18 ಬೋರ್‌ವೆಲ್‌ಗಳಿದ್ದು, ಇದರಿಂದ ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಸಂತೋಷ್ ನಗರ, ಆಶ್ರಯನಗರ, ಶಿವಾಜಿನಗರ, ಕಾರ್ಮಿಕ ನಗರ, ಬೋಂದೆಲ್ ಚರ್ಚ್ ಹಿಂಭಾಗದ ಪ್ರದೇಶಗಳು ಕೊಳವೆಬಾವಿ ನೀರನ್ನೇ ಅವಲಂಬಿತವಾಗಿವೆ. ಈ ವರ್ಷ ಕೆಲ ಕೊಳವೆಬಾವಿಗಳಲ್ಲಿ ನೀರಿನ ಮಟ್ಟವೂ ಇಳಿಮುಖವಾಗಿದೆ. ಕಾರ್ಮಿಕ ನಗರದಲ್ಲಿ ಬೋರ್‌ವೆಲ್ ನೀರು ಕಬ್ಬಿಣದ ಅಂಶದಿಂದ ಕೂಡಿದ್ದು, ಕುಡಿಯಲು ಯೋಗ್ಯವಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

> 
>
> **ಪಚ್ಚನಾಡಿ ವಾರ್ಡ್‌ನ ಬಹುತೇಕ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಇದೆ. ಹೆಚ್ಚುವರಿಯಾಗಿ ಐದು ಕೊಳವೆಬಾವಿ ಮಂಜೂರು ಮಾಡುವಂತೆ ಮಂಗಳೂರು ಮಹಾನಗರ ಪಾಲಿಕೆಯನ್ನು ಕಳೆದ ಜನವರಿಯಿಂದಲೇ ವಿನಂತಿಸಲಾಗಿತ್ತು. ಆದರೆ, ಅಧಿಕಾರಿಗಳಿಂದ ಸ್ಪಂದನೆ ಇರಲಿಲ್ಲ. ಸಂತೋಷ್ ನಗರದಲ್ಲಿ ನೀರಿನ ಸಮಸ್ಯೆ ಉಲ್ಬಣಗೊಂಡು ನೀರು ಪೂರೈಕೆ ಸ್ಥಗಿತಗೊಂಡಿತ್ತು. ಆದಾದ ಬಳಿಕ ಸ್ಥಳೀಯರ ಪ್ರಬಲ ಒತ್ತಾಯದಂತೆ ನಾಲ್ಕು ದಿನದ ಹಿಂದೆ ಹೊಸ ಬೋರ್ ವೆಲ್ ಕೊರೆಯಿಸಲಾಗಿದೆ. ಕುರ್ಸುಗುಡ್ಡೆ ಎಂಬಲ್ಲಿಯೂ ಸೋಮವಾರ ಹೊಸ ಕೊಳವೆಬಾವಿ ತೋಡಲಾಗಿದೆ. ಬೋಂದೆಲ್ ಕಂಬ್ಳ, ಶಿವಾಜಿನಗರ, ಜೀವನ್‌ನಗರದಲ್ಲಿ ಹೊಸ ಬೋರ್‌ವೆಲ್ ಆಗಬೇಕಿದ್ದು, ಮನಪಾ ಅಧಿಕಾರಿಗಳು ಶೀಘ್ರ ಕೊಳವೆಬಾವಿ ಕೊರೆಯಿಸಬೇಕು. ನೀರಿನ ಸಮಸ್ಯೆ ಬಗ್ಗೆ ಶಾಸಕರು ಸಭೆ ನಡೆಸಿ ಸೂಚನೆ ನೀಡಿದರೂ, ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ.**
> ■ ಸಂಗೀತಾ ಆರ್. ನಾಯಕ್
> ಪಚ್ಚನಾಡಿ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

> 
>
> **ಪಚ್ಚನಾಡಿ ವಾರ್ಡ್‌ನ ವಾಮಂಜೂರು ಸಂತೋಷ್ ನಗರ ಪ್ರದೇಶದಲ್ಲಿ ಕಳೆದ ಎರಡು ತಿಂಗಳಿನಿಂದ ನೀರಿನ ಸಮಸ್ಯೆ ಇದೆ. ಮನಪಾ ಟ್ಯಾಂಕ್‌ನಿಂದ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆಯಾಗಿ ಸಮಸ್ಯೆ ತಲೆದೋರಿದೆ. ಬೋರ್ ವೆಲ್‌ನಲ್ಲೂ ನೀರಿನ ಮಟ್ಟ ಇಳಿಕೆಯಾಗಿದೆ. ಇಲ್ಲಿನ 25ಕ್ಕೂ ಹೆಚ್ಚು ಮನೆಗಳು ನೀರಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಪಾಲಿಕೆ ಇಂಜಿನಿಯರ್‌ಗಳಿಗೆ ತಿಳಿಸಿದ್ದು, ಅವರಿಂದ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಪಚ್ಚನಾಡಿಯ ನಿಕಟಪೂರ್ವ ಕಾರ್ಪೋರೇಟರ್ ಅವರು ಬಾವಿ ನೀರು ಸ್ವಚ್ಛಗೊಳಿಸುವ ಮೂಲಕ ನಮ್ಮ ನೀರಿನ ಸಮಸ್ಯೆಯನ್ನು ತಕ್ಕಮಟ್ಟಿಗೆ ಪರಿಹರಿಸಿದ್ದಾರೆ.**
> ■ ವಾಸುದೇವ ಎಂ. ವಾಮಂಜೂರು
> ಸಂತೋಷ್‌ನಗರ ನಿವಾಸಿ


ಪ್ರತಿಪಕ್ಷಗಳಿಂದ ನಕಾರಾತ್ಮಕ ರಾಜಕಾರಣ: ಸಂಸದ ಬೊಮ್ಮಾಯಿ

ಹೊಸದಿಲ್ಲಿ: ದೇಶದ ಬಲಿಷ್ಠ ಆರ್ಥಿಕತೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಠಿಣ ಪರಿಶ್ರಮವಿದೆ. ಮೋದಿ ಇದ್ದರೆ ಮ್ಯಾಜಿಕ್ ಆಗುತ್ತದೆ. ಹೀಗಾಗಿ ದೇಶದ ಸಾಮಾನ್ಯ ಜನರು ಅವರ ನಾಯಕತ್ವದ ಮೇಲೆ ನಂಬಿಕೆ ಇಟ್ಟಿದ್ದಾರೆ. ಪ್ರತಿಪಕ್ಷಗಳು ಎಲ್ಲದರಲ್ಲೂ ನಕಾರಾತ್ಮಕ ರಾಜಕಾರಣ ಮಾಡುತ್ತಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟರು.

ಸಂಸತ್ತಿನಲ್ಲಿ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 2026-27ನೇ ಸಾಲಿನ ಆಯವ್ಯಯ ಮಂಡನೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಎಕನಾಮಿಕ್‌ನಲ್ಲಿ ಮ್ಯಾಜಿಕ್ ಇಲ್ಲ. ಮೋದಿ ಪ್ರಧಾನಿಯಾದಾಗ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಇದನ್ನು ಎಲ್ಲಿಂದ, ಹೇಗೆ ಸರಿ ಮಾಡುವುದು ಎನ್ನುವ ಚಿಂತನೆ ಇತ್ತು. ಹಣದುಬ್ಬರ ಎರಡಂಕಿ ಇತ್ತು. ಜಿಡಿಪಿ ಪಾತಾಳಕ್ಕಿಳಿದಿತ್ತು. ಪ್ರಧಾನಿ ಆರ್ಥಿಕತೆಯನ್ನು ಮರು ಸೃಷ್ಟಿ ಮಾಡಿದರು ಎಂದರು.

ದೂರದೃಷ್ಟಿಯುಳ್ಳ ಪಧಾನಮಂತ್ರಿ ಬಂದರೆ ಸಂಕಷ್ಟವನ್ನು ಹೇಗೆ ಅವಕಾಶವನ್ನಾಗಿ ಮಾಡಿ ತೋರಿಸುತ್ತಾರೆ ಎನ್ನುವುದನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತೋರಿಸಿದ್ದಾರೆ. ಪ್ರತಿಪಕ್ಷದವರು ಏನು ಹೇಳುತ್ತಾರೆ ಹೇಳಲಿ, ಅವರು ಖಜಾನೆ ಖಾಲಿ ಮಾಡಿ ಹೋಗಿದ್ದರು. ಮೋದಿ ಯವರು ಅದನ್ನು ಸರಿದಾರಿಗೆ ತಂದಿದ್ದಾರೆ. ನಮ್ಮ ಖರ್ಚು ಶೇ 7.7 ಆಗಿತ್ತು. ಜಿಡಿಪಿ ಅಭಿವೃದ್ಧಿ ಶೇ. 10 ನಿರೀಕ್ಷಿಸಲಾಗಿದೆ. ಎರಡಂಕಿಯ ಜಿಡಿಪಿ ನಿರೀಕ್ಷೆಯಿದೆ. ನಮ್ಮ ವಿತ್ತೀಯ ಕೊರತೆ ಶೇ. 4.4ರಿಂದ 4.3ಕ್ಕೆ ಇಳಿದಿದೆ. ಕಳೆದ ಒಂದು ತಿಂಗಳಲ್ಲಿ ಇಡೀ ವ್ಯವಸ್ಥೆ ಬದಲಾಗುತ್ತಿದೆ. ನಮ್ಮ ಪ್ರಧಾನಿ ಇಂದು ದೇಶ ಮತ್ತು ಜಗತ್ತಿನಲ್ಲಿ ಏನಾಗುತ್ತಿದೆ ಎಂದು ಸದನದಲ್ಲಿ ಹೇಳಿದ್ದಾರೆ.

ರಾಮ ಬಾಣ



8 ಗಂಟೆಯೊಳಗೆ ಟಿಕೆಟ್ ರದ್ದು: ಹಣ ಮರುಪಾವತಿ ಇಲ್ಲ

ಪುಟ ೧➡ **8 ಗಂಟೆಯೊಳಗೆ ರದ್ದು ಯಾವುದೇ ಮರುಪಾವತಿ ಇಲ್ಲ:** ಈ ಮೊದಲು 48 ಗಂಟೆಗೂ ಮೊದಲು ರದ್ದು ಮಾಡಿದರೆ ಸಂಪೂರ್ಣ ಮರುಪಾವತಿ, 48-12 ಗಂಟೆ ನಡುವೆ ಶೇ. 25 ಕಡಿತ ಮತ್ತು 12-4 ಗಂಟೆ ನಡುವೆ ಶೇ.50 ಕಡಿತ ಅನ್ವಯಿಸುತ್ತಿತ್ತು.

ದಲ್ಲಾಳಿಗಳು ಟಿಕೆಟ್ ಸಂಗ್ರಹಿಸಿ ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯಲು ಈ ಬದಲಾವಣೆ ಮಾಡಲಾಗಿದೆ ಎಂದು ವೈಷ್ಣವ್ ಹೇಳಿದ್ದಾರೆ. ಈ ನಿಯಮ ಈಗಾಗಲೇ 2026ರ ಜನವರಿ ನಂತರ ಆರಂಭವಾದ ವಂದೇ ಭಾರತ್ ಸ್ಲೀಪರ್ ಮತ್ತು ಅಮೃತ ಭಾರತ್ ರೈಲುಗಳಲ್ಲಿ ಜಾರಿಯಲ್ಲಿದೆ.

ತರಗತಿ ಮೇಲ್ದರ್ಜೆ ಮತ್ತು ಏರಿಕೆ ನಿಲ್ದಾಣ ಬದಲಾವಣೆ: ಕೌಂಟರ್‌ನಲ್ಲಿ ಟಿಕೆಟ್ ಖರೀದಿಸಿದ ಪ್ರಯಾಣಿಕರು ರೈಲು ಹೊರಡುವ 30 ನಿಮಿಷ ಮೊದಲು ತರಗತಿ ಮೇಲ್ದರ್ಜೆ ಮಾಡಿಕೊಳ್ಳಬಹುದು. ಆನ್‌ಲೈನ್ ಟಿಕೆಟ್‌ಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ.

ಅದೇ ರೀತಿ, ರೈಲು ಮೂಲ ನಿಲ್ದಾಣದಿಂದ ಹೊರಡುವ 30 ನಿಮಿಷ ಮೊದಲು ರೈಲು ಹತ್ತುವ ನಿಲ್ದಾಣ ಬದಲಾಯಿಸಿಕೊಳ್ಳಲು ಈಗ ಅನುಮತಿ ನೀಡಲಾಗಿದೆ. ಈ ಬದಲಾವಣೆ ಟಿಕೆಟ್ ದರದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ತತ್ಕಾಲ್ ಬುಕಿಂಗ್ ಸುಧಾರಣೆ: ದಲ್ಲಾಳಿಗಳು ಮತ್ತು ಏಜೆಂಟರ ಟಿಕೆಟ್ ಸಂಗ್ರಹವನ್ನು ತಡೆಯಲು ತತ್ಕಾಲ್ ಬುಕಿಂಗ್‌ನಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ಆಧಾರ್ ಆಧಾರಿತ ಒಟಿಪಿ, ಮೊದಲ 30 ನಿಮಿಷ ಏಜೆಂಟ್‌ಗಳಿಗೆ ಬುಕಿಂಗ್ ನಿರ್ಬಂಧ ಮತ್ತು ನಕಲಿ ಬಳಕೆದಾರರನ್ನು ತಡೆಯಲು ಆ್ಯಂಟಿ -ಬಾಟ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಹಾಗೆಯೇ, ಈವರೆಗೆ 3 ಕೋಟಿ ಅನುಮಾನಾಸ್ಪದ ಬಳಕೆದಾರ ಖಾತೆಗಳನ್ನು ರದ್ದು ಮಾಡಲಾಗಿದೆ ಎಂದು ವೈಷ್ಣವ್ ತಿಳಿಸಿದ್ದಾರೆ.

ದಿನ ಭವಿಷ್ಯ

ಮೇಷ
ನೀವು ಇಚ್ಛಿಸದ ಬೆಳವಣಿಗೆ ನಡೆದೀತು. ಬೇಸರ ಪಡುತ್ತಾ ಕೂರದಿರಿ. ಪರಿಸ್ಥಿತಿಗೆ ಒಗ್ಗಿಕೊಳ್ಳುವುದು ಮುಖ್ಯ. ಧನವ್ಯಯ ಹೆಚ್ಚಲಿದೆ.

ವೃಷಭ
ಆಪ್ತ ಬಳಗದ ಜತೆ ಕಾಲ ಕಳೆಯುವ ಅವಕಾಶ. ಮಾತಿನಲ್ಲಿ ಕಟುಮಾತು ನುಸುಳದಂತೆ ನೋಡಿಕೊಳ್ಳಿ. ಸಂಬಂಧ ಕೆಡದಂತೆ ಎಚ್ಚರವಿರಲಿ.

ಮಿಥುನ
ನಿಮ್ಮ ಕಾರ್ಯದಲ್ಲಿ ದಿನವಿಡೀ ವ್ಯಸ್ತ. ಬೇರೆ ವಿಷಯದಲ್ಲಿ ಮನಸ್ಸು ತೊಡಗದು. ಸಂಬಂಧದಲ್ಲಿ ಒಡಕು ಮೂಡೀತು. ಹೊಟ್ಟೆ ಕೆಡುವ ಸಾಧ್ಯತೆ.

ಕಟಕ
ಕುಟುಂಬದ ಜತೆ ಪ್ರಯಾಣ ಸಾಧ್ಯತೆ. ವೃತ್ತಿ ಕೆಲಸ ಮುಗಿಸಿರಿ. ನಿಮ್ಮ ಕಟು ಮಾತಿನಿಂದ ಆಪ್ತರು ದೂರವಾದಾರು. ಹೆಚ್ಚು ಹಣ ಗಳಿಕೆ ಅವಕಾಶ.

ಸಿಂಹ
ದೈಹಿಕ ಕ್ಷಮತೆ ಕಾಯ್ದುಕೊಳ್ಳಿ. ಹೆಚ್ಚುವರಿ ಆದಾಯದ ದಾರಿ ಹೊಳೆಯಲಿದೆ. ಕೌಟುಂಬಿಕ ಉದ್ವಿಗ್ನತೆ ಶಮನಕ್ಕೆ ಗಮನ ಕೊಡಿ.

ಕನ್ಯಾ
ಇಂದು ಪ್ರಮುಖ ಬೆಳವಣಿಗೆ ಸಂಭವ. ಅನವಶ್ಯ ವಾಗ್ವಾದದಿಂದ ಆದಷ್ಟು ದೂರವಿರಿ. ಪ್ರತಿ ವಿಷಯದಲ್ಲಿ ಸಂಯಮ ಅತ್ಯವಶ್ಯ.

ತುಲಾ
ಏಕತಾನತೆಯ ಕೆಲಸ ನಿಮ್ಮ ಉತ್ಸಾಹ ಕುಗ್ಗಿಸುವುದು. ಮನಸ್ಸು ಉಲ್ಲಸಿತಗೊಳಿಸುವ ಹವ್ಯಾಸ ಬೆಳೆಸಿಕೊಳ್ಳಿ. ಬಂಧುಗಳ ಸಹಕಾರ.

ವೃಶ್ಚಿಕ
ನಿಮ್ಮ ಮನಸ್ಥಿತಿ. ಇತರರ ಜತೆ ಹಂಚಿಕೊಳ್ಳಲು ಬಯಸುವಿರಿ. ಆದರೆ ಸೂಕ್ತ ಸ್ಪಂದನೆ ದೊರಕದು. ದಂಪತಿ ಮಧ್ಯೆ ವಿರಸ ಮೂಡೀತು. ಹೊಂದಾಣಿಕೆಯಿರಲಿ.

ಧನು
ವೃತ್ತಿಯ ಒತ್ತಡ ಎಂದಿಗಿಂತ ಹೆಚ್ಚು. ಏಕಾಗ್ರತೆ ಕಳಕೊಳ್ಳದಿರಿ. ವೈವಾಹಿಕ ಬದುಕಲ್ಲಿ ಒಡಕು ಮೂಡದಂತೆ ಎಚ್ಚರಿಕೆ ವಹಿಸಿರಿ.

ಮಕರ
ಸಂಗಾತಿ ಜತೆ ಸಂಘರ್ಷ ನಡೆದೀತು. ಪರಸ್ಪರ ಗೌರವವಿದ್ದರೆ ಪ್ರೀತಿ ಬೆಳೆಯುವುದು. ಉದ್ಯೋಗದ ಅವಕಾಶ ಹೆಚ್ಚಲಿದೆ. ಧನವ್ಯಯ.

ಕುಂಭ
ಬಿಡುವಿಲ್ಲದ ಕೆಲಸ. ಒತ್ತಡ ಅಧಿಕ. ಇತರರ ಒಳಿತಿಗೆ ಶ್ರಮಿಸುತ್ತಾ ನಿಮ್ಮ ಆಕಾಂಕ್ಷೆ ಬಲಿಗೊಡದಿರಿ. ಕೌಟುಂಬಿಕ ಸಾಮರಸ್ಯ ಹದಗೆಡದಿರಲಿ.

ಮೀನ
ಸಂಗಾತಿ ಜತೆ ಅಹಂ ಬಿಡಿ. ನಿಮ್ಮದೇ ನಿಲುವು ಹೇರಬೇಡಿ. ಸಂಬಂಧ ಕೆಡಬಹುದು. ಹಣ ಗಳಿಕೆ ಹೆಚ್ಚಳವಾಗದು. ಇದ್ದುದರಲ್ಲಿ ತೃಪ್ತಿಯಿರಲಿ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,6,8

ಪರಿಸರಸ್ನೇಹಿ ಸುಸ್ಥಿರ ನಗರ ಸಾರಿಗೆ ವ್ಯವಸ್ಥೆಯೇ ಯೋಜನೆಯ ಉದ್ದೇಶ

ಮೆಟ್ರೊ 3ನೇ ಹಂತಕ್ಕೆ ಸಹಿ

ಬೆಂಗಳೂರು: ನಮ್ಮ ಮೆಟ್ರೊ ಮೂರನೇ ಹಂತಕ್ಕೆ ಜಪಾನ್ ಇಂಟರ್ ನ್ಯಾಷನಲ್ ಕೋ ಆಪರೇಷನ್ ಏಜೆನ್ಸಿಯು(ಜೈಕಾ) ಜಪಾನ್‌ನ ಅಧಿಕೃತ ಅಭಿವೃದ್ಧಿ ನೆರವು ಯೋಜನೆಯಡಿ ಒಟ್ಟು 6100 ಕೋಟಿ ರೂ.ಸಾಲವನ್ನು ಒದಗಿಸಲು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದೆ.

ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಡಾ.ಅಲೋಕ್ ತಿವಾರಿ ಮತ್ತು ಜೈಕಾ ಇಂಡಿಯಾ ಕಚೇರಿಯ ಮುಖ್ಯ ಪ್ರತಿನಿಧಿ ಟೈಕುಚಿ ಟಾಕುರೊ ಅವರು ಈ ಸಾಲದ ಒಪ್ಪಂದಕ್ಕೆ ಅಧಿಕೃತವಾಗಿ ಸಹಿ ಮಾಡಿದರು.

ಬೆಂಗಳೂರು ನಗರದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ಸಮರ್ಥವಾಗಿ ನಿರ್ವಹಿಸುವುದು ಮತ್ತು ಪರಿಸರ ಸ್ನೇಹಿ ಸುಸ್ಥಿರ ನಗರ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಮೂರನೇ ಹಂತದ ಈ ಯೋಜನೆಯು ನಗರದ ವಿವಿಧ ಭಾಗಗಳನ್ನು ಸಂಪರ್ಕಿಸುವ ಮೂಲಕ ಸಾರ್ವಜನಿಕರಿಗೆ ಸುಗಮ ಪ್ರಯಾಣದ ವ್ಯವಸ್ಥೆ ಕಲ್ಪಿಸಲಿದೆ. ಜೊತೆಗೆ ಹೆಚ್ಚುತ್ತಿರುವ ಮೋಟಾರು ವಾಹನಗಳಿಂದ ಉಂಟಾಗುವ ಮಾಲಿನ್ಯ ಮತ್ತು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಮೂಲಕ ಹವಾಮಾನ ಬದಲಾವಣೆಯನ್ನು ಶಮನಗೊಳಿಸುವ ನಿರೀಕ್ಷೆಯಿದೆ.

ನಗರದ ಸಂಚಾರ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತರಲಿರುವ ಬೆಂಗಳೂರು ಮೆಟ್ರೊ ಮೂರನೇ ಹಂತದ ಯೋಜನೆಯು ಒಟ್ಟು 44.65 ಕಿ.ಮೀ. ಉದ್ದದ ಮೆಟ್ರೊ ಮಾರ್ಗವನ್ನು ಹೊಂದಿರಲಿದ್ದು, ಇದರಲ್ಲಿ 31 ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯು ಹೊರ ವರ್ತುಲ ರಸ್ತೆ ವಿಭಾಗ (ಕಾರಿಡಾರ್ 3-1) ಮತ್ತು ಪಶ್ಚಿಮ ಅಭಿವೃದ್ಧಿ ಕಾರಿಡಾರ್ (ಕಾರಿಡಾರ್ 3-2) ಎರಡನ್ನೂ ಒಳಗೊಂಡಿದೆ. ಈ ನೂತನ ಮಾರ್ಗವು ವಿಮಾನ ನಿಲ್ದಾಣದ ಲೈನ್ ಮತ್ತು 6ನೇ ಮಾರ್ಗದೊಂದಿಗೆ ಸಂಪರ್ಕ ಸಾಧಿಸಲಿದೆ. ಇದರಿಂದ ನಗರದ ಕೇಂದ್ರ ಭಾಗದ ಸುತ್ತ ಒಂದು ಸಂಪೂರ್ಣ ವೃತ್ತಾಕಾರದ ಮೆಟ್ರೊ ಜಾಲ ನಿರ್ಮಾಣವಾಗಲಿದ್ದು, ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವವರಿಗೆ ಮತ್ತು ಪೂರ್ವ-ಪಶ್ಚಿಮ ಮಾರ್ಗಗಳ ನಡುವೆ ಸಂಚರಿಸುವವರಿಗೆ ಹೆಚ್ಚಿನ ಅನುಕೂಲವಾಗಲಿದೆ.ಕೇವಲ ಮೆಟ್ರೊ ರೈಲಿಗೆ ಸೀಮಿತವಾಗದೆ, ಈ ಯೋಜನೆಯು ಫೀಡರ್ ಬಸ್‌ಗಳು, ಹಂಚಿಕೆಯ ಸಾರಿಗೆ ಸೇವೆಗಳು ಮತ್ತು ಡಬಲ್ ಡೆಕ್ಕರ್ ಮೇಲ್ಸೇತುವೆ ರಚನೆಗಳನ್ನು ಒಳಗೊಂಡಿರಲಿದೆ. ಈ ಮೂಲಕ ಸಮಗ್ರ ಸಾರಿಗೆ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ.ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಬಿಎಂಆರ್‌ಸಿಎಲ್ ಹೊತ್ತುಕೊಂಡಿದೆ. ಜಪಾನ್‌ನಿಂದ ಪಡೆಯುತ್ತಿರುವ ಈ ಸಾಲವು 30 ವರ್ಷಗಳ ದೀರ್ಘಾವಧಿಯ ಮರುಪಾವತಿ ಅವಧಿ ಹೊಂದಿದೆ. ಇದರಲ್ಲಿ ಆರಂಭಿಕ 10 ವರ್ಷ ರಿಯಾಯಿತಿ ಅವಧಿ ಇರಲಿದೆ.



ಆರ್ಥಿಕ ಬೆಳವಣಿಗೆಗೆ ಸಹಕಾರಿ

ಈ ಯೋಜನೆಯು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ, ವಿಶೇಷವಾಗಿ ಆರ್ಥಿಕ ಬೆಳವಣಿಗೆ, ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ, ಸುಸ್ಥಿರ ನಗರಗಳು ಮತ್ತು ಸಮುದಾಯಗಳು ಹಾಗೂ ಹವಾಮಾನ ರಕ್ಷಣೆಯ ಕ್ಷೇತ್ರಗಳಲ್ಲಿ ಕೊಡುಗೆ ನೀಡುವ ನಿರೀಕ್ಷೆಯಿದೆ. ಈ ಯೋಜನೆಯು ಜನವರಿ 2032 ರ ವೇಳೆಗೆ ಪೂರ್ಣಗೊಳ್ಳುವ ಗುರಿ ಹೊಂದಿದ್ದು, ಸಮಾಲೋಚನಾ ಸೇವೆಗಳಿಗಾಗಿ ಏಪ್ರಿಲ್‌ನಲ್ಲಿ ಆಹ್ವಾನ ನೀಡುವ ನಿರೀಕ್ಷೆಯಿದೆ. ಮೇಲ್ಸೇತುವೆ ಭಾಗದ ಸಿವಿಲ್ ಕಾಮಗಾರಿಗಳ ಮೊದಲ ಖರೀದಿ ಪ್ಯಾಕೇಜ್‌ಗಾಗಿ ಮೇನಲ್ಲಿ ಟೆಂಡರ್ ಪ್ರಕಟಿಸಲು ಯೋಜಿಸಲಾಗಿದೆ.

ಶೇ.66ರಷ್ಟು ಮನೆಗೆ ನಳ ಸಂಪರ್ಕ

ವಿಧಾನಸಭೆ: ಕರ್ನಾಟಕದಲ್ಲಿ ಜಲಜೀವನ್ ಮಿಷನ್‌ನ ಅವಧಿಯು 2024ರ ಮಾ.31ರಂದು ಕೊನೆಗೊಂಡರೂ ರಾಜ್ಯವು ಅದೇ ವರ್ಷ ನವೆಂಬರ್‌ಗೆ ಶೇ.66ರಷ್ಟು ಮನೆಗಳಿಗೆ ಮಾತ್ರ ಕಾರ್ಯಾತ್ಮಕ ಮನೆಯ ನಳ ಸಂಪರ್ಕ (ಎಫ್‌ಎಚ್‌ಟಿಸಿ) ಒದಗಿಸಿದೆ. ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಂಡಿಸಿದ ಜಲ ಜೀವನ ಮಿಷನ್ ಅನುಷ್ಠಾನದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯಲ್ಲಿ ಇದು ಬಹಿರಂಗವಾಗಿದೆ. ಈ ಕಾರ್ಯಕ್ಷಮತೆಯ ತಪಾಸಣೆಯನ್ನು 2019 ರಿಂದ 2024ರ ಅವಧಿಯಲ್ಲಿ ನಡೆಸಲಾಗಿದೆ. ರಾಜ್ಯದಲ್ಲಿ 72.14 ಲಕ್ಷ ಮನೆಗಳಲ್ಲಿ 24.52 ಲಕ್ಷ ಮನೆಗಳಿಗೆ ಎಫ್‌ಎಚ್‌ಟಿಸಿಗಳನ್ನು ಒದಗಿಸಿಲ್ಲ. ಟೆಂಡರ್ ಕರೆಯುವಲ್ಲಿನ ವಿಳಂಬ, ಗುತ್ತಿಗೆದಾರರಿಗೆ ಅನೇಕ ಕಾಮಗಾರಿಗಳನ್ನು ವಹಿಸಿಕೊಡುವುದು, ಭೂಮಿಯ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವ ಮೊದಲು ಕಾಮಗಾರಿಗಳನ್ನು ವಹಿಸಿಕೊಡುವುದು, ಭೂ ಮಂಜೂರಾತಿ ಪಡೆಯುವಲ್ಲಿನ ವಿಳಂಬ ಮತ್ತು ರಚನಾತ್ಮಕ ಹಾಗೂ ಹೈಡ್ರಾಲಿಕ್ ವಿನ್ಯಾಸಗಳಿಗೆ ಅನುಮೋದನೆ ನೀಡುವಲ್ಲಿನ ವಿಳಂಬ, ವಿಸ್ತೃತ ಯೋಜನಾ ವರದಿಗಳ ಕೊರತೆ ಇತ್ಯಾದಿಗಳು ಇದಕ್ಕೆ ಕಾರಣವಾಗಿದೆ.

ಮಹಿಳೆಯರಿಗೆ 273 ಕ್ಷೇತ್ರಗಳ ಮೀಸಲು?

ಪುಟ ೧➡ **ನಿಷ್ಪಕ್ಷಪಾತ ಆಯೋಗದ ಮಹತ್ವ:** ಕ್ಷೇತ್ರ ಮರುವಿಂಗಡಣೆ ಆಯೋಗವು ಸಂಪೂರ್ಣ ನಿಷ್ಪಕ್ಷಪಾತ ಸಂಸ್ಥೆಯಾಗಿದ್ದು, ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲೂ ಪ್ರಶ್ನಿಸಲು ಅವಕಾಶವಿಲ್ಲ. ಇದೇ ಕಾರಣಕ್ಕೆ ಈ ಪ್ರಕ್ರಿಯೆಯ ಮೇಲೆ ವಿಶ್ವಾಸ ಮೂಡಿಸಲು ಸರ್ಕಾರ ಒತ್ತು ನೀಡುತ್ತಿದೆ. ಚುನಾವಣಾ ಆಯೋಗ ಸ್ವತಂತ್ರ ಸಂಸ್ಥೆಯಾದರೂ, ದೇಶವ್ಯಾಪಿ ಡಿಲಿಮಿಟೇಶನ್ ನಡೆಸಲು ಅದಕ್ಕೆ ಅಧಿಕಾರವಿಲ್ಲ. ಅಗತ್ಯವಿದ್ದರೆ ಕೆಲವು ರಾಜ್ಯಗಳಲ್ಲಿ ಮಾತ್ರ ಕಾರ್ಯನಿರ್ವಹಿಸಬಹುದು.

ಮಹಿಳಾ ಮೀಸಲು- 15 ವರ್ಷ ಅವಧಿ: ಮಹಿಳೆಯರಿಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ 15 ವರ್ಷ ಜಾರಿಯಲ್ಲಿರಲಿದೆ. ನಂತರ ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಸಂಸತ್ತಿಗೆ ಇರುತ್ತದೆ. ಎಸ್‌ಸಿ ಮತ್ತು ಎಸ್‌ಟಿ ಮಹಿಳೆಯರಿಗೆ ಮೀಸಲಾತಿಯೊಳಗಿನ ಮೀಸಲಾತಿ ವ್ಯವಸ್ಥೆಯೂ ಮುಂದುವರಿಯಲಿದೆ. ಆದರೆ, ಇತರೆ ಹಿಂದುಳಿದ ವರ್ಗಗಳಿಗೆ(ಒಬಿಸಿ) ಮೀಸಲು ವಿಸ್ತರಿಸಬೇಕೆಂಬ ವಿರೋಧ ಪಕ್ಷಗಳ ಬೇಡಿಕೆ ಇನ್ನೂ ನಿರ್ಣಯದ ಹಂತದಲ್ಲಿದೆ.

2029ರಿಂದ ಜಾರಿ ಸಾಧ್ಯತೆ

ಸಂಸತ್ತಿನ ಅನುಮೋದನೆಯ ನಂತರ ಈ ಯೋಜನೆಗಳು 2029ರ ಮಾರ್ಚ್ 31ರಿಂದ ಜಾರಿಗೆ ಬರುವ ಸಾಧ್ಯತೆ ಇದೆ. ಇದರಿಂದ ಮುಂದಿನ ಲೋಕಸಭಾ ಚುನಾವಣೆಯ ಜೊತೆಗೆ ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲೂ ಮಹಿಳಾ ಮೀಸಲಾತಿ ಅನ್ವಯವಾಗಲಿದೆ.

ಕಾಶ್ಮೀರ ಪ್ರತ್ಯೇಕತಾವಾದಿ ಅಂದ್ರಾಬಿಗೆ ಜೀವಾವಧಿ

ಪುಟ ೧➡ ಈ ತಿಂಗಳ ಆರಂಭದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಂದ್ರಾಬಿಗೆ ಜೀವಾವಧಿ ಶಿಕ್ಷೆ ವಿಧಿಸುವಂತೆ ಮನವಿ ಸಲ್ಲಿಸಿತ್ತು.

ಜಮ್ಮು-ಕಾಶ್ಮೀರದಲ್ಲಿ ಸೆಕ್ಷನ್ 370 ರದ್ದುಪಡಿಸಿದ ಬಳಿಕ, ಯುಎಪಿಎ ಕಾಯ್ದೆಯಡಿ ಎನ್‌ಐಎ ನ್ಯಾಯಾಲಯದಲ್ಲಿ ದೋಷಿ ತೀರ್ಪು ಎದುರಿಸಿದ ಎರಡನೇ ಪ್ರತ್ಯೇಕತಾವಾದಿ ನಾಯಕಿ ಅಂದ್ರಾಬಿ ಆಗಿದ್ದಾರೆ.ಎನ್‌ಐಎ ಪ್ರಕಾರ ನಿಷೇಧಿತ ಸಂಘಟನೆ ದುಖ್ತರಾನ್-ಎ-ಮಿಲ್ಲತ್ ಮೂಲಕ ಮೂವರು ಆರೋಪಿಗಳು ಅಶಾಂತಿ ಸೃಷ್ಟಿಸಲು ಹಾಗೂ ಜಮ್ಮು-ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಲು ಪ್ರಚೋದನೆ ನೀಡಿದ್ದರು. ಅಂದ್ರಾಬಿ ವಿರುದ್ಧ ಜಮ್ಮು-ಕಾಶ್ಮೀರದ ವಿವಿಧ ಭಾಗಗಳಲ್ಲಿ ಒಟ್ಟು 33 ಎಫ್‌ಐಆರ್‌ಗಳು ದಾಖಲಾಗಿವೆ. ಆಕೆಯ ಸಹಚರರಾದ ಫಹ್ಮೀದಾ ಮತ್ತು ನಸ್ರೀನ್ ವಿರುದ್ಧ ಕ್ರಮವಾಗಿ 9 ಮತ್ತು 5 ಪ್ರಕರಣಗಳು ದಾಖಲಾಗಿವೆ. ಯುಎಪಿಎ ಕಾಯ್ದೆಯ ಸೆಕ್ಷನ್ 20, 38 ಮತ್ತು 39 ಅನ್ವಯದಲ್ಲಿ ಉಗ್ರ ಸಂಘಟನೆಗೆ ಸದಸ್ಯತ್ವ ಹಾಗೂ ಬೆಂಬಲ ನೀಡಿದ ಆರೋಪಗಳೂ ಸೇರಿವೆ.

ಯಾರು ಈ ಆಸಿಯಾ ಅಂದ್ರಾಬಿ?: 62 ವರ್ಷದ ಆಸಿಯಾ ಅಂದ್ರಾಬಿ, ದುಖ್ತರಾನ್-ಎ-ಮಿಲ್ಲತ್ ಸಂಸ್ಥಾಪಕಿ. ಆರಂಭದಲ್ಲಿ ಸಾಮಾಜಿಕ ಸುಧಾರಣಾ ಸಂಘಟನೆಯಾಗಿ ಆರಂಭವಾದ ಈ ಸಂಘಟನೆಗೆ 2018ರಲ್ಲಿ ಕೇಂದ್ರ ಸರ್ಕಾರ ಉಗ್ರ ಸಂಘಟನೆಯ ಮುದ್ರೆ ಹಾಕಿ ನಿಷೇಧ ಹೇರಿತ್ತು.

1963ರಲ್ಲಿ ಜನಿಸಿದ ಅಂದ್ರಾಬಿ, ಶ್ರೀನಗರದಲ್ಲಿ ಹೋಮ್ ಸೈನ್ಸ್ ಪದವಿ ಪಡೆದಿದ್ದರು. ನಂತರ ದಾರ್ಜಿಲಿಂಗ್‌ನಲ್ಲಿ ಮುಂದುವರಿದ ವಿದ್ಯಾಭ್ಯಾಸಕ್ಕೆ ಅವಕಾಶ ಸಿಗದ ಹಿನ್ನೆಲೆಯಲ್ಲಿ ಇಸ್ಲಾಮಿಕ್ ಸಾಹಿತ್ಯದತ್ತ ಮುಖಮಾಡಿ, ಜಮಾತ್-ಎ-ಇಸ್ಲಾಮಿ ಮಹಿಳಾ ಘಟಕಕ್ಕೆ ಸೇರ್ಪಡೆಯಾದರು. ಈ ಸಂಘಟನೆಯನ್ನು 2019ರಲ್ಲಿ ನಿಷೇಧಿಸಲಾಯಿತು.

1985ರಲ್ಲಿ ಜಮಾತ್-ಎ-ಇಸ್ಲಾಮಿಯಿಂದ ಬೇರ್ಪಟ್ಟು ದುಖ್ತರಾನ್-ಎ-ಮಿಲ್ಲತ್ ಸ್ಥಾಪಿಸಿದರು. 1991ರಲ್ಲಿ ಕಾಶ್ಮೀರದಲ್ಲಿ ಮಹಿಳೆಯರಿಗೆ ಪರ್ದಾ ಕಡ್ಡಾಯಗೊಳಿಸುವ ಅಭಿಯಾನದ ಮೂಲಕ ಗಮನ ಸೆಳೆದರು.

1990ರಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಆಶಿಕ್ ಹುಸೇನ್ ಫಕ್ತೂ ಅವರನ್ನು ವಿವಾಹವಾದರು. ಇಬ್ಬರು ಮಕ್ಕಳ ತಾಯಿ ಆಗಿರುವ ಅಂದ್ರಾಬಿ, 1993ರಲ್ಲಿ ಮೊದಲ ಬಾರಿಗೆ ಬಂಧಿತರಾಗಿ, ನಂತರ ಸಾರ್ವಜನಿಕ ಭದ್ರತಾ ಕಾಯ್ದೆಯಲ್ಲಿ ಅನೇಕ ಬಾರಿ ಬಂಧನಕ್ಕೊಳಗಾದರು.

ನಗರಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿಗೆ ಶೀಘ್ರ ಕ್ರಮ

ವಿಧಾನ ಪರಿಷತ್ : ಹೊಸದಾಗಿ ರಚನೆಯಾಗಿರುವ 11 ನಗರಸಭೆಗಳ ವ್ಯಾಪ್ತಿಗೆ ಸುತ್ತಮುತ್ತಲಿನ ಗ್ರಾಮಗಳನ್ನೂ ಸೇರ್ಪಡೆ ಮಾಡಲಾಗಿದೆ. ಹೀಗಾಗಿ ಇಲ್ಲಿ ಕಸ ವಿಲೇವಾರಿಯಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಯ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಿ ಉತ್ತಮ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು ಎಂದು ಸಚಿವ ಬೈರತಿ ಸುರೇಶ್ ಹೇಳಿದರು. ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಅವರು ರಾಜ್ಯದಲ್ಲಿರುವ ಹಲವು ನಗರಗಳ ಸ್ವಚ್ಛತೆಗಳ ಕುರಿತು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಮತಾಂತರವಾದ್ರೆ ಮೀಸಲಾತಿ ಸಿಗಲ್ಲ

ಪುಟ ೧➡ ಬಳಿಕ 1956ರಲ್ಲಿ ಸಿಖ್ ಧರ್ಮದವರನ್ನು ಸೇರಿಸಲಾಗಿದ್ದು, 1990ರಲ್ಲಿ ಬೌದ್ಧ ಧರ್ಮದವರಿಗೂ ವಿಸ್ತರಿಸಲಾಯಿತು. ಆದರೆ, ಕ್ರೈಸ್ತ ಧರ್ಮವನ್ನು ಯಾವುದೇ ಹಂತದಲ್ಲೂ ಸೇರಿಸಲಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ. ಪ್ರಕರಣದ ಹಿನ್ನೆಲೆಯಂತೆ, ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಪಾಸ್ಟರ್ ಆಗಿದ್ದ ಚಿಂತಾಡ ಆನಂದ್ ಎಂಬ ವ್ಯಕ್ತಿಯೊಬ್ಬರು ಎಸ್‌ಸಿ/ಎಸ್‌ಟಿ (ದೌರ್ಜನ್ಯ) ಕಾಯ್ದೆಯಡಿ ಅಕ್ಕಲ ರಾಮಿ ರೆಡ್ಡಿ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆದರೆ, ಅವರನ್ನು ಪರಿಶಿಷ್ಟ ಜಾತಿಗೆ ಸೇರಿದವರಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದು ಆಂಧ್ರ ಪ್ರದೇಶ ಹೈಕೋರ್ಟ್ ಪ್ರಕರಣವನ್ನು ರದ್ದುಪಡಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ ಅವರು ಸುಪ್ರೀಂ ಮೊರೆ ಹೋಗಿದ್ದರು. ಸುಪ್ರೀಂ ಕೋರ್ಟ್ ಈಗ ಹೈಕೋರ್ಟ್ ತೀರ್ಪನ್ನು ಸಮರ್ಥಿಸಿದ್ದು, ಧರ್ಮಾಂತರವು ಕಾನೂನುಬದ್ಧವಾಗಿ ವ್ಯಕ್ತಿಯ ಸಾಮಾಜಿಕ ಗುರುತು ಮತ್ತು ಹಕ್ಕುಗಳ ಮೇಲೂ ನೇರ ಪರಿಣಾಮ ಬೀರುತ್ತದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಪರಿಸ್ಥಿತಿ ದುರ್ಲಾಭ ಬೇಡ

ಪುಟ ೧➡ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರಗಳ ಪೂರೈಕೆಗೂ ಸರಕಾರ ಅಗತ್ಯ ಸಿದ್ಧತೆಗಳ ಮಾಡಿಕೊಂಡಿದೆ. ಯುದ್ಧ ಸೃಷ್ಟಿಸಿರುವ ಪರಿಣಾಮಗಳು ಅಥವಾ ಬಿಕ್ಕಟ್ಟು ಅಲ್ಪಕಾಲೀನವಿರಲಿ, ಮಧ್ಯಮಾವಧಿ ಅಥವಾ ದೀರ್ಘಕಾಲೀನ ತೊಂದರೆಯೊಡ್ಡಲಿದ್ದರೂ, ಇವನ್ನು ನಿಭಾಯಿಸಲು ಅಗತ್ಯ ಸಮಗ್ರ ಕಾರ್ಯತಂತ್ರವನ್ನು ಸರಕಾರ ಸಿದ್ಧಪಡಿಸುತ್ತಿದೆ ಎಂದು ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ.

ಕಾರ್ಯ ತತ್ಪರ ಅಂತರ್ ಸಚಿವಾಲಯ ಸಮಿತಿ: ಸರಕಾರ ಈಗಾಗಲೆ ರಚಿಸಿರುವ ಅಂತರ್ ಸಚಿವಾಲಯ ಸಮಿತಿ, ಆಮದು-ರಫ್ತು ಪ್ರಕ್ರಿಯೆಗಳಿಗೆ ಎದುರಾಗಿರುವ ಯಾವುದೇ ತೊಡಕುಗಳ ಪರಾಮರ್ಶಿಸಲು ನಿಯತವಾಗಿ ಸಭೆ ಸೇರುತ್ತಿದೆ ಮತ್ತು ಸಮಸ್ಯೆಗಳಿಗೆ ಅಗತ್ಯ ಪರಿಹಾರ ಕಂಡುಕೊಳ್ಳಲು ಸತತವಾಗಿ ಶ್ರಮಿಸುತ್ತಿದೆ. ಕೋವಿಡ್ ಪಿಡುಗಿನಿಂದ ವಿವಿಧ ರಂಗಗಳಿಗೆ ಎದುರಾಗಿದ್ದ ಸವಾಲು ನಿಭಾಯಿಸಲು ಸರಕಾರ ರಚಿಸಿದ್ದ, ತಜ್ಞರು ಮತ್ತು ಅಧಿಕಾರಿಗಳನ್ನು ಒಳಗೊಂಡ ಸಮಿತಿ ಮಾದರಿಯಲ್ಲೇ, ಉನ್ನತಾಧಿಕಾರದ ಏಳು ಹೊಸ ಸಮಿತಿಗಳನ್ನು ಸರಕಾರ ನಿನ್ನೆಯಷ್ಟೆ ರಚಿಸಿದೆ. ಈ ಸಮಿತಿಗಳು ಪೂರೈಕೆ ಸರಪಳಿ, ಪೆಟ್ರೋಲಿಯಂ ಹಾಗೂ ಡೀಸೆಲ್, ರಸಗೊಬ್ಬರ, ನೈಸರ್ಗಿಕ ಅನಿಲ ಮತ್ತು ಹಣದುಬ್ಬರವೇ ಇತ್ಯಾದಿ ಸಂಕ್ಲಿಷ್ಟ ವಿಚಾರಗಳಿಗೆ ಸಂಬಂಧಿಸಿ, ತಕ್ಷಣಕ್ಕೆ ಮತ್ತು ದೀರ್ಘಕಾಲಕ್ಕೂ ಅನ್ವಯಿಸುವ ಅಗತ್ಯ ಕ್ರಮ ಕೈಗೊಳ್ಳುವ ಹೊಣೆಗಾರಿಕೆ ಹೊಂದಿವೆ. ಈ ರೀತಿಯ ಸಮಗ್ರ ಪ್ರಯತ್ನಗಳಿಂದ ಪ್ರಸ್ತುತ ಎದುರಾಗಿರುವ ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ನಮಗೆ ಸಾಧ್ಯವಾಗುವುದೆಂಬ ಸಂಪೂರ್ಣ ಆತ್ಮವಿಶ್ವಾಸ ತನಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಪ್ರಜೆಗಳ ಕ್ಷೇಮವೇ ಪರಮೋಚ್ಚ ಧ್ಯೇಯ: ಪ್ರಸ್ತುತ ಸಂಘರ್ಷದ ಪ್ರತಿಕೂಲ ಪರಿಣಾಮಗಳು ದೀರ್ಘಕಾಲ ಕಾಡಲಿದೆ ಎಂಬ ಅಭಿಮತ ಬಲವಾಗಿದೆ. ಆದರೂ ದೇಶದ ಪ್ರಜೆಗಳ ಹಿತರಕ್ಷಣೆ ತನ್ನ ನೇತೃತ್ವದ ಸರಕಾರದ ಪರಮೋಚ್ಚ ಧ್ಯೇಯ. ಸರಕಾರ ಅತ್ಯಂತ ಸನ್ನದ್ಧ ಮತ್ತು ಕ್ರಿಯಾಶೀಲ ಸ್ಥಿತಿಯಲ್ಲಿದ್ದುಕೊಂಡು, ತುಂಬು ಗಾಂಭೀರ್ಯದೊಂದಿಗೆ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸುತ್ತಿದೆ. ಅಗತ್ಯ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ಇದೇ ವೇಳೆ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಸಂಘಟಿತ ಪ್ರಯತ್ನಗಳು ತೀರಾ ಮುಖ್ಯ. ಪಶ್ಚಿಮ ಏಷ್ಯಾ ಸಂಘರ್ಷದ ದುಷ್ಪರಿಣಾಮಗಳು ಭಾರತದ ಮೇಲೆ ಅಧಿಕ ಪರಿಣಾಮ ಬೀರದಂತೆ ತಡೆಯಲು ಸರಕಾರ ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಭರವಸೆ ನೀಡಿದ ಪ್ರಧಾನಿ ಮೋದಿ, ಎಲ್ಲಾ ಸನ್ನಿವೇಶಗಳಲ್ಲೂ ಸರಕಾರ ರೈತಾಪಿ ಸಂಕುಲದ ಜತೆಗಿರಲಿದೆ ಎಂದು ಧೈರ್ಯ ತುಂಬಿದರು.

ದೀರ್ಘಕಾಲೀನ ಯುದ್ಧ ಸೃಷ್ಟಿಸಲಿದೆ ದುಷ್ಪರಿಣಾಮ: ಮುಂಬರುವ ಬಿತ್ತನೆ ಋತುವಿಗೆ ರಸಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ಲಭಿಸುವಂತಾಗಲು ಎಲ್ಲಾ ಪ್ರಯತ್ನಗಳನ್ನು ಸರಕಾರ ಮಾಡುತ್ತಿದೆ. ಪ್ರಸ್ತುತ ಬಿಕ್ಕಟ್ಟಿನ ಹೊರತೂ ಅತ್ಯಧಿಕ ಆರ್ಥಿಕ ಬೆಳವಣಿಗೆಯನ್ನು ಕಾಯ್ದುಕೊಳ್ಳುವುದು ನಮ್ಮ ಜವಾಬ್ದಾರಿಯೆಂದು ಗಮನ ಸೆಳೆದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದಲ್ಲಿನ ಸಮರವು ಆತಂಕದ ವಿಷಯವಾಗಿದೆ. ಮಾತುಕತೆ, ರಾಜತಾಂತ್ರಿಕತೆ ಮುಖೇನ ವಲಯದಲ್ಲಿ ಶಾಂತಿ ಸ್ಥಾಪನೆ ಭಾರತದ ಆಶಯವಾಗಿದೆ. ಯುದ್ಧ ಅಂತ್ಯವಾಗಬೇಕು. ಹೋರ್ಮುಜ್ ಜಲಸಂಧಿ ನೌಕಾಯಾನಗಳಿಗೆ ಮತ್ತೆ ತೆರೆದುಕೊಳ್ಳಬೇಕು ಎಂಬುದು ಭಾರತದ ಸಂಕಲ್ಪವಾಗಿದೆ. ಎಲ್ಲಾ ಸಮಸ್ಯೆಗಳನ್ನು ಶಾಂತಿಯುತ ಬಗೆಹರಿಸುವಂತೆ ಎಲ್ಲಾ ವರ್ಗಗಳನ್ನು ಉತ್ತೇಜಿಸಲು ಭಾರತ ಪ್ರಯತ್ನಿಸುತ್ತಿದೆ. ಪಶ್ಚಿಮ ಏಷ್ಯಾ ಬಿಕ್ಕಟ್ಟು ದೀರ್ಘಕಾಲ ಮುಂದುವರೆದಲ್ಲಿ ಗಂಭೀರ ಪರಿಣಾಮಗಳು ಖಂಡಿತ ಎಂದು ಪ್ರಧಾನಿ ಮೋದಿ ಎಚ್ಚರಿಸಿದ್ದಾರೆ.

ಯಾವುದೇ ಸವಾಲು ಎದುರಿಸಲು ಸಿದ್ಧರಾಗಿರಿ

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸ್ವರೂಪ ತೀರಾ ಭಿನ್ನವಾದುದು. ಬಿಕ್ಕಟ್ಟು ಸೃಷ್ಟಿಸಿರುವ ಪರಿಣಾಮಗಳಿಗೆ ವಿಭಿನ್ನ ರೀತಿಯಲ್ಲೇ ಪರಿಹಾರಗಳನ್ನು ಕಂಡುಕೊಳ್ಳಲಾಗುತ್ತಿದೆ. ಪ್ರತಿ ಸವಾಲುಗಳನ್ನು ನಾವು ತೀರಾ ಸಂಯಮ, ತಾಳ್ಮೆ ಮತ್ತು ಶಾಂತಚಿತ್ತದಿಂದ ಎದುರಿಸಬೇಕಿದೆ. ನಿರಂತರವಾಗಿ ಬದಲಾಗುತ್ತಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಎದುರಾಗುವ ಸಂಭಾವ್ಯ ಯಾವುದೇ ಸವಾಲುಗಳ ಎದುರಿಸಲು ಸಜ್ಜಾಗಿರಿ ಎಂದು ಜನರಿಗೆ ಪ್ರಧಾನಿ ಮೋದಿ ಕರೆ ನೀಡಿದ್ದಾರೆ.

ರಕ್ಷಣಾ ಸಚಿವರ ಮೇಲೆ ಆರೋಪ ಹೊರಿಸಿದ ಟ್ರಂಪ್!

ವಾಷಿಂಗ್ಟನ್: ಇರಾನ್ ವಿರುದ್ಧ ಅಮೆರಿಕ ಮಿಲಿಟರಿ ಕಾರ್ಯಾಚರಣೆ ನಡೆಸಲು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೆಟೆ ಹೆಗ್ಸೆತ್ ಕಾರಣ ವಿನಾ ತಾನಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಚಿತ್ರ ಆರೋಪ ಮಾಡಿದ್ದಾರೆ. ಈ ಮೂಲಕ ಯುದ್ಧದ ಹೊಣೆಗಾರಿಕೆಯನ್ನು ರಕ್ಷಣಾ ಕಾರ್ಯದರ್ಶಿಗಳ ತಲೆಗೆ ಜಾರಿಸಿಬಿಟ್ಟಿದ್ದಾರೆ. ಟೆಹ್ರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸುವ ಸಲಹೆಯನ್ನು ಮೊತ್ತ ಮೊದಲು ನೀಡಿದ್ದು ಹೆಗ್ಸೆತ್ ಎಂದು ಟ್ರಂಪ್ ಸುದ್ದಿಗಾರರ ಬಳಿ ಆಪಾದಿಸಿದ್ದಾರೆ! ಇರಾನ್ ಅಣ್ವಸ್ತ್ರಗಳನ್ನು ತಯಾರಿಸದಂತೆ ತಡೆಯಲು ತಮಗೆ ಸಾಧ್ಯವಿಲ್ಲ. ಹಾಗಾಗಿ ಮಿಲಿಟರಿ ಕಾರ್ಯಾಚರಣೆಯೇ ಸೂಕ್ತವೆಂದು ಪ್ರಥಮವಾಗಿ ಸಲಹೆ ನೀಡಿದ್ದು ಹೆಗ್ಸೆತ್ ಎಂದು ಟ್ರಂಪ್ ದೂರಿದ್ದಾರೆ. ಇರಾನ್ ಮಾಧ್ಯಮಗಳೇನೇ ಹೇಳಿದರೂ ನಾವು ಟೆಹ್ರಾನ್ ಜತೆ ತೀರಾ ಉತ್ತಮ ರೀತಿಯಲ್ಲಿ ಮಾತುಕತೆ ನಡೆಸಿದ್ದೇವೆ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ಉಪಾಧ್ಯಕ್ಷ ಜೆಡಿ ವ್ಯಾನ್ಸ್‌ಗೆ ಯುದ್ಧ ವಿಚಾರದಲ್ಲಿ ತನಗಿದ್ದಷ್ಟು ಕುತೂಹಲ ಇಲ್ಲ ಎಂದು ಟ್ರಂಪ್ ಈ ಹಿಂದೆ ಹೇಳಿದ್ದು ಉಲ್ಲೇಖನೀಯ.

ಇಂದು ಸರ್ವಪಕ್ಷ ಸಭೆ

ಹೊಸದಿಲ್ಲಿ : ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಕ್ಕೆ ಸಂಬಂಧಿಸಿ ಸರಕಾರ ಬುಧವಾರ ಸರ್ವಪಕ್ಷಗಳ ಸಭೆ ಆಯೋಜಿಸಿದೆ ಎಂದು ಮೂಲಗಳು ತಿಳಿಸಿವೆ. ಪಶ್ಚಿಮ ಏಷ್ಯಾ ಸನ್ನಿವೇಶಕ್ಕೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಸಂಸತ್ತನ್ನು ಉದ್ದೇಶಿಸಿ ಹೇಳಿಕೆ ನೀಡಿದ ಬೆನ್ನಲ್ಲೇ ಸರ್ವಸಭೆ ವಿಚಾರ ಪ್ರಕಟವಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಉದ್ಭವಿಸಿರುವ ಸಂಕ್ಲಿಷ್ಟ ಜಾಗತಿಕ ಸನ್ನಿವೇಶಗಳು ದೀರ್ಘಕಾಲ ಮುಂದುವರಿಯುವ ಆತಂಕವಿದೆ. ಹಾಗಾಗಿ ಕೋವಿಡ್ ಸಮಯದಲ್ಲಿ ಏಕತೆ ಮೆರೆದಂತೆ, ಸಂಭಾವ್ಯ ಯಾವುದೇ ಸವಾಲುಗಳನ್ನು ಎದುರಿಸಲು ಏಕತೆಯಿಂದಿರುವಂತೆ ಮತ್ತು ಸನ್ನದ್ಧರಾಗಿರುವಂತೆ ಪ್ರಧಾನಿ ಮೋದಿ ಸೋಮವಾರ ದೇಶವಾಸಿಗಳಿಗೆ ಕರೆನೀಡಿದ್ದರು.

ಪಶ್ಚಿಮ ಏಷ್ಯಾ ಬಿಕ್ಕಟ್ಟು ದೇಶದ ಇಂಧನ, ರಸಗೊಬ್ಬರ, ರಾಷ್ಟ್ರೀಯ ಭದ್ರತೆ ಮತ್ತಿತರ ರಂಗಗಳ ಮೇಲೆ ಪರಿಣಾಮ ಬೀರಿವೆ. ಯುದ್ಧ ವಲಯದಲ್ಲಿ ವಾಸವಿರುವ ಭಾರತೀಯರ ಮೇಲೂ ಪರಿಣಾಮ ಬೀರಿದೆ ಎಂದು ಲೋಕಸಭೆಗೆ ನೀಡಿದ ಹೇಳಿಕೆಯಲ್ಲಿ ಆತಂಕ ವ್ಯಕ್ತಪಡಿಸಿದ್ದ ಪ್ರಧಾನಿ ಮೋದಿ, ಜನಸಾಮಾನ್ಯರಿಗೆ ತೀರಾ ತೊಂದರೆಯಾಗಕೂಡದೆಂದು ಸರಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಮಾಹಿತಿ ನೀಡಿದ್ದರು. ಬಿಕ್ಕಟ್ಟಿಗೆ ಸಂಬಂಧಿಸಿ ನಮ್ಮ ಒಗ್ಗಟ್ಟಿನ ಧ್ವನಿ ಭಾರತದ ಸಂಸತ್ತಿನಿಂದ ಜಗತ್ತಿಗೆ ತಲುಪಬೇಕೆಂದು ಕರೆ ನೀಡಿದ್ದರು.

ಮರ್ಯಾದಾ ಹತ್ಯೆಗೆ ಕಡಿವಾಣ

ಪುಟ ೧➡ ತಮ್ಮ ಸಾಂವಿಧಾನಿಕ ಹಕ್ಕನ್ನು ಚಲಾಯಿಸುವವರ, ವಿಶೇಷವಾಗಿ ಯುವ ವಯಸ್ಕರ ವಿರುದ್ಧ ಮರ್ಯಾದೆಗೇಡು ಹತ್ಯೆಗಳನ್ನು ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರಗಳು ವ್ಯಕ್ತವಾಗುತ್ತಿವೆ. ಕೊಲೆ, ಹಲ್ಲೆ ಮತ್ತು ಅಪರಾಧಿಕ ಬೆದರಿಸುವಿಕೆಯಂತಹ ಅಪರಾಧಗಳು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರಡಿ ಶಿಕ್ಷಾರ್ಹವಾಗಿದ್ದರೂ, ಈ ಉಪಬಂಧಗಳು ಜೀವಂತ ಹೆಣ್ಣುಮಕ್ಕಳಿಗೆ ಮರಣದ ಆಚರಣೆಗಳನ್ನು (ತಿಥಿ) ಮಾಡುವುದರಿಂದ, ಕಾನೂನುಬದ್ಧ ಪಿತ್ರಾರ್ಜಿತ ಹಕ್ಕುಗಳನ್ನು ನಿರಾಕರಿಸುವುದರಿಂದ, ಸಾಮಾಜಿಕ ಬಹಿಷ್ಕಾರದಿಂದ, ವಿಷಪೂಣಿಸುವ ಮೂಲಕ ಅಥವಾ ಇತರ ನಿಗೂಢ ವಿಧಾನಗಳ ಮೂಲಕ ಹಾನಿಯನ್ನುಂಟು ಮಾಡುವ ಕಪಟ ಪ್ರಯತ್ನಗಳಿಂದ ಪರಿಗಣಿಸಲಾದ ಜಾತಿ ಮರ್ಯಾದೆಯನ್ನು ಸಂರಕ್ಷಿಸುವ ನಿರ್ದಿಷ್ಟ ಸಾಮಾಜಿಕ ಉದ್ದೇಶವನ್ನು ಅಥವಾ ವ್ಯಾಪಕ ಶ್ರೇಣಿಯ ದಬ್ಬಾಳಿಕೆಯ ಅಭ್ಯಾಸಗಳನ್ನು ಸಮರ್ಪಕವಾಗಿ ಪರಿಹರಿಸುತ್ತಿಲ್ಲವಾದ್ದರಿಂದ. ಅಂಥ ಕೃತ್ಯಗಳು ಭಾರತ ಸಂವಿಧಾನದ 14, 15, 19 ಮತ್ತು 21ನೇ ಅನುಚ್ಛೇದಗಳಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದಲ್ಲದೆ, ಜಾತಿಯ ಶ್ರೇಣೀಕರಣ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಾಧನವಾಗಿ ಅಂತರ್ಜಾತಿ ವಿವಾಹಗಳನ್ನು ಪ್ರತಿಪಾದಿಸಿದ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರಂತಹ ಸಮಾಜ ಸುಧಾರಕ ಯುಗಪ್ರವರ್ತಕರ ದೃಷ್ಟಿಕೋನವನ್ನು ದುರ್ಬಲಗೊಳಿಸುತ್ತವೆ ಎಂದರು.

ಈಗಾಗಲೇ ಇರುವ ಕಾನೂನುಗಳು, ಅಪಾಯದಲ್ಲಿರುವ ದಂಪತಿಗಳ ರಕ್ಷಣೆಗಾಗಿ ಪೂರ್ವಭಾವಿ ಕಾರ್ಯವ್ಯವಸ್ಥೆಗಳು, ಕಡ್ಡಾಯ ಪೊಲೀಸ್ ಹಸ್ತಕ್ಷೇಪ, ತ್ವರಿತಗತಿಯ ನ್ಯಾಯಿಕ ತೀರ್ಪು ಮತ್ತು ಅನುವಂಶಿಕವಾದ ಅಂಥ ನಾಗರಿಕ ಹಕ್ಕುಗಳ ಮರುಸ್ಥಾಪನೆಯಲ್ಲಿ ಕೆಲವು ನ್ಯೂನ್ಯತೆಗಳನ್ನು ಹೊಂದಿರುತ್ತವೆ. ಇದಕ್ಕೇಂದೇ ಮೀಸಲಾದ ಶಾಸನವು ಇಲ್ಲವಾದ್ದರಿಂದ, ದುಷ್ಕೃತ್ಯವನ್ನು ಎಸಗಿದವರು ಆಗಾಗ್ಗೆ ಕಠಿಣ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿರುವುದರಿಂದ ಮತ್ತು ಸಂತ್ರಸ್ತರು ಅಥವಾ ಬದುಕುಳಿದವರು ಅಸಮರ್ಪಕವಾದ ಪರಿಹಾರ ಹಾಗೂ ಪುನರ್ವಸತಿಯನ್ನು ಪಡೆಯುತ್ತಿರುವುದರಿಂದ ಮತ್ತು ಭಾರತದ ಸಂವಿಧಾನವು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಯನ್ನು ಸುಭದ್ರಗೊಳಿಸುವ ಭ್ರಾತೃತ್ವದ ತತ್ತ್ವವನ್ನು ಪ್ರತಿಪಾದಿಸುತ್ತದೆ ಹಾಗೂ ಈ ತತ್ತ್ವವು ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲನೆ ಮಾಡಲು ಮತ್ತು ಅಂತರ್ಜಾತಿ ವಿವಾಹಗಳ ಮನ್ನಣೆ ಮತ್ತು ರಕ್ಷಣೆಯ ಮೂಲಕ ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸಲು ಒತ್ತಾಯಿಸುತ್ತದೆ.

ಆದ್ದರಿಂದ, ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಉಪಬಂಧಿಸಲು ಮತ್ತು ಜಾತಿ ಆಧಾರಿತ ಅಪರಾಧಗಳನ್ನು ಪ್ರತಿಬಂಧಿಸಲು ಮತ್ತು ನಿಷೇಧಿಸಲು, ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು, ಅಂತರ್ಜಾತಿ ವಿವಾಹಕ್ಕೆ ಗೌರವವನ್ನು ನೀಡಲು, ವೈಯಕ್ತಿಕ ಆಯ್ಕೆಗಳಲ್ಲಿ ಬಲವಂತದ ಜಾತಿ ಆಧಾರಿತ ತಾರತಮ್ಯವನ್ನು ಪ್ರತಿಬಂಧಿಸಲು ಮತ್ತು (ಡ) ಅಂತರ್ಜಾತಿಯ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ ಇವ ನಮ್ಮವ ಇವ ನಮ್ಮವ ವೇದಿಕೆ ಯನ್ನು ರಚಿಸಲು, ಶಾಸನವನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದ್ದು, ಆದ್ದರಿಂದ ಈ ವಿಧೇಯಕವನ್ನು ಅಂಗೀಕರಿಸುವಂತೆ ಕೋರಿದರು. ಆಡಳಿತ ಹಾಗೂ ವಿರೋಧ ಪಕ್ಷ ಸದಸ್ಯರು ಈ ವಿಧೇಯಕದ ಮೇಲೆ ಸುದೀರ್ಘವಾಗಿ ಮಾತನಾಡಿದರು.

ಪ್ರಮುಖ ಉದ್ದೇಶಗಳು

ಪುಟ ೧➡ ವಯಸ್ಕರಾದ ಇಬ್ಬರು ವ್ಯಕ್ತಿಗಳು ಪರಸ್ಪರ ಒಪ್ಪಿಗೆಯಿಂದ ಮದುವೆಯಾಗುವ ಸಾಂವಿಧಾನಿಕ ಹಕ್ಕನ್ನು ಎತ್ತಿಹಿಡಿಯುವುದು. ಇದಕ್ಕೆ ಪೋಷಕರ ಅಥವಾ ಸಮಾಜದ ಪೂರ್ವಾನುಮತಿ ಅಗತ್ಯವಿಲ್ಲ ಎಂದು ವಿಧೇಯಕ ಸ್ಪಷ್ಟಪಡಿಸುತ್ತದೆ.ಮರ್ಯಾದೆ'ಯ ಹೆಸರಿನಲ್ಲಿ ನಡೆಯುವ ಹತ್ಯೆಗಳಿಗೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಯನ್ನು ವಿಧೇಯಕವು ಪ್ರಸ್ತಾಪಿಸಿದೆ. ಗಂಭೀರ ಗಾಯಗೊಳಿಸುವ ಅಥವಾ ದೈಹಿಕ ಹಿಂಸೆ ನೀಡುವ ಅಪರಾಧಗಳಿಗೆ 3 ರಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ. ಬೆದರಿಕೆ ಎದುರಿಸುತ್ತಿರುವ ಅಂತರ್ಜಾತಿ ಅಥವಾ ಅಂತರ್ಧರ್ಮೀಯ ದಂಪತಿಗಳಿಗೆ ದೂರು ನೀಡಿದ 6 ಗಂಟೆಗಳ ಒಳಗಾಗಿ ಪೊಲೀಸ್ ರಕ್ಷಣೆ ಒದಗಿಸಲು ಕಾಯ್ದೆ ಕಡ್ಡಾಯಗೊಳಿಸುತ್ತದೆ.

ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆ ಕೌಶಲಾಭಿವೃದ್ಧಿಯಲ್ಲಿ ಸೇರಿಸಿ

• **ವಿಧಾನಸಭೆ:** ಶಾಲೆಗಳಲ್ಲಿ ಶೌಚಾಲಯಗಳನ್ನು ವಿದ್ಯಾರ್ಥಿಗಳು ತೊಳೆಯುವಂತೆ ಅನುಕೂಲವಾಗುವಂತೆ ಅದನ್ನು ಕೌಶಲಾಭಿವೃದ್ಧಿಯಲ್ಲಿ ಸೇರಿಸಿ. - ಹೀಗೆ ಸಲಹೆ ನೀಡಿದವರು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್.

2026ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಕುರಿತ ಚರ್ಚೆಯ ವೇಳೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು ಮಾತನಾಡಿ, ಶಾಲೆಗಳಲ್ಲಿ ಡಿ ಗ್ರೂಪ್ ಹುದ್ದೆಗಳನ್ನು ನೇಮಕ ಮಾಡಿ. ಮಕ್ಕಳನ್ನು ಶುಚಿತ್ವದ ಕೆಲಸಕ್ಕೆ ಬಳಸಲಾಗುತ್ತಿದೆ ಎಂದರು.

ಇದಕ್ಕೆ ಸಭಾಧ್ಯಕ್ಷ ಯು.ಟಿ.ಖಾದರ್ ಧ್ವನಿಗೂಡಿಸಿ, ಹಿಂದೆ ನಾವೆಲ್ಲ ಬೆಳಗ್ಗೆ ಬೇಗ ಶಾಲೆಗಳಲ್ಲಿನ ಶೌಚಾಲಯಗಳನ್ನು ತೊಳೆಯುತ್ತಿದ್ದೆವು. ಆಗ ಎಲ್ಲರೂ ಶೌಚಾಲಯಗಳ ಸ್ವಚ್ಛತೆ ಮಾಡಲು ಅವಕಾಶವಿತ್ತು. ಅದನ್ನು ಮಾಡುವಂತೆ ಶಿಕ್ಷಣ ಸಚಿವರಿಗೆ ಸೂಚಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 15 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಡಿ ಗ್ರೂಪ್ ನೇಮಕಕ್ಕೆ ಅನುಮತಿ ದೊರೆತಿಲ್ಲ. ಹೊರಗುತ್ತಿಗೆಯಲ್ಲಿ ನೇಮಕಕ್ಕೆ ಪ್ರಯತ್ನಿಸಲಾಗುವುದು ಎಂದರು.

ಆರಗ ಜ್ಞಾನೇಂದ್ರ ಮಾತನಾಡಿ, ಡಿ ಗ್ರೂಪ್ ನೌಕರರನ್ನು ನೇಮಕ ಮಾಡಲು ಆದರೆ ನೇಮಕ ಮಾಡಿ. ಇಲ್ಲದಿದ್ದರೆ ಮಕ್ಕಳು ಸ್ವಚ್ಛತೆ ಮಾಡಲು ಅವಕಾಶ ಮಾಡಿಕೊಡಿ. ಮಹಾತ್ಮ ಗಾಂಧೀಜಿ ಅವರೇ ಶೌಚಾಲಯ ತೊಳೆಯುತ್ತಿದ್ದರು. ನಮ್ಮ ಮಕ್ಕಳು ಅವರಿಗಿಂತ ದೊಡ್ಡವರಾ? ಅವರೂ ಶುಚಿತ್ವ ಕಲಿಯಲಿ ಎಂದು ಹೇಳಿದರು. ಈ ವೇಳೆ ಸಚಿವರು ಮತ್ತು ಕೆಲ ಸದಸ್ಯರು ಮಕ್ಕಳು ಶೌಚಾಲಯ ತೊಳೆಯುವುದಕ್ಕೆ ಕಾನೂನಿನಲ್ಲಿ ತೊಡಕಿದೆ ಎಂದು ಹೇಳಿದರು. ಕೊನೆಗೆ ಸಭಾಧ್ಯಕ್ಷರು ಮಾತನಾಡಿ, ಶಾಲೆಗಳ ಶೌಚಾಲಯಗಳ ಶುಚಿತ್ವಕ್ಕೆ ಆದ್ಯತೆ ಕೊಡಿ. ಒಂದೇ ಕಾನೂನು ಬದಲಾಗಲಿ. ಇಲ್ಲದಿದ್ದರೆ ಅದನ್ನು ಕೌಶಲ ಅಭಿವೃದ್ಧಿಯಲ್ಲಿ ಸೇರಿಸಿ ಎಂದರು.

ಬಾಗಿಲು ಉದ್ಘಾಟನೆ...



ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಅಳವಡಿಸಲಾದ ನೂತನ ಬೀಟೆ ಮರದ ಬಾಗಿಲನ್ನು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸ್ಪೀಕರ್ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ವಿಪಕ್ಷ ನಾಯಕ ಆರ್.ಅಶೋಕ ಮೊದಲಾದವರು ಇದ್ದರು.

ಮಾರ್ಚ್‌ನೊಳಗೆ 22 ಇಂದಿರಾ ಕ್ಯಾಂಟೀನ್ ಉದ್ಘಾಟನೆ

• **ವಿಧಾನ ಪರಿಷತ್:** ರಾಜ್ಯದ ವಿವಿಧೆಡೆ ಹೊಸದಾಗಿ ನಿರ್ಮಾಣಗೊಂಡಿರುವ 22 ಇಂದಿರಾ ಕ್ಯಾಂಟೀನ್‌ಗಳಿಗೆ ಕಳೆದ ಆರು ತಿಂಗಳಿಂದ ಸ್ಥಳೀಯ ಶಾಸಕರು ಉದ್ಘಾಟನೆ ಸಮಯ ನೀಡಿಲ್ಲ. ಈ ಬಗ್ಗೆ ವೈಯಕ್ತಿಕವಾಗಿ ಪತ್ರ ಬರೆದು ಉದ್ಘಾಟಿಸುವಂತೆ ಮನವಿ ಮಾಡಿದ್ದೇನೆ. ಈ ತಿಂಗಳಲ್ಲಿ ಕ್ಯಾಂಟೀನ್‌ಗಳನ್ನು ಉದ್ಘಾಟಿಸುವ ಭರವಸೆ ನೀಡಿದ್ದಾರೆ ಎಂದು ಪೌರಾಡಳಿತ ಸಚಿವ ರಹೀಂಖಾನ್ ತಿಳಿಸಿದರು.

ಸದಸ್ಯ ಕೆ.ಎಸ್.ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಇಂದಿರಾ ಕ್ಯಾಂಟೀನ್ ಯೋಜನೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಯೋಜನೆಯಾಗಿದೆ. ರಾಜ್ಯದಲ್ಲಿ 346 ಇಂದಿರಾ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ. 22 ಕ್ಯಾಂಟೀನ್‌ಗಳು ಉದ್ಘಾಟನೆಗೆ ಬಾಕಿ ಇದ್ದು, 15 ಕ್ಯಾಂಟೀನ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ವಿವರಿಸಿದರು.



ಇದಕ್ಕೂ ಮೊದಲು ಮಾತನಾಡಿದ ನವೀನ್, 2017ರಲ್ಲಿ ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣಕ್ಕೆ ಗುತ್ತಿಗೆ ನೀಡಿದ್ದ ಎಕ್ಸೆಲ್ ಪ್ರಿ ಕಾಸ್ಟ್ ಸೆಲ್ಯೂಷನ್ ಪ್ರೈವೇಟ್ ಕಂಪನಿಗೆ 2023ರಲ್ಲಿ ಎರಡನೇ ಹಂತದ 186 ಕ್ಯಾಂಟೀನ್‌ಗಳ ನಿರ್ಮಾಣಕ್ಕೂ ಗುತ್ತಿಗೆ ನೀಡಲಾಗಿದೆ. ಈ ಕಂಪನಿಗೆ ಕೆಟಿಪಿಪಿ ಕಾಯ್ದೆ 4 (ಜ) ವಿನಾಯಿತಿ ನೀಡಲಾಗಿದೆ. ಸದ್ಯ ಕಂಪನಿ ಬಗ್ಗೆ ಪರಿಶೀಲಿಸಿದಾಗ ಕಂಪನಿ ಮುಚ್ಚಿದೆ ಎಂದು ಮಾಹಿತಿ ಬಂದಿದೆ. ನಿರ್ದಿಷ್ಟ ಕಂಪನಿಗೆ ಎರಡು ಬಾರಿ ಗುತ್ತಿಗೆ ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ ಎಂದರು.

ಸಚಿವ ರಹೀಂಖಾನ್ ಮಾತನಾಡಿ, ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣ ವಿಚಾರವಾಗಿ 2023ರಲ್ಲಿ ಅರ್ಜಿ ಸಲ್ಲಿಸಿ ಕಂಪನಿ ಬಿಡ್ ಮಾಡಿತ್ತು. ಎರಡನೇ ಹಂತದ ಕ್ಯಾಂಟೀನ್ ಗಳನ್ನ ಇದೇ ಕಂಪನಿ ನಿರ್ಮಿಸುತ್ತಿದೆ ಎಂದರು.

ಕಿರುಸುದ್ದಿ

ಆರ್ಥಿಕ ಶಿಸ್ತು ಕಾಪಾಡಲು ಆದ್ಯತೆ: ರಾಯರೆಡ್ಡಿ

• **ವಿಧಾನ ಸಭೆ:** ರಾಜ್ಯದ ಜಿಡಿಪಿ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಮಾಡಲಾಗುತ್ತಿದ್ದು, ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲಾಗಿದೆ ಎಂದು ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು. ಬಜೆಟ್ ಮೇಲಿನ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, 17 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರ ಅಪಾರ ಅನುಭವದಿಂದ ಈ ಬಜೆಟ್‌ನಲ್ಲಿ ಆರ್ಥಿಕ ಶಿಸ್ತು ಕಾಪಾಡಲಾಗಿದೆ ಎಂದರು. ಈ ಬಜೆಟ್‌ನಲ್ಲಿ ಬಂಡವಾಳ ವೆಚ್ಚ, ಜನಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡಲಾಗಿದ್ದು, ಗ್ಯಾರಂಟಿ ಸರ್ಕಾರಕ್ಕೆ ಭಾರ ಆಗಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗೆ 1 ಲಕ್ಷ 33 ಸಾವಿರ ಎಕರೆ ಭೂ ಸ್ವಾಧೀನಕ್ಕೆ ಬಜೆಟ್‌ನಲ್ಲಿ ಹಣ ಮೀಸಲಿಡಲಾಗಿದೆ. ರಾಜ್ಯಕ್ಕೆ ಬೇಕಿರುವ ಬಂಡವಾಳ ಬರುತ್ತಿದ್ದು, ಇದು ಸಿದ್ದರಾಮಯ್ಯ ಅವರ ಆಡಳಿತದ ವೈಖರಿಗೆ ಸಾಕ್ಷಿ ಎಂದರು.

ಉದ್ಯೋಗಾಕಾಂಕ್ಷಿಗಳಿಗೆ ವಯೋಮಿತಿ 5 ವರ್ಷ ಸಡಿಲ

• **ಬೆಂಗಳೂರು:** ರಾಜ್ಯ ಪೊಲೀಸ್ ಇಲಾಖೆಯಲ್ಲಿ ಉದ್ಯೋಗ ಆಕಾಂಕ್ಷಿಗಳಾಗಿರುವ ಅಭ್ಯರ್ಥಿಗಳಿಗೆ ಸರ್ಕಾರವು ಮಹತ್ವದ ವಿನಾಯಿತಿಯೊಂದನ್ನು ನೀಡಿದೆ. ಇಲಾಖೆಯ ನೇರ ನೇಮಕಾತಿಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ನಿಗದಿಪಡಿಸಲಾಗಿದ್ದ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಕಾಲ ಸಡಿಲಿಕೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ವಯೋಮಿತಿ ಸಡಿಲಿಕೆಯು ಕೇವಲ ಒಂದು ಬಾರಿ ಕ್ರಮವಾಗಿ ಜಾರಿಗೆ ಬರಲಿದೆ. ಸರ್ಕಾರದ ಈ ನಿರ್ಧಾರದಿಂದಾಗಿ ವಯೋಮಿತಿ ಮೀರಿ ಉದ್ಯೋಗದ ಅವಕಾಶ ವಂಚಿತರಾಗಿದ್ದ ಸಾವಿರಾರು ಯುವಕರಿಗೆ ಮತ್ತೆ ಪೊಲೀಸ್ ಇಲಾಖೆ ಸೇರಲು ಸುವರ್ಣಾವಕಾಶ ಲಭಿಸಿದಂತಾಗಿದೆ.

ಅನ್ವಯವಾಗುವ ಅವಧಿ ದಿನಾಂಕ 31.12.2027 ವರೆಗೆ ಹೊರಡಿಸಲಾಗುವ ಎಲ್ಲಾ ನೇರ ನೇಮಕಾತಿ ಅಧಿಸೂಚನೆಗಳಿಗೆ ಈ ಸಡಿಲಿಕೆ ಅನ್ವಯವಾಗಲಿದೆ ಎಂದರು.

ಮಾಫಿಯಾ ಕಪಿಮುಷ್ಠಿಯಲ್ಲಿ ಕಸ ವಿಲೇವಾರಿ: ಅರುಣ್

• **ವಿಧಾನ ಪರಿಷತ್:** ರಾಜ್ಯದಲ್ಲಿ ಕಸ ವಿಲೇವಾರಿ ಮಾಫಿಯಾ ಕಪಿಮುಷ್ಠಿಯಲ್ಲಿದೆ. ದೊಡ್ಡ ಲಾಬಿ ಇದನ್ನು ನಿಯಂತ್ರಿಸುತ್ತಿದೆ ಎಂದು ಬಿಜೆಪಿ ಸದಸ್ಯ ಡಿ.ಎಸ್. ಅರುಣ್ ದೂರಿದರು. ಪ್ರಶ್ನೋತ್ತರ ಕಲಾಪದಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಇ-ತ್ಯಾಜ್ಯ ವಿಲೇವಾರಿ, ವೈದ್ಯಕೀಯ ವಲಯದ ತ್ಯಾಜ್ಯ ವಿಲೇವಾರಿ ಸೇರಿದಂತೆ ಪೂರ್ಣಪ್ರಮಾಣದಲ್ಲಿ ಕಸ ವಿಲೇವಾರಿ ವೈಜ್ಞಾನಿಕವಾಗಿ ನಿರ್ವಹಣೆಯಾಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿಯೂ ಈ ಸಮಸ್ಯೆ ವ್ಯಾಪಕವಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯ ಅಗತ್ಯವಾಗಿದೆ ಎಂದರು.

ಆ ವೇಳೆ ಪೌರಾಡಳಿತ ಸಚಿವ ರಹೀಂ ಖಾನ್, ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ಹಾಗೂ ವಿಲೇವಾರಿಯಲ್ಲಿ ಸಮಸ್ಯೆ ಉಂಟಾಗುತ್ತಿರುವುದನ್ನು ಒಪ್ಪಿಕೊಂಡರು. ಕಟ್ಟುನಿಟ್ಟಿನ ನಿರ್ದೇಶನವುಳ್ಳ ಸುತ್ತೋಲೆಯನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು ಎಂದೂ ಭರವಸೆ ನೀಡಿದರು.

ಮನರೇಗಾ: ಶೇ.48 ಕುಟುಂಬಗಳಿಗೆ ಮಾತ್ರ ಉದ್ಯೋಗ ಚೀಟಿ

ಶೇ.5 ಕುಟುಂಬಗಳಿಗಷ್ಟೇ 100 ದಿನಗಳ ಉದ್ಯೋಗ

• **ವಿಧಾನಸಭೆ:** ರಾಜ್ಯ ಸರ್ಕಾರ ಮರುಸ್ಥಾಪನೆಗೆ ಒತ್ತಾಯಿಸುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ)ಯಲ್ಲಿ ಉದ್ಯೋಗ ಚೀಟಿಗಳನ್ನು ವಿತರಿಸಿದ ಶೇ.48 ಕುಟುಂಬಗಳಿಗೆ ಮಾತ್ರ ಉದ್ಯೋಗ ಒದಗಿಸಲಾಗಿದೆ. ಅಲ್ಲದೇ 100 ದಿನಗಳ ಉದ್ಯೋಗ ಶೇ.5 ಕುಟುಂಬಗಳಿಗಷ್ಟೇ ಒದಗಿಸಿರುವುದು ಬಹಿರಂಗವಾಗಿದೆ.

ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮಂಡಿಸಿದ 2025ನೇ ಸಾಲಿನ ಮನರೇಗಾ ಕುರಿತಾದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯಲ್ಲಿ ಇದು ಉಲ್ಲೇಖವಾಗಿದೆ. ಕಾರ್ಯಕ್ಷಮತೆಯ ತಪಾಸಣೆಯನ್ನು 2019-20ರಿಂದ 2023-24ರ ಅವಧಿಯಲ್ಲಿ ನಡೆಸಲಾಗಿದೆ.

ಬಹುತೇಕರಿಗೆ 1-30 ದಿನಗಳ ಉದ್ಯೋಗ: 2024ರ ಮಾರ್ಚ್‌ನಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ 34,499 ಫಲಾನುಭವಿಗಳಿಗೆ ಉದ್ಯೋಗ ಚೀಟಿಗಳ ವಿತರಣೆ ಬಾಕಿ ಉಳಿದಿತ್ತು. ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಉದ್ಯೋಗ ಚೀಟಿಗಳು ನಿಗದಿತ ನಮೂನೆಗೆ ಬದ್ಧವಾಗಿರಲಿಲ್ಲ. ವಿಶಿಷ್ಟಚೇತನರಿಗೆ ವಿಶೇಷ ಉದ್ಯೋಗ ಚೀಟಿಗಳನ್ನು ನೀಡಿರಲಿಲ್ಲ. ಮನರೇಗಾ ಪ್ರತಿ ಬೇಡಿಕೆಯ ಕುಟುಂಬಕ್ಕೆ 100 ದಿನಗಳ ಉದ್ಯೋಗವನ್ನು ಖಚಿತಪಡಿಸಿದ್ದರೂ ನೋಂದಾಯಿತ ಕುಟುಂಬಗಳಿಂದ ಉದ್ಯೋಗದ ಬೇಡಿಕೆಯು ಉದ್ಯೋಗ ಚೀಟಿ ನೀಡಲಾದ ಶೇ.48 ಕುಟುಂಬಗಳಿಗಿಂತ ಅಧಿಕವಾಗಿರಲಿಲ್ಲ. ಈ ಅವಧಿಯಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸಿದ ಕುಟುಂಬಗಳು ಶೇ.5ರಷ್ಟಿದ್ದು,



ಸೃಜನೆಯಾಗಿರಲಿಲ್ಲ ಭೌತಿಕ ಆಸ್ತಿ

ಮನರೇಗಾ ಸಾಫ್ಟ್ ಬಳಸದೇ ಮಸ್ಟರ್ ರೋಲ್‌ಗಳನ್ನು ಮುದ್ರಿಸುವುದು ಮತ್ತು ಅಂತಹ ತಿದ್ದಿದ ಮಸ್ಟರ್ ರೋಲ್‌ಗಳ ಮೇಲೆ ಅನಿಯಮಿತ ಪಾವತಿಗಳಂತಹ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಇಲಾಖಾ ಅಧಿಕಾರಿಗಳೊಂದಿಗೆ ಯೋಜನೆಯಲ್ಲಿ ರಚಿಸಲಾದ ಸ್ವತ್ತುಗಳ ಜಂಟಿ ಭೌತಿಕ ಪರಿಶೀಲನೆಯು ಅವುಗಳ ಅಸ್ತಿತ್ವದಲ್ಲಿರಲಿಲ್ಲ ಅಥವಾ ಆಸ್ತಿಗಳು ನಿಷ್ಕ್ರಿಯವಾಗಿರುವುದನ್ನು ಬಹಿರಂಗಪಡಿಸಿದೆ.

ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿ ಕೊರತೆ

ಲೆಕ್ಕಪರಿಶೋಧನಾ ಅವಧಿಯಲ್ಲಿ ಒಮ್ಮೆ ಮಾತ್ರ ಸಭೆ ಸೇರಿದ್ದರಿಂದ ರಾಜ್ಯ ಉದ್ಯೋಗ ಖಾತರಿ ಪರಿಷತ್ ಮೂಲಕ ಯೋಜನೆಯ ನಿಗದಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಕೊರತೆಯಿದೆ. ನಿಗದಿತ ಉಪ ಸಮಿತಿಗಳು ನಿಷ್ಕ್ರಿಯವಾಗಿದ್ದವು. ಸಾಮಾಜಿಕ ಲೆಕ್ಕಪರಿಶೋಧನಾ ಘಟಕವು ನಿರ್ದೇಶಕರ ನೇಮಕಾತಿಯಲ್ಲಿ ಮಾನದಂಡಗಳ ಉಲ್ಲಂಘನೆ, ಸಿಬ್ಬಂದಿಯ ಕೊರತೆ, ಹಣದ ಕೊರತೆ ಅಥವಾ ಬಿಡುಗಡೆಯಲ್ಲಿ ವಿಳಂಬ ಮತ್ತು ಲೆಕ್ಕಪರಿಶೋಧನೆಗಾಗಿ ದಾಖಲೆಗಳ ಅಲಭ್ಯತೆಯಂತಹ ಸಾಂಸ್ಥಿಕ ದೌರ್ಬಲ್ಯಗಳಿಂದ ಬಳಲುತ್ತಿತ್ತು. ಇದರಿಂದ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವಲ್ಲಿನ ಕೊರತೆಯು 2019-20ರಲ್ಲಿ ಶೇ.1ರಿಂದ 2023-24ರಲ್ಲಿ ಶೇ.57ಕ್ಕೆ ಏರಿಕೆಯಾಗಿತ್ತು ಎಂಬುದನ್ನು ವರದಿ ಗಮನಿಸಿದೆ.

ಬಹುಪಾಲು ಕುಟುಂಬಗಳಿಗೆ ಕೇವಲ 1ರಿಂದ 30 ದಿನಗಳ ಉದ್ಯೋಗ ನೀಡಲಾಗಿದೆ.

ತನಿಖೆ ನಡೆಸಿದ ಗ್ರಾಮ ಪಂಚಾಯತ್‌ಗಳಲ್ಲಿ ಬೇಡಿಕೆ ರಿಜಿಸ್ಟರ್ ನಿರ್ವಹಣೆ ಮಾಡದಿರುವುದು ಮತ್ತು ಕಾರ್ಮಿಕರ ಬೇಡಿಕೆಯನ್ನು ತಪ್ಪಾಗಿ ದಾಖಲಿಸಿದ ಕಾರಣ ಫಲಾನುಭವಿಗಳಿಗೆ ನೀಡಬೇಕಾದ ನಿರುದ್ಯೋಗ ಭತ್ಯೆಯನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ. ಲೆಕ್ಕಪರಿಶೋಧನಾ ಅವಧಿಗೆ ಪಾವತಿಸಬೇಕಾದ 1.28 ಕೋಟಿ ರೂ. ನಿರುದ್ಯೋಗ ಭತ್ಯೆ ಕೂಡ ಫಲಾನುಭವಿಗಳಿಗೆ ಪಾವತಿಸಲು ಬಾಕಿ ಉಳಿದಿತ್ತು. 2022-23 ಮತ್ತು 2023-24ರ ಅವಧಿಯಲ್ಲಿ ಯೋಜನೆಯ ವೇತನ ಘಟಕದಡಿಯಲ್ಲಿ ವೆಚ್ಚವು ಇಳಿಕೆ ಪ್ರವೃತ್ತಿಯನ್ನು ತೋರಿಸಿತು.

ಎಸಿಸಿ ಕಂಪನಿ ಗುತ್ತಿಗೆ ಮುಂದುವರಿಕೆಗೆ ಆಗ್ರಹ

ಮೇಲ್ಮನೆಯಲ್ಲಿ ಗದ್ದಲ

• **ವಿಧಾನ ಪರಿಷತ್:** ಕೋಟ್ಯಂತರ ರೂ. ಗಣಿಗಾರಿಕೆ ಬಾಕಿ ಪಾವತಿಸದ ಆರೋಪ ಮತ್ತು ಅದಾನಿ ಗ್ರೂಪ್‌ನ ಎಸಿಸಿ ಲಿಮಿಟೆಡ್‌ಗೆ ಬೊಮ್ಮನಹಳ್ಳಿ, ಕಣ್ಣೂರವಾಡಿ ಮೊದಲಾದ ಕಡೆಗಳಲ್ಲಿ ಸುಣ್ಣದ ಕಲ್ಲಿನ ಬ್ಲಾಕ್ ಗುತ್ತಿಗೆ ನೀಡಲು ಮುಂದುವರಿಕೆಗೆ ಸಂಬಂಧಿಸಿದಂತೆ ಮಂಗಳವಾರ ಮೇಲ್ಮನೆಯಲ್ಲಿ ಜಟಾಪಟಿಗೆ ಕಾರಣವಾಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯೆ ಆರತಿ ಕೃಷ್ಣ ಪರವಾಗಿ ಈ ವಿಷಯವನ್ನು ಪ್ರಸ್ತಾಪಿಸಿದ ಕಾಂಗ್ರೆಸ್ ಪರಿಷತ್ ಸದಸ್ಯ ಕೆ. ಶಿವಕುಮಾರ್ ಕೆ. ಅವರು, ಕಲಬುರಗಿಯ ವಾಡಿಯಲ್ಲಿರುವ ಕಣ್ಣೂರು ಲೈಮ್‌ಸ್ಟೋನ್ ಬ್ಲಾಕ್‌ನಲ್ಲಿ ಗಣಿಗಾರಿಕೆಗಾಗಿ ಅದಾನಿ ಗ್ರೂಪ್‌ನ ಎಸಿಸಿ ಲಿಮಿಟೆಡ್‌ಗೆ ನೀಡಲಾದ ಗುತ್ತಿಗೆ ಅವಧಿ ಮುಗಿದಿದೆ ಎಂದು ರಾಜ್ಯ ಸರ್ಕಾರಕ್ಕೆ ತಿಳಿದಿದೆಯೇ ಎಂದು ಆರತಿ ಕೃಷ್ಣ ತಿಳಿದುಕೊಳ್ಳಲು ಬಯಸಿದ್ದರು. ಇದು ನಿಜವಾಗಿದ್ದರೆ, ರಾಜ್ಯ ಸರ್ಕಾರಕ್ಕೆ ಪಾವತಿಸಬೇಕಾದ ರಾಯಧನ, ಬಾಡಿಗೆ ಅಥವಾ ದಂಡದ ಒಟ್ಟು 850.21 ಕೋಟಿ ರು.ಗಳನ್ನು ಪಾವತಿಸದೆ ಸ್ಥಳದಲ್ಲಿ ಅನಧಿಕೃತ ಗಣಿಗಾರಿಕೆ ನಡೆಸಿದ್ದಕ್ಕಾಗಿ ಸರ್ಕಾರ ಈ ಕಂಪನಿಯ ವಿರುದ್ಧ ಏನು ಕ್ರಮ ಕೈಗೊಂಡಿದೆ? ಎಂದು ಅವರು ಲಿಖಿತ ಪ್ರಶ್ನೆಯಲ್ಲಿ ಕೇಳಿದರು. ಅದಾನಿ ಗ್ರೂಪ್ ಕ್ವಾರಿಯನ್ನು ವಹಿಸಿಕೊಂಡ ನಂತರ, ಅವರು 837 ಕೋಟಿ ರೂ.ಗಳನ್ನು ರಾಯಲ್ಟಿಯಾಗಿ ಪಾವತಿಸಬೇಕಾಯಿತು. ಇಂದಿನವರೆಗೆ ಅವರು ರಾಯಲ್ಟಿಯನ್ನು ಪಾವತಿಸಿಲ್ಲ. ಈ ರಾಯಲ್ಟಿಯಿಂದ ಅವರಿಗೆ ವಿನಾಯಿತಿ ನೀಡಲು ನಿಮ್ಮನ್ನು ಪ್ರೇರೇಪಿಸಿದ್ದೇನು? ಎಂದರು.

ಆಗ ಬಿಜೆಪಿ ಸದಸ್ಯ ಸಿ.ಟಿ. ರವಿ, ಪದೇ ಪದೇ ನಮ್ಮ ನಾಯಕರನ್ನು ಅದಾನಿ ಸ್ನೇಹಿತರು ಎಂದು ಕರೆಯುವ ನೀವು ಈಗ ಅದಾನಿ ಅವರ ಒಡೆತನದ ಕಂಪನಿಗೆ ಏಕೆ ಅನುಕೂಲಕರವಾದ ವಾತಾವರಣ ಸೃಷ್ಟಿಸುತ್ತಿದ್ದೀರಿ, ಇದರ ಹಿಂದಿನ ಅರ್ಥವೇನು ಎಂದು ಪ್ರಶ್ನಿಸಿದರು.



ಎಸಿಸಿಸಿ ಕಂಪನಿಯಿಂದ ಕಾನೂನು ಹೋರಾಟ

ಕಲಬುರಗಿ ಜಿಲ್ಲೆಯ ಇಂಗಳಗಿ ಹಾಗೂ ರಾವೂರ ಗ್ರಾಮಗಳ ವ್ಯಾಪ್ತಿಯಲ್ಲಿ 471.03 ಹೆಕ್ಟೇರ್ ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗೆ ಸಂಬಂಧಿಸಿದಂತೆ ರಾಜಧನ ಹಾಗೂ ದಂಡ ಸೇರಿ 850.21 ಕೋಟಿ ರೂ. ಎಸಿಸಿ ಲಿಮಿಟೆಡ್ ಪಾವತಿಸಬೇಕಿದೆ. ಆದರೆ, ಕಂಪನಿಯು ಇದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ ಕಾನೂನಾತ್ಮಕ ಹೋರಾಟ ನಡೆಸುತ್ತಿದೆ. ಅತ್ತ ಸುಪ್ರೀಂಕೋರ್ಟ್ ಕೂಡ ಈ ಪ್ರಕರಣ ಇತ್ಯರ್ಥವಾಗಬೇಕು. ರಾಜಧನ/ದಂಡದ ಪ್ರಮಾಣವೇ ತೀರ್ಮಾನವಾಗಬೇಕಿದೆ. ಅಲ್ಲಿಯವರೆಗೆ ಗಣಿಗಾರಿಕೆ ನಡೆಸಲು ಕೋರ್ಟ್ ಅವಕಾಶ ನೀಡಿದೆ ಎಂದು ಸ್ಪಷ್ಟಪಡಿಸಿದರು.

ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪರವಾಗಿ ಇದಕ್ಕೆ ಉತ್ತರಿಸಿದ, ಸಚಿವ ಚೆಲುವರಾಯಸ್ವಾಮಿ, ಯಾವುದೇ ಹೊಸ ಪರವಾನಗಿಯನ್ನು ನೀಡಲಾಗಿಲ್ಲ ಮತ್ತು ಈ ವಿಷಯವು ಅಸ್ತಿತ್ವದಲ್ಲಿರುವ ಗಣಿಗಾರಿಕೆ ಗುತ್ತಿಗೆ ಮತ್ತು ಪ್ರತ್ಯೇಕ ಹೊಸ ಅರ್ಜಿಯನ್ನು ಇನ್ನೂ ಪ್ರಕ್ರಿಯೆಯಲ್ಲಿದೆ ಎಂದು ತಿಳಿಸಿದರು.

ಹು-ಧಾ ಮಹಾನಗರ ಪಾಲಿಕೆಗೆ 3,792 ಹುದ್ದೆ ಮಂಜೂರು

• **ವಿಧಾನ ಪರಿಷತ್:** ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ 3,792 ಹುದ್ದೆಗಳು ಮಂಜೂರಾಗಿವೆ ಎಂದು ನಗರಾಭಿವೃದ್ಧಿ ಸಚಿವ ಸಚಿವ ಬಿ.ಎಸ್. ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರಾದ ಎಸ್ .ವಿ.ಸಂಕನೂರ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಮಂಜೂರಾದ 3,792 ಹುದ್ದೆಗಳ ಪೈಕಿ 1,059 ಖಾಯಂ ಅಧಿಕಾರಿ-ನೌಕರರು ಕಾರ್ಯನಿರ್ವಹಿಸುತ್ತಿದ್ದು, 1,760 ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 973 ಖಾಲಿ ಹುದ್ದೆಗಳನ್ನು ಹಂತ-ಹಂತವಾಗಿ ಭರ್ತಿ ಮಾಡಲಾಗುವುದು ಎಂದರು. ಮಹಾನಗರ ಪಾಲಿಕೆಗಳ ಸಿಬ್ಬಂದಿಗೆ ವೇತನ ಮತ್ತು ಪಿಂಚಣಿಯ ಶೇ. 80 ರಷ್ಟು ವಿಶೇಷ ಹಣಕಾಸು ಆಯೋಗ ಮತ್ತು ಶೇ.20 ರಷ್ಟನ್ನು ಆಯಾ ಸಂಸ್ಥೆಗಳೇ ತಮ್ಮ ಹಣಕಾಸು ಸಂಪನ್ಮೂಲದಿಂದ ಕ್ರೋಢೀಕರಿಸಿ ಭರಿಸಬೇಕಾಗುತ್ತದೆ. ಆದರೆ, ಸಂಪೂರ್ಣ ವೇತನವನ್ನು ಸರ್ಕಾರವೇ ಭರಿಸಲು ಸಾಧ್ಯವಿಲ್ಲ. ಇದೇ ವೇಳೆ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗೆ ಪೂರ್ಣ ಪ್ರಮಾಣ ದಲ್ಲಿ ಸರ್ಕಾರವೇ ವೇತನ ಪಾವತಿಸುತ್ತಿದೆ ಎಂದರು.

ಗುತ್ತಿಗೆದಾರರಿಗೆ ಹಣ

ಅಮೃತ್ 1ರ ಅಡಿಯಲ್ಲಿ ನಡೆದ ಕಾಮಗಾರಿಗಳಿಗೆ ಸುಮಾರು 600 ಕೋಟಿ ರೂ.ಗಳಷ್ಟು ಹಣವನ್ನು ಗುತ್ತಿಗೆದಾರರಿಗೆ ಪಾವತಿ ಮಾಡುವುದು ಬಾಕಿಯಿದೆ. ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿದ ಬಳಿಕ ಈ ಹಣವನ್ನು ಹಂತ-ಹಂತವಾಗಿ ಗುತ್ತಿಗೆದಾರರಿಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬಿ.ಎಸ್. ಸುರೇಶ್ ತಿಳಿಸಿದರು.

ಉತ್ತರಿಸದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ: ಹೊರಟ್ಟಿ ತಾಕೀತು

• **ವಿಧಾನ ಪರಿಷತ್:** ಮೇಲ್ಮನೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲವೆಂದರೆ ಏನರ್ಥ? ನಾಳೆ ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ, ಇಲ್ಲವೇ ಅವರನ್ನು ಕರೆತಂದು ಸದನದಲ್ಲಿ ನಿಲ್ಲಿಸಿ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಮೇಲ್ಮನೆ ಸಭಾನಾಯಕ ಬೋಸರಾಜು ಅವರಿಗೆ ತಾಕೀತು ಮಾಡಿದರು.



ಮೇಲ್ಮನೆಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಈ ಬಾರಿ ಸದನದಲ್ಲಿ ಪ್ರಶ್ನೋತ್ತರದಲ್ಲಿ 157 ಪ್ರಶ್ನೆಗಳನ್ನು ಕೇಳಲಾಗಿದ್ದು, ಈವರೆಗೆ 57ಕ್ಕೆ ಮಾತ್ರ ಉತ್ತರಗಳು ಬಂದಿವೆ. ಹೀಗಾದರೆ ಹೇಗೆ ಎಂದ ಸದಸ್ಯ ಭೋಜೇಗೌಡ ಸಭಾಪತಿಗಳ ಗಮನ ಸೆಳೆದರು. ಅದಕ್ಕೆ ಧ್ವನಿಗೂಡಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಸದಸ್ಯ ಸಿ.ಟಿ.ರವಿ, ಈ ಬಾರಿಯಷ್ಟೇ ಅಲ್ಲ. ಕಳೆದ ಬೆಳಗಾವಿ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೂ ಇನ್ನೂ ಉತ್ತರ ಸಿಕ್ಕಿಲ್ಲ ಎಂದು ದೂರಿದರು. ಸದನಕ್ಕೆ ಉತ್ತರ ಒದಗಿಸದ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಈಗಾಗಲೇ ಪೀಠ ಸರ್ಕಾರಕ್ಕೆ ಆದೇಶಿಸಿದೆ. ಅದರಂತೆ ಕ್ರಮ ವಹಿಸಲಿ. ವಿಧಾನ ಪರಿಸತ್ ಸದಸ್ಯರು ಕೇಳಿದ ಪ್ರಶ್ನೆಗಳಿಗೂ ಅಧಿಕಾರಿಗಳು ಉತ್ತರ ಹೇಳುತ್ತಿಲ್ಲ ಎಂದರೆ ಜನರು ಏನು ಮಾತನಾಡಿಕೊಳ್ಳಬಹುದು. ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಮನವಿ ಮಾಡಿದರು.

ಹಜ್ ಯಾತ್ರೆಗಾಗಿ ಪ್ರತ್ಯೇಕ ಟರ್ಮಿನಲ್ ನಿರೀಕ್ಷೆ: ಸಚಿವ

• **ವಿಧಾನ ಪರಿಷತ್:** ಮಂಗಳೂರು ವಿಮಾನ ನಿಲ್ದಾಣದಿಂದ ಹಜ್ ಯಾತ್ರೆಗೆ ತೆರಳುವ ಯಾತ್ರಿಕರಿಗೆ ಈ ವರ್ಷ ಪ್ರತ್ಯೇಕ ಟರ್ಮಿನಲ್ ಆರಂಭಿಸುವ ನಿರೀಕ್ಷೆಯಿದೆ ಎಂದು ಹಜ್ ಸಚಿವ ರಹೀಂ ಖಾನ್ ತಿಳಿಸಿದರು. ಅವರು ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಉತ್ತರಿಸಿದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡುವ ಹಜ್ ಯಾತ್ರಿಕರಿಗೆ ಬಿಐಎಲ್ ನಿಂದ ಪ್ರತಿ ವರ್ಷ ಪ್ರತ್ಯೇಕ ತಾತ್ಕಾಲಿಕ ಟರ್ಮಿನಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಅದೇ ರೀತಿ ಮಂಗಳೂರು ವಿಮಾನ ನಿಲ್ದಾಣದಿಂದ ಪ್ರತ್ಯೇಕ ಟರ್ಮಿನಲ್‌ಗೆ ಎರಡು ವರ್ಷಗಳಿಂದ ಕೇಂದ್ರ ಸರ್ಕಾರ ಅನುಮತಿ ನೀಡಿರಲಿಲ್ಲ. ಮತ್ತೆ ಅನುಮತಿ ನೀಡುವ ಕುರಿತು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಲಾಗಿದ್ದು, ಈ ವರ್ಷ ಆರಂಭಿಸುವ ವಿಶ್ವಾಸವಿದೆ ಎಂದರು. ರಾಜ್ಯದಲ್ಲಿ ಪ್ರತಿ ವರ್ಷ ಸಾವಿರಾರು ಮಂದಿ ಹಜ್ ಯಾತ್ರೆಗೆ ತೆರಳುತ್ತಾರೆ. 2025 ರಲ್ಲಿ 8 ಸಾವಿರ ಹಾಗೂ ಈ ಬಾರಿ 11 ಸಾವಿರ ಮಂದಿ ಹಜ್ ಯಾತ್ರೆ ತೆರಳಲಿದ್ದಾರೆ. ಸೌದಿ ಅರೇಬಿಯಾ, ಹಜ್ ಯಾತ್ರಿಕರು ಆರೋಗ್ಯ ತಪಾಸಣೆಯಲ್ಲಿ ದೃಢವಾಗಿರಬೇಕು ಎಂದು ತಿಳಿಸಿದೆ. ಅದರಂತೆ ರಾಜ್ಯ ಸರ್ಕಾರ ಆರೋಗ್ಯ ತಪಾಸಣೆ ನಡೆಸುತ್ತಿದೆ ಎಂದು ತಿಳಿಸಿದರು.

ಇಂದಿನಿಂದ ಮೈಸೂರಲ್ಲಿ ಆರೆಸ್ಸೆಸ್ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ

• **ಮೈಸೂರು:** ಏಕಾತ್ಮ ಮಾನವ ದರ್ಶನ-ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನವನ್ನು ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಮಾರ್ಚ್ 25ರಿಂದ ಮಾರ್ಚ್ 27ರ ವರೆಗೆ ಪ್ರಜ್ಞಾ ಪ್ರವಾಹ, ಕರ್ನಾಟಕ ಹಾಗೂ ಡಾ. ಶ್ಯಾಮಪ್ರಸಾದ ಮುಖರ್ಜಿ ರಿಸರ್ಚ್ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಲಾಗಿದೆ.





ಭಾರತೀಯ ದರ್ಶನ, ಆಧ್ಯಾತ್ಮಿಕತೆ ಮತ್ತು ಸಮಾಜಶಾಸ್ತ್ರಗಳ ಆಧಾರದ ಮೇಲೆ ವ್ಯಕ್ತಿ, ಸಮಾಜ ಹಾಗೂ ಪ್ರಕೃತಿ ನಡುವೆ ಸಮತೋಲನ ಮತ್ತು ಸೌಹಾರ್ದತೆಯನ್ನು ಸಾಧಿಸುವ ತತ್ವವೇ ಏಕಾತ್ಮ ಮಾನವ ದರ್ಶನ. ಈ ಸಮ್ಮೇಳನದಲ್ಲಿ ಭಾರತದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಸಚಿವರು, ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಸಾಮಾಜಿಕ ಮತ್ತು ರಾಜಕೀಯ ಶಾಸ್ತ್ರದ ತಜ್ಞರು ಹಾಗೂ ಚಿಂತಕರು ಭಾಗವಹಿಸಲಿದ್ದಾರೆ.

ಮಾರ್ಚ್ 25 ರಂದು ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ರಾಜ್ಯಪಾಲ ಥಾವರಚಂದ ಗೆಹ್ಲೋಟ್ .ಅವರು ಉದ್ಘಾಟಿಸಲಿದ್ದಾರೆ. ಎರಡನೆಯ ದಿನ ಮಾರ್ಚ್ 26ರಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನರವರು ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕೊನೆಯ ದಿನ ಮಾರ್ಚ್ 27 ರಂದು, ಸಮಾರೋಪ ಸಮಾರಂಭ ನಡೆಯಲಿದ್ದು, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊ.ಶಾಚಿತಿ ಶ್ರೀ ಭಾಗವಹಿಸಲಿದ್ದಾರೆ. ಇದೊಂದು ಸಂಪೂರ್ಣ ಶೈಕ್ಷಣಿಕ ಸಮ್ಮೇಳನವಾಗಿದ್ದು, ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕುಲಸಚಿವರು, ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಮುಕ್ತವಾಗಿ ಭಾಗವಹಿಸಬಹುದು.

ಸಮ್ಮೇಳನದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಅವಕಾಶ ನೀಡಲಾಗಿದೆ. ಭಾರತದ ಪರಂಪರೆ ಮತ್ತು ಸಾಧನೆಗಳ ಕುರಿತಾದ ಪ್ರದರ್ಶಿನಿಯನ್ನು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಉದ್ಘಾಟಿಸಲಿದ್ದು, ಮೂರೂ ದಿನಗಳ ಕಾಲ ವೀಕ್ಷಣೆಗೆ ಅವಕಾಶವಿರುತ್ತದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾಂಸ್ಕೃತಿಕ ಚಿಂತಕರು ಹಾಗೂ ಸಾರ್ವಜನಿಕರು ಪ್ರದರ್ಶಿನಿಯ ವೀಕ್ಷಣೆ ಮಾಡಬಹುದು.

ಬಾಡಿಗೆ ಕೊಟ್ಟದ್ದಷ್ಟೇ: ಕುಲಪತಿ

• **ಬೆಂಗಳೂರು:** ಪ್ರಜ್ಞಾ ಪ್ರವಾಹ ಸಂಸ್ಥೆ ವತಿಯಿಂದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯಲ್ಲಿ ಮಾ. 25 ರಿಂದ ಮೂರು ದಿನಗಳ ಕಾಲ ಏಕಾತ್ಮ ಮಾನವ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲು ವಿಶ್ವವಿದ್ಯಾಲಯದ ಘಟಿಕೋತ್ಸವ ಭವನವನ್ನು ಬಾಡಿಗೆಗೆ ನೀಡಲಾಗಿತ್ತು ಎಂದು ವಿವಿಯ ಕುಲಪತಿ ಪ್ರೊ. ಶರಣಪ್ಪ ವಿ ಹಲಸೆ ಅವರು ಉನ್ನತ ಶಿಕ್ಷಣ ಇಲಾಖೆಗೆ ಸ್ಪಷ್ಟನೆ ನೀಡಿದ್ದಾರೆ.ಸೋಮವಾರ ಮೇಲ್ಮನೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಈ ಕಾರ್ಯಕ್ರಮದ ಕುರಿತು ಉನ್ನತ ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಬಗ್ಗೆ ಕುಲಪತಿಗಳಿಂದ ವಿವರಣೆ ಕೇಳಲಾಗುವುದು ಎಂದು ತಿಳಿಸಿದ್ದರು. ಬಳಿಕ ಉನ್ನತ ಶಿಕ್ಷಣ ಇಲಾಖೆ, ಕುಲಪತಿ ಅವರಿಗೆ ಕಾರ್ಯಕ್ರಮದ ಬಗ್ಗೆ 24 ಗಂಟೆಯೊಳಗೆ ಸಂಪೂರ್ಣ ವರದಿ ಸಲ್ಲಿಸುವಂತೆ ಶೋಕಾಸ್ ನೋಟಿಸ್ ನೀಡಿತ್ತು. ಈ ಹಿನ್ನೆಲೆಯಲ್ಲಿ ಮಂಗಳವಾರ ತಮ್ಮ ವಿವರಣೆ ನೀಡಿರುವ ಪ್ರೊ. ಶರಣಪ್ಪ ವಿ ಹಲಸೆ, ವಿಶ್ವವಿದ್ಯಾಲಯದ ಆವರಣದಲ್ಲಿ ವಿಶಾಲ ಸಭಾಂಗಣ ಹೊಂದಿದೆ. ಆದ್ದರಿಂದ ಶೈಕ್ಷಣಿಕ, ಬೌದ್ಧಿಕ ಕಾರ್ಯಕ್ರಮಗಳನ್ನು ವಿವಿಧ ಸಂಘ ಸಂಸ್ಥೆಗಳು ಇಲ್ಲಿ ಆಯೋಜಿಸುತ್ತವೆ. ವಿಶ್ವವಿದ್ಯಾಲಯ ಬಾಡಿಗೆ ಆಧಾರದಲ್ಲಿ ಬಳಸಲು ಅನುಮತಿ ನೀಡುತ್ತದೆ ಎಂದು ತಿಳಿಸಿದರು. ಈ ಮಧ್ಯೆ, ಕುಲಪತಿಗಳ ಸ್ಪಷ್ಟನೆ ಹೊರತಾಗಿಯೂ, ರಾಜ್ಯ ಸರ್ಕಾರ ಬುಧವಾರದ ಕಾರ್ಯಕ್ರಮವನ್ನು ರದ್ದು ಮಾಡಿರುವುದಾಗಿ ಆದೇಶಿಸಿದೆ.

ರಮೇಶ್ ಬಾಬು ಪ್ರಶ್ನೆಗೆ ಉತ್ತರಿಸಿದ ಸಚಿವ ಡಾ. ಎಂ.ಸಿ. ಸುಧಾಕರ್

ವಿಧಾನ ಪರಿಷತ್‌ನಲ್ಲೂ ಸದ್ದು

• **ವಿಧಾನ ಪರಿಷತ್:** ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ 60 ವರ್ಷಗಳ ಸ್ಮರಣಾರ್ಥ ಮಾ. 25 ರಿಂದ ಮಾ. 27ರವರೆಗೆ ಹಮ್ಮಿಕೊಳ್ಳಲಾಗಿರುವ ಉಪನ್ಯಾಸ ಸಮ್ಮೇಳನವನ್ನು ಕೂಡಲೇ ರದ್ದು ಮಾಡುವಂತೆ ಸೂಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.



ಮೇಲ್ಮನೆಯಲ್ಲಿ ಶೂನ್ಯ ವೇಳೆ ಕಲಾಪದಲ್ಲಿ ಪ್ರಸ್ತಾಪಿಸಿದ ರಮೇಶ್ ಬಾಬು, ಮಾ.25 ರಿಂದ ಮೂರು ದಿನಗಳ ಕಾಲ ಶೈಕ್ಷಣಿಕ ಸಮ್ಮೇಳನವನ್ನ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಷ್ಟಾಚಾರಕ್ಕೆ ಅನುಗುಣವಾಗಿ ಸರ್ಕಾರದ ಪ್ರತಿನಿಧಿಗಳು ಹಾಗೂ ಶೈಕ್ಷಣಿಕ ತಜ್ಞರಿಗೆ ಮಾಹಿತಿ ನೀಡಿಲ್ಲ. ಸರ್ಕಾರದ ಶಿಷ್ಟಾಚಾರ ಬದಿಗೊತ್ತಿ ನಿಯಮ ಉಲ್ಲಂಘಿಸಲಾಗಿದೆ. ವೈಯಕ್ತಿಕ ಹಿತಾಸಕ್ತಿಗಾಗಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಕುಲಪತಿಗಳ ವಿರುದ್ಧ ಕ್ರಮ ಆಗಬೇಕೆಂದು ಒತ್ತಾಯಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಸಚಿವರು, ಪ್ರಜ್ಞಾ ಪ್ರವಾಹ ಸಂಸ್ಥೆ ಆಯೋಜಿಸಿರುವ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ಉದ್ಘಾಟನೆಗೆ ರಾಜ್ಯಪಾಲರನ್ನು ಆಹ್ವಾನಿಸಲಾಗಿದೆ. ಹಾಗೂ ಕೇಂದ್ರದ ಶಿಕ್ಷಣ ಸಚಿವರು ಭಾಗಿಯಾಗುತ್ತಿರುವುದಾಗಿ ತಿಳಿದುಬಂದಿದೆ. ಈ ಬಗ್ಗೆ ಪ್ರಶ್ನಿಸಿದಾಗ ಗೊತ್ತಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಉತ್ತರಿಸಿದ್ದಾರೆ ಎಂದು ತಿಳಿಸಿದರು. ಆಡಳಿತ ಮತ್ತು ಪ್ರತಿಪಕ್ಷದ ನಡುವಿನ ಮಾತಿನ ಚಕಮಕಿ ಹೆಚ್ಚಾಗುತ್ತಿದ್ದಂತೆ ಸಭಾಪತಿ ಪೀಠದಲ್ಲಿದ್ದ ಎಂ .ಕೆ.ಪ್ರಾಣೇಶ್ ಅವರು, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಸದಸ್ಯರ ಪ್ರಸ್ತಾಪಕ್ಕೆ ಸಚಿವರು ಉತ್ತರ ನೀಡಬಹುದು ಎಂದು ಸೂಚನೆ ನೀಡಿದರು.

ಬಳಿಕ ಎಂ.ಸಿ. ಸುಧಾಕರ್ ಅವರು, ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಬೇಕಾದ ಸಮ್ಮೇಳನದಲ್ಲಿ ರಾಜ್ಯಪಾಲರು, ಕೇಂದ್ರ ಶಿಕ್ಷಣ ಸಚಿವರು ಭಾಗವಹಿಸುತ್ತಿದ್ದು, ರಾಜ್ಯ ಸರ್ಕಾರದ ಯಾವುದೇ ಪ್ರತಿನಿಧಿಯನ್ನು ಆಹ್ವಾನಿಸದಿರುವುದು ತರವಲ್ಲ. ಈ ಮೂಲಕ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಕುರಿತು ಸಂಬಂಧಪಟ್ಟವರಿಂದ ವಿವರಣೆ ಕೇಳಲಾಗುವುದು ಎಂದರು. ವಿಶ್ವವಿದ್ಯಾಲಯಗಳು ಸ್ಥಳವನ್ನು ಬಾಡಿಗೆಗೆ ನೀಡಬಹುದೇ ಹೊರತು ಯಾವುದೇ ವಿಶ್ವವಿದ್ಯಾಲಯವು ಖಾಸಗಿ ಸಂಸ್ಥೆಗಳ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶವಿಲ್ಲ. ಆದರೆ, ಖಾಸಗಿ ಸಂಸ್ಥೆಗಳ ಪರವಾಗಿ ಕಾರ್ಯಕ್ರಮವನ್ನು ಆಯೋಜಿಸುವಂತಿಲ್ಲ. ಭಾನುವಾರ ಮಧ್ಯಾಹ್ನ ನನಗೆ ಈ ಬಗ್ಗೆ ತಿಳಿಯಿತು. ಈ ಕುರಿತು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳನ್ನು ಕರೆ ಮೂಲಕ ಕೇಳಿದಾಗ, ತಮಗೆ ಈ ಬಗ್ಗೆ ತಿಳಿದಿಲ್ಲ ಎಂದು ಅವರು ಉತ್ತರಿಸಿದ್ದರು.

ಸಂಪಾದಕೀಯ

ಸವಾಲುಗಳಿಗೆ ಸಿದ್ಧವಾಗಬೇಕಿದೆ

ಯುದ್ಧ ಮತ್ತು ಜಗತ್ತು, ಯುದ್ಧ ಮತ್ತು ಶಾಂತಿ–ಇವುಗಳ ಬಗ್ಗೆ ಮಾನವೇತಿಹಾಸದ ಆರಂಭದಿಂದಲೂ ಅನೇಕ ವ್ಯಾಖ್ಯಾನಗಳು ಬಂದಿವೆ. ಸಾಧಾರಣವಾಗಿ ಎಲ್ಲಾ ಕಾಲಘಟ್ಟಗಳಲ್ಲೂ ಜಗತ್ತು ಯುದ್ಧವನ್ನು ಎದುರಿಸಿರುವುದರಿಂದ ಯುದ್ಧ ಎಲ್ಲಾ ಕಾಲದಲ್ಲೂ, ಎಲ್ಲರಿಂದಲೂ ವಿಮರ್ಶೆಗೆ ಒಳಗಾಗಿದೆ. ಬದಲಾದ ಕಾಲದಲ್ಲಿ ಬದಲಾದ ಯುದ್ಧದ ಸ್ವರೂಪವನ್ನು ಕೂಡ ಜಗತ್ತು ನೋಡಿದೆ. ಯುದ್ಧದ ಸ್ವರೂಪ ಬದಲಾದರೂ ಅದರ ಪರಿಣಾಮಗಳು ಎಲ್ಲಾ ಕಾಲದಲ್ಲೂ ಒಂದೇ ಎನ್ನುವ ಮಂಡನೆ ಹಿಂದಿನಿಂದಲೂ ನಡೆಯುತ್ತಿರುವುದನ್ನು ನೋಡಿದ್ದೇವೆ. ಅಷ್ಟೇ ಏಕೆ ನಾಗರಿಕತೆಗಳ ಪ್ರಯಾಣ ಯುದ್ಧಗಳಿಂದಲೇ ನಡೆದಿದೆ ಎನ್ನುವ ಸಿದ್ಧಾಂತಗಳು ಇಂದಿಗೂ ಚರ್ಚೆಗೊಳಗಾಗುತ್ತಿವೆ. ಹಾಗಾಗಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಭಾರತ ಸಹಿತ ಎಲ್ಲಾ ದೇಶಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಇಂದು ಯಾರೂ, ಯಾರಿಗೂ ತರ್ಕ ಮಂಡನೆಗಳ ಮೂಲಕ ಹೇಳಿಕೊಳ್ಳಬೇಕಾಗಿಲ್ಲ. ಜಗತ್ತೇ ಒಂದು ಹಳ್ಳಿ ಎನ್ನುವ ವಾತಾವರಣದಲ್ಲಿ ಅದಿಂದು ಎಲ್ಲರ ಅನುಭವಕ್ಕೂ ಬಂದಿದೆ.



ಆದರೆ ಎಲ್ಲೋ ನಡೆಯುವ ಯುದ್ಧವನ್ನು ಇನ್ನೆಲ್ಲೋ ಎದುರಿಸುವುದು ಅಷ್ಟು ಸುಲಭವಲ್ಲ. ಆಟವನ್ನು ನೋಡುವಂತೆ ಯುದ್ಧವನ್ನಿಂದು ನೋಡಲಾಗುವುದಿಲ್ಲ. ಅದರಲ್ಲೂ ಒಂದು ದೇಶ ಇನ್ನೆಲ್ಲೋ ನಡೆಯುವ ಯುದ್ಧಕ್ಕೆ ತನ್ನ ದೇಶವನ್ನು ಸಿದ್ಧಗೊಳಿಸುವುದು ಇನ್ನೂ ಕಷ್ಟ. ಅದರಲ್ಲೂ ಸದ್ಯದ ಯುದ್ಧದ ಸಂದರ್ಭದಲ್ಲಂತೂ ಇನ್ನೂ ಕ್ಲಿಷ್ಟ. ಮಧ್ಯಪ್ರಾಚ್ಯದ ಯುದ್ಧ ಮಾನಸಿಕತೆಯನ್ನು ಎರಡು ಭಿನ್ನ ಧಾರೆಗಳು ಪ್ರತ್ಯೇಕವಾಗಿ ಬಿಂಬಿಸುತ್ತವೆ. ಇರಾನ್ ಪರ ಮತ್ತು ಅಮೆರಿಕ ಪರ ಎನ್ನುವ ದೊಡ್ಡ ಗುಂಪುಗಳಿವೆ. ಇಂಥ ಪರಿಸ್ಥಿತಿಯಲ್ಲಿ ಯುದ್ಧವನ್ನು ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಸಿದ್ಧವಾಗಬೇಕು ಎಂದರೆ ಅದು ಬೇರೆಯೇ ಚಿಂತನೆಯನ್ನು ಸೃಷ್ಟಿಸುವ ಅಪಾಯವಿರುತ್ತದೆ. ಈಗ ಭಾರತಕ್ಕೆ ಇರುವುದು ಅಂಥ ಸವಾಲು. ಅದು ತೈಲ ವ್ಯಾಪಾರದಿಂದ ಮತ್ತಷ್ಟು ಗೊಂದಲಮಯವಾಗಿ ಕಾಣಿಸುತ್ತಲೂ ಇದೆ. ಆದ್ದರಿಂದ ಈ ಯುದ್ಧ ಕೊಂಚ ಹೆಚ್ಚೇ ಎನಿಸುವಷ್ಟು ಆರ್ಥಿಕತೆಯ ಮೇಲೆ ಪರಿಣಾಮವನ್ನು ಬೀರಿದೆ. ಪರಿಸ್ಥಿತಿ ಹೀಗಿರುವುದರಿಂದ ನರೇಂದ್ರ ಮೋದಿಯವರು 2 ದಿನಗಳ ಹಿಂದೆ ದೇಶವನ್ನು ಸಜ್ಜುಗೊಳಿಸಲು ನೀಡಿದ ಕರೆ ಸಂದರ್ಭಕ್ಕೆ ಉಚಿತವೂ ಆಗಿದೆ. ಕೋವಿಡ್ ಕಾಲದಲ್ಲಿ ಎದುರಿಸಿದಂಥ ಸವಾಲನ್ನು ಎದುರಿಸಲು ಸಿದ್ಧವಾಗಬೇಕೆಂದ ಅವರ ಹೇಳಿಕೆಯೇ ಯುದ್ಧದ ಪರಿಣಾಮಗಳ ಭೀಕರತೆಯನ್ನು ಹೇಳುತ್ತದೆ. ಸರ್ಕಾರಗಳು ಎಷ್ಟೇ ವ್ಯವಸ್ಥೆಗಳನ್ನು ಮಾಡಬಹುದು. ಆದರೆ ಜನರ ಮಾನಸಿಕತೆ ಅದಕ್ಕೆ ಸಿದ್ಧವಾಗುವುದು ಅತಿ ಮುಖ್ಯ. ಉದಾಹರಣೆಗೆ ಎಲ್‌ಪಿಜಿ ಸಿಲಿಂಡರ್ ವಿಷಯದಲ್ಲಿ ಸಾಮಾನ್ಯ ಜನರೂ ಗಾಬರಿಗೊಂಡಿದ್ದಾರೆ. ಇನ್ನು ಯುದ್ಧ ಎಷ್ಟು ದಿನಗಳವರೆಗೆ ಮುಂದುವರಿಯುತ್ತವೆ ಎನ್ನುವುದರ ಮೇಲೆ ಇತರ ಪರಿಣಾಮಗಳು ನಿರ್ಧಾರವಾಗುತ್ತದೆ. ಇಂಧನ ಭದ್ರತೆ, ವ್ಯಾಪಾರೋದ್ಯಮ ಯಥಾಸ್ಥಿತಿಗೆ ಮರಳಲು ಕಾಲ ಕೂಡಿಬರಬೇಕು. ಅದಕ್ಕೆ ಯುದ್ಧ ನಿಲ್ಲಬೇಕು. ಒಂದು ವೇಳೆ ಯುದ್ಧ ಸದ್ಯಕ್ಕೆ ನಿಲ್ಲದು ಎಂಬ ಸಂದರ್ಭ ಬಂದರೂ ಭಾರತದ ರಾಜತಾಂತ್ರಿಕತೆ ಪರಿಸ್ಥಿತಿ ಎದುರಿಸಲು ಸಿದ್ಧವಾಗಬೇಕು. ನೇರವಾಗಿ ಪ್ರಧಾನಮಂತ್ರಿಯವರೇ ಮುಂದಿನ ದಿನಗಳನ್ನು ಸೂಚ್ಯವಾಗಿ ಹೇಳಿರುವುದರಿಂದ ದೇಶಕ್ಕೆ ಅಭಯದ ಭಾವನೆ ಮೂಡಿದೆ.

ಸಾಧಕನಿಗೆ ಬಾಧಕವಾಗುವ ಲೋಕವಾಸನೆ

ಪದಸಂಚಲನ

ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಸಾಧಕನು ವಾಸನೆಗಳನ್ನು ಮೀರಬೇಕೆಂಬುದು ಹಿರಿಯರ ಉಪದೇಶವಾಣಿ. ಯಾವುದೇ ಕ್ಷೇತ್ರದ ಸಾಧಕನಿಗೂ ಇದು ಅನ್ವಯ. ಅಧ್ಯಾತ್ಮಸಾಧಕನಿಗೆ ಇದು ಹೆಚ್ಚು ಅನ್ವಯವಾಗುವಂಥದ್ದು. ವಾಸನೆಗಳೆಂದರೆ, ಒಂದೇ ವಿಷಯಕವಾದ ಸಂಸ್ಕಾರಗಳ ಒಟ್ಟುರೂಪ. ಅದು ವ್ಯಕ್ತಿಯನ್ನು ತನ್ನತ್ತ ಸೆಳೆದುಕೊಳ್ಳುತ್ತದೆ. ವಾಸನೆಗಳು ನಮ್ಮ ಮನಸ್ಸಿನಲ್ಲಿ ಉಂಟಾಗುತ್ತವೆ. ಇವಕ್ಕೆ ಮೂಲ ಸಾಮಗ್ರಿಗಳು ನಮ್ಮ ಹಳೆಯ ಸಂಸ್ಕಾರಗಳೇ ಆಗಿವೆ. ಯಾವ ರೀತಿಯ ವಿಷಯಗಳ ಸಂಪರ್ಕಕ್ಕೆ ಬರುತ್ತೇವೆಯೋ ಅಂಥ ಸಂಸ್ಕಾರಗಳ ಸಂಗ್ರಹ ನಮ್ಮ ಮನಸ್ಸಿನಲ್ಲಿ ಉಂಟಾಗುತ್ತಿರುತ್ತದೆ. ಅವೇ ಕಾಲಾಂತರದಲ್ಲಿ ವಾಸನೆಗಳು ಎನಿಸಿಕೊಳ್ಳುತ್ತವೆ. ಜನ್ಮತಃ ಒಬ್ಬೊಬ್ಬರಿಗೆ ಒಂದೊಂದರಲ್ಲಿ ಆಸಕ್ತಿಯು ಬಂದಿರುತ್ತದೆ. ಇದಕ್ಕೆ ಕಾರಣ ವಾಸನೆಗಳೇ ಆಗಿವೆ. ಇವು ತನ್ನತ್ತ ಸೆಳೆದುಕೊಳ್ಳುವಂತೆ ಮಾಡಿ ವ್ಯಕ್ತಿಯನ್ನು ಪ್ರಚೋದಿಸುತ್ತವೆ. ಇಂಥ ಪ್ರಬಲ ವಾಸನೆಗಳಿಗೆ ಅನುಗುಣವಾಗಿ ವ್ಯಕ್ತಿಯು ಒಳ್ಳೆಯದನ್ನೋ ಕೆಟ್ಟದ್ದನ್ನೋ ಆಯ್ದುಕೊಳ್ಳುತ್ತಾನೆ ಮತ್ತು ಅದನ್ನೇ ಮಾಡುತ್ತಿರುತ್ತಾನೆ. ಹೀಗೆ ಆಯಾ ವಾಸನೆಯು ಆತನ ಕ್ರಿಯಾಕಲಾಪಗಳಿಗೆ ಕಾರಣವಾಗಿದೆ. ಒಬ್ಬ ವ್ಯಕ್ತಿಯ ಅಂತಃಕರಣದಲ್ಲಿ ಅಸಂಖ್ಯವಿಷಯಕವಾದ ವಾಸನೆಗಳಿರುತ್ತವೆ. ಆದರೆ ಕಾಲದಿಂದ ಪಕ್ವಗೊಂಡ ಪ್ರಬಲವಾಸನೆಗಳು ತಮ್ಮ ಕಾರ್ಯವನ್ನು ಆರಂಭಿಸುತ್ತವೆ. ಉಳಿದವುಗಳು ಕಾಯುತ್ತವೆ. ವ್ಯಕ್ತಿತ್ವವೆಂದರೆ ಆಯಾ ವ್ಯಕ್ತಿಯ ಒಟ್ಟಾರೆ ವಾಸನೆಗಳ ಮೊತ್ತವಲ್ಲದೇ ಮತ್ತೇನೂ ಅಲ್ಲ. ಇದನ್ನೇ ಅನುಭವಗಳ ಮೊತ್ತ ಎಂಬುದಾಗಿ ಸಾಮಾನ್ಯ ಭಾಷೆಯಲ್ಲಿ ಲೋಕದಲ್ಲಿ ವ್ಯವಹರಿಸಲಾಗುತ್ತದೆ.

ಸಾಧಕವಾದ ವಾಸನೆಗಳೂ ಇವೆ, ಬಾಧಕವಾದ ವಾಸನೆಗಳೂ ಇವೆ. ಒಳ್ಳೆಯ ವಿಷಯಕ್ಕೆ ಸಂಬಂಧಿಸಿದ್ದಾಗಿದ್ದರೂ, ಕೆಲವೊಮ್ಮೆ ಅತಿಯಾದಾಗ ಆ ವಾಸನೆಯು ಸಾಧಕನಿಗೆ ತೊಡಕಾಗಿ ಪರಿಣಮಿಸುತ್ತದೆ. ಹೀಗೆ ಸಾಧಕನಿಗೆ ತೊಡಕಾಗಿ ಪರಿಣಮಿಸಬಹುದಾದ ಮೂರು ರೀತಿಯ ವಾಸನೆಗಳನ್ನು ವಿವೇಕಚೂಡಾಮಣಿಯಲ್ಲಿ ಶ್ರೀಶಂಕರರು ಹೀಗೆ ಪ್ರದರ್ಶಿಸಿದ್ದಾರೆ:

ಲೋಕವಾಸನಯಾ ಜಂತೋಃ ಶಾಸ್ತ್ರವಾಸನಯಾಪಿ ಚ ।
ದೇಹವಾಸನಯಾ ಜ್ಞಾನಂ ಯಥಾವನ್ನೈವ ಜಾಯತೇ ॥ ಎಂಬುದಾಗಿ.

ಲೋಕವಾಸನೆ, ಶಾಸ್ತ್ರವಾಸನೆ ಮತ್ತು ದೇಹವಾಸನೆಗಳೆಂಬ ಮೂರುವಿಧ ವಾಸನೆಗಳಿಂದಾಗಿ ಯಥಾರ್ಥವಾದ ಜ್ಞಾನವು ಸಾಧಕನಿಗೆ ಉಂಟಾಗುವುದಿಲ್ಲ ಎಂಬುದು ಇದರ ಅರ್ಥ. ಅವುಗಳಲ್ಲಿ ಲೋಕವಾಸನೆ ಎಂಬುದು ಮೊದಲನೆಯದು. ಲೋಕವಾಸನೆ ಎಂದರೆ, ಲೋಕವು ತನ್ನನ್ನು ಹೊಗಳಲಿ ಎಂಬ ಇಚ್ಛೆ ಮತ್ತು ತನ್ನನ್ನು ನಿಂದಿಸಿಬಿಟ್ಟರೆ ಎಂಬ ಭಯ ಎಂಬುದಾಗಿ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ತಮ್ಮ ವಿವೇಕಚೂಡಾಮಣಿಯ ವ್ಯಾಖ್ಯಾನದಲ್ಲಿ ವಿವರಿಸಿದ್ದಾರೆ.

ಅಷ್ಟೇ ಅಲ್ಲ, ಎಲ್ಲ ವಾಸನೆಗಳಲ್ಲಿ ಈ ಲೋಕವಾಸನೆಯು ಅತ್ಯಂತ ಪ್ರತಿಬಂಧಕವಾಗಿದೆಎಂದು ಅವರು ತಿಳಿಸುತ್ತಾರೆ. ಯಾಕೆಂದರೆ, ಲೋಕವು ಸರ್ವಥಾ ಮೆಚ್ಚುವಂತೆ ಯಾರಿಂದಲೂ ಜೀವಿಸಲು ಸಾಧ್ಯವಿಲ್ಲ. ಏನಾದರೊಂದು ಆರೋಪವನ್ನು ಅದು ಮಾಡುತ್ತಲೇ ಇರುತ್ತದೆ. ಆಕ್ಷೇಪ ವನ್ನು ಮಾಡುತ್ತಲೇ ಇರುತ್ತದೆ. ಇಲ್ಲಿ ಲೋಕವೆಂದರೆ ಜನ ಅಥವಾ ಸಮಾಜ. ಜನರನ್ನು ತುಷ್ಟರನ್ನಾಗಿಸುವುದು ಮನುಷ್ಯಮಾತ್ರರಿಂದ ಸಾಧ್ಯವೇ ಇಲ್ಲ. ಯಾವುದೋ ಒಂದು ಒಳ್ಳೆಯ ಕೆಲಸ ಮಾಡಿದರೆ ಮತ್ತೊಂದು ಯಾವುದೋ ದೋಷವನ್ನು ಅದು ಎತ್ತಿ ಆಡುತ್ತದೆ. ಕೆಲವರು ಹೊಗಳಿದರೆ ಹೆಚ್ಚಿನವರು ತೆಗಳುತ್ತಾರೆ. ಇದಕ್ಕೆ ಕಾರಣ ಲೋಕದಲ್ಲಿ ಮತ್ತೊಬ್ಬನ ಗುಣವನ್ನು ಗ್ರಹಿಸುವ, ಅಂಗೀಕರಿಸುವ ಬುದ್ಧಿ ಇಲ್ಲದಿರುವುದು. ಗುಣವು ಎಲ್ಲಿಯೇ ಇದ್ದರೂ ಗ್ರಹಿಸಬೇಕೆಂಬ ಔದಾರ್ಯ ಮತ್ತು ಉನ್ನತ ಚಿಂತನೆ ಹೆಚ್ಚಿನವರಲ್ಲಿ ಇರುವುದಿಲ್ಲ. ಹಾಗಾಗಿ ಅಸೂಯೆ ಮೊದಲಾದ ಕಾರಣಗಳಿಂದ ಲೋಕವು ಆತನನ್ನು ನಿಂದಿಸುತ್ತದೆ. ಯಾವುದಕ್ಕೂ ಬಗ್ಗದಾದಾಗ ಮಾತ್ರ ಆ ವಿಷಯದಲ್ಲಿ ಮೌನವಾಗುತ್ತದೆ. ಆಗ ಮತ್ತೊಂದು ವಿಷಯದಲ್ಲಿ ಛಿದ್ರಾನ್ವೇಷಣೆಯನ್ನು ಮುಂದುವರೆಸುತ್ತದೆ. ಇದು ಲೋಕದ ಸ್ವಭಾವ. ಒಟ್ಟಿನಲ್ಲಿ ಲೋಕವನ್ನು ಮೆಚ್ಚಿಸುವುದಕ್ಕೆ ಸಾಧ್ಯವಿಲ್ಲ.

ಲೋಕವನ್ನು ಮೆಚ್ಚಿಸಬೇಕೆಂಬ ಇಚ್ಛೆ ಎಲ್ಲರಲ್ಲಿಯೂ ಇರುತ್ತದೆ. ಯಾರಾದರೂ ಹೊಗಳಿದರೆ ಎಲ್ಲರಿಗೂ ಖುಷಿಯಾಗುತ್ತದೆ. ಸ್ತುತಿಗಿರುವ ಆಕರ್ಷಣೆಯೇ ಅದು. ಹೆಚ್ಚೆಚ್ಚು ಜನ ಹೊಗಳಿದಷ್ಟೂ ವ್ಯಕ್ತಿಯು ತನ್ನಲ್ಲಿ ಉತ್ಕೃಷ್ಟತೆಯನ್ನು ಆರೋಪಿಸಿಕೊಳ್ಳುತ್ತಾನೆ. ಆಮೇಲೆ ಅದೇ ನಿಜವೆಂದು ಭಾವಿಸಲು ತೊಡಗುತ್ತಾನೆ. ತನ್ನಲ್ಲಿ ಇಲ್ಲದ ಗುಣವನ್ನೂ ತನ್ನಲ್ಲಿ ಆರೋಪಿಸಿಕೊಂಡು ತಾನು ಶ್ರೇಷ್ಠ ಎಂಬ ಭಾವವನ್ನು ಬೆಳೆಸಿಕೊಳ್ಳುತ್ತಾ ವಾಸ್ತವದಿಂದ ಆತ ದೂರ ಸರಿಯುತ್ತಾನೆ. ಆ ಕಾರಣಕ್ಕಾಗಿ ಲೋಕದ ಸ್ತುತಿಗಾಗಿ ಸಾಧಕನು ಇಚ್ಛಿಸಬಾರದೆಂಬುದಾಗಿ ಶಾಸ್ತ್ರವು ತಿಳಿಸುತ್ತದೆ. ಲೋಕದ ಸ್ತುತಿಯನ್ನು ಬಯಸುವವನು ಕ್ರಮೇಣ ಕಾಪಟ್ಯವನ್ನೇ ಹೊಂದುತ್ತಾನೆ. ಲೋಕದ ಹೊಗಳಿಕೆಯ ಅಭಿನಿವೇಶ ಆತನನ್ನು ಹೊಗಳಿಕೆಗಾಗಿ ಏನನ್ನಾದರೂ ಮಾಡುತ್ತಲೇ ಇರುವಂತೆ ಪ್ರೇರಿಸುತ್ತದೆ. ಅದರ ಹಾನಿಯೇನೆಂದರೆ, ಆ ವ್ಯಕ್ತಿಯು ತಾನು ಮಾಡಬೇಕಿದ್ದ ನಿಜವಾದ ಸಾಧನಾಮಾರ್ಗದಿಂದ ಚ್ಯುತನಾಗಿ, ಮತ್ತೊಬ್ಬರಿಗಾಗಿ ಜೀವಿಸಲು ತೊಡಗುತ್ತಾನೆ. ಸಾಧನಾಮಾರ್ಗದಲ್ಲಿರುವವನಿಗೆ ಈ ವಿಷಯದಲ್ಲಿ ಮೋಹವಿರಲೇಬಾರದು. ಹೊಗಳಿಕೆಗಳು ಶಾಶ್ವತವಲ್ಲ ಎಂಬ ಎಚ್ಚರಿಕೆ ಎಲ್ಲ ಸಾಧಕನಿಗೂ ಇರಲೇಬೇಕಾದದ್ದು. ಹಾಗಿದ್ದರೆ, ಸಾಧಕನು ಯಾವುದನ್ನು ಅವಲಂಬಿಸಬೇಕು ಎಂದರೆ, ಶಾಸ್ತ್ರದ ಮಾತನ್ನು ಮತ್ತು ಗುರುವಿನ ಉಪದೇಶವನ್ನು ಮಾತ್ರ ನೆಚ್ಚಬೇಕು. ಗುರುವು ಶಿಷ್ಯನಿಗೆ ಹಿತವಾದುದನ್ನು ಮಾತ್ರ ಉಪದೇಶಿಸುತ್ತಾನೆ. ಅಲ್ಲಿ ವಂಚನೆಯಾಗಲೀ, ಲಾಭದ ದೃಷ್ಟಿಯಾಗಲೀ ಇರುವುದಿಲ್ಲ. ಹಾಗಾಗಿ ಸಾಧಕನು ತನ್ನ ಗುರುವನ್ನು ನೆರಳಿನಂತೆ ಅನುಸರಿಸಲು ತೊಡಗಿದರೆ, ಲೋಕದ ಈ ವಾಸನೆಯಿಂದ ಕಳಚಿಕೊಳ್ಳಬಹುದು.

ಲೋಕವಾಸನೆಯ ಮತ್ತೊಂದು ಮುಖ, ಅದು ನಿಂದೆಯ ಭಯ. ಲೋಕವು ತನ್ನನ್ನು ನಿಂದಿಸಿಬಿಟ್ಟರೆ ಎಂಬ ಭಯವೂ ಕೂಡ ಆತನನ್ನು ಸಾಧನೆಯ ಹಾದಿಯಿಂದ ವಿಮುಖಗೊಳಿಸುತ್ತದೆ. ಪ್ರತಿಯೊಂದಕ್ಕೂ ಸಮಾಜ ತನ್ನನ್ನು ಮೆಚ್ಚುತ್ತಲೇ ಇರಬೇಕು ಎಂಬ ಭಾವ ಬರಲು ನಿಂದನೆಯ ಭಯವೂ ಕೂಡ ಕಾರಣ. ಆಗ ಲೋಕವಾಸನೆ ಇನ್ನಷ್ಟು ತೀವ್ರವಾಗಿ ತನ್ನ ಸ್ವಂತಿಕೆಯನ್ನು ಆತ ಮರೆಯುತ್ತಾನೆ. ತನ್ನ ಧ್ಯೇಯವನ್ನು ಮರೆತು, ಸಾಗಬೇಕಿರುವ ದೀರ್ಘವಾದ ಹಾದಿಯಿಂದ ಭ್ರಷ್ಟನಾಗುತ್ತಾನೆ. ಹಾಗಾಗಿ ಲೋಕವಾಸನೆಯನ್ನು ಬಿಡಬೇಕು ಎಂಬುದಾಗಿ ಶಾಸ್ತ್ರವು ತಿಳಿಸುತ್ತದೆ. ಈ ಜಗತ್ತಿನಲ್ಲಿ ಸಾವಿರಾರು ಪಂಥಗಳಿವೆ. ಸಾವಿರಾರು ಮಾರ್ಗಗಳಿವೆ. ಯಾವೊಂದರಲ್ಲಿ ನಡೆಯುತ್ತಿದ್ದರೂ ಇನ್ನೊಂದು ಸರಣಿಯವರು ಅವನನ್ನು ಖಂಡಿಸುತ್ತಾರೆ. ಶಾಸ್ತ್ರಗಳೂ ನೂರಾರು. ಅದನ್ನು ಇಟ್ಟುಕೊಂಡು ವಾದಿಸುವವರೂ ನೂರಾರು. ಅವರು ಹೇಳಿದ್ದನ್ನು ಇವರೂ, ಇವರು ಹೇಳಿದ್ದನ್ನು ಮತ್ತೊಬ್ಬರೂ ಖಂಡಿಸುತ್ತಲೇ ತಮ್ಮ ತಮ್ಮ ವಾದವನ್ನು ಮಾಡುತ್ತಿರುತ್ತಾರೆ. ಲೋಕದ ಖಂಡನೆಗೆ ಒಳಗಾಗದ ಯಾವೊಂದೂ ಇಲ್ಲಿಲ್ಲ. ಒಳ್ಳೆಯ ಎಷ್ಟೇ ಕೆಲಸವನ್ನು ಮಾಡುತ್ತಿದ್ದರೂ, ಮಾಡಿರದ ಇನ್ನೊಂದು ಕೆಲಸವನ್ನು ತೋರಿಸಿ, ನೀನು ಇದನ್ನು ಮಾಡಿಲ್ಲವಲ್ಲ. ಉಳಿದದ್ದನ್ನೆಲ್ಲ ಮಾಡಿ ಏನು ಪ್ರಯೋಜನ ಎಂದು ಕೇಳುತ್ತದೆ. ಸಾಧನೆಯ ಹಾದಿಯಲ್ಲಿಯೇ ಇದ್ದರೂ ಅದು ಸರಿಯಲ್ಲ, ಇದು ಸರಿಯಲ್ಲ ಎಂಬುದಾಗಿ ಅನೇಕಚಿತ್ತವಿಭ್ರಾಂತರನ್ನಾಗಿ ಮಾಡುತ್ತದೆ. ಹಾಗಾಗಿ ಈ ಆಗ್ರಹದಿಂದ ಸಾಧಕನು ಮುಕ್ತನಾಗದ ಹೊರತೂ ಆತ ದೀರ್ಘವಾದ ಹಾದಿಯಲ್ಲಿ ನಿರುಮ್ಮಳವಾಗಿ ಸಾಗಲು ಸಾಧ್ಯವಿಲ್ಲ. ತನ್ನನ್ನು ತಾನು ಮಾಡುವ ಕಾರ್ಯದಿಂದ ಗುರುತಿಸಬೇಕು, ಹೊಗಳಬೇಕು ಎಂಬ ಮನ್ನಣೆಯ ದಾಹ ಉಂಟಾದಷ್ಟೂ ಅದು ಆತನನ್ನು ತನ್ನ ಸ್ಥಾನದಿಂದ ಕೆಳಗಿಳಿಸುತ್ತಲೇ ಇರುತ್ತದೆ. ಕೆಳಗಿಳಿದದ್ದು ಗೊತ್ತಾಗುವುದಿಲ್ಲ ಅಷ್ಟೇ.

ವಿದ್ಯಾರಣ್ಯಸ್ವಾಮಿಗಳು ತಮ್ಮ ಜೀವನ್ಮುಕ್ತಿವಿವೇಕವೆಂಬ ಗ್ರಂಥದಲ್ಲಿ ಈ ವಿಷಯದ ಬಗ್ಗೆ ವಿಸ್ತೃತವಾಗಿ ತಿಳಿಸಿದ್ದಾರೆ. ಅದರಲ್ಲಿ ಕೋ ಲೋಕಮಾರಾಧಯಿತುಂ ಸಮರ್ಥಃ? ಎಂದು ಮಾರ್ಮಿಕವಾಗಿ ಕೇಳುತ್ತಾರೆ. ಲೋಕವನ್ನು ರಂಜಿಸಲು ಯಾರು ತಾನೇ ಸಮರ್ಥನಾದಾನು ಎಂಬುದಾಗಿ. ಅದರಲ್ಲಿ ಬರುವ ಮತ್ತೊಂದು ಶ್ಲೋಕ ಹೀಗಿದೆ:

ವಿದ್ಯತೇ ನ ಖಲು ಕಶ್ಚಿದುಪಾಯಃ ಸರ್ವಲೋಕಪರಿತೋಷಕರೋ ಯಃ।
ಸರ್ವಥಾ ಸ್ವಹಿತಮಾಚರಣೀಯಂ ಕಿಂ ಕರಿಷ್ಯತಿ ಜನೋ ಬಹುಜಲ್ಪಃ॥

ಎಂಬುದಾಗಿ. ಅಂದರೆ, ಎಲ್ಲ ಜನರನ್ನೂ ಒಪ್ಪಿಸುವ, ಮೆಚ್ಚಿಸುವ ಉಪಾಯವು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಹೀಗಿರುವಾಗ ಸರ್ವಥಾ ಆತ್ಮಕಲ್ಯಾಣಕ್ಕಾಗಿ ವ್ಯಕ್ತಿಯು ನಿರಂತರವಾಗಿ ತೊಡಗಿಕೊಳ್ಳಬೇಕು. ಜನರು ಬಹಳವಾಗಿ ಹಲುಬುವ ಸ್ವಭಾವದವರು. ಹಾಗಾಗಿ ತನಗೆ ಮತ್ತು ಪರರಿಗೆ ಒಳಿತನ್ನೇ ಸರ್ವದಾ ಅನುಸರಿಸುತ್ತಾ ಮುನ್ನಡೆಯುತ್ತಿರಬೇಕು. ತನ್ನ ಸಂಪ್ರದಾಯ, ತನ್ನ ಗುರೂಪದೇಶ, ತನ್ನ ಧರ್ಮ, ತನ್ನ ಕರ್ತವ್ಯಕ್ಕೆ ಅನುಗುಣವಾಗಿ ಯಾವುದೇ ಮೆಚ್ಚುಗೆಯನ್ನು ಬಯಸದೇ, ನಿರ್ಲಿಪ್ತವಾಗಿ ಮಾಡುತ್ತ ಹೋದಷ್ಟೂ ಲೋಕವು ನಮ್ಮನ್ನು ಅನುಸರಿಸಲು ತೊಡಗುತ್ತದೆ. ಎಲ್ಲಿ ನಾವು ಲೋಕವನ್ನು ಅನುಸರಿಸುವುದನ್ನು ನಿಲ್ಲಿಸುತ್ತೇವೋ ಅಲ್ಲಿಂದ ನಮ್ಮ ಒಳಿತಿನ ಪಯಣ ಆರಂಭವಾಗುತ್ತದೆ. ಲೋಕಕ್ಕೆ ಕಿವಿಗೊಟ್ಟರೆ ನಾವು ದಿಕ್ಕಿಲ್ಲದಂತೆ ಆಗುತ್ತೇವೆ. ಈ ದೃಷ್ಟಿಯಿಂದಲೇ ಕೃಷ್ಣನು ಭಗವದ್ಗೀತೆಯಲ್ಲಿ ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋ ಯೇನ ಕೇನಚಿತ್ ಎಂಬುದಾಗಿ ಹೇಳಿದ್ದು. ಹೀಗೆ ಲೋಕವಾಸನೆಯನ್ನು ಗೆಲ್ಲದವನು ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ವಸ್ತುತಃ ಲೋಕವಾಸನೆಯನ್ನು ಗೆಲ್ಲುವುದೇ ನಿಜವಾದ ಸಾಧನೆ.

ಸುಭಾಷಿತಕಾರನು ಕೂಡ ಇದನ್ನೇ ಹೇಳುತ್ತಾನೆ.

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು....

ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ ಎಂಬುದಾಗಿ. ಸಾಕ್ಷಾತ್ ಪರಮಾತ್ಮನೇ ಆಗಿರುವ ಶ್ರೀ ರಾಮಚಂದ್ರನನ್ನೂ, ಲಕ್ಷ್ಮೀದೇವಿಯೇ ಆಗಿರುವ ಸೀತಾಮಾತೆಯನ್ನೇ ಲೋಕವು ಬಿಡಲಿಲ್ಲ ಎಂದಾದರೆ ಸಾಮಾನ್ಯರ ವಿಷಯದಲ್ಲಿ ಹೇಳುವುದೇನಿದೆ?

ಟ್ರಂಪ್ ಬಾಲ ಮಡಚಿದರೆ? ಅಥವಾ...

ಟ್ರಂಪ್ ಹಠಾತ್ತನೆ ಇರಾನ್ ಮೇಲಿನ ದಾಳಿಗೆ 5 ದಿನಗಳ ವಿರಾಮ ಘೋಷಿಸಲು ಕಾರಣವೇನು? ಮಿಲಿಟರಿ ಕಾರಣವೆ ಅಥವಾ ಆರ್ಥಿಕ ಒತ್ತಡ ಕಾರಣವೆ? ಅಥವಾ ಶೇರು ಮಾರುಕಟ್ಟೆಯಲ್ಲಿ 'ಆಟವಾಡಲು' ಈ ಘೋಷಣೆ ಮಾಡಲಾಯಿತೆ ?

ದಿನೇಶ್

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಠಾತ್ತನೆ ಇರಾನ್ ಮೇಲಿನ ದಾಳಿಯನ್ನು 5 ದಿನಗಳ ಮಟ್ಟಿಗೆ ಸ್ಥಗಿತಗೊಳಿಸಿದ್ದಾರೆ. ಇದೇ ಟ್ರಂಪ್ ಕೆಲವೇ ಗಂಟೆಗಳ ಮೊದಲಷ್ಟೇ ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್ ಹಿಡಿತ ವನ್ನು ಮುಕ್ತಗೊಳಿಸುವುದಾಗಿ ಗಡುವು ವಿಧಿಸಿ ಎಚ್ಚರಿಕೆ ನೀಡಿದ್ದರು.

ಬಳಿಕ ಅವರ ವರಸೆ ಬದಲಾಯಿತು. "ಇರಾನ್‌ನೊಂದಿಗೆ ಫಲಪ್ರದ ಮಾತುಕತೆಯ ಬಳಿಕ 5 ದಿನ ದಾಳಿ ನಿಲ್ಲಿಸಲು ನಿರ್ಧರಿಸಲಾಗಿದೆ. ಇರಾನ್ ಜತೆಗೆ ಇನ್ನಷ್ಟು ಮಾತುಕತೆ ನಡೆಯಲಿದೆ" ಎಂದು ಹೇಳಿ ಅಚ್ಚರಿ ಮೂಡಿಸಿದರು. ಆದರೆ ಇರಾನ್ ತಕ್ಷಣವೇ ಇದಕ್ಕೆ ಪ್ರತಿಕ್ರಿಯಿಸಿ, ಈ ರೀತಿ ಮಾತುಕತೆ ನಡೆದಿರುವುದನ್ನು ನಿರಾಕರಿಸಿತು. ಇದು ಅಮೆರಿಕವು ಸೋಲೊಪ್ಪಿಕೊಂಡ ಸಂಕೇತ ಎಂದು ಬಣ್ಣಿಸಿತು. ಕುತೂಹಲಕರ ವಿಷಯವೆಂದರೆ ಟ್ರಂಪ್ 5 ದಿನಗಳ ವಿರಾಮ ಘೋಷಿಸಿದೊಡನೆ ಜಾಗತಿಕ ತೈಲ ಬೆಲೆಯಲ್ಲಿ ಇಳಿಕೆಯಾಯಿತು. ಶೇರು ಮಾರುಕಟ್ಟೆಗಳು ಒಮ್ಮೆಗೆ ಏರಿಕೆ ಕಂಡವು.

ಒಮ್ಮೆಗೆ ಎಲ್ಲರ ಮನದಲ್ಲಿ ಪ್ರಶ್ನೆ ಮೂಡತೊಡಗಿತು. ಟ್ರಂಪ್ ಯುದ್ಧಕ್ಕೆ ವಿರಾಮ ಘೋಷಿಸಿದ್ದು ಶೇರು ಮಾರುಕಟ್ಟೆಯನ್ನು ಉತ್ತೇಜಿಸುವ ತಂತ್ರವಾಗಿಯೆ? ಆರಂಭಶೂರತ್ವ ತೋರುವ ಟ್ರಂಪ್ ಕೊನೆಗೊಮ್ಮೆ ಅಂಜಿಕೆಯಿಂದ ಬಾಲ ಮಡಚುತ್ತಾರೆಯೆ? ಅಮೆರಿಕದಲ್ಲಿ Trump Always Chickens Out (TACO) ಎಂಬ ಮಾತು ಇತ್ತೀಚೆಗೆ ಪ್ರಸಿದ್ಧಿ ಪಡೆದಿದೆ. ಅಂದರೆ ಆರಂಭದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಬಹಳ ಶೌರ್ಯದ ಮಾತನಾಡುವ ಟ್ರಂಪ್ ಕೊನೆಗೊಮ್ಮೆ ಬಾಲ ಮಡಚುತ್ತಾರೆ ಎಂಬುದಾಗಿ. ತೆರಿಗೆ ಹೇರಿಕೆಯಿಂದ ಹಿಡಿದು ಬಹಳಷ್ಟು ವಿಷಯಗಳಲ್ಲಿ ಟ್ರಂಪ್ ಇದೇ ರೀತಿಯ ವರ್ತನೆ ತೋರಿದ ಹಿನ್ನೆಲೆಯಲ್ಲಿ ಮಾಧ್ಯಮವೊಂದರ ಅಂಕಣಕಾರ ರಾಬರ್ಟ್ ಆರ್ಮ್‌ಸ್ಟ್ರಾಂಗ್ ಈ ಪದವನ್ನು ಸೃಷ್ಟಿಸಿದ್ದಾರೆ.

ಟ್ರಂಪ್‌ರ ಕಠಿಣ ನಿರ್ಧಾರಗಳು ಅಮೆರಿಕದ ಶೇರು ಮಾರುಕಟ್ಟೆಯಲ್ಲಿ ಭಾರೀ ಕುಸಿತಕ್ಕೆ ಕಾರಣವಾದಾಗಲೆಲ್ಲ ಟ್ರಂಪ್ ಒತ್ತಡಕ್ಕೆ ಮಣಿಯುತ್ತಾರೆನ್ನುವುದು ಸಾಬೀತಾಗಿದೆ. ಪ್ರಸಕ್ತ ಪರಿಸ್ಥಿತಿ ಹಾಗೂ ಇತ್ತೀಚಿನ ಬೆಳವಣಿಗೆಗಳು ಕೂಡಾ ಇದೇ ಸ್ಥಿತಿಯನ್ನು ಹೋಲುತ್ತಿದೆ ಎಂದು ವಿಶ್ಲೇಷಣಾಕಾರರು ನುಡಿಯುತ್ತಿದ್ದಾರೆ. ಒಂದನೆಯದಾಗಿ, ಟ್ರಂಪ್ ಇಸ್ರೇಲಿನ ಜತೆಗೂಡಿ ಇರಾನ್ ಮೇಲೆ ಹಠಾತ್ತನೆ ಯುದ್ಧ ಸಾರುತ್ತಾರೆ. ಇದರಿಂದ ತೈಲ ಪೂರೈಕೆ ಜಾಗತಿಕವಾಗಿ ಅಸ್ತವ್ಯಸ್ತವಾಗುತ್ತದೆ. ತೈಲ ಬೆಲೆ ಬ್ಯಾರೆಲ್‌ಗೆ 100 ಡಾಲರ್ ದಾಟುತ್ತದೆ. ಎರಡನೆ ಹಂತದಲ್ಲಿ, ತೈಲ ಬೆಲೆ ಏರಿಕೆಯಿಂದಾಗಿ ಅಮೆರಿಕದಲ್ಲೂ ಹಣದುಬ್ಬರ ಉಂಟಾಗುತ್ತದೆ. ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ವಾಲ್‌ಸ್ಟ್ರೀಟ್‌ನಲ್ಲಿ ಶೇರುಧಾರಣೆ ಕುಸಿಯುತ್ತದೆ. ಮೂರನೇ ಹಂತದಲ್ಲಿ, ಟ್ರಂಪ್ ಅನಿರೀಕ್ಷಿತ ವಾಗಿ 5 ದಿನಗಳ ಕದನವಿರಾಮ ಘೋಷಿಸುತ್ತಾರೆ. ಶೇರು ಮಾರುಕಟ್ಟೆ ಒಮ್ಮೆಗೆ ಚೇತರಿಕೆ ಕಾಣುತ್ತದೆ. ತೈಲ ಬೆಲೆ ಕುಸಿಯು ತ್ತದೆ. ಇದು TACO ಕ್ಷಣ ಎಂಬುದಾಗಿ ಅಮೆರಿಕದಲ್ಲಿ ವಿಶ್ಲೇಷಿಸುತ್ತಿದ್ದಾರೆ. ಅಮೆರಿಕದ ಹೂಡಿಕೆದಾರರ ಪಾಲಿಗಂತೂ ಟ್ರಂಪ್‌ರ ಈ ಚರ್ಯೆಯು ಚಿರಪರಿಚಿತ ಎಂಬಂತಾಗಿದೆ.

ಆರ್ಥಿಕ ಒತ್ತಡಕ್ಕೆ ಮಣಿಯುವ ಟ್ರಂಪ್

ಟ್ರಂಪ್ ಅವರು ಆರ್ಥಿಕ ಒತ್ತಡಕ್ಕೆ ಬೇಗ ಮಣಿಯುತ್ತಾರೆ ಎಂಬ ಮಾತು ಈಗ ಹೆಚ್ಚು ಪ್ರಚಲಿತದಲ್ಲಿದೆ. ಅಮೆರಿಕದಲ್ಲಿ ಶೇರು ಮಾರುಕಟ್ಟೆ ತೀವ್ರ ಕುಸಿತ ಕಂಡಾಗ, ತೈಲ ಬೆಲೆ ಏರಿಕೆಯಾದಾಗ, ಟ್ರಂಪ್‌ರ ನೀತಿಯು ತಕ್ಷಣವೇ ಬದಲಾಗುತ್ತದೆ. ಮೊದಲಿಗೆ ಶೇರು ಮಾರುಕಟ್ಟೆಯಲ್ಲಿ ಹೆದರಿಕೆ ಹುಟ್ಟಿಸಿ, ಬಳಿಕ ನಿರಾಳತೆ ಸೃಷ್ಟಿಸಿ, ನಂತರ ಮಾರುಕಟ್ಟೆಯು ಏರುವಂತೆ ಮಾಡುವುದು ಟ್ರಂಪ್‌ರ ಕಾರ್ಯತಂತ್ರವೂ ಆಗಿಬಿಟ್ಟಿದೆ. ಆದರೆ, ಈ ಹಿಂದೆ ತೆರಿಗೆ ಏರಿಕೆಯ ಕೋಲಾಹಲವನ್ನು ತಣಿಸಲು ಟ್ರಂಪ್ ಶಕ್ತರಾದರೂ ಯುದ್ಧದಿಂದ ಉಂಟಾಗಿರುವ ಶೇರು ಮಾರುಕಟ್ಟೆ ಕೋಲಾಹಲವನ್ನು ಶಮನಗೊಳಿಸಲು ಟ್ರಂಪ್ ಪೂರ್ಣ ಶಕ್ತರಾಗದಿರಲೂ ಬಹುದು ಎಂದು ಪರಿಣತರು ಎಚ್ಚರಿಸುತ್ತಾರೆ. ಯುದ್ಧದಿಂದ ಹೊರಬರುವುದು ಅಷ್ಟು ಸುಲಭವಲ್ಲ. ಯುದ್ಧವು ಇನ್ನಷ್ಟು ಕಾಲ ಮುಂದುವರಿದರೆ ಅದು ತೈಲ ಬೆಲೆ ಏರಿಕೆಗೆ ಕಾರಣವಾಗಲಿದೆ, ಹಣದುಬ್ಬರ ಹೆಚ್ಚಿಸಲಿದೆ ಹಾಗೂ ಶೇರು ಮಾರುಕಟ್ಟೆ ಅಸ್ತವ್ಯಸ್ತಗೊಳಿಸಲಿದೆ ಎಂದೂ ಅವರು ಎಚ್ಚರಿಕೆ ನೀಡುತ್ತಾರೆ.



ಹೊಣೆ ಜಾರಿಸಲು ಟ್ರಂಪ್ ಯತ್ನ

ಇರಾನ್ ಮೇಲೆ ಯುದ್ಧ ಸಾರುವುದು ತನ್ನ ನಿರ್ಣಯವಲ್ಲ ಎಂದು ಹೇಳಿ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳಲು ಟ್ರಂಪ್ ಈಗ ಯತ್ನಿಸುತ್ತಿದ್ದಾರೆ. ಇರಾನ್ ಮೇಲೆ ಯುದ್ಧ ಸಾರುವ ನಿರ್ಧಾರ ತಾಳಿದ್ದು ಪೆಂಟಗನ್ ಮುಖ್ಯಸ್ಥ ಪೀಟ್ ಹೆಗ್‌ಸೆತ್ ಎಂದು ಹೇಳುವ ಮೂಲಕ ಅವರನ್ನು ಬಲಿಪಶು ಮಾಡಲು ಪ್ರಯತ್ನಿಸುತ್ತಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಟ್ರಂಪ್‌ರವರು ತಮ್ಮ ಬಳಿಯೇ ಕುಳಿತಿದ್ದ ಪೀಟ್ ಹೆಗ್‌ಸೆತ್‌ರತ್ತ ತಿರುಗಿ "ಪೀಟ್, ಇರಾನ್ ಮೇಲೆ ಯುದ್ಧ ಸಾರೋಣವೆಂದು ನೀನು ಹೇಳಿದ್ದಲ್ಲವೆ. ಅವರು ಪರಮಾಣು ಬಾಂಬು ಹೊಂದಬಾರದೆಂಬ ಕಾರಣಕ್ಕಾಗಿ ಲೆಟ್ಸ್ ಡೂ ಇಟ್ ಎಂದು ಹೇಳಿದ್ದಿಯಲ್ಲವೆ" ಎಂದು ನುಡಿದರು.

ಟ್ರಂಪ್‌ರ TACO ಕ್ಷಣಗಳು

ಟ್ರಂಪ್‌ರ ಕೆಲವು ನಿರ್ಧಾರಗಳು ಶೇರು ಮಾರುಕಟ್ಟೆಯಲ್ಲಿ ತಲ್ಲಣ ಹುಟ್ಟಿಸಿದಾಗಲೆಲ್ಲ ಟ್ರಂಪ್ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರದಿಂದ ಹಿಂದೆ ಸರಿದ ಹಲವಾರು ನಿದರ್ಶನಗಳು ಕಾಣ ಸಿಗುತ್ತವೆ. ಕಳೆದ ವರ್ಷ ಏಪ್ರಿಲ್ 2ರಂದು ಟ್ರಂಪ್ ತೆರಿಗೆ ಹೇರಿಕೆಯನ್ನು ಪ್ರಕಟಿಸಿದ್ದರು. ಇದರಿಂದ ಶೇರು ಮಾರುಕಟ್ಟೆಯಲ್ಲಿ ಕೋಲಾಹಲವಾಗಿತ್ತು. ಶೇರು ಬೆಲೆಗಳು ತೀವ್ರವಾಗಿ ಕುಸಿದಿದ್ದವು. ಮರುದಿನವೇ ಟ್ರಂಪ್ ತಮ್ಮ ನಿರ್ಧಾರದಿಂದ ಹಿಂದೆ ಸರಿದು, ತೆರಿಗೆ ಹೇರಿಕೆಯ ಮೇಲೆ 90 ದಿನಗಳ ವಿರಾಮ ಘೋಷಿಸಿರುವುದಾಗಿ ಪ್ರಕಟಿಸಿದ್ದರು. ಅವರು ಹಾಗೆ ಹೇಳಿದೊಡನೆ ಶೇರು ಮಾರುಕಟ್ಟೆಯು ಹಿಂದೆಂದೂ ಕಾಣದ ಏರಿಕೆ ಕಂಡಿತ್ತು. ಗ್ರೀನ್‌ಲ್ಯಾಂಡ್‌ಗೆ ಸಂಬಂಧಿಸಿಯೂ ಟ್ರಂಪ್ ಇದೇ ರೀತಿ ಉಲ್ಟಾ ಹೊಡೆದಿದ್ದರು. ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವುದಾಗಿ ಹೇಳುತ್ತಾ ಬಂದಿದ್ದ ಟ್ರಂಪ್ ಅದರಿಂದ ಶೇರು ಮಾರುಕಟ್ಟೆ ಕುಸಿದು, ಡಾಲರ್ ಮೌಲ್ಯವೂ ಕುಸಿತ ಕಂಡ ಮೇಲೆ ತಮ್ಮ ನಿರ್ಧಾರ ಬದಲಿಸಿ "ಬಲಪ್ರಯೋಗದಿಂದ ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವುದಿಲ್ಲ" ಎಂದು ಪ್ರಕಟಿಸಿದರು. ಆ ಬಳಿಕ ಶೇರು ಮಾರುಕಟ್ಟೆ ಚೇತರಿಕೆ ಕಂಡಿತ್ತು.

ಲಾಭ ಮಾಡಿಕೊಂಡವರಾರು?



ಟ್ರಂಪ್ ಘೋಷಣೆಯಿಂದ ಶೇರು ಮಾರುಕಟ್ಟೆಯಲ್ಲಿ ಉಂಟಾದ ಏರುಪೇರಿನಿಂದ ಕೆಲವರು ಅತ್ಯಧಿಕ ಲಾಭ ಮಾಡಿಕೊಂಡಿರುವ ವರದಿಯಾಗಿದೆ. ಅವರಿಗೆ ಟ್ರಂಪ್ ಇಂತಹ ಘೋಷಣೆ ಹೊರಡಿಸುವ ಕುರಿತಂತೆ ಮುನ್ಸೂಚನೆ ಇತ್ತೆ ಎಂಬ ಕುರಿತಂತೆ ಅಮೆರಿಕದ ಕೆಲವು ಆರ್ಥಿಕ ಪರಿಣತರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಟ್ರಂಪ್ ಘೋಷಣೆ ಮಾಡಿದ ಸಮಯ, ಸಂದರ್ಭ ಹಾಗೂ ತೈಲ ಶೇರುಗಳ ಮಾರಾಟ ಮತ್ತು ಖರೀದಿಗಳು ಇಂತಹ ಅನುಮಾನವನ್ನು ಪುಷ್ಟೀಕರಿಸಿವೆ. ಟ್ರಂಪ್ ಯುದ್ಧ ವಿರಾಮ ಘೋಷಿಸಿದ ಹಾಗೂ ಬಳಿಕ ಇರಾನ್ ಅದನ್ನು ನಿರಾಕರಿಸಿದ ನಡುವಿನ ಕೇವಲ 20 ನಿಮಿಷಗಳ ಅಂತರದಲ್ಲಿ ಕೋಟ್ಯಂತರ ಡಾಲರ್‌ಗಳಷ್ಟು ಲಾಭ ಮಾಡಿಕೊಂಡವರಾರು ಎಂಬ ಪ್ರಶ್ನೆ ಎದ್ದಿದೆ.

ಶೇರು ಮಾರುಕಟ್ಟೆ ಏಳುಬೀಳು

ಟ್ರಂಪ್ ಯುದ್ಧ ಸ್ಥಾಗಿತ್ಯವನ್ನು ಘೋಷಿಸಿದ ಬೆಳವಣಿಗೆಗೆ ಶೇರು ಮಾರುಕಟ್ಟೆ ಸ್ಪಂದಿಸಿದ ಬಗೆಯನ್ನೆ ನೋಡಿ. ಟ್ರಂಪ್ ಯುದ್ಧ ವಿರಾಮ ಘೋಷಿಸಿದ ಬೆನ್ನಿಗೇ ತೈಲ ಬೆಲೆಯಲ್ಲಿ ಶೇ.10.9ರಷ್ಟು ಇಳಿಕೆಯಾಯಿತು. ಕೆಲದಿನಗಳ ಹಿಂದೆ ಬ್ಯಾರೆಲ್‌ಗೆ 120 ಡಾಲರ್‌ನ ಸಮೀಪ ಬಂದಿದ್ದ ದರವು 99.44 ಡಾಲರ್‌ಗೆ ಕುಸಿಯಿತು. ಶೇರು ಮಾರುಕಟ್ಟೆ ಕೂಡಾ ಗೂಳಿಯೋಟ ಕಂಡಿತು. ಆದರೆ ಟ್ರಂಪ್ ಹೇಳಿಕೆಯನ್ನು ಇರಾನ್ ನಿರಾಕರಿಸಿ, ಯಾವುದೇ ಮಾತುಕತೆ ನಡೆದಿಲ್ಲ ಎಂದು ಹೇಳಿದೊಡನೆ ತೈಲ ಬೆಲೆ ಮತ್ತೆ ಏರಿಕೆ ಕಂಡಿತು ಹಾಗೂ ಶೇರು ಮಾರುಕಟ್ಟೆ ಕುಸಿಯಿತು. ಈ ಕೆಲವೇ ನಿಮಿಷಗಳ ವ್ಯವಹಾರದಲ್ಲಿ ಹಲವರು ಲಾಭ ಮಾಡಿಕೊಂಡರು. ಹಲವರು ಹಣ ಕಳಕೊಂಡರು. ಅಮೆರಿಕದ ಪತ್ರಕರ್ತರೊಬ್ಬರು ಬರೆದರು "ಟ್ರಂಪ್ ತಮ್ಮ ಕಾರಿನಿಂದಿಳಿದು ತಮ್ಮ ಡೆಸ್ಕ್ ತಲುಪುವ ವೇಳೆಗೆ ಶೇರು ಮಾರುಕಟ್ಟೆ 1.7 ಟ್ರಿಲಿಯ ಡಾಲರ್ ಗಳಿಸುವಂತೆ ಹಾಗೂ ತೈಲ ಬೆಲೆ 17 ಡಾಲರ್‌ನಷ್ಟು ಕುಸಿಯುವಂತೆ ಮಾಡಿದರು. ಆದರೆ ಅವರು ತಮ್ಮ ಕಚೇರಿಯಲ್ಲಿ ಕಾಫಿ ಕುಡಿಯಲು ತಯಾರಾಗುವ ವೇಳೆಗೆ ಇರಾನ್ ಅವರ ಹೇಳಿಕೆ ನಿರಾಕರಿಸಿದ್ದರಿಂದ ಅರ್ಧದಷ್ಟು ಗಳಿಕೆ ಒಮ್ಮೆಗೆ ಮಾಯವಾಯಿತು"

ಮಧ್ಯಪ್ರಾಚ್ಯ ಯುದ್ಧ ಮತ್ತು ಭಾರತದ ರಾಜತಾಂತ್ರಿಕತೆ

ಡಾ. ಜಗದೀಶ ಮಾನೆ



ಅಮೆರಿಕ ಭಾರತದ ಜೊತೆ ಎಂಥ ಡರ್ಟಿ ಗೇಮ್ ಆಡ್ತಿದೆ ಎಂದರೆ, ಸುಖಾಸುಮ್ಮನೆ ಹೇಳಿಕೆ ಕೊಟ್ಟು ಸುಮ್ಮನಿರುವುದು. "ಭಾರತಕ್ಕೆ ರಷ್ಯಾದಿಂದ ತೈಲ ಖರೀದಿಸಲು ನಾವು 30 ದಿನಗಳ ಕಾಲಾವಕಾಶ ಕೊಟ್ಟಿದ್ದೇವೆ" ಇತ್ತೀಚೆಗೆ ಅಮೆರಿಕ ಹೀಗೆಂದು ಟ್ವೀಟ್ ಮಾಡಿತ್ತು. ಇದು ಮೇಲ್ನೋಟಕ್ಕೆ ಭಾರತ ಯಾರಿಂದ, ಯಾವಾಗ ತೈಲ ಖರೀದಿಸಬೇಕು ಎನ್ನುವುದನ್ನು ಅಮೆರಿಕವೇ ನಿರ್ಧರಿಸುತ್ತದೆ ಎನ್ನುವಂತಿತ್ತು.

ಅಮೆರಿಕದ ಆ ಒಂದು ಹೇಳಿಕೆ ವಿರೋಧ ಪಕ್ಷದವರಿಗೆ ಆಹಾರವಾಗಿತ್ತು. ಭಾರತ ಅಮೆರಿಕದ ಕೈಗೊಂಬೆ, ಅಮೆರಿಕಕ್ಕೆ ಶರಣಾಗಿದೆ, ವಿದೇಶಾಂಗ ನೀತಿಗಳು ಅಮೆರಿಕ ಹೇಳಿದಂತೆ ನಡೆಯುತ್ತಿದೆ ಎಂದೆಲ್ಲ ಆರೋಪಿಸಲಾಗಿತ್ತು. ಇಂದು ಅಮೆರಿಕದ ಕೀಚಕ ನೀತಿಗೆ ಜಗತ್ತು ನಲುಗುತ್ತಿದೆ. ಇರಾನ್, ಅರಬ್ ದೇಶಗಳು ಮತ್ತು ವೆನೆಜುವೆಲಾ ತತ್ತರಿಸಿದೆ. ಇರಾನ್ ಮೇಲಿನ ದಾಳಿ ಕೇವಲ ಖಮೇನಿಯ ಪರಮಾಧಿಕಾರವನ್ನು ನಿಲ್ಲಿಸುವುದು ಎಂದಾದರೆ ಆ ಉದ್ದೇಶ ಈಗಾಗಲೆ ಈಡೇರಿದೆ. ಆದರೆ ಈ ಅರೆ ಹುಚ್ಚ ಟ್ರಂಪ್‌ಗೆ ತಾನೇನು ಮಾಡಲು ಹೊರಟಿದ್ದೇನೆ ಎಂಬುದು ತನಗೇ ಗೊತ್ತಿಲ್ಲ! ಟ್ರಂಪ್ ಹೇಳಿಕೆಗೆ ನಮ್ಮ ವಿದೇಶಾಂಗ ಸಚಿವರಾದ ಜೈಶಂಕರ್ ಅವರು "ಭಾರತದ ತೈಲ ಖರೀದಿಗೆ ಯಾವ ದೊಣ್ಣೆನಾಯಕನ ಅಪ್ಪಣೆಯು ಬೇಕಿಲ್ಲ" ಎಂದು ಮುಟ್ಟಿ ನೋಡಿಕೊಳ್ಳುವಂತಹ ತಿರುಗೇಟು ಕೊಟ್ಟಿದ್ದರು. ಮೊನ್ನೆ ತುರ್ತು ಸಂದರ್ಭದಲ್ಲಿ ಇರಾನ್ ತನ್ನ ಯುದ್ಧ ನೌಕೆಯನ್ನು ಭಾರತದ ಸಮುದ್ರ ತೀರದಲ್ಲಿ ಕೆಲಕಾಲ ನಿಲ್ಲಿಸಿಕೊಳ್ಳಲು ಭಾರತಕ್ಕೆ ಮನವಿ ಮಾಡಿತ್ತು. ಆಗ ಅನೇಕರಲ್ಲಿ ಈ ಸಂದರ್ಭದಲ್ಲಿ ಭಾರತ ಅಮೆರಿಕಾವನ್ನು ಎದುರು ಹಾಕಿಕೊಂಡು ಇರಾನಿಗೆ ಸಹಾಯ ಮಾಡುವುದು ಸರಿಯೇ ಎಂಬ ಪ್ರಶ್ನೆಗಳು ಮೂಡಿದ್ದವು. ಇರಾನಿನ ಆ ನೌಕೆಯಲ್ಲಿ ಬಹುತೇಕ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮುಖ್ಯವಾಗಿ ನೌಕೆಯಲ್ಲಿ ತಾಂತ್ರಿಕ ದೋಷ ಕಂಡುಬಂದಿತ್ತು. ಹೀಗಾಗಿ ಮಾನವೀಯತೆಯ ಆಧಾರದ ಮೇಲೆ ಭಾರತ ಅವರಿಗೆ ಸ್ಥಳಾವಕಾಶಕ್ಕೆ ಅನುಮತಿ ನೀಡಿತ್ತು. ಭಾರತದ ಈ ನಿರ್ಧಾರದಲ್ಲಿ ಅದೆಷ್ಟು ಜಾಣ್ಮೆ, ದೊಡ್ಡತನ ಇತ್ತೆಂದರೆ ಅದಕ್ಕೆ ಅಮೆರಿಕಾ ಕೂಡ ಸುಮ್ಮನಾಗಿತ್ತು. ಯಾಕೆಂದರೆ ಈ ಸಂದರ್ಭದಲ್ಲಿ ಯಾರೂ ಮಾನವೀಯತೆಯ ವಿರೋಧವಾಗಿರುವುದನ್ನು ಒಪ್ಪುವುದಿಲ್ಲ. ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲೂ ನೀವು ಯಾರ ಪರ ಎಂದು ಕೇಳಿದ್ದಕ್ಕೆ ಜೈಶಂಕರ್ ನಾವು ಯಾರ ಪರವೂ ಅಲ್ಲ, ಭಾರತ ಯಾವತ್ತೂ ಶಾಂತಿಯ ಪರ ನಿಲ್ಲುತ್ತದೆ ಎಂದಿದ್ದರು. ಭಾರತ ತನ್ನ ಅಭಿವೃದ್ಧಿಯ ಜತೆ ಜತೆಗೆ ಇತರ ದೇಶಗಳೂ ಬೆಳೆಯಬೇಕೆಂದು ಬಯಸುತ್ತದೆ. ಉದಾಹರಣೆಗೆ ಅಫ್ಘಾನಿಸ್ತಾನದಲ್ಲಿ ಆಹಾರ ಸಮಸ್ಯೆ ಎದುರಾದಾಗ ಸುಮಾರು 50,000 ಟನ್ ಗೋಧಿಯನ್ನು ನೀಡಲಾಗಿತ್ತು. ಶ್ರೀಲಂಕಾದ ಆರ್ಥಿಕ ಸಂಕಷ್ಟದಲ್ಲಿ 3.8 ಬಿಲಿಯನ್ ಡಾಲರ್ ಹಣವನ್ನು ನೆರವಿನ ರೂಪದಲ್ಲಿ ನೀಡಿತ್ತು. ಮಯನ್ಮಾರ್‌ಗೂ ಹತ್ತು ಸಾವಿರ ಟನ್ ಆಹಾರವನ್ನು ಒದಗಿಸಿತ್ತು. ಕೊವಿಡ್ ಸಂದರ್ಭದಲ್ಲಿ ವ್ಯಾಕ್ಸಿನ್ ಅನ್ನು ಹಲವು ದೇಶಗಳಿಗೆ ಕೊಟ್ಟಿತ್ತು.

ವಾಸ್ತವದಲ್ಲಿ ರಾಜತಾಂತ್ರಿಕತೆ ಅಂದರೆ ಯಾವುದು ಸರಿಯಾದ ಕೆಲಸವೋ ಅದನ್ನೇ ಸರಿಯಾದ ರೀತಿಯಲ್ಲಿ, ರಾಷ್ಟ್ರದ ಹಿತಾಸಕ್ತಿಯ ಅಡಿಯಲ್ಲಿ ಮಾಡುವುದು. ಇದನ್ನು ಜೈಶಂಕರ್ ಅವರಂತೂ ಕರಗತ ಮಾಡಿಕೊಂಡಿದ್ದಾರೆ. ಅವರು ವಿದೇಶಾಂಗ ಮಂತ್ರಿಗಳಾದ ಬಳಿಕ ಭಾರತದ ಸುರಕ್ಷತೆ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ ಎರಡನ್ನೂ ಗುರಿಯಾಗಿಸಿಕೊಂಡು ತಂತ್ರಗಳನ್ನು ರೂಪಿಸಿದ್ದಾರೆ. ಅದರಲ್ಲೂ ಈ ಡಿಪ್ಲೋಮೆಟಿಕ್ ಪರಿಸ್ಥಿತಿಯಂತೂ ಬಹಳ ಸೂಕ್ಷ್ಮವಾಗಿದೆ. ಅದರಂತೆ ಜಗತ್ತು ಇದೀಗ ಎರಡು ಭಾಗಗಳಾಗಿರುವಂತೆ ತೋರುತ್ತಿದೆ. ರಷ್ಯಾ, ಚೀನಾ, ಇರಾನ್ ಮತ್ತು ಉತ್ತರ ಕೊರಿಯಾ ರಾಷ್ಟ್ರಗಳು ಒಂದೆಡೆಯಾದರೆ, ಮತ್ತೊಂದೆಡೆ ಅಮೆರಿಕಾ, ಇಸ್ರೇಲ್, ಜರ್ಮನಿ ಇಂಗ್ಲೆಂಡ್ ಮತ್ತು ನ್ಯಾಟೊ ಪಡೆ. ಹೀಗಿರುವ ಸಂದರ್ಭದಲ್ಲಿ ಭಾರತ ಹೇಗೆ ನಡೆದುಕೊಳ್ಳುತ್ತದೆ ಎಂಬುದನ್ನು ನೋಡಲು ಬಹುತೇಕ ರಾಷ್ಟ್ರಗಳು ಜಾತಕ ಪಕ್ಷಿಯಂತೆ ಕಾಯುತ್ತಿವೆ. ಮತ್ತು ಅವರಿಗೆ ಉತ್ತರವೂ ಸಿಕ್ಕಿದೆ.

ಭಾರತ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ದೇಶ ಮತ್ತು ಅತ್ಯಂತ ವೇಗವಾಗಿ ಬೆಳೆಯುವ ಆರ್ಥಿಕತೆಯ ರಾಷ್ಟ್ರವಾಗಿದೆ. ಹೀಗಾಗಿ ಈ ಯುದ್ಧದ ಸಂದರ್ಭದಲ್ಲಿ ನಮ್ಮ ಸುತ್ತಲೂ ಬೆಂಕಿ ಹತ್ತಿಕೊಂಡಿರುವಾಗ ಮಧ್ಯದಲ್ಲಿರುವ ನಮ್ಮ ಪಾತ್ರ ಬಹಳ ಮುಖ್ಯ. ಹೀಗಾಗಿ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಬಹಳ ಎಚ್ಚರಿಕೆಯಿಂದಲೇ ಭಾರತ ಹೆಜ್ಜೆ ಇಡುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲು ಜೈಶಂಕರ್ ಸೂಕ್ತ ವ್ಯಕ್ತಿ. ಮೇಲ್ನೋಟಕ್ಕೆ ಅಮೆರಿಕ ಏನೇ ಹೇಳಿಕೆ ಕೊಟ್ಟರೂ ಅದನ್ನು ಭಾರತ ಬಹಳ ಸೂಕ್ಷ್ಮವಾಗಿ ಗಮನಿಸುತ್ತದೆ. ಅಮೆರಿಕ ತನ್ನ ಹಿತಾಸಕ್ತಿಗಾಗಿ ಬೇರೆ ಬೇರೆ ದೇಶಗಳ ಮೇಲೆ ಪ್ರಹಾರ ಮಾಡುವುದು ಅದರ ಹುಟ್ಟುಗುಣ. ಈ ಹಿಂದೆ ಅಫ್ಘಾನಿಸ್ತಾನದಲ್ಲಿದ್ದ ಯುಎಸ್‌ಎಸ್‌ಆರ್ ಹಿಡಿತವನ್ನು ತಪ್ಪಿಸುವ ದೃಷ್ಟಿಯಿಂದಲೇ ಅಮೆರಿಕಾ ತಾಲಿಬಾನನ್ನು ಬೆಳೆಸಿತ್ತು. ಪರಿಣಾಮ, ಒಂದೊಮ್ಮೆ ಅದೇ ತಾಲಿಬಾನ್ ಮುಖ್ಯಸ್ಥ ಅಮೆರಿಕಾದ ಮೇಲೆ ತಿರುಗಿ ಬಿದ್ದ. ಇದರಿಂದ ಹೈರಾಣಾದ ಅಮೆರಿಕಾ ಸುಮಾರು 20 ವರ್ಷಗಳ ಕಾಲದವರೆಗೆ ಅಫ್ಘಾನಿಸ್ತಾನದಲ್ಲಿ ತಳ ಊರುವ ಪರಿಸ್ಥಿತಿ ಎದುರಾಗಿತ್ತು. ಭಾರತ ತನ್ನ ಹಿತಾಸಕ್ತಿಯನ್ನು ಉಳಿಸಿಕೊಂಡು ಜತೆಗೆ ಅಮೆರಿಕಾದೊಂದಿಗೆ ದ್ವೇಷ ಕಟ್ಟಿಕೊಳ್ಳದೆ ಅವರ ದಬ್ಬಾಳಿಕೆ, ಆಕ್ರಮಣಕಾರಿ ವಿಧಾನವನ್ನು ವಿರೋಧಿಸುತ್ತ ಬಂದಿದೆ. ಇನ್ನು ಇಸ್ರೇಲ್ ಭಾರತದ ಪರಮಾಪ್ತ ರಾಷ್ಟ್ರವಾಗಿದೆ. ಹಾಗೆಂದು ಇರಾನ್ ಏನೂ ಭಾರತಕ್ಕೆ ಶತ್ರು ರಾಷ್ಟ್ರವಲ್ಲ. ಅದು ಕೂಡ ಭಾರತದ ಜೊತೆ ಉತ್ತಮ ವ್ಯಾಪಾರ ಸಂಬಂಧಗಳನ್ನು ಹೊಂದಿದೆ. ಇನ್ನೂ ರಷ್ಯಾ ಅಂತೂ ಭಾರತದೊಂದಿಗೆ ಸಹಸ್ರಾರು ದಶಕಗಳಿಂದ ಪರಮಾಪ್ತ ದೇಶ. ಉತ್ತಮ ಸ್ನೇಹ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿವೆ. ಆದರೆ ಈ ಯುದ್ಧದ ಸಂದರ್ಭದಲ್ಲಿ ರಷ್ಯಾವು



ಇರಾನನ್ನು ಬೆಂಬಲಿಸುತ್ತಿದೆ. ಅತ್ತ ಇನ್ನೊಂದು ಪರಮಾಪ್ತ ರಾಷ್ಟ್ರ ಇಸ್ರೇಲ್ ಅಮೆರಿಕ ಪರವಾಗಿ ಇರಾನ್ ವಿರುದ್ಧ ಹೋರಾಟ ನಡೆಸಿದೆ. ಇದೊಂದು ರೀತಿಯಲ್ಲಿ ಭಾರತಕ್ಕೆ ಧರ್ಮಸಂಕಟ. ಈ ಪರಿಸ್ಥಿತಿಯಲ್ಲಿ ಕೂಡ ಭಾರತ ಬಹಳ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡುತ್ತಿದೆ. ಜೈಶಂಕರರು ಇರಾನ್, ಇಸ್ರೇಲ್ ಮತ್ತು ಅಮೆರಿಕಾದ ತಾಳಕ್ಕೂ ಕುಣಿದಿಲ್ಲ. ಅವರ ತಪ್ಪುಗಳನ್ನು ಬಲವಾಗಿ ವಿರೋಧಿಸುತ್ತಾ, ಸಂಭಂದವನ್ನೂ ಹಾಳು ಮಾಡಿಕೊಳ್ಳದೆ ಸೂಕ್ಷ್ಮವಾಗಿ ತಾಳ್ಮೆಯಿಂದ ಪ್ರತಿಕ್ರಿಸುತ್ತಿದ್ದಾರೆ. ಜೊತೆಗೆ ಭಾರತದ ವಿದೇಶಾಂಗ ನೀತಿ ಕೂಡ ಹಾಗೆಯೇ ಇದೆ. ಭಾರತ ಎಂದೂ ತಾನಾಗಿ ಯಾರ ಮೇಲೂ ದಾಳಿ ಮಾಡುವುದಿಲ್ಲ ಮತ್ತು ಯಾವುದೇ ರಾಷ್ಟ್ರ ಆರ್ಥಿಕವಾಗಿ ನಾಶವಾಗಲಿ ಎಂದು ಬಯಸುವುದಿಲ್ಲ. ಆದರೆ ಭಾರತದ ತಂಟೆಗೆ ಬಂದ ಯಾರನ್ನೂ ಬಿಡುವುದಿಲ್ಲ! ಪ್ರತಿಕ್ರಿಯೆಗೆ ತಾಳ್ಮೆಯಿಂದ ಕಾದು ಕೊನೆಗೆ ಮುಟ್ಟಿ ನೋಡಿಕೊಳ್ಳುವ ಉತ್ತರವನ್ನು ಕೊಡುವುದರಲ್ಲಿ ಜೈಶಂಕರ್ ಎತ್ತಿದ ಕೈ. ಅವರ ಬಾಡಿ ಲ್ಯಾಂಗ್ವೇಜ್ ಅನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಅರ್ಥವಾಗುತ್ತದೆ. ಅವರು ಯಾವುದೇ ಸಮಸ್ಯೆಗಳನ್ನು ತಣ್ಣಗೆ, ಆತ್ಮವಿಶ್ವಾಸದಿಂದ ಉತ್ತರಗಳನ್ನು ಕೊಡುತ್ತಾರೆ. ಆಪರೇಷನ್ ಸಿಂಧೂರದ ಸಂದರ್ಭದಲ್ಲೂ If the fire, we fire. zero tolerance ಅಂದರೆ ನಾವಿರುವುದೇ ಹೀಗೆ ಎಂಬ ಖಡಕ್ ಸಂದೇಶ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಟ್ರಂಪ್ ತಾನೇ ಯುದ್ಧ ನಿಲ್ಲಿಸಿರುವುದಾಗಿ ಪದೇ ಪದೇ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು. ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೆ ಸುಮ್ಮನಾಗಿಬಿಟ್ಟರು. ಕೆಲವು ಬಾರಿ ಸುಮ್ಮನಾಗಿರಬೇಕು. ಎಲ್ಲದಕ್ಕೂ ಹೇಳಿಕೆಗಳೇ ಉತ್ತರವಾಗುವುದಿಲ್ಲ. ಮೌನವೂ ಒಂದೊಮ್ಮೆ ಪರಿಹಾರವಾಗುತ್ತದೆ. ಅದೇ ಭಾರತದ ತಂತ್ರಗಾರಿಕೆ. ಆರಂಭದಲ್ಲಿ ಇರಾನಿಗೆ ಅಮೆರಿಕವೇ ಶಸ್ತ್ರಾಸ್ತ್ರಗಳನ್ನು ಪೂರೈಸಿತ್ತು ಮತ್ತು ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳನ್ನೂ ಅಮೆರಿಕವೆ ಬೆಳೆಸಿತ್ತು. ನಂತರ ಅವರ ಮೇಲೆ ದಾಳಿ ಮಾಡಿತು. ಇದು ಅಮೆರಿಕಾದ ಕುತಂತ್ರ. ಇದರ ಅರ್ಥ, ಯಾವುದೇ ರಾಷ್ಟ್ರ ಯಾರ ಮೇಲೂ ಅವಲಂಬನೆ ಆಗಬಾರದು. ತನ್ನ ಶಕ್ತಿ ಆಧಾರದ ಮೇಲೆ ತಾನೇ ಬೆಳೆಯಬೇಕು. ಅದು ಸಣ್ಣ ರಾಷ್ಟ್ರವಾದರೂ ಅವರಲ್ಲಿ ಗಟ್ಟಿತನ ಉಳಿಯುತ್ತದೆ. ಉದಾಹರಣೆಗೆ ಇಸ್ರೇಲ್.

ಈ ಯುದ್ಧವನ್ನು ಗಮನಿಸುತ್ತಿದ್ದರೆ. ಮುಂಬರುವ ವರ್ಷಗಳಲ್ಲಿ ಯಾವುದೇ ಒಂದು ರಾಷ್ಟ್ರ ಮಾತ್ರ ದೊಡ್ಡ ರಾಷ್ಟ್ರವಾಗಿ ಉಳಿಯುವುದಿಲ್ಲ. ಪ್ರತಿಯೊಂದು ರಾಷ್ಟ್ರಗಳು ಕೂಡ ಪ್ರಬಲ ಶಕ್ತಿಶಾಲಿಯಾಗುತ್ತವೆ. ಭಾರತ ಇದೇ ರೀತಿ ತನ್ನ ಜಾಣ ನಡೆಯನ್ನು ಪ್ರದರ್ಶಿಸುತ್ತಲಿರುತ್ತದೆ. ಮುಂಬರಲಿರುವ ದಿನಗಳಲ್ಲಿ ಜೈಶಂಕರ್ ಅವರ ಜಾಣ್ಮೆ, ಪ್ರಬುದ್ಧತೆ, ರಾಜತಾಂತ್ರಿಕ ನೀತಿಗಳು ಭಾರತಕ್ಕೆ ಇನ್ನೂ ಸಾಕಷ್ಟು ಹೆಚ್ಚಿನ ಲಾಭಗಳಾಗಲಿದೆ.

ವಿಶ್ವಾದ್ಯಂತ ಕಟ್ಟುನಿಟ್ಟಿನ ಕ್ರಮ ಜಾರಿ

ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಸಂಘರ್ಷಗಳು ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಅಸಾಧಾರಣ ಬಿಕ್ಕಟ್ಟನ್ನು ಸೃಷ್ಟಿಸಿವೆ. ಇದು ಇಂಧನವನ್ನು ಉಳಿಸಲು, ನಿರ್ಣಾಯಕ ವಲಯಗಳಿಗೆ ಆದ್ಯತೆ ನೀಡಲು ಮತ್ತು ತಮ್ಮ ಜನರಿಗೆ ಇಂಧನದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೊಳಿಸಲು ವಿಶ್ವದಾದ್ಯಂತದ ದೇಶಗಳನ್ನು ಅನಿವಾರ್ಯವಾಗಿಸಿದೆ. ಏಷ್ಯಾದಿಂದ ಆಫ್ರಿಕಾ ಮತ್ತು ಯುರೋಪ್ ವರೆಗೆ, ಸರ್ಕಾರಗಳು ಸೀಮಿತ ಇಂಧನ ದಾಸ್ತಾನುಗಳನ್ನು ದೀರ್ಘಕಾಲದವರೆಗೆ ಬಳಸುವ ಉದ್ದೇಶದಿಂದ ಹೆಚ್ಚುವರಿ ಸಾರ್ವಜನಿಕ ರಜೆಗಳು, ಮನೆಯಿಂದಲೇ ಕೆಲಸ, ಇಂಧನ ಪಡಿತರ ಮತ್ತು ಕೈಗಾರಿಕೆಗಳ ಸ್ಥಗಿತ ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಂಡಿವೆ.

ಜಾಗತಿಕ ತೈಲ ಕಂಟಕದಿಂದ ಹೊರಬರಲು ಜಾಗತಿಕವಾಗಿ ಹೊಸ ಕ್ರಮ





ಶ್ರೀಲಂಕಾ

ಶಾಲೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಅತ್ಯಗತ್ಯವಲ್ಲದ ಸರ್ಕಾರಿ ನೌಕರರಿಗೆ ಬುಧವಾರದಂದು ಕಡ್ಡಾಯ ಸಾರ್ವಜನಿಕ ರಜೆ ಘೋಷಿಸಲಾಗಿದೆ.ರಾಷ್ಟ್ರೀಯ ಇಂಧನ ಪಾಸ್ (ಕ್ಯುಆರ್-ಆಧಾರಿತ ಪಡಿತರ) ಅನ್ನು ಪುನಃ ಪರಿಚಯಿಸಲಾಗಿದೆ. ಖಾಸಗಿ ವಾಹನಗಳಿಗೆ ವಾರಕ್ಕೆ 15 ಲೀಟರ್ ಮತ್ತು ಸಾರ್ವಜನಿಕ ಸಾರಿಗೆಗೆ 200 ಲೀಟರ್ ಮಿತಿ ವಿಧಿಸಲಾಗಿದೆ.

ಬಾಂಗ್ಲಾದೇಶ

ವಿದ್ಯುತ್ ಹೊರೆಯನ್ನು ಕಡಿಮೆ ಮಾಡಲು ಎಲ್ಲಾ ವಿಶ್ವವಿದ್ಯಾನಿಲಯಗಳು, ವಿದೇಶಿ ಪಠ್ಯಕ್ರಮದ ಶಾಲೆಗಳು ಮತ್ತು ತರಬೇತಿ ಕೇಂದ್ರಗಳನ್ನು ಮುಚ್ಚಲಾಗಿದ್ದು, ಆನ್ ಲೈನ್ ತರಗತಿಗಳಿಗೆ ಸ್ಥಳಾಂತರಿಸಲಾಗಿದೆ. ಮನೆಗಳಿಗೆ 5 ಗಂಟೆಗಳ ಕಾಲ ಸರದಿಯಂತೆ ವಿದ್ಯುತ್ ಕಡಿತ ಮಾಡಲಾಗುತ್ತಿದ್ದು, ಸಿದ್ಧ ಉಡುಪು ರಫ್ತು ವಲಯಕ್ಕೆ ವಿದ್ಯುತ್ ಆದ್ಯತೆ ನೀಡಲಾಗಿದೆ.

ಈಜಿಪ್ಟ್

ಮಾರ್ಚ್ 28 ರಿಂದ ಅನ್ವಯವಾಗುವಂತೆ ಮಾಲ್ ಗಳು, ರೆಸ್ಟೋರೆಂಟ್ ಗಳು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳನ್ನು ವಾರದ ದಿನಗಳಲ್ಲಿ ರಾತ್ರಿ 9 ಗಂಟೆಗೆ ಮುಚ್ಚಬೇಕು. ಸರ್ಕಾರಿ ಕಟ್ಟಡಗಳನ್ನು ಸಂಜೆ 6 ಗಂಟೆಗೆ ಮುಚ್ಚಬೇಕು. ವಿದ್ಯುತ್ ಬಳಕೆಯನ್ನು ಕಡಿಮೆ ಮಾಡಲು ಬೆಳಗುವ ಜಾಹೀರಾತು ಫಲಕಗಳನ್ನು ಆರಿಸಲಾಗಿದೆ.

ಪಾಕಿಸ್ತಾನ

ಸರ್ಕಾರಿ ನೌಕರರಿಗೆ ವಾರದಲ್ಲಿ ನಾಲ್ಕು ದಿನಗಳ ಕೆಲಸ ಮತ್ತು ಶೇ. 50 ರಷ್ಟು 'ಮನೆಯಿಂದಲೇ ಕೆಲಸ'ದ ವ್ಯವಸ್ಥೆ ಮಾಡಲಾಗಿದೆ. ಶಾಲೆ ಮತ್ತು ಕಾಲೇಜುಗಳನ್ನು ಎರಡು ವಾರಗಳ ಕಾಲ ಮುಚ್ಚಲಾಗಿದೆ.ಸರ್ಕಾರಿ ಇಲಾಖೆಗಳಿಗೆ ನೀಡುವ ಇಂಧನ ಹಂಚಿಕೆಯನ್ನು ಶೇ. 50 ರಷ್ಟು ಕಡಿತಗೊಳಿಸಲಾಗಿದೆ.

ನ್ಯೂಜಿಲೆಂಡ್

ಮೋಟಾರು ಚಾಲಕರು ವಾರದಲ್ಲಿ ಒಂದು ದಿನ ಚಾಲನೆ ಮಾಡದ ದಿನವನ್ನು ತಾವೇ ಆಯ್ಕೆ ಮಾಡಿಕೊಳ್ಳುವ 1979ರ ಕಾಲದ ಕಾರು-ರಹಿತ ದಿನ ನೀತಿಯನ್ನು ಪುನಶ್ಚೇತನಗೊಳಿಸಲು ಸರ್ಕಾರ ಪರಿಗಣಿಸುತ್ತಿದೆ. ವಿಮಾನ ಇಂಧನದ ಹೆಚ್ಚಿನ ಬೆಲೆಯಿಂದಾಗಿ 'ಏರ್ ನ್ಯೂಜಿಲೆಂಡ್'ನ ಸುಮಾರು 1,100 ವಿಮಾನ ಪ್ರಯಾಣಗಳನ್ನು ರದ್ದುಗೊಳಿಸಲಾಗಿದ್ದು, ಇದರಿಂದ 44,000 ಪ್ರಯಾಣಿಕರಿಗೆ ತೊಂದರೆಯಾಗಿದೆ.

ದಕ್ಷಿಣ ಆಫ್ರಿಕಾ

ಇಂಧನವನ್ನು ಸಮಾನವಾಗಿ ವಿತರಿಸಲು ಮತ್ತು ಜನರು ಭಯದಿಂದ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದನ್ನು ತಡೆಯಲು ಖನಿಜ ಮತ್ತು ಪೆಟ್ರೋಲಿಯಂ ಸಂಪನ್ಮೂಲಗಳ ಇಲಾಖೆಯು ಉದ್ಯಮ ಮಟ್ಟದಲ್ಲಿ ನಿಯಂತ್ರಿತ ಹಂಚಿಕೆ ಕ್ರಮಗಳನ್ನು ಜಾರಿಗೆ ತಂದಿದೆ.

ಫಿಲಿಪಿನ್ಸ್

ಸರ್ಕಾರಿ ನೌಕರರಿಗೆ ವಾರದಲ್ಲಿ ನಾಲ್ಕು ದಿನಗಳ ಕೆಲಸದ ಅವಧಿಗೆ ಇಳಿಸಲಾಗಿದೆ. 'ಮನೆಯಿಂದಲೇ ಕೆಲಸ'ದ ಪದ್ಧತಿಯನ್ನು ಅಳವಡಿಸಿಕೊಳ್ಳಲು ಖಾಸಗಿ ವಲಯಕ್ಕೆ ಉತ್ತೇಜನ. ಸಾರ್ವಜನಿಕ ವಲಯದ ಅತ್ಯಗತ್ಯವಲ್ಲದ ಪ್ರಯಾಣಗಳ ಮೇಲೆ ನಿಷೇಧ.

ಭೂತಾನ್

ಸಂಗ್ರಹಣೆಯನ್ನು ತಡೆಯಲು ಜೆರ್ರಿ ಕ್ಯಾನ್ ಗಳಲ್ಲಿ ಇಂಧನ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.ಮನೆಯಿಂದಲೇ ಕೆಲಸ'ದ ಚೌಕಟ್ಟನ್ನು ಸಕ್ರಿಯಗೊಳಿಸಲಾಗಿದೆ.ತುರ್ತು ಸೇವೆಗಳಿಗೆ ಇಂಧನ ಪೂರೈಕೆಯಲ್ಲಿ ಆದ್ಯತೆ ನೀಡಲಾಗಿದೆ.

ಇರಾನ್ ಮೇಲೆ 3,000 ದಾಳಿ!

ಇರಾನ್ ವಿರುದ್ಧ ಆಪರೇಷನ್ ರೋರಿಂಗ್ ಲಯನ್ ಭಾಗವಾಗಿ ಇಸ್ರೇಲ್ ಸೇನೆಯೊಂದೇ ಈವರೆಗೆ 3,000 ಸ್ಥಳಗಳ ಮೇಲೆ ದಾಳಿ ನಡೆಸಿರುವುದಾಗಿ ಹೇಳಿದೆ. ಇತ್ತೀಚೆಗೆ ಇರಾನ್‌ನ ಖಂಡಾಂತರ ಕ್ಷಿಪಣಿ ಸಂಗ್ರಹಾಗಾರ ಮತ್ತು ಕ್ಷಿಪಣಿ ಉಡಾವಣಾ ಕೇಂದ್ರಗಳೂ ಸೇರಿ ಒಟ್ಟು 50 ಸ್ಥಳಗಳ ಮೇಲೆ ಇಸ್ರೇಲ್ ವಾಯುಪಡೆ ನಡೆಸಿದೆ. ಸೋಮವಾರವೂ 10ಕ್ಕೂ ಹೆಚ್ಚು ಗುರಿಗಳ ಮೇಲೆ ಐಎಎಫ್ ವೈಮಾನಿಕ ದಾಳಿಯನ್ನು ನಡೆಸಿದೆ.

5 ದಿನಗಳಿಗೆ ದಾಳಿ ಮುಂದೂಡಿದ ಟ್ರಂಪ್?

ಇರಾನ್ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವ ಯೋಜನೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 5 ದಿನಗಳ ಕಾಲ ಮುಂದೂಡಿದ್ದಾರೆ. ಆದರೆ ಇವುಗಳನ್ನು ಹೊರತುಪಡಿಸಿ ಇರಾನ್ ಮೇಲಿನ ಇತರ ಗುರಿಗಳ ಮೇಲಿನ ದಾಳಿಯನ್ನು ಅಮೆರಿಕ ಸೇನೆ ಮುಂದುವರಿಸಿದೆ. ಭಾರತೀಯ ಕಾಲಮಾನ ಸೋಮವಾರ ತಡರಾತ್ರಿ ಇರಾನ್ ಅಧಿಕಾರಿಗಳೊಂದಿಗಿನ ಮಾತುಕತೆ ಫಲಕಾರಿಯಾಗಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದರು. ಇರಾನ್ ವಿದ್ಯುತ್ ಸ್ಥಾವರ ಮತ್ತು ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು 5 ದಿನಗಳವರೆಗಷ್ಟೇ ತಡೆಹಿಡಿದಿದ್ದೇವೆ ಎಂದು ಅಮೆರಿಕ ನಿಯೋಗದ ಅಧಿಕಾರಿಗಳು ಹೇಳಿದ್ದಾರೆ. ಇರಾನ್ ಮೇಲಿನ ತನ್ನ ಎಪಿಕ್ ಫ್ಯೂರಿ ಕಾರ್ಯಾಚರಣೆಯನ್ನು ಅಮೆರಿಕ ಮಂಗಳವಾರವೂ ಮುಂದುವರಿಸಿದೆ.

ಶಾಂತಿ ಮಾತುಕತೆಗೆ ಶೆಹಬಾಜ್ ಮಧ್ಯಸ್ಥಿಕೆ

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್ ಅವರೊಂದಿಗೆ ಮಾತುಕತೆ ನಡೆಸಿ ಯುದ್ಧದ ಬಗ್ಗೆ ಶಾಂತಿ ಸ್ಥಾಪನೆಗೆ ಪಾಕಿಸ್ತಾನ ಸಹಾಯ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಷರೀಫ್ ಅವರು ಪೆಝೆಶ್ಕಿಯನ್ ಅವರಿಗೆ ಪರ್ಷಿಯನ್ ಹೊಸ ವರ್ಷದ ಶುಭಾಶಯಗಳನ್ನು ಕೋರಿ, ಖಡಿ ಪ್ರದೇಶದ ಗಂಭೀರ ಪರಿಸ್ಥಿತಿ ಕುರಿತು ಚರ್ಚಿಸಿ, ಉದ್ವಿಗ್ನತೆ ತಗ್ಗಿಸಲು, ಸಂವಾದ ಮತ್ತು ರಾಜತಾಂತ್ರಿಕ ಮಾತುಕತೆಯ ತುರ್ತು ಅಗತ್ಯವಿದೆ ಎಂದು ಒಪ್ಪಿಕೊಂಡಿರುವುದಾಗಿ ತಿಳಿಸಿದ್ದಾರೆ.

ಮಾತುಕತೆಯ ನಡುವೆಯೂ ಮುಂದುವರಿದ ಕ್ಷಿಪಣಿ ದಾಳಿ

• **ದುಬೈ:** ಇಸ್ರೇಲ್‌ನ ಕೇಂದ್ರ ಟೆಲ್ ಅವಿವ್ ಮೇಲೆ ಕ್ಷಿಪಣಿ ದಾಳಿ ಮತ್ತು ಇರಾನ್‌ನ ನಿರಂತರ ಆಕ್ರಮಣಗಳ ನಡುವೆಯೂ, ಯುದ್ಧ ಕೊನೆಗೊಳಿಸಲು ಅಮೆರಿಕ ಇರಾನ್‌ನೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಮಾರುಕಟ್ಟೆ ಮೇಲೆ ಗಡುವು ವಿಸ್ತರಣೆ ಪ್ರಭಾವ: ಇರಾನ್‌ನ ವಿದ್ಯುತ್ ಕೇಂದ್ರಗಳ ಮೇಲೆ ವೈಮಾನಿಕ ದಾಳಿ ನಡೆಸುವುದಾಗಿ ಈ ಹಿಂದೆ ಎಚ್ಚರಿಕೆ ನೀಡಿದ್ದ ಅಧ್ಯಕ್ಷ ಟ್ರಂಪ್, ಹಾರ್ಮುಜ್ ಜಲಸಂಧಿಯನ್ನು ಹಡಗು ಸಂಚಾರಕ್ಕೆ ಮುಕ್ತಗೊಳಿಸಲು ಇರಾನ್‌ಗೆ ನೀಡಿದ್ದ ಗಡುವನ್ನು ವಿಸ್ತರಿಸಿದ್ದಾರೆ. ಈ ಐದು ದಿನಗಳ ಕಾಲಾವಕಾಶದಿಂದಾಗಿ ಕಚ್ಚಾ ತೈಲ ಬೆಲೆ ತಾತ್ಕಾಲಿಕವಾಗಿ ಪ್ರತಿ ಬ್ಯಾರೆಲ್‌ಗೆ 100 ಅಮೆರಿಕನ್ ಡಾಲರ್‌ಗಿಂತ ಕೆಳಕ್ಕೆ ಇಳಿದಿತ್ತು. ಆದರೆ ನಂತರ ಬ್ರೆಂಟ್ ಕ್ರೂಡ್ ಬೆಲೆ 104 ಡಾಲರ್‌ಗೆ ಏರಿಕೆಯಾಯಿತು. ಈ ವಿಳಂಬ, ವಿದ್ಯುತ್ ಜಾಲಗಳು ಮತ್ತು ನೀರಿನ ನಿರ್ಲವಣೀಕರಣ ಘಟಕಗಳ ಮೇಲಿನ ಸಂಭವನೀಯ ದಾಳಿಗಳ ಆತಂಕದಿಂದ ತಾತ್ಕಾಲಿಕ ಸಮಾಧಾನ ನೀಡಿದೆ.



ಪ್ರಾದೇಶಿಕ ಸಂಘರ್ಷ

ಶಾಂತಿ ಮಾತುಕತೆಗಳ ವರದಿಗಳನ್ನು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗೇರ್ ಕಾಲಿಬಾಫ್ ಸೇರಿದಂತೆ ಇರಾನ್ ಅಧಿಕಾರಿಗಳು ನಿರಾಕರಿಸಿದ್ದು, ತಪ್ಪು ಮಾಹಿತಿ ಎಂದು ಕರೆದಿದ್ದಾರೆ. ಈ ಮಧ್ಯೆ, ಇರಾನ್ ಮತ್ತು ಲೆಬನಾನ್ ವಿರುದ್ಧದ ದಾಳಿಗಳು ಮುಂದುವರಿಯಲಿವೆ, ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ರಷ್ಯಾ, ಓಮನ್ ಮತ್ತು ಪಾಕಿಸ್ತಾನ ಸೇರಿದಂತೆ ಹಲವು ರಾಷ್ಟ್ರಗಳ ಪ್ರತಿನಿಧಿಗಳೊಂದಿಗೆ ಸಂಘರ್ಷದ ಕುರಿತು ಚರ್ಚೆ ನಡೆಸಿದ್ದಾರೆ.

ಸೇನಾ ದಾಳಿ ಮತ್ತು ಸಾವು-ನೋವುಗಳು

ಮಂಗಳವಾರ ಮುಂಜಾನೆ ಇರಾನ್ ಹಾರಿಸಿದ ಹಲವು ಕ್ಷಿಪಣಿಗಳು ಇಸ್ರೇಲ್ ತಲುಪಿದ್ದು, 100 ಕೆಜಿ ತೂಕದ ಸ್ಫೋಟಕ ಹೊತ್ತ ಕ್ಷಿಪಣಿಯೊಂದು ಟೆಲ್ ಅವಿವ್ ರಸ್ತೆಗೆ ಅಪ್ಪಳಿಸಿ ನಾಲ್ವರು ಗಾಯಗೊಂಡಿದ್ದಾರೆ. ಲೆಬನಾನ್‌ನ ಬೈರುತ್ ಉಪನಗರಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ ಇಬ್ಬರು ಸಾವನ್ನಪ್ಪಿದ್ದಾರೆ. ಸೌದಿ ಅರೇಬಿಯಾ, ಇರಾನ್‌ನ 19 ಡ್ರೋನ್ ಗಳನ್ನು ಹೊಡೆದುರುಳಿಸಿರುವುದಾಗಿ ಹೇಳಿದೆ. ಕುವೈತ್‌ನಲ್ಲಿ ವಾಯು ರಕ್ಷಣಾ ವ್ಯವಸ್ಥೆಯ ಅವಶೇಷಗಳಿಂದಾಗಿ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಉದ್ವಿಗ್ನತೆಯ ಹಿನ್ನೆಲೆ

ಫೆಬ್ರವರಿ 28 ರಂದು ಪ್ರಾರಂಭವಾದ ಈ ಯುದ್ಧದಿಂದಾಗಿ ಇರಾನ್‌ನಲ್ಲಿ 1,500 ಕ್ಕೂ ಹೆಚ್ಚು ಮತ್ತು ಇಸ್ರೇಲ್‌ನಲ್ಲಿ 15 ಜನರು ಸಾವನ್ನಪ್ಪಿದ್ದಾರೆ. ಸಾವಿರಾರು ಅಮೆರಿಕನ್ ಮೆರೀನ್ ಸೈನಿಕರು ಈ ಪ್ರದೇಶದತ್ತ ಧಾವಿಸುತ್ತಿದ್ದು, ಖರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಊಹಾಪೋಹಗಳು ಎದ್ದಿವೆ. ಒಂದು ವೇಳೆ ಭೂಸೇನೆ ಆಕ್ರಮಣ ಮಾಡಿದರೆ ಪರ್ಷಿಯನ್ ಕೊಲ್ಲಿಯಲ್ಲಿ ಮೈನ್‌ಗಳನ್ನು ಅಳವಡಿಸುವುದಾಗಿ ಇರಾನ್ ಬೆದರಿಕೆ ಹಾಕಿದೆ.

ಯಾವುದೇ ಮಾತುಕತೆ ಇಲ್ಲ

ಈ ಮಧ್ಯೆ, ಅಮೆರಿಕ ಜತೆ ಯಾವುದೇ ಮಾತುಕತೆ ನಡೆದಿಲ್ಲ. ವಿತ್ತೀಯ ಮತ್ತು ತೈಲ ಮಾರುಕಟ್ಟೆಗಳನ್ನು ತಲ್ಲಣಗೊಳಿಸಲು ನಕಲಿ ಸುದ್ದಿಗಳನ್ನು ಹರಿಯಬಿಡಲಾಗುತ್ತಿದೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮದ್ ಬಘರ್ ಖಾಲಿಬಫ್ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.ಅಮೆರಿಕ ಕದನ ವಿರಾಮದ ಚಿಂತನೆ ನಡೆಸುತ್ತಿದ್ದರೂ, ಇಸ್ರೇಲ್ ಇರಾನ್ ಮತ್ತು ಲೆಬನಾನ್ ವಿರುದ್ಧ ಸಮರ ನಿರಂತರಗೊಳಿಸಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ. ಇರಾನ್ ಮಂಗಳವಾರವೂ ಇಸ್ರೇಲ್ ಮತ್ತು ಕೊಲ್ಲಿ ಅರಬ್ ರಾಷ್ಟ್ರಗಳ ಮೇಲೆ ಡ್ರೋನ್-ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್‌ನ್ನು ಗುರಿಯಾಗಿಸಿ ಇರಾನ್ ಮೂರು ಸುತ್ತು ಕ್ಷಿಪಣಿ ದಾಳಿ ನಡೆಸಿದೆ ಎಂದು ಇಸ್ರೇಲ್‌ನ ಹೋಮ್ ಫ್ರಂಟ್ ಕಮಾಂಡ್ ತಿಳಿಸಿದೆ.

ಕಿರುಸುದ್ದಿ

ಜೈಶಂಕರ್, ರೂಬಿಯೊ ದೂರವಾಣಿ ಮಾತು

• **ಹೊಸದಿಲ್ಲಿ:** ಇರಾನ್ ವಿರುದ್ಧದ ಅಮೆರಿಕ-ಇಸ್ರೇಲಿ ಯುದ್ಧಕ್ಕೆ ಸಂಬಂಧಿಸಿದಂತೆ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಪರಿಸ್ಥಿತಿ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೆ ಚರ್ಚಿಸಿದ್ದಾರೆ.ಮಧ್ಯಪ್ರಾಚ್ಯ ಯುದ್ಧದ ಬಗ್ಗೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ರೂಬಿಯೊ ಅವರೊಂದಿಗೆ ವಿವರವಾದ ಚರ್ಚೆ ನಡೆಸಿದ್ದೇನೆ ಎಂದು ಜೈಶಂಕರ್ ಎಕ್ಸ್ ನಲ್ಲಿ ಹೇಳಿದರು.

ಸೇನಾ ವಿಮಾನ ಪತನ 66 ಮಂದಿ ಸಾವು

• **ಕೊಲಂಬಿಯಾ:** ಸೇನಾ ವಿಮಾನವೊಂದು ಟೇಕ್ ಆಫ್ ಕೂಡಲೇ ಪತನಗೊಂಡು 66 ಮಂದಿ ಮೃತಪಟ್ಟಿರುವ ಘಟನೆ ದಕ್ಷಿಣ ಕೊಲಂಬಿಯಾದಲ್ಲಿ ನಡೆದಿದೆ. ಸೇನಾದಲ್ಲಿ 125 ಮಂದಿ ಪ್ರಯಾಣಿಸುತ್ತಿದ್ದು, ಇನ್ನುಳಿದ ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದುರಂತ ಅಪಘಾತ ಅಮೆಜಾನ್ ಪ್ರದೇಶದಲ್ಲಿರುವ ಪುಟುಮಾಯೋ ಪ್ರಾಂತ್ಯದ ದೂರದ ಪಟ್ಟಣವಾದ ಪ್ಯುರ್ಟೋ ಲೆಗುಇಜಾಮೋದಲ್ಲಿ ಸಂಭವಿಸಿದೆ.

ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕಿದೆ

• **ಹೊಸದಿಲ್ಲಿ:** ಐ-ಪ್ಯಾಕ್ ಕಚೇರಿ ಮೇಲಿನ ಇಡಿ ದಾಳಿ ವೇಳೆ ಅಡ್ಡಿಪಡಿಸಿದ ಆರೋಪದ ಪ್ರಕರಣದಲ್ಲಿ, ಇಡಿ ಅರ್ಜಿಯ ಸಿಂಧುತ್ವ ಪ್ರಶ್ನಿಸಿದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕಠಿಣವಾಗಿ ಪ್ರಶ್ನಿಸಿದೆ. 'ಇಡಿ ಅಧಿಕಾರಿಗಳಿಗೂ ಮೂಲಭೂತ ಹಕ್ಕುಗಳಿವೆ; ಅವರು ಅಧಿಕಾರಿಗಳೆಂಬ ಕಾರಣಕ್ಕೆ ನಾಗರಿಕತ್ವ ಕಳೆದುಕೊಳ್ಳುವುದಿಲ್ಲ' ಎಂದು ಕೋರ್ಟ್ ತೀಕ್ಷ್ಣವಾಗಿ ಹೇಳಿದೆ.

» **ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಸುಪ್ರೀಂ ಚಾಟಿ**

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಎನ್.ವಿ. ಅಂಜಾರಿಯಾ ಪೀಠ ವಿಚಾರಣೆ ನಡೆಸಿತು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ಇಡಿ ಅಧಿಕಾರಿಗಳು ಸಂವಿಧಾನದ 32ನೇ ವಿಧಿಯಡಿ ಅರ್ಜಿ ಸಲ್ಲಿಸಲು ಸ್ಪಷ್ಟವಾಗಿ ಮೂಲಭೂತ ಹಕ್ಕು ಉಲ್ಲಂಘನೆ ತೋರಿಸಬೇಕೆಂದು ವಾದಿಸಿದರು. 'ಕರ್ತವ್ಯ ನಿರ್ವಹಣೆಗೆ ಅಡ್ಡಿಯಾಗುವುದು ಮೂಲಭೂತ ಹಕ್ಕು ಉಲ್ಲಂಘನೆ ಅಲ್ಲ' ಎಂದರು. ಇದಕ್ಕೆ ಪ್ರತಿಯಾಗಿ ಕೋರ್ಟ್, 'ಮುಖ್ಯಮಂತ್ರಿಯೇ ತನಿಖೆಗೆ ಅಡ್ಡಿಯಾದರೆ, ಅದೇ ಸರ್ಕಾರದ ಬಳಿ ಪರಿಹಾರ ಕೇಳಬೇಕೇ?' ಎಂದು ಪ್ರಶ್ನಿಸಿತು. ಇದಕ್ಕೆ ಸಿಬಲ್, 'ಅಪರಾಧ ನಡೆದಿದೆ ಎಂದು ಊಹಿಸಬೇಡಿ' ಎಂದು ಉತ್ತರಿಸಿದರು. ಕೋರ್ಟ್ ತಕ್ಷಣ, 'ನಾವು ಊಹಿಸುತ್ತಿಲ್ಲ; ಅದು ಆರೋಪ. ಅದನ್ನು ಪರಿಶೀಲಿಸಬೇಕಿದೆ' ಎಂದು ಸ್ಪಷ್ಟಪಡಿಸಿತು.

ಪಾಕಿಸ್ತಾನ ವಿಶ್ವದ ಅತ್ಯಂತ ಮಾಲಿನ್ಯ ಹೊಂದಿದ ದೇಶ

• **ಹೊಸದಿಲ್ಲಿ:** ವಿಶ್ವದಲ್ಲಿ ವಾಯು ಮಾಲಿನ್ಯ ಗಂಭೀರ ಮಟ್ಟ ತಲುಪಿದ್ದು, ಪಾಕಿಸ್ತಾನವೇ ವಿಶ್ವದ ಅತ್ಯಂತ ಮಾಲಿನ್ಯ ಹೊಂದಿದ ದೇಶವಾಗಿದೆ ಎಂದು ಹೊಸದೊಂದು ವರದಿ ಬಹಿರಂಗಪಡಿಸಿದೆ. ಬಾಂಗ್ಲಾದೇಶ ಮತ್ತು ತಾಜಿಕಿಸ್ತಾನ್ ನಂತರದ ಸ್ಥಾನಗಳಲ್ಲಿ ಇದ್ದು, ಭಾರತ ಆರನೇ ಸ್ಥಾನದಲ್ಲಿದೆ. ಸ್ವಿಜರ್ಲೆಂಡ್‌ನ ವಾಯು ಗುಣಮಟ್ಟ ತಂತ್ರಜ್ಞಾನ ಸಂಸ್ಥೆ ಐಕ್ಯುಏರ್ ಈ ವರದಿ ಪ್ರಕಟಿಸಿದ್ದು, 143 ದೇಶಗಳ ಮಾಲಿನ್ಯ ಮಟ್ಟ ಅವಲೋಕಿಸಿದೆ. ಇನ್ನು ಚೀನಾ 20ನೇ ಸ್ಥಾನದಲ್ಲಿದ್ದು, ಅಮೆರಿಕಾ 120ನೇ ಮತ್ತು ಬ್ರಿಟನ್ 110ನೇ ಸ್ಥಾನದಲ್ಲಿವೆ. ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿದ ವಾರ್ಷಿಕ ಸರಾಸರಿ ಪಿಎಂ2.5 ಮಾನದಂಡವನ್ನು ಕೇವಲ 13 ದೇಶಗಳು ಪೂರೈಸಿವೆ. ಫ್ರೆಂಚ್ ಪಾಲಿನೇಶಿಯಾ, ಪ್ಯುರ್ಟೋ ರಿಕೋ, ಅಮೆರಿಕದ ವರ್ಜಿನ್ ದ್ವೀಪಗಳು, ಬಾರ್ಬಡೋಸ್, ನ್ಯೂ ಕ್ಯಾಲಿಡೋನಿಯಾ, ಐಸ್ಲ್ಯಾಂಡ್, ಬೆರ್ಮುಡಾ, ರಿಯೂನಿಯನ್, ಅಂಡೋರಾ, ಆಸ್ಟ್ರೇಲಿಯಾ, ಗ್ರೆನೇಡಾ, ಪನಾಮಾ ಮತ್ತು ಎಸ್ಟೋನಿಯಾ ಈ ಪಟ್ಟಿಯಲ್ಲಿ ಸೇರಿವೆ. ನಗರಗಳ ಮಟ್ಟದಲ್ಲಿ ಉತ್ತರ ಪ್ರದೇಶದ ಲೋನಿ ವಿಶ್ವದಲ್ಲೇ ಅತ್ಯಂತ ಮಾಲಿನ್ಯಗೊಂಡ ನಗರವಾಗಿದ್ದು, ಚೀನಾದ ಹೋಟಾನ್ ಮತ್ತು ಮೇಘಾಲಯದ ಬೈರ್ನಿಹಾಟ್ ನಂತರದ ಸ್ಥಾನಗಳಲ್ಲಿ ಇವೆ. ದಿಲ್ಲಿ ನಾಲ್ಕನೇ ಸ್ಥಾನದಲ್ಲಿದ್ದು, ಪಾಕಿಸ್ತಾನದ ಫೈಸಲಾಬಾದ್ ಐದನೇ ಸ್ಥಾನದಲ್ಲಿದೆ. ವಿಶ್ವದ ಅತ್ಯಂತ ಮಾಲಿನ್ಯಗೊಂಡ 25 ನಗರಗಳಲ್ಲಿ ಭಾರತ, ಪಾಕಿಸ್ತಾನ ಮತ್ತು ಚೀನಾದ ನಗರಗಳೇ ಹೆಚ್ಚಿನವುಗಳಾಗಿವೆ.

» **ಬಾಂಗ್ಲಾಗೆ ಎರಡನೇ ಸ್ಥಾನ**
» **ಆರನೇ ಸ್ಥಾನದಲ್ಲಿ ಭಾರತ**

ಬಿಕ್ಕಟ್ಟಿನ ನಡುವೆಯೂ ಇಂಧನ ಪೂರೈಕೆ ಭರವಸೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದಲ್ಲಿ ಉಲ್ಬಣಿಸಿರುವ ಪ್ರಾದೇಶಿಕ ಉದ್ವಿಗ್ನತೆಯ ನಡುವೆಯೂ ದೇಶದಲ್ಲಿ ಎಲ್‌ಪಿಜಿ, ಪೆಟ್ರೋಲ್ ಮತ್ತು ಡೀಸೆಲ್‌ನ ಸಾಕಷ್ಟು ಪೂರೈಕೆಯನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಭರವಸೆ ನೀಡಿದೆ. ಇಂಧನ ದಾಸ್ತಾನುಗಳು ಸ್ಥಿರವಾಗಿರುವುದರಿಂದ ಸಾರ್ವಜನಿಕರು ಯಾವುದೇ ಕಾರಣಕ್ಕೂ ಪ್ಯಾನಿಕ್ ಬುಕಿಂಗ್ ಅಥವಾ ಅನಗತ್ಯ ಸಂಗ್ರಹಣೆಗೆ ಮುಂದಾಗಬಾರದು ಎಂದು ವಿನಂತಿಸಲಾಗಿದೆ.

ಪೂರೈಕೆ ಸರಪಳಿಯ ಸ್ಥಿರತೆ: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ, ದೇಶಾದ್ಯಂತ ಎಲ್ಲಾ ಪ್ರಮುಖ ಇಂಧನಗಳ ಸಾಕಷ್ಟು ದಾಸ್ತಾನುಗಳನ್ನು ಪ್ರಸ್ತುತ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಪಶ್ಚಿಮ ಏಷ್ಯಾದ ಭೌಗೋಳಿಕ ರಾಜಕೀಯ ಪರಿಸ್ಥಿತಿ ಸರಬರಾಜಿನ ಮೇಲೆ ಸ್ವಲ್ಪ ಮಟ್ಟಿನ ಒತ್ತಡ ಉಂಟುಮಾಡಿದ್ದರೂ, ಯಾವುದೇ ವಿತರಣಾ ಕೇಂದ್ರಗಳಲ್ಲಿ ಇಂಧನದ ಕೊರತೆ ಅಥವಾ 'ಡ್ರೈ-ಔಟ್' ವರದಿಯಾಗಿಲ್ಲ. ಎಲ್ಲಾ ಗೃಹಬಳಕೆಯ ಗ್ರಾಹಕರಿಗೆ ಶೇ. 100 ರಷ್ಟು ಸಾಮರ್ಥ್ಯದಲ್ಲಿ ಪಿಎನ್‌ಜಿ ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕಾರ್ಯತಂತ್ರದ ಬಫರ್, ವಿತರಣಾ ನಿರ್ವಹಣೆ: ನಿರಂತರ ಲಭ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಹೆಚ್ಚುವರಿ ಎಲ್‌ಪಿಜಿ ಸರಕುಗಳನ್ನು ಈಗಾಗಲೇ ಸಿದ್ಧಪಡಿಸಿ ಭಾರತಕ್ಕೆ ರವಾನಿಸಲಾಗಿದೆ. ಹಾರ್ಮುಜ್ ಜಲಸಂಧಿಯಂತಹ ಪ್ರಮುಖ ಇಂಧನ ಮಾರ್ಗಗಳಲ್ಲಿ ಉಂಟಾಗಬಹುದಾದ ಅಡೆತಡೆಗಳನ್ನು ಸಮರ್ಥವಾಗಿ ಎದುರಿಸಲು ಭಾರತ ಅಗತ್ಯ ಪೂರೈಕೆ ಯೋಜನೆಗಳನ್ನು ಹೊಂದಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಎಐಎಡಿಎಂಕೆ ಪ್ರಣಾಳಿಕೆಯಲ್ಲಿ ಉಚಿತ ಫ್ರಿಡ್ಜ್!

• **ಚೆನ್ನೈ:** ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಮಂಗಳವಾರ ಪ್ರಸಕ್ತ ವಿಧಾನಸಭಾ ಚುನಾವಣೆಗೆ ಪಕ್ಷದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಿದರು. ಈ ಹಿಂದೆ, ಮೂರು ಕಂತುಗಳಲ್ಲಿ, ಅವರು 15 ಪ್ರಮುಖ ಭರವಸೆಗಳನ್ನು ಘೋಷಿಸಿದ್ದಾರೆ. ಸಂಪೂರ್ಣ ಪ್ರಣಾಳಿಕೆಯು ಈಗ 297 ಭರವಸೆಗಳನ್ನು ಹೊಂದಿದೆ. ರಾಜ್ಯದಲ್ಲಿ ಪಡಿತರ ಕಾರ್ಡುದಾರರಿಗೆ ಒಂದು ರೆಫ್ರಿಜರೇಟರ್ ಅನ್ನು ಉಚಿತವಾಗಿ ಒದಗಿಸಲಾಗುವುದು. ಇದಲ್ಲದೆ, ಈಗಾಗಲೇ ವಿತರಿಸಲಾಗಿರುವ ಉಚಿತ ಅಕ್ಕಿಯ ಜತೆಗೆ, ಒಂದು ಕೆ.ಜಿ. ಬೇಳೆ ಮತ್ತು ಒಂದು ಲೀಟರ್ ಅಡುಗೆ ಎಣ್ಣೆಯನ್ನು ಸಹ ಉಚಿತವಾಗಿ ಪೂರೈಸಲಾಗುವುದು. ಎಐಎಡಿಎಂಕೆ ಪ್ರಣಾಳಿಕೆಯು ಎಲ್ಲಾ ಕೃಷಿ ಉತ್ಪನ್ನಗಳಿಗೆ, ವಿಶೇಷವಾಗಿ ಆಹಾರ ಧಾನ್ಯಗಳು, ಬೇಳೆಕಾಳುಗಳು ಮತ್ತು ಎಣ್ಣೆಕಾಳುಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ನಿಗದಿಪಡಿಸುವ ಭರವಸೆ ನೀಡಿದೆ.

ವಿದೇಶೀಯರಿಗೆ ಇಲ್ಲಿ ಉದ್ಯೋಗಾವಕಾಶ ಲಭಿಸದಂತೆ ಎಚ್ಚರ ವಹಿಸಿ: ಭಾಗ್ವತ್

ನುಸುಳುಕೋರರನ್ನು ಪತ್ತೆಹಚ್ಚಿ ಅಧಿಕಾರಿಗಳಿಗೊಪ್ಪಿಸಿ

• **ಮಥುರಾ:** ಭಾರತದಲ್ಲಿ ಅಕ್ರಮ ವಲಸಿಗರ ಸಂಖ್ಯೆ ಮೇರೆ ಮೀರುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್, ಸೂಕ್ತ ನಿಗಾ ಮುಖೇನ ಅಕ್ರಮ ನುಸುಳುಕೋರರನ್ನು ಪತ್ತೆಹಚ್ಚಿ ಅಧಿಕಾರಿಗಳಿಗೊಪ್ಪಿಸಬೇಕು, ಅಕ್ರಮವಾಗಿ ವಲಸೆ ಬಂದ ವಿದೇಶೀಯರಿಗೆ ಇಲ್ಲಿ ಯಾವುದೇ ಉದ್ಯೋಗಾವಕಾಶ ಲಭಿಸದಂತೆ ಎಚ್ಚರ ವಹಿಸಬೇಕೆಂದು ಜನರಿಗೆ ಕರೆ ನೀಡಿದ್ದಾರೆ.



ಕನಿಷ್ಠ ಮೂರು ಮಕ್ಕಳ ನೀತಿ ಅನಿವಾರ್ಯ: ಸನಾತನ ಹಿಂದು ಸಂಸ್ಕೃತಿ-ಪರಂಪರೆ ಬೇರುಗಳು ಗಟ್ಟಿಯಾಗಬೇಕಾದರೆ, ಜನಾಂಗಗಳು, ಪೀಳಿಗೆಗಳು ಉಳಿಯಬೇಕಾದರೆ ಹಿಂದುಗಳು ಕನಿಷ್ಠಪಕ್ಷ ಮೂವರು ಮಕ್ಕಳನ್ನು ಹೊಂದುವ ನೀತಿಯನ್ನು ಅನುಸರಿಸುವುದು ಅನಿವಾರ್ಯ. ಜನಸಂಖ್ಯಾತಜ್ಞರೇ ಈ ಬಗ್ಗೆ ಎಚ್ಚರಿಸಿದ್ದಾರೆಂಬುದನ್ನು ನೆನಪಿಸಿದ ಭಾಗ್ವತ್‌ಜೀ, ಬಲವಂತದ ಮತೀಯ ಮತಾಂತರಗಳು ಸರಿಯಲ್ಲ. ಇದು ಸಾಮಾಜಿಕ ಸ್ವಾಸ್ಥ್ಯ,ಸಾಮರಸ್ಯ, ಸಹಬಾಳ್ವೆಗೆ ಧಕ್ಕೆ ಉಂಟು ಮಾಡುತ್ತದೆ. ಮಥುರಾದಲ್ಲಿ ಹೊಸ ಆಶ್ರಮವೊಂದನ್ನು ಉದ್ಘಾಟಿಸಿ ಸರಸಂಘಚಾಲಕ್ ಮಾತನಾಡಿದರು.

ಅಪಾಯ ಕಟ್ಟಿಟ್ಟ ಬುತ್ತಿ: ಸ್ವಸ್ಥ ಆರೋಗ್ಯಕರ ಕುಟುಂಬಕ್ಕಾಗಿ ವೈದ್ಯರು ಮೂವರು ಮಕ್ಕಳ ನೀತಿಯನ್ನು ಶಿಫಾರಸು ಮಾಡುತ್ತಾರೆ. ಬಾಲ್ಯದಲ್ಲಿ ಹಿರಿಯರು-ಕಿರಿಯರೊಂದಿಗೆ ಮಕ್ಕಳ ಬೆರೆಯುವಿಕೆಯು , ಮುಂದೆ ಸಾಮಾಜಿಕ ಕೌಶಲಗಳ ಕಲಿತುಕೊಳ್ಳಲು, ಸಮೂಹವೊಂದರೊಳಗೆ ಹೊಂದಾಣಿಕೆಯಿಂದ ಬಾಳುವ ಸಾಮರ್ಥ್ಯವನ್ನು ಮೈಗೂಡಿಸಲು ಮಕ್ಕಳಿಗೆ ನೆರವಾಗುತ್ತೆ. ಸಂತಾನೋತ್ಪತ್ತಿ ದರವು ಮೂರಕ್ಕಿಂತ ಕಡಿಮೆಯಾದಲ್ಲಿ ದೀರ್ಘಕಾಲೀನ ಅಪಾಯಗಳು ಕಟ್ಟಿಟ್ಟ ಬುತ್ತಿ ಎಂದು ಜನಸಂಖ್ಯಾ ಅಧ್ಯಯನಗಳು ಎಚ್ಚರಿಸಿವೆ. ಕಡಿಮೆ ಜನನ ಪ್ರಮಾಣವನ್ನು ಹೊಂದಿರುವ ರಾಷ್ಟ್ರಗಳು ಈಗಾಗಲೆ ಕನಿಷ್ಠ ಮೂರಕ್ಕಿಂತಲೂ ಅಧಿಕ ಮಕ್ಕಳನ್ನು ಹೊಂದುವ ನೀತಿಗೆ ಮೊರೆಹೋಗಿವೆ ಎಂದು ಭಾಗ್ವತ್ ಗಮನ ಸೆಳೆದರು.

ಜನಸಂಖ್ಯಾ ನೀತಿಯ ಮರುಪರಾಮರ್ಶೆ ಅಗತ್ಯ: ಭಾರತದ ಜನಸಂಖ್ಯಾ ನೀತಿಯ ಮರುಪರಿಶೀಲನೆ ಅಗತ್ಯವೆಂದು ಆಗ್ರಹಿಸಿದ ಭಾಗ್ವತ್, ಈ ವಿಚಾರದಲ್ಲಿ ಕಾನೂನು ಕ್ರಮಗಳನ್ನು ಅನುಷ್ಠಾನಿಸುವಾಗ , ಮೊದಲಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ತೀರಾ ಮುಖ್ಯವೆಂದು ಪ್ರತಿಪಾದಿಸಿದರು. ಸಮಾಜದ ಒಳಿತಿಗಾಗಿ ಒಂದು ಕುಟುಂಬ ಎರಡಕ್ಕಿಂತಲೂ ಮೂರು ಮಕ್ಕಳನ್ನು ಹೊಂದುವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಸಲಹೆಯಿತ್ತರು.

ಧರ್ಮಕ್ಕನುಸಾರ ಬದುಕು ಸನಾತನ ಭಾರತದ ಹಿರಿಮೆ: ಮೆರಿಕ, ಚೀನಾಗಳ ಆಕ್ರಮಣಕಾರಿ ಧೋರಣೆಯನ್ನು ಉಲ್ಲೇಖಿಸಿದ ಭಾಗ್ವತ್‌ಜೀ, ಈ ವಿಚಾರದಲ್ಲಿ ಇತರರ ಅಭಿಮತಗಳಿಗೂ ಅವಕಾಶವೀವ ಭಾರತದ ನಡೆ ಪ್ರಶಂಸಾರ್ಹ ಎಂದು ಹೊಗಳಿದರು. ತನ್ನ ಆರ್ಥಿಕ ಮಾದರಿ ಮಾತ್ರ ಶ್ರೇಷ್ಠ , ಎಲ್ಲರೂ ಇದನ್ನೇ ಅನುಸರಿಸಬೇಕೆಂದು ಅಮೆರಿಕ ಒತ್ತಡ ಹೇರಬಹುದು. ಚೀನಾ ಕೂಡ ಇದೇ ವರಸೆ ಹೊಂದಿರಬಹುದು. ಆದರೆ ತನ್ನ ಧೋರಣೆಯನ್ನು ಇತರರಿಗೆ ಹೇರದಿರುವುದು ಭಾರತದ ವಿಶೇಷತೆ. ಬದಲಾಗಿ ಪ್ರತಿಯೋರ್ವರ ಅಭಿಪ್ರಾಯಗಳೂ ಸರಿಯಾದ್ದೆಂಬುದು ಭಾರತದ ನಂಬುಗೆ ಮತ್ತು ಧರ್ಮ, ಸತ್ಯ ಹಾಗೂ ಸಾಂಸ್ಕೃತಿಕ ಹಿರಿಮೆಗನುಗುಣವಾಗಿ ಜೀವಿಸುವುದೆಂದರೆ ಹೀಗೇನೆ. ಜಗತ್ತು ಆಕ್ರಮಣಕಾರಿಯಾಗಿರಬಹುದು. ಆದರೆ ನಮ್ಮ ಸನಾತನ ಮಾದರಿಯು ನೈತಿಕ ಚಾರಿತ್ರ್ಯ, ಸನ್ನಡತೆಗಳನ್ನು ಎತ್ತಿ ಹಿಡಿಯುವಂತದ್ದು ಮತ್ತು ಇದು ಜಾಗತಿಕ ಸಮುದಾಯಕ್ಕೆ ಮಾರ್ಗದರ್ಶಿ ಕೂಡ ಎಂದು ಗಮನ ಸೆಳೆದರು.

ಬದುಕಿನ ಬಗ್ಗೆ ಜ್ಞಾನ ನೀಡುವ ಪ್ರಥಮ ಶಾಲೆ ಆಶ್ರಮ

ಬದುಕಿಗೊಂದು ದೃಷ್ಟಿಕೋನ ನೀಡುವಲ್ಲಿ , ವ್ಯಕ್ತಿಗೆ ಆತನ ಧರ್ಮ ಸಂಸ್ಕೃತಿಯ ಹಿರಿಮೆ ಬಗ್ಗೆ ಅಭಿಮಾನ ಮೂಡಿಸುವಲ್ಲಿ ಮತ್ತು ಆಕ್ರಮಣಕಾರಿ ಪ್ರವೃತ್ತಿಯನ್ನು ಮೊಟಕಿ ಹಾಕುವಲ್ಲಿ ಆಶ್ರಮಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಕಾರಣಗಳಿಂದಲೆ ಆಶ್ರಮ ಉದ್ಘಾಟನೆಗೆ ತಾನು ಸಂಪ್ರೀತಿಯಿಂದ ಬಂದಿರುವೆ. ಭಾರತೀಯ ಸಂಸ್ಕೃತಿಯಲ್ಲಿ ಆಶ್ರಮ ಪದಕ್ಕೊಂದು ವಿಶಿಷ್ಟತೆಯಿದೆ. ಇತರ ಯಾವುದೇ ಭಾಷೆಗಳಿಗೆ ಇದರ ಅರ್ಥಪೂರ್ಣ ತರ್ಜುಮೆ ಅಸಾಧ್ಯ. ಬದುಕಿನ ಬಗ್ಗೆ ಮೊತ್ತಮೊದಲು ಜ್ಞಾನ ಬೋಧಿಸುವ ಪ್ರಥಮ ಶಾಲೆಗಳೇ ಆಶ್ರಮಗಳು. ಆಶ್ರಮಗಳಲ್ಲಿ ಅನುಶಾಸನಬದ್ಧರಾಗಿ ಜೀವಿಸಿ, ವಿದ್ಯಾರ್ಜನೆ ಮಾಡಿದವರು ಮುಂದೆ ದಶಕಗಳ ಕಾಲ ಅತ್ಯಂತ ಪರಿಣಾಮಕಾರಿಯಾಗಿ ಸಮಾಜ ಸೇವೆ ಮಾಡಬಲ್ಲರು ಎಂದರು.

ಪ್ರಧಾನಿಗೆ ಕರೆ ಮಾಡಿದ ಅಮೆರಿಕ ಅಧ್ಯಕ್ಷ

ಮಧ್ಯಪ್ರಾಚ್ಯ ಬಿಕ್ಕಟ್ಟು ಟ್ರಂಪ್- ಮೋದಿ ಚರ್ಚೆ

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆ, ಶಾಂತಿ ಸ್ಥಾಪನೆ ಮತ್ತು ಉದ್ವಿಗ್ನತೆ ಇಳಿಕೆಗೆ ಭಾರತ ಒತ್ತು ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆ ದೂರವಾಣಿ ಮಾತುಕತೆ ನಡೆಸಿದ ಬಳಿಕ ಅವರು ಈ ಮಾತು ಹೇಳಿದ್ದಾರೆ.

ಜಾಗತಿಕ ಸಾಗಾಟದ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿ ಭದ್ರತೆ ಹಾಗೂ ಮುಕ್ತ ಸಂಚಾರವೇ ಈ ಮಾತುಕತೆಯ ಕೇಂದ್ರಬಿಂದುವಾಗಿತ್ತು. ವಿಶ್ವ ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಈ ಜಲಸಂಧಿ ಯಾವ ಪರಿಸ್ಥಿತಿಯಲ್ಲೂ ಮುಕ್ತವಾಗಿಯೇ ಇರಬೇಕು ಎಂಬುದರ ಕುರಿತು ಇಬ್ಬರು ನಾಯಕರು ಸಹಮತ ವ್ಯಕ್ತಪಡಿಸಿದರು.

ಅಮೆರಿಕ ಅಧ್ಯಕ್ಷ ಟ್ರಂಪ್ ಈ ಕರೆ ಮಾಡಿದ್ದು, ಇರಾನ್ ಹಾರ್ಮುಜ್ ಜಲಸಂಧಿಯನ್ನು ಮರುತೆರೆಯಲು ನೀಡಿದ್ದ ಗಡುವನ್ನು ಐದು ದಿನಗಳವರೆಗೆ ವಿಸ್ತರಿಸಿದ ಹಿನ್ನೆಲೆಯಲ್ಲಿ ಈ ಚರ್ಚೆ ನಡೆದದ್ದು ಗಮನಾರ್ಹವಾಗಿದೆ.

'ಟ್ರಂಪ್ ಅವರಿಂದ ಕರೆ ಬಂದಿದೆ. ಮಧ್ಯಪ್ರಾಚ್ಯದ ಪರಿಸ್ಥಿತಿ ಕುರಿತು ಉಪಯುಕ್ತವಾದ ಚರ್ಚೆ ನಡೆದಿದೆ. ಭಾರತವು ಉದ್ವಿಗ್ನತೆ ಕಡಿತ ಮತ್ತು ಶೀಘ್ರ ಶಾಂತಿ ಸ್ಥಾಪನೆಗೆ ಬೆಂಬಲ ನೀಡುತ್ತದೆ. ಹಾರ್ಮುಜ್ ಜಲಸಂಧಿ ವಿಶ್ವಕ್ಕೆ ಮುಕ್ತ, ಸುರಕ್ಷಿತ ಮತ್ತು ಸುಲಭ ಪ್ರವೇಶಯೋಗ್ಯವಾಗಿರಬೇಕು,' ಎಂದು ಮೋದಿ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರ ನೇಮಕಾತಿಗೆ ಮನವಿ

ಮಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ಕೂಡಲೇ ನೇಮಕಾತಿ ಮಾಡಬೇಕು. ಮುಂಬರುವ ಬಜೆಟ್‌ನಲ್ಲಿ ನಿಗಮಕ್ಕೆ ರೂ. 500 ಕೋಟಿ ಅನುದಾನ ಮೀಸಲಿಡಬೇಕು ಎಂದು ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಒಕ್ಕೂಟದ ಗೌರವ ಅಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.



ರಾಜ್ಯಾದ್ಯಂತ ಹಿಂದುಳಿದ ವರ್ಗದ ಪ್ರವರ್ಗ-1ಕ್ಕೆ ಸೇರಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ 46 ಜಾತಿಗಳನ್ನೊಳಗೊಂಡ ಅಲೆಮಾರಿ ಕುಟುಂಬಗಳು, ಹಲವಾರು ವರ್ಷಗಳಿಂದ ಬೀದಿ ಬದಿಗಳಲ್ಲಿ ಸರಕಾರಿ, ಖಾಸಗಿ ಖಾಲಿ ನಿವೇಶನಗಳಲ್ಲಿ ಗುಡಿಸಲು-ಗುಡಾರಗಳನ್ನು ಕಟ್ಟಿಕೊಂಡು ಜೀವನೋಪಾಯಕ್ಕಾಗಿ ಹಳ್ಳಿಗಳ ಮೇಲೆ ವ್ಯಾಪಾರಕ್ಕಾಗಿ ಬಾಂಡೆ ವ್ಯಾಪಾರ ಸೂಜಿ-ದಾರ, ಪಿನ್ನು, ಟೇಪು, ಬೀಗ ರಿಪೇರಿ ಮಾಡುವುದು. ದನ-ಕುರಿ-ಮೇಕೆ ಹಂದಿ ಸಾಕಾಣಿಕೆ, ಬಲೆ ಹೆಣೆಯುವುದು, ಮೀನು ಹಿಡಿದು ಮಾರುವುದು, ಧಾರ್ಮಿಕ ಬಿಕ್ಷಾಟನೆ, ಭವಿಷ್ಯ ಹೇಳುವುದು. ಗಿಣಿ ಭವಿಷ್ಯ ಹೇಳುವುದು, ಬಳೆ ಇತ್ಯಾದಿಗಳನ್ನು ಮಾರುತ್ತಾ ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಕಷ್ಟಕರ ಜೀವನವನ್ನು ನಡೆಸುತ್ತಿದ್ದಾರೆ. ಆ ಜಾಗವನ್ನು ಅವರ ಹೆಸರಿಗೆ ಪಹಣಿ ಪತ್ರವನ್ನು ನೀಡುವುದು, ಅಲೆಮಾರಿ ಜನರು ಹೆಚ್ಚಾಗಿ ವಾಸಿಸುತ್ತಿರುವ ಕಡೆ ಅಲೆಮಾರಿ ಸಮುದಾಯ ಭವನಗಳನ್ನು ನಿರ್ಮಿಸುವುದು,

ಅಲೆಮಾರಿ ರುದ್ರಭೂಮಿಗಾಗಿ ಸರ್ಕಾರಿ ಜಾಗವನ್ನು ಕಾಯ್ದಿರಿಸುವುದು, ಈ ಜನಾಂಗದ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ತೆರೆಯುವುದು. ಅಲ್ಲದೆ ಈ ಜನಾಂಗದವರಿಗೆ ಇಲಾಖೆ ನೀಡುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿದ್ಯಾರ್ಥಿಗಳಿಗೆ ನೀಡುವ ಶಾಲಾ ವರ್ಗಾವಣಾ ಪತ್ರದಲ್ಲಿ ಅವರ ಹೆಸರು ಜಾತಿ ಜೊತೆಗೆ ಅಲೆಮಾರಿ/ಅರೆ ಅಲೆಮಾರಿ ಎಂದು ಬರೆದು ಪ್ರವರ್ಗವನ್ನು ಗುರುತಿಸಬೇಕು. ಅಲ್ಲದೆ ಈ ಜನಾಂಗದವರಿಗೆ ಹೆಚ್ಚಿನ ಮೀಸಲಾತಿಯನ್ನು ನೀಡಬೇಕು ಎಂದವರು ಒತ್ತಾಯಿಸಿದ್ದಾರೆ.

ಪ್ರತಿಷ್ಠಿತ ಖಾಸಗಿ ಶಾಲಾ ಕಾಲೇಜುಗಳಲ್ಲಿ ಪ್ರತಿಭಾನ್ವಿತ ಅಲೆಮಾರಿ ವಿದ್ಯಾರ್ಥಿಗಳಿಗೆ ಯಾವುದೇ ತಾರತಮ್ಯ ಮಾಡದೆ ನೇರ ಪ್ರವೇಶಾತಿಗೆ ಅವಕಾಶ ಕಲ್ಪಿಸಬೇಕು. ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳ ಉನ್ನತ ವಿದೇಶ ಶಿಕ್ಷಣ ಸಾಲಕ್ಕಾಗಿ ಇರುವಂತಹ ಮಾನದಂಡದ ಜಾಗತಿಕ ಅಂಕ ಶ್ರೇಣಿ 1000 ನಿರ್ಣಯವನ್ನು ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಯಾವುದೇ ಜಾಗತಿಕ ಅಂಕ ನಿರ್ಧರಿಸದೆ ವಿದೇಶಿ ಶಿಕ್ಷಣ ಸಾಲ ನೀಡಬೇಕು. ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳು ಶಾಲಾ ಕಾಲೇಜು ಪ್ರವೇಶ ಸಂದರ್ಭದಲ್ಲಿ ಕಟ್ಟಿದಂತಹ ಶುಲ್ಕವನ್ನು ಎಸ್.ಎಸ್.ಪಿ ಯೋಜನೆಯ ಪ್ರಕಾರ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಹಿಂತಿರುಗಿಸಬೇಕು, ವಸತಿ, ನಿವೇಶನ ರಹಿತರಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು. ರಾಜೀವ್ ಗಾಂಧಿ ವಸತಿ ನಿಗಮದಿಂದ ನಿವೇಶನ ನಿರ್ಮಿಸಲು ರೂ. 5ಲಕ್ಷ ನೀಡಬೇಕು. ಅಲೆಮಾರಿ / ಅರೆ ಅಲೆಮಾರಿ ಜನಾಂಗದವರಿಗೆ ಶೇ. 3% ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ವಿನಂತಿಸಿದ್ದಾರೆ.

ತೃಕ್ಕರೀಪ್ಪುರ ಚುನಾವಣಾಧಿಕಾರಿ ಯುಡಿಎಫ್ ಪರ ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ: ಎನ್‌ಡಿಎ

ಕಾಸರಗೋಡು: ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ ಮತ್ತು ಯುಡಿಎಫ್ ಬಗ್ಗೆ ವಿಶೇಷ ಕಾಳಜಿ ತೋರಿಸುತ್ತಿದ್ದಾರೆ ಎಂದು ಎನ್‌ಡಿಎ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಚುನಾವಣಾ ಸಮಿತಿಯ ಉಸ್ತುವಾರಿ ಮತ್ತು ಬಿಜೆಪಿ ರಾಜ್ಯ ಸಮಿತಿ ಸದಸ್ಯ ಎ.ವೇಲಾಯುಧನ್ ಆರೋಪಿಸಿದ್ದಾರೆ.

ಮಾ.23ರಂದು ಅಪರಾಹ್ನ 3 ಗಂಟೆಯೊಳಗೆ ಯುಡಿಎಫ್ ಅಭ್ಯರ್ಥಿ ಸಂದೀಪ್ ವಾರಿಯರ್ ಅವರ ನಾಮಪತ್ರ ಸಲ್ಲಿಕೆ ಪೂರ್ಣಗೊಂಡಿರಲಿಲ್ಲ. ನಾಮಪತ್ರ ಸಲ್ಲಿಸುವ ಕೊನೆಯ ಅವಧಿ ಮುಕ್ತಾಯವಾಗಿತ್ತು. ಆದರೂ ಚುನಾವಣಾಧಿಕಾರಿ ಅಪರಾಹ್ನ 3 ಗಂಟೆಯ ನಂತರವೂ ಅವರಿಗೆ ಸಮಯಾವಕಾಶ ನೀಡುವ ಮೂಲಕ ವಿಶೇಷ ಆಸಕ್ತಿ ತೋರಿಸಿದರು ಎಂದು ಎ.ವೇಲಾಯುಧನ್ ಮಾರ್ಮಿಕವಾಗಿ ತಿಳಿಸಿದ್ದಾರೆ.

ಯುಡಿಎಫ್‌ನ ಸಂದೀಪ್ ವಾರಿಯರ್ ಅವರ ನಾಮಪತ್ರದಲ್ಲಿ ಅನೇಕ ದೋಷಗಳಿದ್ದರೂ, ಅನೇಕ ಕಾಲಂಗಳನ್ನು ಖಾಲಿ ಬಿಡಲಾಗಿದ್ದರೂ ಅವರ ನಾಮಪತ್ರವನ್ನು ಪುರಸ್ಕರಿಸಲಾಗಿದೆ. ಎಲ್ಲಾ ಕಾಲಂಗಳನ್ನು ಭರ್ತಿ ಮಾಡಬೇಕು ಎಂಬುದು ನಿಯಮವಾಗಿದೆ. ಇಲ್ಲದಿದ್ದರೆ ಇಲ್ಲ ಅಥವಾ ಅನ್ವಯಿಸುವುದಿಲ್ಲ ಎಂದು ಬರೆಯಬೇಕು ಎಂದು ಎ.ವೇಲಾಯುಧನ್ ಉಲ್ಲೇಖಿಸಿದ್ದಾರೆ.

ಯುಡಿಎಫ್ ಅಭ್ಯರ್ಥಿಯ ನಾಮಪತ್ರದಲ್ಲಿ ಅನೇಕ ಕಾಲಂಗಳನ್ನು ಖಾಲಿ ಬಿಡಲಾಗಿತ್ತು. ಅಭ್ಯರ್ಥಿಯ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮರೆಮಾಡಲಾಗಿದೆ. ಸಂದೀಪ್ ವಾರಿಯರ್ ಅವರು ನಾಮಪತ್ರದಲ್ಲಿ ತಮ್ಮ ಮೇಲಿರುವ ಪ್ರಕರಣಗಳ ಸಂಖ್ಯೆಯ ಕುರಿತು ಸಮಗ್ರ ಮಾಹಿತಿ ಒದಗಿಸಲಿಲ್ಲ. ಆದ್ದರಿಂದ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಮತ್ತು ಅವರ ಚುನಾವಣಾ ಏಜೆಂಟ್ ಹಾಗೂ ವಕೀಲರು ಯುಡಿಎಫ್ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಲು ಪ್ರಾಥಮಿಕವಾಗಿ ಸಾಕಷ್ಟು ಕಾರಣಗಳಿವೆ ಎಂದು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದರೂ ಚುನಾವಣಾಧಿಕಾರಿ ಆ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ. ಇದರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎ.ವೇಲಾಯುಧನ್ ಹೇಳಿದ್ದಾರೆ. ಚುನಾವಣೆಯನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಸಬೇಕೆಂದು ಎನ್‌ಡಿಎ ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದ ಚುನಾವಣಾ ಸಮಿತಿ ಒತ್ತಾಯಿಸಿದೆ.

ಮಲಯಾಳ ಭಾಷಾ ಮಸೂದೆ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗೆ ನಿರ್ಧಾರ

ಕಾಸರಗೋಡು: ಕೇರಳ ಸರಕಾರದ ಮಲಯಾಳ ಭಾಷಾ ಮಸೂದೆಯ ವಿರುದ್ಧ ಕಾಸರಗೋಡಿನ ಕನ್ನಡಿಗರು ಮತ್ತು ಕನ್ನಡ ಸಂಘಟನೆಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಕುರಿತು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಿದಂತೆ ಸಿದ್ಧತೆ ಅಂತಿಮ ಘಟ್ಟದಲ್ಲಿದೆ.

ಈ ಮಸೂದೆಯು ಕನ್ನಡ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಧಕ್ಕೆ ತರುವ ಸಾಧ್ಯತೆಯಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಸೂದೆಯಲ್ಲಿರುವ ವಿಧಿಗಳು ಸಂವಿಧಾನಾತ್ಮಕ ಹಕ್ಕುಗಳಿಗೆ ವಿರುದ್ಧವಾಗಿದ್ದು, ಕನ್ನಡ ಭಾಷೆಯ ಬಳಕೆ ಮತ್ತು ಅಭಿವೃದ್ಧಿಗೆ ಅಡ್ಡಿಯಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಈ ಕುರಿತು ಕನ್ನಡ ಸಂಘಟನೆಗಳ ಪ್ರತಿನಿಧಿಗಳು ಈಗಾಗಲೇ ಎರಡು ಸಭೆಗಳನ್ನು ನಡೆಸಿ ಮಸೂದೆಯ ಲೋಪದೋಷಗಳ ಬಗ್ಗೆ ಚರ್ಚಿಸಿದ್ದಾರೆ. ಎರಡನೇ ಸಭೆಯಲ್ಲಿ ಕಾನೂನು ಹೋರಾಟ ಕೈಗೊಳ್ಳುವ ನಿರ್ಧಾರ ಕೈಗೊಳ್ಳಲಾಗಿದೆ.

ತಜ್ಞರ ಸಮಿತಿಯು ಮಸೂದೆಯನ್ನು ಪರಿಶೀಲಿಸಿ, ಇದು ಸಂವಿಧಾನ ವಿರೋಧಿ ಹಾಗೂ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳಿಗೆ ಚ್ಯುತಿ ತರುವಂತದ್ದು ಎಂದು ಅಭಿಪ್ರಾಯಪಟ್ಟಿದೆ.

ಈ ಹಿನ್ನೆಲೆಯಲ್ಲಿ ಉಚ್ಚ ನ್ಯಾಯಾ ಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲು ಎಲ್ಲಾ ಪೂರ್ವ ಸಿದ್ಧತೆಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ದಾವೆ ಹೂಡಲು ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ಸಮಿತಿಯ ಅಧ್ಯಕ್ಷ ಕೆ.ಮುರಳೀಧರ ಬಳ್ಳಕ್ಕುರಾಯ ಅವರ ಅಧ್ಯಕ್ಷತೆಯಲ್ಲಿ ಕಾಸರಗೋಡಿನಲ್ಲಿ ಸೋಮವಾರ ನಡೆದ ತಜ್ಞ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಿ ಮುಂದಿನ ಹೆಜ್ಜೆಯಾಗಿ ದಾವೆ ಹೂಡುವ ಪ್ರಕ್ರಿಯೆಗೆ ಚಾಲನೆ ಕೊಡಲಾಗಿದೆ.

ಸಭೆಯಲ್ಲಿ ನಿವೃತ್ತ ನ್ಯಾಯಾಧೀಶ ರಾಜಕುಮಾರ ಎಂ.ವಿ., ನಿವೃತ್ತ ಡಿಇಒ, ವಕೀಲ ಎನ್.ಕೆ.ಮೋಹನ್‌ದಾಸ್, ವಕೀಲ ಸತ್ಯನಾರಾಯಣ ತಂತ್ರಿ, ನಿವೃತ್ತ ಡಿಡಿಇ ಮಹಾಲಿಂಗೇಶ್ವರ ರಾಜ್ ಡಿ., ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ್ ಎ., ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶೆಟ್ಟಿ, ಗಮಕ ಪರಿಷತ್ ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೆಕೆರೆ ಶಂಕರನಾರಾಯಣ ಭಟ್, ಲೋಕ ಸೇವಾ ಆಯೋಗದ ನಿವೃತ್ತ ಅಧೀನ ಕಾರ್ಯದರ್ಶಿ ಗಣೇಶ್ ಪ್ರಸಾದ್ ಪಾಣೂರು ಮೊದಲಾದವರು ಸಲಹೆ ಸೂಚನೆಗಳನ್ನು ನೀಡಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-512th) ಡ್ರಾ ಮಾರ್ಚ್ 24ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SG 362618 (KOTTAYAM)

Cons Prize-Rs: 5000/-
SA 362618 SB 362618 SC 362618 SD 362618
SE 362618 SF 362618 SH 362618 SJ 362618
SK 362618 SL 362618 SM 362618

2nd Prize Rs: 30,00,000/- [30 Lakhs]
SG 543229 (ERNAKULAM)

3d Prize Rs: 5,00,000/- [5 Lakhs]
SA 376560 (ALAPPUZHA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0426 1239 2082 2149 2895 3023 3433 3561 3691 4151 4158 4161 5023 5203 6519 6693 7768 8379 9513

5th Prize Rs.2,000/-
1504 2273 3927 5772 8206 9369

6th Prize Rs.1,000/-
0297 0942 2438 2452 2578 3216 3235 3593 4197 4335 4657 4704 5039 5206 6128 6608 6788 6845 7530 8402 8627 8926 9276 9376 9994

7th Prize Rs.500/-
0007 0029 0236 0255 0554 0585 0685 0819 0881 1091 1220 1252 1259 2229 2343 2370 2389 2577 2613 2659 2788 2937 2996 3127 3311 3397 3525 3560 3785 3869 4066 4342 4355 4463 4477 4540 4766 4821 4857 5078 5328 5787 5791 5892 6076 6196 6263 6317 6327 6412 6417 6883 7311 7466 7599 7866 8053 8088 8092 8223 8243 8318 8335 8372 8426 8552 8843 8882 9061 9171 9286 9440 9511 9657 9724 9861

8th Prize Rs.200/-
0013 0141 0634 0656 0659 0708 0734 0871 0900 1060 1283 1369 1543 1567 1621 2035 2446 2600 2622 2792 2845 2939 3073 3083 3094 3112 3114 3129 3346 3381 3389 3401 3545 3769 3837 3980 4226 4309 4559 4659 4775 4809 4814 4853 4863 5042 5146 5200 5435 5611 5621 5633 5778 5985 6029 6174 6231 6377 6616 6803 6810 6920 6932 7053 7173 7245 7329 7360 7361 7787 7995 8072 8104 8188 8235 8242 8309 8393 8469 8754 8774 8916 8951 9077 9268 9321 9322 9397 9797 9953

9th Prize Rs.100/-
0102 0142 0205 0299 0303 0403 0507 0686 0736 0830 0837 0890 1046 1055 1121 1171 1172 1196 1197 1219 1267 1273 1295 1376 1518 1569 1578 1833 1882 2066 2187 2204 2205 2206 2208 2245 2352 2365 2483 2543 2610 2616 2687 2708 2744 2826 2850 2868 2882 2927 3020 3121 3174 3283 3299 3377 3510 3594 3598 3599 3661 3665 3688 3724 3855 3892 3919 3974 3987 4001 4097 4117 4132 4196 4265 4302 4547 4563 4636 4663 4794 4877 4892 4997 5047 5051 5111 5184 5185 5230 5266 5586 5600 5758 5854 6049 6182 6185 6294 6527 6597 6647 6717 6739 6895 7090 7200 7239 7433 7500 7585 7617 7638 7686 7759 7971 8008 8114 8127 8225 8313 8321 8351 8395 8572 8586 8618 8709 8746 8766 8799 8827 8930 9069 9140 9185 9208 9217 9244 9315 9325 9423 9498 9604 9620 9685 9696 9721 9896 9912

ಪುತ್ತೂರು ಮಾರುಕಟ್ಟೆ ಧಾರಣೆ

24-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 460
ಚೋಲ್ ಅಡಿಕೆ	505 - 530
ಡಬಲ್ ಚೋಲ್	505 - 530
ಹೊಸ ಪಠೋರ	340 - 390
ಹಳೆ ಪಠೋರ	375 - 405
ಹೊಸ ಉಳ್ಳಿ	115 - 285
ಹಳೆ ಉಳ್ಳಿ	105 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	230 - 260
ಹಳೆ ಕರಿಗೋಟು	230 - 260
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	212.50
ಆರ್‌ಎಸ್‌ಎಸ್ 2	197.00
ಸ್ಕ್ರಾಪ್ 1	130.00
ಸ್ಕ್ರಾಪ್ 2	127.00

ಕಿರುಸುದ್ದಿ

ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

• **ಉಡುಪಿ:** ವಿವಿಧ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿ ಕಳೆದ 15 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮಲ್ಪೆ ಪೊಲೀಸರು ಬೆಂಗಳೂರಿನ ಶಿವಾಜಿನಗರದಲ್ಲಿ ದಸ್ತಗಿರಿ ಮಾಡಿದ್ದಾರೆ. ಬಂಧಿತ ಆರೋಪಿಯನ್ನು ಪಡುತೋನ್ಸೆ ಗ್ರಾಮದ ಕೊಂಡಿಬೇಂಗ್ರೆ ಜಾಮಿಯಾ ಮಸೀದಿ ಹತ್ತಿರದ ನಿವಾಸಿ ಆಹಮ್ಮದ್ ಸಾಹೇಬ್ ಅವರ ಪುತ್ರ ಜುಬೇರ್ (42) ಎಂದು ಗುರುತಿಸಲಾಗಿದೆ. ಈತನ ಮೇಲೆ ಉಡುಪಿ ಸಿ.ಜೆ.ಎಂ ನ್ಯಾಯಾಲಯದಲ್ಲಿ ಸರಣಿ ವಂಚನೆ (ಕಲಂ 420), ನಂಬಿಕೆ ದ್ರೋಹ (ಕಲಂ 408) ಹಾಗೂ ಕಳ್ಳತನ (ಕಲಂ 379) ಸೇರಿದಂತೆ ಒಟ್ಟು ಐದು ಪ್ರಮುಖ ಪ್ರಕರಣಗಳು) ದಾಖಲಾಗಿದ್ದವು. 2011ರಲ್ಲಿ ದಾಖಲಾಗಿದ್ದ ಈ ಪ್ರಕರಣಗಳಲ್ಲಿ ಈತ ದೀರ್ಘಕಾಲದಿಂದ ತಲೆಮರೆಸಿಕೊಂಡಿದ್ದ. ಉಡುಪಿ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರು ಹಾಗೂ ಮಲ್ಪೆ ವೃತ್ತ ನಿರೀಕ್ಷಕರ ಮಾರ್ಗದರ್ಶನದಲ್ಲಿ, ಮಲ್ಪೆ ಠಾಣಾ ಉಪನಿರೀಕ್ಷಕ (ಕಾ–ಸು) ಅನಿಲ್ ಕುಮಾರ್ ಡಿ. ನೇತೃತ್ವದ ವಿಶೇಷ ತಂಡವನ್ನು ರಚಿಸಲಾಗಿತ್ತು. ತಂಡದಲ್ಲಿದ್ದ ಮಲ್ಪೆ ಠಾಣಾ ಸಿಬ್ಬಂದಿಗಳಾದ ಹೆಚ್.ಸಿ. ಸುರೇಶ್ ಕುಮಾರ್, ಹೆಚ್.ಸಿ. ವಿಶ್ವನಾಥ್, ಹೆಚ್.ಸಿ. ಭಾಸ್ಕರ್ ಮತ್ತು ಪಿಸಿ ಕುಬೇರ ಅವರು ನಿಖರ ಮಾಹಿತಿ ಮೇರೆಗೆ ಮಾ. 22ರಂದು ಬೆಂಗಳೂರಿನ ಶಿವಾಜಿನಗರದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನನ್ನು ಮಾ. 23ರಂದು ಉಡುಪಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಪ್ರಚೋದನಾಕಾರಿ ಸಂದೇಶ: ಯುವಕನ ಜಾಮೀನು ರದ್ದತಿಗೆ ನ್ಯಾಯಾಲಯಕ್ಕೆ ಮನವಿ

• **ಮಡಿಕೇರಿ:** ಪ್ರಕರಣವೊಂದರಲ್ಲಿ ಜಾಮೀನಿನ ಮೇಲೆ ಹೊರ ಬಂದು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಾಕಾರಿ ರೀಲ್ಸ್, ಆಡಿಯೋ ಮತ್ತು ವಿಡಿಯೋ ಪ್ರಸಾರ ಮಾಡಿರುವ ಯುವಕನ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಿ, ಜಾಮೀನು ರದ್ದುಪಡಿಸುವಂತೆ ನ್ಯಾಯಾಲಯವನ್ನು ಕೋರಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕಿ ಕು. ಬಿಂದುಮಣಿ ಅವರು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಪರಿಶೀಲನೆ ಸಂದರ್ಭ ನಾಪೋಕ್ಲು ವ್ಯಾಪ್ತಿಯ ಯುವಕನೊಬ್ಬ ರೀಲ್ಸ್, ವೀಡಿಯೋ ಮತ್ತು ಆಡಿಯೋಗಳನ್ನು ಪ್ರಸಾರ ಮಾಡಿ ಪ್ರಚೋದನಕಾರಿ ಹೇಳಿಕೆ ನೀಡಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಆತ ತನ್ನ ಇನ್ಸ್ಟಾಗ್ರಾಂ ಖಾತೆಯ ಮೂಲಕ ಪ್ರಚೋದನಾಕಾರಿ ಬರಹ ಮತ್ತು ವೀಡಿಯೋ ಹಂಚಿಕೊಂಡಿದ್ದು, ಇದನ್ನು ಪರಿಶೀಲಿಸಿದಾಗ, ಇದು ಸಮಾಜದಲ್ಲಿ ಅಶಾಂತಿ, ಸಾರ್ವಜನಿಕ ಸೌಹಾರ್ದತೆಗೆ ಧಕ್ಕೆಯಾಗುವ ರೀತಿಯ ನಡೆ ಎಂದು ಪರಿಗಣಿಸಲಾಗಿದೆ. ಈತನ ಹಿನ್ನೆಲೆಯನ್ನು ಪರಿಶೀಲಿಸಿದಾಗ, ಈತ ಪ್ರಕರಣವೊಂದರಲ್ಲಿ ಜಾಮೀನಿನ ಮೇಲೆ ಹೊರ ಬಂದಿದ್ದು, ಪ್ರತ್ಯೇಕ ಪ್ರಕರಣ ದಾಖಲಿಸಿ ಮತ್ತು ಜಾಮೀನು ರದ್ದುಪಡಿಸುವಂತೆ ನ್ಯಾಯಾಲಯವನ್ನು ಕೋರಲಾಗಿದೆ ಎಂದು ಅವರು ವಿವರಿಸಿದ್ದಾರೆ. ಸಾಮಾಜಿಕ ಜಾಲತಾಣಗಳನ್ನು ದುರುಪಯೋಗಪಡಿಸಿಕೊಂಡು ಜನಾಂಗದ ಮಧ್ಯೆ, ಧರ್ಮಗಳ ನಡುವೆ ಹಿಂಸ ಅಥವಾ ಅಶಾಂತಿಯನ್ನು ಪ್ರಚೋದಿಸುವ ಯಾವುದೇ ರೀತಿಯ ಹೇಳಿಕೆಗಳನ್ನು ನೀಡುವುದು, ಪೋಸ್ಟ್ ಹಂಚುವುದು ಕಾನೂನುಬಾಹಿರ. ಇಂತಹ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಲಿದೆ ಎಂದು ಬಿಂದುಮಣಿ ಎಚ್ಚರಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಗಂಗಾಧರ ಪೂಜಾರಿ, ಪುಚ್ಚಾಲಪದವು, ಪಾಡುಪೆರಾರ – ಬಲಾಂಡಿ ದ್ವಾರದ ಬಳಿ.
2. ಸಂಗೀತಾ ಶೆಟ್ಟಿ, ಸದಾಶಿವ ಶೆಟ್ಟಿ, 'ಶಾಂಭವಿ ಸುಗಂಧ' ಮಾದಾಡಿ, ಹೊಸಮನೆ, ಕುದ್ರಿಪದವು, ಕಬ್ಬಿನಮುಂಡ್ಕೂರು.
3. ಸುಶೀಲ ಜನಾರ್ದನ ಶೆಟ್ಟಿ, ಮಕ್ಕಳು, ಕುಟುಂಬಸ್ಥರು, ರಾಮನಗರ, ತುಂಬೆ – ಆಟ ಶ್ರೀ ರಾಮ ಭಜನಾ ಮಂದಿರ, ರಾಮನಗರ, ಕಾಲೇಜು ರಸ್ತೆ, ಬಂಟ್ವಾಳ (ತಾ).
4. ಆತ್ಮಿಕ್ ಆರ್. ಶೆಟ್ಟಿ, 'ಶ್ರೀ ದುರ್ಗಾ', ಮಾರೂರು ವಯಾ ಮೂಡುಬಿದ್ರಿ.
5. ದಿ. ಪದ್ಮಾಕರ ಗಾಂಭೀರರ ಸ್ಮರಣಾರ್ಥ ಚಂದ್ರಹಾಸ ರೈ, ಪತ್ನಿ, ಬೊಳ್ನಾಡುಗುತ್ತು ಕುಟುಂಬಸ್ಥರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
6. ಸುಮಲತಾ, ಸುರೇಂದ್ರ ಕಂಬಳಿ ಮತ್ತು ಫ್ಯಾಮಿಲಿ, ಅಡ್ಯಾರು ಗುತ್ತು, ಅಡ್ಯಾರ್.
7. ಅರಸು ಕುರಿಯಡಿತ್ತಾಯ ಸೇವಾ ಟ್ರಸ್ಟ್ ಮತ್ತು ಹತ್ತು ಸಮಸ್ತರು, ಬೋಳಂತೂರು, ಮಂಚಿ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಹೊಸಂಗಡಿ–ಹೆನ್ನಾಬೈಲ್‌ನಲ್ಲಿ
ಶ್ರೀಮತಿ ಜಲಜಾಕ್ಷಿ ಚಂದ್ರಶೇಖರ ಶೆಟ್ಟಿ, ಬಿಕ್ರಮನೆ, ಹೆನ್ನಾಬೈಲ್

ಶ್ರೀ ಪೆರ್ಡೂರು ಮೇಳ
ಆನಗಳ್ಳಿ- ಪ್ರಲಯ ಪಂಚಾಗ್ನಿ

ಶ್ರೀ ಹನುಮಗಿರಿ ಮೇಳ
ಕಾಂಚನ ಪೆರ್ಲ

ಶ್ರೀ ಪಾವಂಜೆ ಮೇಳ
ಶ್ರೀರಾಮ ದೇವಸ್ಥಾನ–ಬಿದರಗೋಡು
ಶ್ರೀ ದೇವಿ ಲಲಿತೋಪಾಖ್ಯಾನ



ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಆಯೋಜಿಸಿದ ವಾರ್ಷಿಕ ಸಾಂಸ್ಕೃತಿಕ ಉತ್ಸವವಾದ 'ಇನ್ಸಿಡೆಂಟ್ 2026'ರಲ್ಲಿ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ವಿವಿಧ ಬಹುಮಾನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದಿತ್ಯ ಪಿ. ಭಟ್, ಆತ್ವಿತ್ ಪ್ರಭು, ಕಲಾಂಜಲಿ ಕ್ಲಬ್‌ನ ಟೀಮ್ ಆರ್‌ಎಫ್‌ಸಿ 'ಪ್ರೊಮ್ನೇಡ್' ವೆಸ್ಟರ್ನ್ ಗ್ರೂಪ್ ಡ್ಯಾನ್ಸ್ ಸ್ಪರ್ಧೆಯಲ್ಲಿ, ಟೀಮ್ ತಾಲೀಮ್ ಬೀದಿ ನಾಟಕ ಸ್ಪರ್ಧೆಯಲ್ಲಿ ಬಹುಮಾನವನ್ನು ಗೆದ್ದುಕೊಂಡಿತು.

ಕೊಡಗಿನಲ್ಲಿ ಶಾಂತಿ ಕದಡುವವರ ವಿರುದ್ಧ ಕಠಿಣ ಕಾನೂನು ಕ್ರಮ: ಬಿಜೆಪಿ ಒತ್ತಾಯ

• **ಮಡಿಕೇರಿ:** ಜಿಲ್ಲೆಯಲ್ಲಿ ಶಾಂತಿ ಕದಡಲು ಪ್ರಯತ್ನಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಬಿಜೆಪಿ ಒತ್ತಾಯಿಸಿದೆ.

ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು, ನಾಪೋಕ್ಲುವಿನ ಬಲ್ಲಮಾವಟಿಯಲ್ಲಿ ಹಿಂದೂ ಸಮಾವೇಶದ ತಯಾರಿ ನಡೆಸುತ್ತಿದ್ದ ಸಂದರ್ಭ ಹಿಂದೂ ಕಾರ್ಯಕರ್ತ ಅಪ್ಪಚಿರ ಗೌತಮ್ ಎಂಬವರ ಮೇಲೆ ಕೆಲವು ಮುಸ್ಲಿಂ ಯುವಕರು ಮಾರಣಾಂತಿಕ ಹಲ್ಲೆ ನಡೆಸುವ ಮೂಲಕ ಹಿಂದೂ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ಶಾಂತಿ ಕದಡುವ ಪ್ರಯತ್ನ ನಡೆಸಿ, ನಂತರ ಜೈಲು ಸೇರಿದ್ದರು. ಆದರೆ, ಷರತ್ತುಬದ್ಧ ಜಾಮೀನಿನಲ್ಲಿ ಜೈಲಿನಿಂದ ಹೊರಗೆ ಬಂದಿರುವ ಅವರು, ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಮತ್ತೆ ಕೋಮು ಪ್ರಚೋದನೆ ಸಂದೇಶವನ್ನು ಪೋಸ್ಟ್ ಮಾಡಿದ್ದು ಇವರಿಗೆ ಕಾನೂನು ಹಾಗೂ ಸರ್ಕಾರದ ಪೊಲೀಸ್ ವ್ಯವಸ್ಥೆಯ ಬಗ್ಗೆ ಭಯ, ಗೌರವ ಯಾವುದೂ ಇಲ್ಲದಿರುವುದು ಸ್ಪಷ್ಟವಾಗುತ್ತಿದೆ. ಇಂತಹ ಸಮಾಜ ಘಾತುಕ ಶಕ್ತಿಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು ಅಥವಾ ಜಾಮೀನು ನಿರಾಕರಿಸಿ ಮತ್ತೆ ಜೈಲಿಗೆ ಅಟ್ಟುವ ಕೆಲಸ ಮಾಡಬೇಕೆಂದು ಕಾಳಪ್ಪ ಇದೇ ಸಂದರ್ಭ ಆಗ್ರಹಿಸಿದರು.



ನಾಪೋಕ್ಲು ಸರ್ಕಾರಿ ಕಾಲೇಜಿಗೆ ಸಂಬಂಧಪಟ್ಟ ಜಾಗವನ್ನು ಅನಧಿಕೃತವಾಗಿ ಅತಿಕ್ರಮಿಸಿ ಶಾದಿಮಹಲ್ ನಿರ್ಮಾಣಕ್ಕೆ ಮುಂದಾದ ಸಂದರ್ಭ ಭಾರತೀಯ ಜನತಾ ಪಾರ್ಟಿ ಪ್ರತಿಭಟಿಸಿದಾಗ, ತಾತ್ಕಾಲಿಕವಾಗಿ ಕಾಮಗಾರಿಯನ್ನು ತಡೆ ಮಾಡಿ ಸರ್ವೆ ಕಾರ್ಯ ಮಾಡುವುದಾಗಿ ಅಧಿಕಾರಿಗಳು ತಿಳಿಸಿದ್ದರು. ಆದರೆ ಈ ಅತಿಕ್ರಮಣದ ತೆರವು ಇಲ್ಲಿಯವರೆಗೆ ಆಗಿರುವುದಿಲ್ಲ. ಈ ಎಲ್ಲಾ ಕೃತ್ಯಗಳು ಯಾರ ಕುಮ್ಮಕ್ಕು ಮತ್ತು ಬೆಂಬಲದಿಂದ ನಡೆಯುತ್ತಿದೆ ಎಂಬುದನ್ನು ಜಿಲ್ಲೆಯ ಜನತೆ ಅರಿತುಕೊಳ್ಳಬೇಕಾಗಿದೆ ಎಂದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್, ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ.ಅರುಣ್ ಕುಮಾರ್, ಪ್ರಮುಖರಾದ ಶಜಿಲ್ ಕೃಷ್ಣ ಉಪಸ್ಥಿತರಿದ್ದರು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಭಕ್ತರ ಸಭೆ | ಉತ್ಸವ ಪೂರ್ಣ ಯಶಸ್ಸಿಗೆ ಯೋಜನೆ

ಪುತ್ತೂರು ಜಾತ್ರೆಗೆ ಭರ್ಜರಿ ತಯಾರಿ ಶುರು

• **ಪುತ್ತೂರು:** ದೇವಾಲಯ ಎಂದರೆ ಅದು ನಮ್ಮೆಲ್ಲರದ್ದು. ಇಲ್ಲಿನ ಲೆಕ್ಕಾಚಾರಗಳನ್ನು ತಿಳಿಯುವ, ಸಮಸ್ಯೆ, ಕೊರತೆಗಳನ್ನು ತಿಳಿಸಿ ಸಲಹೆಗಳನ್ನು ನೀಡುವ ಹಕ್ಕು, ಜವಾಬ್ದಾರಿ ಎಲ್ಲಾ ಭಕ್ತರಿಗಿದೆ. ಐತಿಹಾಸಿಕ ಪುತ್ತೂರು ಜಾತ್ರೆಯನ್ನು ಯಶಸ್ವಿಯಾಗಿ, ವಿಜೃಂಭಣೆಯಿಂದ ನಡೆಸಲು ಈ ಹಿಂದಿನಂತೆಯೇ ಸಮಸ್ತ ಭಕ್ತರ ಸಹಕಾರ ಬೇಕು ಎಂದು ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಹೇಳಿದರು.

ಏ.1ರಂದು ಗೊನೆ ಮುಹೂರ್ತಗೊಂಡು ಏ.10ರಿಂದ 20ರ ತನಕ ನಡೆಯುವ ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಜಾತ್ರೆಯ ಹಿನ್ನೆಲೆಯಲ್ಲಿ ಮಂಗಳವಾರ ದೇವಾಲಯದ ಸಭಾಂಗಣದಲ್ಲಿ ನಡೆದ ಭಕ್ತರ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ಭಕ್ತರ ಸಲಹೆ, ಅಭಿಪ್ರಾಯಗಳನ್ನು ಪಡೆಯಲಾಯಿತು.

ಬೆಳಿಯಪ್ಪ ಮಾತನಾಡಿ, ವೀರಮಂಗಲ ಕಟ್ಟೆಯ ಬಳಿ ಪಾರ್ಕಿಂಗ್ ಸಮಸ್ಯೆ ಉಂಟಾಗುತ್ತದೆ. ಶಾಲೆಯ ಬಳಿ ವಾಹನಗಳನ್ನು ನಿಲ್ಲಿಸಿದರೆ ಅಲ್ಲಿಂದ ನಡೆದು ಬಂದರೆ ಒಂದಷ್ಟು ಅನುಕೂಲವಾಗಬಹುದು ಎಂದರು. ಪಾರ್ಕಿಂಗ್ ಕುರಿತಂತೆ ಖಾಲಿ ಜಾಗವನ್ನು ಸಮರ್ಪಕಗೊಳಿಸುವ, ತಾತ್ಕಾಲಿಕ ಶೌಚಾಲಯಗಳನ್ನು ಮಾಡಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಕಟ್ಟೆಗಳು ಶುದ್ಧವಾಗಿರಲಿ

ಬಾಲಚಂದ್ರ ಸೊರಕೆ ಮಾತನಾಡಿ, ಜಾತ್ರೆಯ ಸಂದರ್ಭದಲ್ಲಿ ಪೂಜೆ ಸ್ವೀಕರಿಸುವ ಕಟ್ಟೆಗಳು ಹಲವು ಇವೆ. ಆದರೆ ಈ ಕಟ್ಟೆಗಳ ಬಳಿ ಸುರಕ್ಷತೆ ಕೊರತೆ ಇದೆ.



ಭಿಕ್ಷುಕರು, ನಾಯಿಗಳು ಮಲಗಿಕೊಂಡಿರುತ್ತವೆ. ಕಟ್ಟೆ ಸುರಕ್ಷಿತವಾಗಿದ್ದರೆ ಅಲ್ಲಿ ದೇವರು ಇರುವ ಭಾವನೆ ಭಕ್ತರಲ್ಲಿರುತ್ತದೆ. ಅಲ್ಲಿ ಬೇಲಿ ಅಳವಡಿಸಿ ಸುರಕ್ಷಿತಗೊಳಿಸುವ ಕೆಲಸ ಆಗಬೇಕು ಎಂದರು. ಇದಕ್ಕೆ ಧ್ವನಿಗೂಡಿಸಿದ ಹರಿಪ್ರಸಾದ್ ನೆಲ್ಲಿಕಟ್ಟೆ, ದೇವಾಲಯದ ಬಳಿಯ ರಕ್ತೇಶ್ವರಿ ಕಟ್ಟೆ ಬಳಿಯೂ ಕುಡುಕರು ಇರುತ್ತಾರೆ. ನಿರಾಳದ ಬಳಿಯ ಕಟ್ಟೆ ಸೇರಿದಂತೆ ಹಲವು ಕಡೆಗಳಲ್ಲಿ ಇಂತಹ ಸ್ಥಿತಿ ಕಂಡು ಬರುತ್ತಿದೆ ಎಂದರು. ಅಧ್ಯಕ್ಷ ಈಶ್ವರ ಭಟ್ ಉತ್ತರಿಸಿ ಸಲಹೆ ಸ್ವೀಕರಿಸಿ ಎಚ್ಚರಿಕೆ ಕೊಡುವ ಕೆಲಸ ಮಾಡುತ್ತೇವೆ. ಈ ರೀತಿಯಲ್ಲಿ ಕಟ್ಟೆ ಪೂಜೆಗಳನ್ನು ಸ್ವೀಕರಿಸುವ ಜಾತ್ರೆ ಬೇರೆ ಎಲ್ಲೂ ಇಲ್ಲ. ಇದು ನಮ್ಮ ಭಾಗ್ಯ ಎಂದು ಪರಿಗಣಿಸಬೇಕು ಎಂದು ಅಭಿಪ್ರಾಯಿಸಿದರು.

ಹಿರಿಯರಾದ ಕಿಟ್ಟಣ್ಣ ಗೌಡ ಮಾತನಾಡಿ, ಪೇಟೆಸವಾರಿ ಸಂದರ್ಭದಲ್ಲಿ ಜನ ಹೆಚ್ಚು ಸೇರುವ ಕಾರಣ ಅನಾಹುತಗಳ ಆಗದಂತೆ ಆ್ಯಂಬುಲೆನ್ಸ್ ಸೇವೆ ಜತೆಗಿರಬೇಕು ಎಂದು ಸಲಹೆ ನೀಡಿದರು. ಜನರ ಸುರಕ್ಷತೆ ಮುಖ್ಯವಾಗಿರುವುದರಿಂದ

ಪ್ರತ್ಯೇಕ ಊಟದ ವ್ಯವಸ್ಥೆಗೆ ಆಕ್ಷೇಪ

ದೇವಾಲಯದಲ್ಲಿ ಜಾತ್ರೆಯ ಸಂದರ್ಭ ತಂತ್ರಿ ವರ್ಗದವರಿಗೆ, ಪ್ರಮುಖ ದಾನಿಗಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ, ಬ್ರಾಹ್ಮಣರಿಗೆ ಎಂದು ಪ್ರತ್ಯೇಕ ಊಟದ ವ್ಯವಸ್ಥೆ ಮಾಡುತ್ತಿರುವುದು ಸರಿಯಲ್ಲ. ಇವರಿಗೆ ಬಡಿಸುವವರಿಗೂ ಪ್ರತ್ಯೇಕ ವೇತನ ನೀಡುವುದು ಭಕ್ತರಲ್ಲಿ ಸಮಾನತೆಗೆ ಮಹತ್ವ ನೀಡುವ ದೇವಾಲಯದಲ್ಲಿ ಎಷ್ಟು ಸರಿ ಎಂದು ಹರಿಪ್ರಸಾದ್ ನೆಲ್ಲಿಕಟ್ಟೆ ಮೊದಲಾದವರು ವ್ಯವಸ್ಥಾಪನ ಸಮಿತಿಯವರಲ್ಲಿ ಪ್ರಶ್ನಿಸಿದರು.

ಜಾತ್ರೆ ಸಮಯದಲ್ಲಿ ಮಾರಾಟವಾಗುವ ಆಹಾರಗಳ ಪರೀಕ್ಷೆ ನಡೆಸಬೇಕು ಎಂದು ಬಾಲಚಂದ್ರ ಸೊರಕೆ ಹೇಳಿದರು.

12 ಗಂಟೆ ಮೊದಲು ಮುಗಿಯಲಿ

ಮಾಜಿ ಮೊಕ್ತೇಸರ ಚಿದಾನಂದ ಬೈಲಾಡಿ ಮಾತನಾಡಿ, ಪೇಟೆ ಸವಾರಿ ನಡೆಯುವ ಸಂದರ್ಭದಲ್ಲಿ ವಾಹನಗಳ ಸಂಚಾರ ದಟ್ಟಣೆ ಉಂಟಾಗದಂತೆ ಸರಿಯಾಗಿ ನಿಗಾ ವಹಿಸಬೇಕು. ದೇವರ ಮಹಾರಥ ಹೊರಟು ರಾತ್ರಿ 12 ಗಂಟೆಯೊಳಗೆ ಹಿಂದಿರುಗುವಂತಾಗಬೇಕು. ಹೊರಡುವ ಸಮಯವೂ ಬೇಗ ಆಗಬೇಕು ಎಂದರು. ಇದಕ್ಕೆ ಅಧ್ಯಕ್ಷರು ಉತ್ತರಿಸಿ ಈ ಕುರಿತು ಸಂಬಂಧಿಸಿದವರ ಸಭೆ ನಡೆಸಿ ರಥೋತ್ಸವ ಬೇಗ ಮುಗಿಯುವಂತೆ ಯೋಜನೆ ಹಾಕಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಏಲಂಗೆ ಮುನ್ನ ಸೇಲ್...!

ಜಾತ್ರಾ ಗದ್ದೆಯಲ್ಲಿ ವ್ಯಾಪಾರ, ಮನೋರಂಜನಾ ಮಳಿಗೆಗಳ ಏಲಂ ಏ.2ರ ಬಳಿಕ ನಡೆಯುತ್ತದೆ. ಆದರೆ, ಗದ್ದೆಯ ಘನ ತ್ಯಾಜ್ಯ ಘಟಕದ ಬಳಿ ಮ್ಯೂಸಿಯಂಗೆ ರೂ.2ಲಕ್ಷ ಬಾಡಿಗೆ ನಿಗದಿಪಡಿಸಿ ನೀಡಲಾಗಿದೆ ಮತ್ತು ಅವರು ಸಿದ್ಧತೆ ಮಾಡುತ್ತಿದ್ದಾರೆ. ಇದು ನಿಯಮಕ್ಕೆ ಸರಿಯಾಗಿದೆಯೇ? ಎಂದು ಅಸಮಾಧಾನ ವ್ಯಕ್ತಪಡಿಸಿದ ಹರಿಪ್ರಸಾದ್ ಶೆಟ್ಟಿ ನೆಲ್ಲಿಕಟ್ಟೆ, ನಿಯಮ ಎಲ್ಲರಿಗೂ ಒಂದೇ ಅಲ್ಲವೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧ್ಯಕ್ಷರು, ಕೆಲವೊಮ್ಮೆ ಕಠಿಣ ನಿಯಮಗಳನ್ನು ವ್ಯತ್ಯಾಸ ಮಾಡಬೇಕಾಗುತ್ತದೆ. ಅಲ್ಲಿ ಬಾಡಿಗೆ ತೆಗೆದುಕೊಂಡವರು ಎಲ್ಲವನ್ನೂ ಕ್ಲೀನ್ ಮಾಡಿದ್ದಾರೆ. ದೇವಾಲಯದ ಆದಾಯ ದೃಷ್ಟಿಯಿಂದಲೂ ಈ ವ್ಯವಸ್ಥೆ ಆಗಿದೆ. ಭಕ್ತರ ಆಕ್ಷೇಪಗಳಿದ್ದಲ್ಲಿ ಮರು ಏಲಂ ಮಾಡಲಾಗುತ್ತದೆ ಎಂದರು. ಟೆಂಡರ್ ಕರೆಯದೆ ಸುಮಾರು ರೂ.2ಲಕ್ಷದಲ್ಲಿ ಮಣ್ಣು ಸಮತಟ್ಟು ಮಾಡಿರುವ ಕುರಿತೂ ಚರ್ಚೆ ನಡೆಯಿತು.

ಸುದರ್ಶನ್ ಮುರ ಮಾತನಾಡಿ, ಜಾತ್ರೆಯಲ್ಲಿ ಸಂತೆ ವ್ಯಾಪಾರ ಹಿಂದೂಗಳಿಗೆ ಮಾತ್ರ ಎನ್ನುವ ನಿಯಮ ಪಾಲನೆಯಾಗಬೇಕು. ಜಾತ್ರಾ ಗದ್ದೆ ಪ್ರವೇಶದ ಹೊರಭಾಗದಲ್ಲಿ ಅನ್ಯರಿಗೆ ವ್ಯಾಪಾರಕ್ಕೆ ಅವಕಾಶ ಕೊಡಬಾರದು ಎಂದರು. ದೇವರ ವೀರಮಂಗಲ ಜಳಕದ ಸವಾರಿ ಮುಗಿಸಿ ಬರುವಾಗ ಹಿರಿಯರು, ಮಕ್ಕಳಿಗೆ ಅನುಕೂಲವಾಗುವಂತೆ ಉಚಿತ ಬಸ್ಸಿನ ವ್ಯವಸ್ಥೆ ಮಾಡಬೇಕು ಎಂದು ಭಕ್ತರು ವಿನಂತಿಸಿದರು. ಏ.16 ಹಾಗೂ 17ರಂದು ಹೆಚ್ಚು ಭಕ್ತರ ಸಂಖ್ಯೆ ಇರುವುದರಿಂದ ಮುಖ್ಯವಾಗಿ ದೂರದಿಂದ ಬರುವ ಭಕ್ತರಿಗೆ ಅನುಕೂಲವಾಗುವಂತೆ ತಾತ್ಕಾಲಿಕ ಶೌಚಾಲಯ ವ್ಯವಸ್ಥೆಯನ್ನು ಕನಿಷ್ಠ 3 ಕಡೆಗಳಲ್ಲಿ ಮಾಡಬೇಕು. ಸಮರ್ಪಕ ವ್ಯವಸ್ಥೆಯ ದೃಷ್ಟಿಯಿಂದ ಹೆಚ್ಚಿನ ಸ್ವಯಂ ಸೇವಕರ ನೋಂದಣಿಗೆ ವ್ಯವಸ್ಥೆ ಮಾಡಬೇಕು ಎಂದು ಅಭಿಪ್ರಾಯ ಕೇಳಿಬಂತು.

ದೇವಾಲಯ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಈಶ್ವರ ಬೆಡೇಕರ್, ಮಹಾಬಲ ರೈ ಒಳತ್ತಡ್ಕ, ನಳಿನಿ ಶೆಟ್ಟಿ, ಸುಭಾಶ್ ರೈ ಬೆಳ್ಳಿಪ್ಪಾಡಿ, ಕೃಷ್ಣವೇಣಿ, ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್, ವ್ಯವಸ್ಥಾಪಕ ಹರೀಶ್ ಶೆಟ್ಟಿ ವೇದಿಕೆ ಯಲ್ಲಿ ಉಪಸ್ಥಿತರಿದ್ದರು. ಹಲವು ಮಂದಿ ಭಕ್ತರು ಸಭೆಯಲ್ಲಿ ಪಾಲ್ಗೊಂಡರು.

ಉಡುಪಿ ಜಿಲ್ಲೆಯಲ್ಲಿ ಲವ್‌ಜಿಹಾದ್‌ಗೆ ಯತ್ನ ಪ್ರಕರಣ

ಯುವತಿ ದೂರು: ಆರೋಪಿಯ ಸೆರೆ

▶ ರಕ್ಷಿತ್ ಬೆಳಪು

• **ಹಿರಿಯಡ್ಕ:** ಉಡುಪಿ ಜಿಲ್ಲೆಯಲ್ಲೊಂದು ಲವ್‌ಜಿಹಾದ್ ಯತ್ನ ಪ್ರಕರಣ ನಡೆದುಹೋಗಿದೆ. ಉಡುಪಿ ಮಹಿಳಾ ಠಾಣೆಯ ಮೆಟ್ಟಿಲೇರಿದ ಯುವತಿ ಹೇಳಿದ ಸಂಗತಿಗಳು ಯಾವ ಕೇರಳ ಸ್ಟೋರಿಗೂ ಕಡಿಮೆ ಇರಲಿಲ್ಲ. 'ಜುಂಬಾ' ಡ್ಯಾನ್ಸ್ ಕ್ಲಾಸ್‌ನಲ್ಲಿ ಹಿಂದೂವಿನ ಹೆಸರನ್ನು ಹೇಳಿಕೊಂಡು ಗೆಳೆತನ ಮಾಡಿದ ಸೈಯದ್ ಅಲಿ ಲವ್ ಜಿಹಾದ್ ಬಲೆಗೆ ಯುವತಿಯನ್ನು ಬೀಳಿಸಿಕೊಂಡಿದ್ದಾಗಿ ಆರೋಪಿಸಲಾಗಿದೆ. ಆದರೆ ಯುವತಿಯೂ ಎಚ್ಚೆತ್ತುಕೊಂಡು ದೂರು ನೀಡಿದ್ದಾಳೆ.



ಹಿಂದೂ ಹೆಸರಿನಲ್ಲಿ ಪರಿಚಯ...

2019ರಲ್ಲಿ ಸಂತ್ರಸ್ತ ಯುವತಿಯೂ ಬೆಂಗಳೂರಿನಲ್ಲಿರುವಾಗ 'ಹರ್ಷ' ಎಂಬ ಹೆಸರಿನಲ್ಲಿ ಪರಿಚಯವಾಗಿ ಇಬ್ಬರು ಪ್ರೀತಿಸುತ್ತಿದ್ದರು. ನಂತರ ಆತನ ಹೆಸರು 'ಸೈಯದ್ ಅಲಿ' ಎಂದು ತಿಳಿದು ಅವನಿಂದ ದೂರವಾದಳು.

ತನ್ನಿಂದ ದೂರವಾದ ಯುವತಿಯನ್ನು ಪಡೆಯಲೇಬೇಕು ಎಂದು ಆಕೆಯ ಇನ್‌ಸ್ಟಾಗ್ರಾಮ್ ಹಾಗೂ ಜಿ–ಮೇಲ್ ಖಾತೆಗಳನ್ನು ಹ್ಯಾಕ್ ಮಾಡಿದ್ದು, 'ಬೆಂಗಳೂರಿನ ಜೀವನ್ ಭೀಮಾ ನಗರ ಪೊಲೀಸ್ ಠಾಣೆ'ಯಲ್ಲಿ ದೂರು ಅರ್ಜಿ ವಿಚಾರಣೆ ನಡೆದಿತ್ತು. ಆದರೂ ಆತ ನಿರಂತರವಾಗಿ ಕಿರುಕುಳ ನೀಡುತ್ತಿದ್ದ ಎಂಬುದು ಯುವತಿಯ ದೂರು.

ಕೆಲಸ ಬಿಟ್ಟ ಯುವತಿ

ಆತನ ಕಿರುಕುಳ ತಾಳಲಾರದೇ 2024 ರಲ್ಲಿ ಬೆಂಗಳೂರು ತೊರೆದು ಉಡುಪಿ ಜಿಲ್ಲೆಯಲ್ಲಿರುವ ತನ್ನ ಮನೆಗೆ ವಾಪಸಾದ ಬಳಿಕವೂ ನಿರಂತರವಾಗಿ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದ. ಅಲ್ಲದೇ ಮಣಿಪಾಲಕ್ಕೆ ನಿನ್ನನ್ನು ಹಿಂಬಾಲಿಸಿಕೊಂಡು ಬಂದಿದ್ದೇನೆ ಎಂದು ವಿಡಿಯೋ ಮಾಡಿ ಕಳುಹಿಸಿದ್ದಾನೆ. ವ್ಯಾಟ್ಸಾಪ್‌ನಲ್ಲಿ ಗ್ರೂಪ್ ಮಾಡಿ, ಯುವತಿಯ ಫೋಟೋವನ್ನು ಅಪ್ಲೋಡ್ ಮಾಡಿ ಡಿಲೀಟ್ ಮಾಡಿ ಬೆದರಿಸಿ, ಅವ್ಯಾಚ ಶಬ್ದಗಳಿಂದ ನಿಂದಿಸಿದ್ದಾನೆ. ಲೈಂಗಿಕ ಕ್ರಿಯೆಗೆ ಬರುವಂತೆ ನಿರಂತರ ಕಿರುಕುಳ ನೀಡುತ್ತಿದ್ದನು ಎಂದು ಯುವತಿ ನೀಡಿದ ದೂರಿನಲ್ಲಿ ವಿವರಿಸಿದ್ದಾಳೆ.

ಆರೋಪಿ ಸೈಯದ್ 2024ರಲ್ಲಿ ಧಾರವಾಡದ ಕೇಶವಪುರ ಠಾಣೆಯಲ್ಲಿ 1, 2025 ರಲ್ಲಿ ಸುರತ್ಕಲ್ ಠಾಣೆಯಲ್ಲಿ 1, ಶ್ರೀರಂಗಪಟ್ಟಣ ಠಾಣೆಯಲ್ಲಿ 1, ಮಾದನಾಯಕನಹಳ್ಳಿ ಠಾಣೆಯಲ್ಲಿ 1, 2026ರಲ್ಲಿ ಬೆಂಗಳೂರಿನ ಹುಳಿಮಾವು ಠಾಣೆಯಲ್ಲಿ 1, ಅವಲಹಳ್ಳಿ ಠಾಣೆಯಲ್ಲಿ 1, ಧಾರವಾಡದ ಕೇಶವಪುರ ಠಾಣೆಯಲ್ಲಿ 2 ಹಾಗೂ ಹುಬ್ಬಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 10 ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ. ಬೆಂಗಳೂರಿನ ತಿಲಕ್ ನಗರ ಠಾಣೆಯಲ್ಲಿ ಐಟಿ ಆ್ಯಕ್ಟ್ ನಲ್ಲಿಯೂ ಪ್ರಕರಣ ದಾಖಲಾಗಿದ್ದು, ಒಟ್ಟು 20 ಕ್ಕೂ ಹೆಚ್ಚು ಕೇಸ್‌ಗಳಿವೆ.

ಆರೋಪಿಯ ಬಂಧನ

ಪ್ರಕರಣದ ಮಾಹಿತಿ ಪಡೆದ ಜಿಲ್ಲಾ ಎಸ್ಪಿ ಹರಿರಾಂ ಶಂಕರ್ ಅವರು ಸೂಕ್ತ ಮಾರ್ಗದರ್ಶನ ನೀಡಿ, ಗದಗ ಜಿಲ್ಲೆಯ ಲಕ್ಷ್ಮೇಶ್ವರಕ್ಕೆ ತಂಡವನ್ನು ಕಳುಹಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಿದೆ.

ಯುವ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಶಿಪ್ ಪಂದ್ಯ

ಎಸ್‌ಡಿಎಂ ವಿದ್ಯಾರ್ಥಿಗಳ ಸಾಧನೆ

• **ಬೆಳ್ತಂಗಡಿ:** ಒಡಿಶಾದ ಭುವನೇಶ್ವರದಲ್ಲಿ ಮಾ. 15ರಿಂದ 20ರವರೆಗೆ ನಡೆದ ಪುರುಷರ ಮತ್ತು ಮಹಿಳೆಯರ 26ನೇ ಯುವ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ 11 ಜನ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಉತ್ತಮ ಸಾಧನೆ ಮೆರೆದಿದ್ದಾರೆ.

ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ ಉಜಿರೆ ಎಸ್.ಡಿ.ಎಂ ಕ್ರೀಡಾ ಸಂಘದ ವಿದ್ಯಾರ್ಥಿಗಳು, ಪುರುಷ ತಂಡದಲ್ಲಿ ಕಾಲೇಜಿನ ದ್ವಿತೀಯ ಬಿ ಎ ವಿದ್ಯಾರ್ಥಿ ಸುಭಾಷ್ ರಾಜ್, ದ್ವಿತೀಯ ಬಿ ಕಾಂ ವಿದ್ಯಾರ್ಥಿ ಮಯೂರ್ ಹಾಗೂ ಪ್ರತೀಕ್ ಪಾಲ್ಗೊಂಡಿದ್ದರು. ಮಹಿಳೆಯರ ವಿಭಾಗದ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕಾಲೇಜಿನ ಪ್ರಥಮ ವರ್ಷದ ಬಿಕಾಂ ವಿದ್ಯಾರ್ಥಿನಿ ಲಾಸ್ಯ, ಅಪೂರ್ವ, ಸ್ಮಿತಾ, ವರ್ಷಾ, ಜೆಸ್ಲಿನ್, ದ್ವಿತೀಯ ಬಿ ಎ ವಿದ್ಯಾರ್ಥಿನಿ ಪ್ರಿಯಾಂಕಾ, ದ್ವಿತೀಯ ಬಿಕಾಂ ವಿದ್ಯಾರ್ಥಿನಿ ಇಂಚರ ಹಾಗೂ ತೃತೀಯ ಬಿ ಎ ವಿದ್ಯಾರ್ಥಿನಿ ಐಶ್ವರ್ಯ ಭಾಗವಹಿಸಿದ್ದರು. ಇವರಿಗೆ ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಸುದೀನ್ ಪೂಜಾರಿ ತರಬೇತಿ ನೀಡಿದ್ದಾರೆ.



ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ವಿಶೇಷ ಸಾಧನೆ ಮೆರೆದಿರುವ ವಿದ್ಯಾರ್ಥಿಗಳಿಗೆ ಎಸ್.ಡಿ.ಎಂ ಆಡಳಿತ ಮಂಡಳಿ ಹಾಗೂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್, ಐಟಿ ಮತ್ತು ಹಾಸ್ಟೆಲ್ ಆಡಳಿತ ವಿಭಾಗದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪೂರನ್ ವರ್ಮ, ಕಾಲೇಜಿನ ಪ್ರಾಂಶುಪಾಲ ಪ್ರೊ ವಿಶ್ವನಾಥ್ ಪಿ, ಎಸ್.ಡಿ.ಎಂ ಕ್ರೀಡಾ ಸಂಘದ ಕಾರ್ಯದರ್ಶಿ ರಮೇಶ್ ಬಿ, ದೈಹಿಕ ಶಿಕ್ಷಣ ಉಪನ್ಯಾಸಕರಾದ ಶಾರದಾ, ಸುದೀನ್ ಪೂಜಾರಿ, ಸಂದೇಶ್ ಬಿ. ಪೂಂಜ, ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಸೇರಿದಂತೆ ಸಿಬ್ಬಂದಿವರ್ಗದವರು ಅಭಿನಂದಿಸಿದ್ದಾರೆ.

ತೊಕ್ಕೊಟ್ಟಿನಲ್ಲಿ ಕೈತೋಟ, ತಾರಸಿ ತೋಟ ರಚನೆಯ ಉಚಿತ ತರಬೇತಿ ಶಿಬಿರ

ಕಂಪ್ಯೂಟರ್ ಯುಗದಲ್ಲಿ ತೋಟಗಾರಿಕೆ ನಶಿಸುತ್ತಿದೆ

• **ಉಳ್ಳಾಲ:** ಸರಕಾರಿ ಉದ್ಯೋಗಿಗಳು ಕೂಡ ನಿವೃತ್ತಿಯ ನಂತರ ತಾರಸಿ ಕೃಷಿ, ಹೂದೋಟ, ಕೈತೋಟಗಳಲ್ಲಿ ಮನ ಸಂತೃಪ್ತಿ ಕಂಡುಕೊಂಡಿದ್ದಾರೆ. ಆದರೆ ಈಗಿನ ಕಂಪ್ಯೂಟರ್ ಯುಗದಲ್ಲಿ ಜನರು ತೋಟಗಾರಿಕೆಯ ಆಸಕ್ತಿಯನ್ನೇ ಕಳೆಕೊಂಡಿದ್ದಾರೆ. ನಮ್ಮ ಕೈಯಾರೆ ಬೆಳೆಸಿದ ತರಕಾರಿ, ಹೂ, ಹಣ್ಣುಗಳನ್ನು ಕಂಡಾಗ ನಮ್ಮ ಮನಸ್ಸಿಗೆ ಸಿಗುವ ಆನಂದ ವಿಭಿನ್ನ ಎಂದು ಪೆರ್ಮನ್ನೂರು ಚರ್ಚ್‌ನ ಧರ್ಮಗುರು ಫಾ.ಸಿಪ್ರಿಯನ್ ಪಿಂಟೊ ಅಭಿಪ್ರಾಯಪಟ್ಟರು.

ಮಂಗಳೂರು ಸಿರಿ ತೋಟಗಾರಿಕಾ ಸಂಘದ ಆಶ್ರಯದಲ್ಲಿ ಜಿಲ್ಲಾ ತೋಟಗಾರಿಕೆ ಇಲಾಖೆ ಇದರ ಸಹಯೋಗದೊಂದಿಗೆ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ, ಫುಡ್ ಚೈನ್ ಕ್ಯಾಂಪೇನ್ ಮಂಗಳೂರು, ತೊಕ್ಕೊಟ್ಟು ಶಿವಾಜಿ ಫ್ರೆಂಡ್ಸ್ ಸರ್ಕಲ್, ಸ್ವಾಮಿ ಕೊರಗಜ್ಜ ಸೇವಾ ಸಮಿತಿ ತೊಕ್ಕೊಟ್ಟು, ರಿಚೆಲ್ ಸರ್ವಿಸಸ್ ತೊಕ್ಕೊಟ್ಟು, ಮಂಗಳೂರು ಆಟೋ ರಿಕ್ಷಾ ಮತ್ತು ಕಾರು ಚಾಲಕರ ಸಹಕಾರಿ ಸಂಘ ತೊಕ್ಕೊಟ್ಟು ಶಾಖೆಯ ಸಹಭಾಗಿತ್ವದಲ್ಲಿ ತೊಕ್ಕೊಟ್ಟು ಭಟ್ನಗರದ ಶಿವಾಜಿ ಸೇವಾ ಸಮಿತಿ ಸಭಾಂಗಣದಲ್ಲಿ ಭಾನುವಾರದಂದು ನಡೆದ ಕೈತೋಟ, ತಾರಸಿ ತೋಟದ ಉಚಿತ ತರಬೇತಿ ಹಾಗೂ ತರಕಾರಿ ಬೀಜ ಮತ್ತು ಸಸಿ ವಿತರಣೆ ಕಾರ್ಯಕ್ರಮವನ್ನು



ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಸ್ವಚ್ಛತಾ ಅಭಿಯಾನದ ರಾಯಭಾರಿ ಶೀನಶೆಟ್ಟಿ ಮಾತನಾಡಿ, ಗುಣ ಮಟ್ಟದ ಬೀಜಗಳನ್ನು ಬಿತ್ತಿದರೆ ಮಾತ್ರ ಕೃಷಿಯು ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುತ್ತದೆ. ಹಾಗೆಯೇ ನಾವು ಉತ್ತಮ ಚಿಂತನೆ ಅಳವಡಿಸಿಕೊಂಡರೆ ಮಾತ್ರ ನಮ್ಮ ಮನಸನ್ನು ಸ್ವಚ್ಛಗೊಳಿಸಿ ಪರಿಸರವನ್ನೂ ಸ್ವಚ್ಛವಾಗಿಡಿಸಲು ಸಾಧ್ಯ. ನಮ್ಮಲ್ಲಿ ಪ್ಲಾಸ್ಟಿಕ್ ಬೆಂಕಿ ಹೊತ್ತಿದ್ದು, ಇದರಿಂದ ಸಾಂಕ್ರಾಮಿಕ ರೋಗಗಳು ಹಬ್ಬುತ್ತಿವೆ ಎಂದರಲ್ಲದೆ, ಪ್ಲಾಸ್ಟಿಕ್ ಬಾಟಲಿ, ಲೋಟಗಳನ್ನು ತ್ಯಜಿಸುವಂತೆ ಕರೆ ನೀಡಿದರು.

ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಪ್ರದೀಪ್ ಡಿಸೋಜ, ಪ್ರವೀಣ್ ಕೆ., ಪ್ರಮೋದ್ ಸಿ.ಎಮ್. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಜಿಲ್ಲಾ ಸಿರಿ ತೋಟಗಾರಿಕಾ ಸಂಘದ ಉಪಾಧ್ಯಕ್ಷರಾದ ಡಾ.ಭಾರತಿ ನಿರ್ಮಲ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್, ಫುಡ್ ಚೈನ್ ಕ್ಯಾಂಪೇನ್ ಸ್ಥಾಪಕ ಯತೀಶ್ ತುಕರಾಮ್, ತೊಕ್ಕೊಟ್ಟು ಶಿವಾಜಿ ಫ್ರೆಂಡ್ಸ್ ಸರ್ಕಲ್ ಅಧ್ಯಕ್ಷ ಯು. ಎಚ್.ಅಲ್ತಾಫ್ ಮೊದಲಾದವರಿದ್ದರು.

ಈ ಸಂದರ್ಭ ತರಕಾರಿ ಬೀಜ ಹಾಗೂ ಸಸಿ ವಿತರಣೆ ನಡೆಸಲಾಯಿತು. ಸಿರಿಲ್ ರಾಬರ್ಟ್ ಡಿ ಸೋಜ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರವೀಣ್ ಎಸ್. ಕುಂಪಲ ಕಾರ್ಯಕ್ರಮ ನಿರೂಪಿಸಿದರು.

ಕ್ಯೊಲ: ಏಣಿತ್ತಡ್ಕ–1 ಅಂಗನವಾಡಿ ಕೇಂದ್ರದಲ್ಲಿ ಬಾಲ ಮೇಳ ಉದ್ಘಾಟನೆ

ಬಾಲ ಮೇಳಗಳು ಮಕ್ಕಳ ಪ್ರತಿಭೆಗೆ ವೇದಿಕೆ

• **ಕಡಬ:** ಅಂಗನವಾಡಿ ಕೇಂದ್ರ ಕಾರ್ಯಕರ್ತೆಯರು ಪುಟಾಣಿ ಮಕ್ಕಳ ಲಾಲನೆ ಪಾಲನೆಗೆ ಸೀಮಿತವಾಗದೆ, ಸರ್ಕಾರದ ವಿವಿಧ ಸೌಲಭ್ಯಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ. ಆ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳು ಆ ಊರಿನ ಜೀವನಾಡಿಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಮೇಲ್ವಿಚಾರಕಿ ನಂದನ ಹೇಳಿದರು.



ಅವರು ಕ್ಯೊಲ ಗ್ರಾಮದ ಏಣಿತ್ತಡ್ಕ–1 ಅಂಗನವಾಡಿ ಕೇಂದ್ರದಲ್ಲಿ ಕ್ಯೊಲ ಗ್ರಾ.ಪಂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಪುತ್ತೂರು, ಬಾಲವಿಕಾಸ ಸಮಿತಿ, ಸ್ತ್ರೀ ಶಕ್ತಿ ಸಂಘ, ಹಳೆ ವಿದ್ಯಾರ್ಥಿ ಸಂಘ, ಪೋಷಕರ ಸಹಯೋಗದಲ್ಲಿ ಜರಗಿದ ಬಾಲ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಆರೋಗ್ಯದ ಮಾಹಿತಿ ಕೊರತೆಯಿಂದ ಅದೆಷ್ಟೋ ಮನೆಗಳಲ್ಲಿ ಗರ್ಭಿಣಿಯರು, ಬಾಣಂತಿಯರು, ಶಿಶುಗಳು ಸಾವನಪ್ಪುತ್ತಿದ್ದ ಕಾಲಘಟ್ಟದಲ್ಲಿ ಹುಟ್ಟಿಕೊಂಡ ಅಂಗನವಾಡಿ ಕೇಂದ್ರಗಳು ಇಂದಿಗೂ ಮಹಿಳೆಯರ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ. ಜೊತೆಗೆ ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಬಾಲ ಮೇಳಗಳು ಎಳೆಯ ಮಕ್ಕಳ ಪ್ರತಿಭೆಗೆ ವೇದಿಕೆಯಾಗಿದೆ. ಪೋಷಕರು ತಮ್ಮ ಮಕ್ಕಳು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕೆಂದು ಹೇಳಿದರು.

ಸಬಳೂರು ಸರಕಾರಿ ಉ.ಹಿ.ಪ್ರಾ. ಶಾಲಾ ಮುಖ್ಯ ಶಿಕ್ಷಕಿ ವಾರಿಜ ಬಿ. ಶುಭ ಹಾರೈಸಿದರು. ಅಂಗನವಾಡಿ ಕೇಂದ್ರದ ಬಾಲ ವಿಕಾಸ ಸಮಿತಿ ಅಧ್ಯಕ್ಷೆ ರೇವತಿ ಕೊಲ್ಯ ಅಧ್ಯಕ್ಷತೆ ವಹಿಸಿದ್ದರು. ಪೂರ್ವ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬಾಲಕೃಷ್ಣ ಬುಡಲೂರು, ಅಂಗನವಾಡಿ ಪುಟಾಣಿ ತನ್ಮಯಿ ಕೆ.ಪಿ. ಕೊಲ್ಯ ಉಪಸ್ಥಿತರಿದ್ದರು.

ನಿವೃತ್ತ ಅಂಗನವಾಡಿ ಕಾರ್ಯಕರ್ತೆ ವೇದಾವತಿ ಸಬಳೂರು, ಸಹಾಯಕಿ ಬಿ.ಲಲಿತಾ ನಾಯ್ಕ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕರ್ತೆ ಮೀನಾಕ್ಷಿ ಸಬಳೂರು, ಸಹಾಯಕಿ ಮೀನಾಕ್ಷಿ ನೀಡೇಲು ಅವರನ್ನು ಸಮ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಸಹಕರಿಸಿದವರನ್ನು ಗೌರವಿಸಲಾಯಿತು. ವೇದಾವತಿ ಸಬಳೂರು ಸನ್ಮಾನಿತರ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಪುಟಾಣಿಗಳಿಂದ, ಹಿರಿಯ ವಿದ್ಯಾರ್ಥಿಗಳಿಂದ, ಪೋಷಕರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಗುರುಪ್ರಸಾದ್ ಪಟ್ಟೆದಮೂಲೆ, ಜಯಶ್ರೀ ಪಿ. ಕೊಲ್ಯ, ಚೇತನಾ ಬುಡಲೂರು ಸಮ್ಮಾನಿತರನ್ನು ಪರಿಚಯಿಸಿದರು. ಅಂಗನವಾಡಿ ಕಾರ್ಯಕರ್ತೆ ಮೀನಾಕ್ಷಿ ಸಬಳೂರು ಸ್ವಾಗತಿಸಿ, ವಂದಿಸಿದರು.

ಕಿರು ಸುದ್ದಿ

ಇಂದಿನಿಂದ ಮಡಿಕೇರಿಯಲ್ಲಿ ಉದ್ಯೋಗ ಮೇಳ

ಮಡಿಕೇರಿ: ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗ ಅರಸುತ್ತಿರುವ ಅಭ್ಯರ್ಥಿಗಳು ಹಾಗೂ ಗುಣಮಟ್ಟದ ಶಿಕ್ಷಕರನ್ನು ಹುಡುಕುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಉತ್ತಮ ವೇದಿಕೆ ಕಲ್ಪಿಸುವ ಉದ್ದೇಶದಿಂದ ಮಾ. 25 ರಿಂದ 27 ರವರೆಗೆ ನಗರದ ಕೊಡವ ಸಮಾಜದಲ್ಲಿ ಮೂರು ದಿನಗಳ ಸಮಗ್ರ ಶೈಕ್ಷಣಿಕ ಕಾರ್ಯಕ್ರಮ 'ಎಜು ಕನೆಕ್ಟ್ ಮತ್ತು ಜಾಬ್ ಮೇಳ' ನಡೆಯಲಿದೆ. ಈ ಬೃಹತ್ ಕಾರ್ಯಕ್ರಮವನ್ನು ರೀಡ್‌ಟೆಕ್ ಸಂಸ್ಥೆಯ ವತಿಯಿಂದ ಕೊಡಗು ವಿಶ್ವವಿದ್ಯಾಲಯ ಮತ್ತು ನ್ಯಾಚುರಲ್ ಸೋರ್ಸ್ ಡೆವಲಪ್‌ಮೆಂಟ್ ಸೆಂಟರ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಈ ಮೇಳದಲ್ಲಿ ಪದವೀದರರು ಮತ್ತು ತರಬೇತಿ ಪಡೆದ ಶಿಕ್ಷಕರು (ಬಿ.ಇಡಿ, ಡಿ.ಇಡಿ, ಎಂ.ಇಡಿ, ಬಿ.ಪಿಇಡಿ, ಎಂಪಿ.ಇಡಿ) ಅನುಭವ ಹೊಂದಿದ ಶಿಕ್ಷಕರು, ಉಪನ್ಯಾಸಕರು ಹಾಗೂ ಬೋಧಕೇತರ ಉದ್ಯೋಗ ಹುಡುಕುವವರಿಗೆ ಸ್ಥಳದಲ್ಲಿಯೇ ನೋಂದಣಿ ಮತ್ತು ಸಂದರ್ಶನದ ಅವಕಾಶ ಇರಲಿದೆ. ಬೆಂಗಳೂರು ಮತ್ತು ಮೈಸೂರಿನ 12 ಪರಿಣಿತ ತರಬೇತುದಾರರಿಂದ, 12 ವಿವಿಧ ವಿಷಯಗಳ ಮೇಲೆ ಒಟ್ಟು 30 ವಿಶೇಷ ತರಬೇತಿ ಕಾರ್ಯಾಗಾರ ನಡೆಯಲಿದೆ. ಕೊಡಗು ಜಿಲ್ಲೆಯ ಎಲ್ಲಾ ಉದ್ಯೋಗಾಕಾಂಕ್ಷಿ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಗಳು ಈ ಉದ್ಯೋಗ ಮೇಳದ ಸದುಪಯೋಗ ಪಡೆದುಕೊಳ್ಳಬಹುದಾಗಿದ್ದು, ಹೆಚ್ಚಿನ ಮಾಹಿತಿಗೆ ದೂ. ಸಂ.6364558383 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಮಂಜುನಾಥ್ ಅವರು ತಿಳಿಸಿದ್ದಾರೆ.

ನಾಳೆ ಮಹಿಳಾ ದಿನಾಚರಣೆ

ಮಂಗಳೂರು: ರೋಟರಿ ಕ್ಲಬ್ ಆಫ್ ಮಂಗಳೂರು ಸೆಂಟ್ರಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಗ್ಲೋಬಲ್ ಗ್ರೀನ್ ಇಕೋ ಫೌಂಡೇಶನ್ ಮಂಗಳೂರು ಸಂಯುಕ್ತ ಆಶ್ರಯದಲ್ಲಿ ಮಹಿಳಾ ದಿನಾಚರಣೆ ಮಾ.26ರಂದು ಬಿಜೈನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಲ್ಲಿ ನಡೆಯಲಿದೆ. ಬೆಳಗ್ಗೆ 10ಕ್ಕೆ ಆಯ್ದ ಮಹಿಳಾ ಉದ್ಯಮಿಗಳು ತಯಾರಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಉದ್ಘಾಟನೆ ನಡೆಯಲಿದೆ. ಜಿ.ಪಂ. ಉಪಕಾರ್ಯದರ್ಶಿ ಜಯಲಕ್ಷ್ಮಿ ರಾಯಕೋಡ ಅವರು ಉದ್ಘಾಟಿಸಲಿದ್ದು, ಇಲಾಖಾ ಉಪನಿರ್ದೇಶಕ ಉಸ್ಮಾನ್ ಎ., ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ಶಕುಂತಳಾ ಭಾಗವಹಿಸುವರು. 11 ಗಂಟೆಗೆ ಸಭಾ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕಿಯರಿಗೆ ಸನ್ಮಾನ ನಡೆಯಲಿದೆ. ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಎಸಿಪಿ ನಜ್ಮಾ ಫಾರೂಕಿ ಸಾಧಕರನ್ನು ಸಮ್ಮಾನಿಸಲಿದ್ದಾರೆ. ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮ ಸಂಯೋಜಕಿ ಗೀತಾ ಬಿ. ರೈ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆರೋಗ್ಯ ಕ್ಷೇತ್ರದಲ್ಲಿ ಜ್ಯೋತಿ ಕೆ. ಉಳೆಪ್ಪಾಡಿ, ಯೋಗ: ದೇವಿಕಾ ಪುರುಷೋತ್ತಮ್, ಶಿಕ್ಷಣ: ಪೂರ್ಣಿಮಾ ರೈ, ಶಿಕ್ಷಣ ಮತ್ತು ಸಮಾಜ ಸೇವೆ: ಪ್ರಮೀಳಾ ರಾವ್, ಮಾಧ್ಯಮ: ಪತ್ರಕರ್ತೆ ಸತ್ಯಾವತಿ, ಮಹಿಳಾ ಸಂಘಟನೆ: ಜಯಶ್ರೀ ರಟ್ಟಿಹಳ್ಳಿ, ಸಂಗೀತ, ಕಲೆ: ವಿಭಾ ಎಸ್. ನಾಯಕ್, ಔಷಧೀಯ ಸಸ್ಯ ಸಂರಕ್ಷಣೆ: ಡಾ. ರಶ್ಮಿ ಕೆ., ಮಹಿಳಾ ಮತ್ತು ಮಕ್ಕಳ ಸೇವೆ: ಅಂಗನವಾಡಿ ಶಿಕ್ಷಕಿ ಸುಜಾತಾ, ಪರಿಸರ, ಸಮಾಜಸೇವೆ: ಶ್ರದ್ಧಾ ಕೇಶವ ರಾಮಕುಂಜ, ವಿಶೇಷ ಚೇತನ ಪ್ರತಿಭೆ: ಪೊಟ್ಟಮ್ಮ, ಕ್ರೀಡೆ: ಶ್ರೀಲಕ್ಷ್ಮಿ ಗಾಣಿಗ, ಯುವ ರೆಡ್ ಕ್ರಾಸ್: ಕಾರ್ಯಕ್ರಮ ಅಧಿಕಾರಿ ದೀಕ್ಷಿತಾ ಟಿ.ಎಸ್. ಅವರನ್ನು ಸನ್ಮಾನಿಸಲಾಗುವುದು ಎಂದರು. ರೋಟರಿ ಕ್ಲಬ್ ಆಫ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ ರೈ ಕಟ್ಟ, ಕಾರ್ಯಕ್ರಮ ಸಂಯೋಜಕಿ ಪ್ರಮೀಳಾ ಹೆಗ್ಡೆ, ಮಾಜಿ ಅಧ್ಯಕ್ಷ ಸಂತೋಷ್ ಶೇಟ್, ಯುವ ಸೇವಾ ಚೇರ್ಮನ್ ಜಾಕ್ಸನ್ ಸಲ್ಡಾನ್ಹ ಉಪಸ್ಥಿತರಿದ್ದರು.

ನಿಧನ ಸುದ್ದಿ

ಸರಳಾ ಪಿ. ಹವಾಲ್ದಾರ್



ಕುಂದಾಪುರ : ಕುಂದಾಪುರದ ಪ್ರಸಿದ್ಧ ಉದ್ಯಮಿ, ದಿ. ಪ್ರಭಾಕರ ಹವಾಲ್ದಾರ್ ಅವರ ಪತ್ನಿ ಸರಳಾ ಪಿ. ಹವಾಲ್ದಾರ್ (73) ಶುಕ್ರವಾರ ನಿಧನರಾದರು. ಇವರು ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪಿ. ಶ್ರೀಧರ ಹೇರಳೆ



ಕೋಟ: ಕೋಟ ವಿವೇಕ ವಿದ್ಯಾ ಸಂಸ್ಥೆಯ ಹಿಂದಿನ ವಿದ್ಯಾರ್ಥಿ, ಅದೇ ಸಂಸ್ಥೆಯಲ್ಲಿ ಸುಮಾರು 38 ವರ್ಷಗಳ ಕಾಲ ಅಧ್ಯಾಪಕನಾಗಿ ಹಾಗೂ ಉಪನ್ಯಾಸಕನಾಗಿ ಸುದೀರ್ಘ ಸೇವೆ ಸಲ್ಲಿಸಿದ್ದ ಪಾರಂಪಳ್ಳಿ ಶ್ರೀಧರ ಹೇರಳೆ (76) ಅಲ್ಪಕಾಲದ ಅಸೌಖ್ಯದಿಂದ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ.



ಕಾಸರಗೋಡು ವಿಧಾನಸಭಾ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ನಾಮಪತ್ರಿಕೆಗೆ ಠೇವಣಿ ಇಡಲು ಬಿಎಂಎಸ್ ಕಾಸರಗೋಡು ನಗರ ಆಟೋ ಚಾಲಕರು ಸಂಗ್ರಹಿಸಿದ ಹಣ ನೀಡಿ ಬೆಂಬಲಿಸಿದರು. ನಾಮಪತ್ರ ಸಲ್ಲಿಕೆಗೂ ಮುನ್ನ ಅಶ್ವಿನಿ ಅವರು ಬಿಎಂಎಸ್ ಕಾರ್ಯಕರ್ತರನ್ನು ಭೇಟಿಯಾದರು.



ಯುಡಿಎಫ್ ನೇತಾರ ರಾಘವ್ ಮಂಜೇಶ್ವರ ಹಾಗೂ ಪೈವಳಿಕೆ ಅಬ್ದುಲ್ ಸಮದ್ ಅವರನ್ನು ಕೆ.ಸುರೇಂದ್ರನ್ ಬಿಜೆಪಿ ಸದಸ್ಯತನ ನೀಡಿ ಪಕ್ಷಕ್ಕೆ ಸ್ವಾಗತಿಸಿದರು. ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ ಬಿ.ಎಂ., ನೇತಾರ ವಕೀಲ ನವೀನ್‌ರಾಜ್ ಮೊದಲಾದವರು ಉಪಸ್ಥಿತರಿದ್ದರು.



ಬದಿಯಡ್ಕ ಗ್ರಾ.ಪಂ. ಮಾಜಿ ಅಧ್ಯಕ್ಷ, ಸಮಾಜಸೇವಕ ಕಿಳಿಂಗಾರು ಸಾಯಿರಾಂ ಕೃಷ್ಣ ಭಟ್ ಅವರನ್ನು ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಭೇಟಿ ಮಾಡಿದರು. ಈ ಸಂದರ್ಭ ಬಿಜೆಪಿ ಬದಿಯಡ್ಕ ಮಂಡಲಾಧ್ಯಕ್ಷ ಗೋಪಾಲಕೃಷ್ಣ ಮುಂಡೋಳುಮೂಲೆ ಮೊದಲಾದವರಿದ್ದರು.

ಕಾಸರಗೋಡು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಕಳೆಗಟ್ಟುತ್ತಿದೆ ವಿಧಾನಸಭಾ ಚುನಾವಣೆ ಕಣ

ಕಣದಲ್ಲೀಗ 37 ಮಂದಿ ಅಭ್ಯರ್ಥಿಗಳು

ಕಾಸರಗೋಡು: ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಿಗೆ 79 ನಾಮಪತ್ರಗಳನ್ನು ಸಲ್ಲಿಸಲಾಗಿದ್ದು, ಮಂಗಳವಾರ ಸೂಕ್ಷ್ಮ ಪರಿಶೀಲನೆ ಬಳಿಕ 63 ನಾಮಪತ್ರಗಳನ್ನು ಅಂಗೀಕರಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 37 ಮಂದಿ ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಕಾಸರಗೋಡು ಕ್ಷೇತ್ರದಲ್ಲಿ ಒಂದು ನಾಮಪತ್ರ ತಿರಸ್ಕೃತಗೊಂಡು ಆರು ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮುಸ್ಲಿಂಲೀಗ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ, ಬಿಜೆಪಿ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಮತ್ತು ಸ್ವತಂತ್ರ ಅಭ್ಯರ್ಥಿಗಳಾದ ಶಾನವಾಸ್ ಪಾದೂರು, ಶಾನವಾಸ್ ಎ.ಎ. ಮತ್ತು ಎಂ.ಎ.ಲತೀಫ್ ಮುಹಮ್ಮದ್ ಆಲಿ ಫತ್ತಾಹ್ ಅವರ ನಾಮಪತ್ರಗಳನ್ನು ಪುರಸ್ಕರಿಸಲಾಗಿದೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕು ನಾಮಪತ್ರಗಳು ತಿರಸ್ಕೃತಗೊಂಡಿದ್ದು, ಕಣದಲ್ಲಿ 14 ಮಂದಿ ಅಭ್ಯರ್ಥಿಗಳು ಉಳಿದುಕೊಂಡಿದ್ದಾರೆ. ಬಿಎಸ್‌ಪಿ ಅಭ್ಯರ್ಥಿ ಸಂಜೀವ, ಸಿಪಿಎಂ ಅಭ್ಯರ್ಥಿ ಕೆ.ಆರ್.ಜಯಾನಂದ, ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್, ಮುಸ್ಲಿಂಲೀಗ್ ಅಭ್ಯರ್ಥಿ ಎ.ಕೆ. ಎಂ.ಅಶ್ರಫ್, ಎಸ್‌ಡಿಪಿಐ ಅಭ್ಯರ್ಥಿ ಕೆ.ಎಂ.ಅಶ್ರಫ್ ಮತ್ತು ಸ್ವತಂತ್ರ ಅಭ್ಯರ್ಥಿಗಳಾದ ಮುಹಮ್ಮದ್ ಅಶ್ರಫ್, ಅಬ್ದುಲ್ ಲತೀಫ್ ಐ., ಜೀನ್ ಲವೀನಾ ಮೊಂತೆರೋ, ಮುಹಮ್ಮದ್ ಅಶ್ರಫ್ ಕೆ.ಎ., ಜೋನ್ ಡಿಸೋಜಾ, ಮುಹಮ್ಮದ್ ರಫೀಕ್, ಎನ್. ಕೇಶವ ನಾಯಕ್, ಡಿ.ಸುರೇಂದ್ರನ್ ನಾಯರ್ ಮತ್ತು ಕೆ.ಅಬ್ದುಲ್ಲ ಅವರ ನಾಮಪತ್ರಗಳನ್ನು ಅಂಗೀಕರಿಸಲಾಯಿತು.

ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರದಲ್ಲಿ 2 ನಾಮಪತ್ರಗಳು ತಿರಸ್ಕೃತಗೊಂಡಿದ್ದು, ಕೇರಳ ಕಾಂಗ್ರೆಸ್ ಅಭ್ಯರ್ಥಿ ಸಂದೀಪ್ ಜಿ., ಟ್ವೆಂಟಿ ಟ್ವೆಂಟಿ ಅಭ್ಯರ್ಥಿಗಳಾದ ರವಿ ಕುಳಂಗರ ಮತ್ತು ರಮಣಿ ಕೆ.ವಿ., ಸಿಪಿಎಂ ಅಭ್ಯರ್ಥಿ ಡಾ.ವಿ.ಪಿ.ಪಿ.ಮುಸ್ತಾಫ, ಸ್ವತಂತ್ರ ಅಭ್ಯರ್ಥಿಗಳಾದ ಮುಸ್ತಾಫ ಪಿ.ಪಿ., ಮುಸ್ತಾಫ ವಿ.ಪಿ.ಪಿ. ಹಾಗೂ ಸಂದೀಪ್ ಎಲಾಟ್ ಅವರ ನಾಮಪತ್ರಗಳನ್ನು ಅಂಗೀಕರಿಸಲಾಯಿತು.

ಕಾಞಂಗಾಡು ಕ್ಷೇತ್ರದಲ್ಲಿ 4 ನಾಮಪತ್ರ ತಿರಸ್ಕೃತಗೊಂಡು ಕೇರಳ ಕಾಂಗ್ರೆಸ್ ಅಭ್ಯರ್ಥಿ ಶೈಜಿ, ಬಿಜೆಪಿ ಅಭ್ಯರ್ಥಿ ಎಂ.ಬಾಲರಾಜ್, ಸಿಪಿಐ ಅಭ್ಯರ್ಥಿ ಗೋವಿಂದನ್ ಪಳ್ಳಿಕಾಪ್ಪಿಲ್ ಮತ್ತು ಬಿಎಸ್‌ಪಿ ಅಭ್ಯರ್ಥಿ ವಿಜಯಕುಮಾರ್ ಬಿ. ಅವರ ನಾಮಪತ್ರಗಳನ್ನು ಪುರಸ್ಕರಿಸಲಾಯಿತು.

ಉದುಮ ಕ್ಷೇತ್ರದಲ್ಲಿ 5 ನಾಮಪತ್ರಗಳು ತಿರಸ್ಕೃತಗೊಂಡು ಸಿಪಿಎಂ ಅಭ್ಯರ್ಥಿ ಸಿ.ಎಚ್. ಕುಂಞಂಬು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ನೀಲಕಂಠನ್, ಬಿಜೆಪಿ ಅಭ್ಯರ್ಥಿ ಎಂ.ಮನುಲಾಲ್ ಮೇಲತ್ ಮತ್ತು ಸ್ವತಂತ್ರ ಅಭ್ಯರ್ಥಿಗಳಾದ ಕುಂಞಿರಾಮನ್, ಕುಂಞಂಬು, ನಜೀರ್ ಅವರ ನಾಮಪತ್ರಗಳನ್ನು ಅಂಗೀಕರಿಸಲಾಯಿತು.

ಚುನಾವಣಾ ಕರ್ತವ್ಯಕ್ಕೆ 207 ಮಂದಿ ಸೂಕ್ಷ್ಮ ವೀಕ್ಷಕರ ನಿಯೋಜನೆ



ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಸಮಸ್ಯೆ ಪೀಡಿತ ಮತಗಟ್ಟೆಗಳಿಗೆ ಸೂಕ್ಷ್ಮ ವೀಕ್ಷಕರನ್ನು ರ್‍ಯಾಂಡಮೈಸೇಷನ್ ಮೂಲಕ ನಿಯೋಜಿಸಲಾಯಿತು. ಅದರಂತೆ ಜಿಲ್ಲೆಯಲ್ಲಿ ಮೀಸಲು ಸೇರಿದಂತೆ 207 ಮಂದಿ ಸೂಕ್ಷ್ಮ ವೀಕ್ಷಕರನ್ನು ನಿಯೋಜಿಸಲಾಯಿತು.

ಕಾಸರಗೋಡು ಜಿಲ್ಲೆಯ ಸಮಸ್ಯೆ ಪೀಡಿತ ಬೂತ್‌ಗಳಿಗೆ ಸೂಕ್ಷ್ಮ ವೀಕ್ಷಕರ ಆಯ್ಕೆ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಜಿಲ್ಲಾ ಸಾಮಾನ್ಯ ವೀಕ್ಷಕರಾದ ವಿಜಯ್ ಬಾಲಕೃಷ್ಣ ವಾಘ್ಮಾರೆ ಮತ್ತು ಜ್ಞಾನೇಶ್ವರ್ ಕೊಂಡಿಬಾಹು ಕಿಲಾರಿ ಅವರ ಸಮ್ಮುಖದಲ್ಲಿ ನಡೆಸಲಾಯಿತು. ಶೇಕಡಾ 20 ರಷ್ಟು ಮೀಸಲು ಸೇರಿದಂತೆ 207 ಜನರನ್ನು ಸೂಕ್ಷ್ಮ ವೀಕ್ಷಕರಾಗಿ ನೇಮಿಸಲಾಗಿದೆ. ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ರ್‍ಯಾಂಡಮೈಸೇಷನ್ ಸಂದರ್ಭದಲ್ಲಿ ಎಡಿಎಂ ಕೆ.ವಿ.ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ಮತ್ತು ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಭಾಗವಹಿಸಿದ್ದರು.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ

ಕಾಸರಗೋಡು: ನೀತಿ ಸಂಹಿತೆ ಅಂಗವಾಗಿ ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಅಳವಡಿಸಲಾಗಿದ್ದ ಅಕ್ರಮ ಪ್ರಚಾರ ಸಾಮಗ್ರಿಗಳನ್ನು ತೆಗೆದು ಹಾಕಲಾಗಿದೆ. ಈ ನಿಟ್ಟಿನಲ್ಲಿ ಸೋಮವಾರ 14 ಗೋಡೆ ಬರಹಗಳು, 156 ಪೋಸ್ಟರ್‌ಗಳು, 16 ಬ್ಯಾನರ್‌ಗಳು ಮತ್ತು 82 ಇತರ ಪ್ರಚಾರ ಸಾಮಗ್ರಿಗಳು ಸೇರಿದಂತೆ ಒಟ್ಟು 268 ವಸ್ತುಗಳನ್ನು ತೆರವುಗೊಳಿಸಲಾಗಿದೆ.

ಖಾಸಗಿ ಸ್ಥಳಗಳಲ್ಲಿ ಅನುಮತಿ ಯಿಲ್ಲದೆ ಇರಿಸಲಾದ ಪ್ರಚಾರ ಸಾಮಗ್ರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಖಾಸಗಿ ಸ್ಥಳಗಳಿಂದ ಮೂರು ಗೋಡೆ ಬರಹಗಳು, ಬ್ಯಾನರ್‌ಗಳು, ಪೋಸ್ಟರ್‌ಗಳು ಮತ್ತು ಎಂಟು ಇತರ ಸಾಮಗ್ರಿಗಳು ಸೇರಿದಂತೆ ಒಟ್ಟು 18 ಪ್ರಚಾರ ಸಾಮಗ್ರಿಗಳನ್ನು ಅಳಿಸಲಾಯಿತು. ಇದರೊಂದಿಗೆ ಜಿಲ್ಲೆಯಲ್ಲಿ ಇದುವರೆಗೆ ಸಾರ್ವಜನಿಕ ಸ್ಥಳಗಳಲ್ಲಿ ಒಟ್ಟು 2176 ಉಲ್ಲಂಘನೆಗಳು ವರದಿಯಾಗಿವೆ. ಇವುಗಳಲ್ಲಿ 2148 ಅನ್ನು ಈಗಾಗಲೇ ಅಧಿಕಾರಿಗಳು ತೆಗೆದು ಹಾಕಿದ್ದಾರೆ. ಇಲ್ಲಿಯವರೆಗೆ ಸಾರ್ವಜನಿಕ ಸ್ಥಳ ಗಳಲ್ಲಿ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ 2 ಪ್ರಕರಣಗಳನ್ನು ದಾಖಲಿಸಲಾಗಿದೆ. ಖಾಸಗಿ ಸ್ಥಳಗಳಲ್ಲಿ ವರದಿಯಾದ ಒಟ್ಟು 104 ಉಲ್ಲಂಘನೆಗಳಲ್ಲಿ 97 ಪ್ರಚಾರ ಸಾಮಗ್ರಿಗಳನ್ನು ತೆರವುಗೊಳಿಸಲಾಯಿತು.

ಗುತ್ತಿಗೆದಾರರ ಬಾಕಿ ಬಿಲ್ ಬಿಡುಗಡೆ ಮಾಡುವಂತೆ ಮನವಿ

ನಿಯೋಗದಿಂದ ಶಾಸಕರ ಭೇಟಿ



ಕುಂದಾಪುರ: ಗುತ್ತಿಗೆದಾರರ ಬಾಕಿ ಬಿಲ್ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಉಡುಪಿ ಜಿಲ್ಲೆ ಗುತ್ತಿಗೆದಾರರ ಸಂಘದ ವತಿಯಿಂದ ಬೆಂಗಳೂರಿನ ವಿಧಾನಸೌಧದಲ್ಲಿ ಉಡುಪಿ ಜಿಲ್ಲೆಯ ಐವರು ಶಾಸಕರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಉಡುಪಿ ಜಿಲ್ಲೆಯ ಶಾಸಕರಾದ ಸುನೀಲ್ ಕುಮಾರ್, ಗುರುರಾಜ್ ಗಂಟಿಹೊಳೆ, ಯಶಪಾಲ್ ಆನಂದ್ ಸುವರ್ಣ, ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ ಅವರನ್ನು ಭೇಟಿ ಮಾಡಿದ ಗುತ್ತಿಗೆದಾರರು ಗುತ್ತಿಗೆದಾರರ ಬಾಕಿ ಬಿಲ್ ಪಾವತಿಯನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಮನವಿ ಪತ್ರ ಸಲ್ಲಿಸಿದರು. ಗುತ್ತಿಗೆದಾರರು ಎದುರಿಸುತ್ತಿರುವ ಆರ್ಥಿಕ ಸಂಕಷ್ಟ ನಡೆಯುತ್ತಿರುವ ಕಾಮಗಾರಿಗಳಿಗೆ ಉಂಟಾಗಿರುವ ಅಡಚಣೆಗಳು ಹಾಗೂ ಬಾಕಿ ಬಿಲ್‌ಗಳ ವಿಳಂಬದಿಂದ ನಿರ್ಮಾಣ ಕ್ಷೇತ್ರದ ಮೇಲೆ ಉಂಟಾಗುತ್ತಿರುವ ಗಂಭೀರ ಪರಿಣಾಮಗಳ ಬಗ್ಗೆ ಶಾಸಕರಿಗೆ ವಿವರವಾಗಿ ಮನವರಿಕೆ ಮಾಡಿಕೊಡಲಾಯಿತು.

ಮನವಿ ಸ್ವೀಕರಿಸಿದ ಶಾಸಕರು, ಗುತ್ತಿಗೆದಾರರ ನ್ಯಾಯಸಮ್ಮತ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಸಂಬಂಧಿತ ಅಧಿಕಾರಿಗಳು ಮತ್ತು ಸರ್ಕಾರದ ಮಟ್ಟದಲ್ಲಿ ವಿಷಯವನ್ನು ಗಂಭೀರವಾಗಿ ಮುಂದಿಟ್ಟು ಬಾಕಿ ಬಿಲ್ ಬಿಡುಗಡೆಗೆ ತ್ವರಿತ ಕ್ರಮ ಕೈಗೊಳ್ಳಲು ಸದನದಲ್ಲಿಯೂ ಧ್ವನಿ ಎತ್ತಿ ಸಂಪೂರ್ಣವಾಗಿ ಶ್ರಮಿಸುವುದಾಗಿ ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಉಡುಪಿ ಜಿಲ್ಲೆ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಜಿ.ಗೋಕುಲ್ ಶೆಟ್ಟಿ, ಉಪಾಧ್ಯಕ್ಷರಾದ ಎ.ಬಿ.ಶೆಟ್ಟಿ, ಪ್ರಮೋದ್ ಶೆಟ್ಟಿ, ಕಾರ್ಯದರ್ಶಿ ಪ್ರವೀಣ್ ಕುಮಾರ್ ಶೆಟ್ಟಿ, ಸಲಹೆಗಾರರಾದ ಪವನ್ ಎಸ್.ಡಿ. ಹಾಗೂ ಹಿರಿಯ ಗುತ್ತಿಗೆದಾರರಾದ ಫಿಲಿಪ್ ಡಿ'ಕೋಸ್ಟಾ, ಗಣೇಶ್ ಪುತ್ರನ್, ಸುನಿಲ್ ಶೆಟ್ಟಿ ಹೇರಿಕುದ್ರು, ಗ್ರೇಸನ್ ಪಾಯಸ್, ಸುಮಿತ್ ಹೆಗ್ಡೆ, ಅಜಿತ್ ಶೆಟ್ಟಿ, ದೀಪಕ್ ಶೆಟ್ಟಿ ಹಾಲಾಡಿ, ಗಣೇಶ್ ಶೆಟ್ಟಿ ಬಿದ್ಕಲ್ಕಟ್ಟೆ, ಸಂತೋಷ್ ಶೆಟ್ಟಿ ಗೋಳಿಯಂಗಡಿ ಮೊದಲಾದ ಗುತ್ತಿಗೆದಾರರು ಉಪಸ್ಥಿತರಿದ್ದರು.

ಆಳ್ವಾಸ್ ಸ್ವಾಯತ್ತ ಕಾಲೇಜಿನ ವಾರ್ಷಿಕೋತ್ಸವ

ಕನಸುಗಳನ್ನು ನನಸಾಗಿಸಬೇಕು



ಮೂಡುಬಿದಿರೆ: ಜೀವನದಲ್ಲಿ ನಿಜವಾದ ಯಶಸ್ಸು ಪದವಿ ಅಥವಾ ಪ್ರಶಸ್ತಿಗಳಿಗೆ ಮಾತ್ರ ಸೀಮಿತ ವಾಗಿರುವುದಿಲ್ಲ; ಕಂಡ ಕನಸುಗಳನ್ನು ಸಾಧಿಸುವುದರಲ್ಲಿದೆ ಎಂದು ಕಮೋಡೊರ್ ಬೆನ್ ಹೆಚ್ ಬೆರ್ಸನ್ ನುಡಿದರು.

ಅವರು ಮಂಗಳವಾರ ವಿದ್ಯಾಗಿರಿಯ ಕೃಷಿಸಿರಿ ವೇದಿಕೆಯಲ್ಲಿ ನಡೆದ ಆಳ್ವಾಸ್ ಸ್ವಾಯತ್ತಕಾಲೇಜಿನವಾರ್ಷಿಕೋತ್ಸವದಲ್ಲಿ ಮಾತನಾಡಿದರು. ಭವಿಷ್ಯ ರೂಪಿಸುವಲ್ಲಿ ದೂರದೃಷ್ಟಿ ಮತ್ತು ವ್ಯಕ್ತಿತ್ವದ ಮಹತ್ವವನ್ನು ವಿವರಿಸಿದ ಅವರು, ಜೀವನದಲ್ಲಿ ದೊರೆತ ಎರಡನೇ ಅವಕಾಶವೇ ಅವರನ್ನು ಪುನಃ ರೂಪಿಸಿ ಭಾರತೀಯ ನೌಕಾಪಡೆಯಲ್ಲಿ ಗಣನೀಯ ಸೇವೆ ಸಲ್ಲಿಸಲು ನೆರವಾಯಿತು ಎಂದು ಹೇಳಿದರು.

ಸಶಸ್ತ್ರ ಪಡೆಗಳನ್ನು ವೃತ್ತಿಯಾಗಿ ಆಯ್ಕೆ ಮಾಡಲು ವಿದ್ಯಾರ್ಥಿಗಳು ಮುಂದೆ ಬರಬೇಕು ಎಂದ ಅವರು, ಆಳ್ವಾಸ್ ಸಂಸ್ಥೆ ನಾಯಕತ್ವ ಮತ್ತು ದೇಶಭಕ್ತಿಯ ಮೂಲಕ ಹಲವು ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ರೂಪಿಸಿ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಕೋರ್ಸ್ ಗಳನ್ನು ಬಲಪಡಿಸುವ ಅಗತ್ಯವಿದೆ. ಜಾಗತಿಕ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧಿಸಲು ನಾವು ನವೀನತೆ, ಗುಣಮಟ್ಟ ಮತ್ತು ಪ್ರಸ್ತುತತೆಯನ್ನು ಕಾಪಾಡಿಕೊಳ್ಳಬೇಕು. ಕಾಲದ ಬದಲಾವಣೆಗಳಿಗೆ ಹೊಂದಿಕೊಳ್ಳುವ ಶಿಕ್ಷಣವೇ ವಿದ್ಯಾರ್ಥಿಗಳ ಭವಿಷ್ಯವನ್ನು ಬಲಪಡಿಸಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬಲ್ಲದು ಎಂದರು. ಆಳ್ವಾಸ್ ಸಂಸ್ಥೆ ಪ್ರತಿ ವರ್ಷ ಸುಮಾರು 60 ಕೋಟಿಯಷ್ಟು ಹಣವನ್ನು ವಿದ್ಯಾರ್ಥಿಗಳ ಉಚಿತ ಶಿಕ್ಷಣಕ್ಕೆ ವ್ಯಯಿಸುತ್ತಿದೆ. ಮಂಗಳೂರು ವಿವಿಯ ಅಂತರ್‌ಕಾಲೇಜು ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ದಾಖಲಾದ ಎಲ್ಲಾ 47 ಕೂಟ ದಾಖಲೆಗಳು ಆಳ್ವಾಸ್ ಕಾಲೇಜಿನ ಹೆಸರಿನಲ್ಲಿದೆ ಎಂದರು.

ಶೈಕ್ಷಣಿಕ, ಕ್ರೀಡಾ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿತು.

ಆಳ್ವಾಸ್ ಟ್ರಸ್ಟಿ ವಿವೇಕ್ ಆಳ್ವ, ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್, ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ. ನಾರಾಯಣ ಶೆಟ್ಟಿ, ಶೈಕ್ಷಣಿಕ ಕುಲಸಚಿವ ಡಾ. ಟಿ.ಕೆ. ರವೀಂದ್ರನ್, ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ಮಾನವಿಕ ವಿಭಾಗದ ಡೀನ್ ಸಂಧ್ಯಾ ಕೆ.ಎಸ್. ಸೇರಿದಂತೆ ಇತರರು ಉಪಸ್ಥಿತರಿದ್ದರು. ಪ್ರೆಶಲ್ ಡಿ. ಆಲ್ಮೇಡಾ ನಿರೂಪಿಸಿ, ಶಿಖಾ ಸ್ವಾಗತಿಸಿ, ಮಿಯಾ ಕೆನಡಿ ವಂದಿಸಿದರು.

ಯಕ್ಷಲೋಕದ ಸವ್ಯಸಾಚಿಯ ಮಹಾಪ್ರಸ್ಥಾನ

ಸುಮಾರು ಏಳು ದಶಕಗಳಿಗಿಂತಲೂ ಹೆಚ್ಚಿನ ಕಾಲ ರಂಗಸ್ಥಳದಲ್ಲಿ ಮೆರೆದ ಮಹಾನ್ ಕಲಾವಿದ ಕೆ. ಗೋವಿಂದ ಭಟ್ ನಮ್ಮ ನಡುವಿನಿಂದ ಎದ್ದು ಹೋಗಿದ್ದಾರೆ. ಯಕ್ಷರಂಗದ ಸಮಗ್ರತೆಯ ಸಂಕೇತವಾಗಿದ್ದ ಮೇರು ಕಲಾವಿದನ ಯುಗಾಂತ್ಯವಾಗಿದೆ. ಶ್ರೀ ಧರ್ಮಸ್ಥಳ ಮೇಳ ಒಂದರಲ್ಲೇ ಸುದೀರ್ಘ 55 ವರ್ಷಗಳ ಕಾಲ ತಿರುಗಾಟ ಮಾಡಿದ ಕೆ. ಗೋವಿಂದ ಭಟ್, ಮೂಲ್ಕಿ, ಕೂಡ್ಲು, ಕುಂಡಾವು, ಸುರತ್ಕಲ್ ಮುಂತಾದ ಕೆಲವು ಮೇಳಗಳಲ್ಲೂ ತಿರುಗಾಟ ಮಾಡಿದ್ದಾರೆ. ತುಳು – ಕನ್ನಡ, ಪೌರಾಣಿಕ – ಕಾಲ್ಪನಿಕ, ತೆಂಕು – ಬಡಗು... ಹೀಗೆ ಎಲ್ಲಾ ಜಾತಿಯ ಪ್ರಸಂಗಗಳಲ್ಲೂ, ಎಲ್ಲಾ ತಿಟ್ಟುಗಳಲ್ಲೂ ಪಾತ್ರಗಳನ್ನು ನಿರ್ವಹಿಸಿದ ಹಿರಿಯ ಅನುಭವಿ ಕಲಾವಿದರಾದ ಇವರು, ತಾಳಮದ್ದಳೆಯ ಅರ್ಥದಾರಿಗಳಾಗಿಯೂ ತಮ್ಮ ವಾಗ್ವಿಲಾಸದಿಂದ ಪ್ರಸಿದ್ಧರು.

ವೈಶಂಪಾಯನ ಸರೋವರದಿಂದ ಮೇಲೇಳುವ ಕೌರವ, ಶಿವನನ್ನು ನಿಂದಿಸುವ ದಕ್ಷ, ವಸಿಷ್ಠನ ಮುಂದೆ ಪ್ರತಿಜ್ಞಾ ಬದ್ಧನಾಗುವ ಕೌಶಿಕ, ಭೂದೇವಿಯನ್ನು ತುಡುಕುವ ಹಿರಣ್ಯಾಕ್ಷ, ದೀಕ್ಷೆಯನ್ನು ಬಿಸುಟೇಳುವ ಇಂದ್ರಜಿತು, ತ್ರಿಶಂಕುವನ್ನು ಸ್ವರ್ಗಕ್ಕೇರಿಸುವ ವಿಶ್ವಾಮಿತ್ರ, ಸ್ಯಮಂತಕ ರತ್ನವನ್ನು ಉಳಿಸಿಕೊಳ್ಳಲು ಹೋರುವ ಜಾಂಬವ, ಶ್ರೀ ಕೃಷ್ಣನನ್ನು ಪಚಾರಿಸುವ ಮಾಗಧ... ಹೀಗೆ ಹಲವಾರು ವೇಷಗಳು ಕಣ್ಣೆದುರು ಕುಣಿಯುತ್ತವೆ. ರಾಜವೇಷದ ಸ್ಪಷ್ಟ ರೂಪ ಹೊಂದಿರುವ ಅಂಗ ಸೌಷ್ಠವ, ವೇಷದ ಸೌಂದರ್ಯ ಮತ್ತು ಪ್ರಖರತೆಗಳಿಂದ ವೀರಾವೇಶದ ಅವರ ರಾಜವೇಷಗಳು ಸಾಟಿಯಿಲ್ಲದ್ದು. ಈ ಸಂದರ್ಭದಲ್ಲಿ ಅವರೊಳಗಿನ ಅನೂಹ್ಯ ಪ್ರತಿಭೆಯ ಕಲಾವಿದನನ್ನು ನೆಗಹಿ ತೋರಿದ ಕಡತೋಕಾ ಮಂಜುನಾಥ ಭಾಗವತರನ್ನು ಸ್ಮರಿಸಲೇಬೇಕು.



ಹಾಗಂತ ಅವರು ಒಂದೇ ನಮೂನೆಯ ವೇಷಗಳಿಗೆ ಸೀಮಿತರಲ್ಲ. ಯಾವುದೇ ಸಂದರ್ಭದಲ್ಲಿ ಯಾವ ವೇಷವನ್ನು ನೀಡಿದರೂ ಅದನ್ನು ನಿರ್ವಹಿಸಬಲ್ಲ ಗಟ್ಟಿ ಕಲಾವಿದ. ಶೂರ್ಪನಖಿ, ಪೂತನೆ, ಅಜಮುಖಿ ಮುಂತಾದ ಹೆಣ್ಣು ಬಣ್ಣಗಳ ಪಾತ್ರಗಳಂತೂ ಅಪೂರ್ವವಾದುದು. ನಿದ್ರೆಯಿಂದ ಎಬ್ಬಿಸಿ ಅಭಿಮನ್ಯು ಪಾತ್ರವನ್ನಿತ್ತರೂ ರಂಗಸ್ಥಳ ಹುಡಿಹಾರಿಸಿಯಾರು! ತೀರಾ ಇತ್ತೀಚಿನವರೆಗೂ ರಂಗಸ್ಥಳದಲ್ಲಿ ಕಾಡ್ಗಿಚ್ಚಿನಂತೆ ಧಗಧಗಿಸುತ್ತಿದ್ದ ಹಳೆಯ ಹುಡುಗ ಕೆ. ಗೋವಿಂದ ಭಟ್.

ರಾತ್ರಿಯಿಂದ ಬೆಳಗಿನ ತನಕ ಕೆಲವು ವೇಷಗಳನ್ನು ಕಟ್ಟಿ, ಅವುಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಆಯಾಸವೆಂದರೆ ಏನೆಂಬುದೇ ಅರಿಯದ ಕುಣಿತ, ಕಂಚಿನ ಕಂಠದಿಂದ ಹೊರಹೊಮ್ಮುತ್ತಿದ್ದ ಅರ್ಥಗಾರಿಕೆ ಎಂದರೆ ಒಮ್ಮೆಗೆ ಪ್ರೇಕ್ಷಕರ ನಿದ್ದೆ ಬಿಟ್ಟೋಡಬೇಕು. ವಿದ್ವಾಂಸರೇ ಬೆರಗಾಗುವಂತಹ ಕಾವ್ಯ ಶೈಲಿಯ ಪ್ರೌಢ ಮಾತುಗಾರಿಕೆ, 'ಪುರಾಣದ ರಮ್ಯಾದ್ಭುತ ಪಾತ್ರಗಳ ಮಾತುಗಾರಿಕೆ ಕೆ. ಗೋವಿಂದ ಭಟ್ಟರ ಮಾತಿನಂತಿರಬೇಕು' ಎಂದು ದಾಮೋದರ ಮಂಡೆಚ್ಚರೇ ಹೇಳಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ನಿರಂತರ ಓದಿನಿಂದ ಪರಿಪಕ್ವಗೊಂಡ ಅವರ ರಂಗಸ್ಥಳದ ಭಾಷೆ ಅನುಪಮವಾದದ್ದು. ಆಳಿನಿಂದ ಅರಸನ ತನಕ ಎಲ್ಲಾ ಜಾತಿಯ ಪಾತ್ರಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದ ಇಂತಹ ಯಕ್ಷಗಾನ ನಟಸಾರ್ವಭೌಮನನ್ನು ನಾನು ಕಂಡಿಲ್ಲ. ಅಳಿಕೆ ರಾಮಯ ರೈಗಳು 'ನನ್ನ ನಂತರ ರಂಗಸ್ಥಳವನ್ನು ಈ ಮಾಣಿಯೇ ಬೆಳಗುತ್ತಾನೆ' ಎಂದು ಅಂದೇ ಹೇಳಿದ್ದರಂತೆ.

ತಿದ್ದಿ ತೀಡಿದ ಅಚ್ಚುಕಟ್ಟಾದ ಕುಣಿತ, ಶಾಸ್ತ್ರೀಯ – ಲೌಕಿಕಗಳೆರಡೂ ಬೆರೆತ ಅಪ್ರತಿಮ ಅಭಿನಯ ಕೌಶಲ. ನಿಂತದ್ದೇ ಭಂಗಿ, ಕಾಲಿಟ್ಟದ್ದೆ ಹೆಜ್ಜೆ. ಅಪೂರ್ವ ಲಯ ಜ್ಞಾನ. ಎಂತಹ ವಾಕ್ಪಟುವನ್ನು ಬಾಯಿ ಮುಚ್ಚಿಸುವ ತರ್ಕ ಕೌಶಲ. ಎಳ್ಳಿನಿತೂ ವಿಕಾರವಿಲ್ಲದ ಸರ್ವಾಂಗ ಸುಂದರ ವೇಷ. ಕಲಾನಿಷ್ಠೆ, ಪಾತ್ರನಿಷ್ಠೆ, ಮೇಳನಿಷ್ಠೆ ಮುಪ್ಪುರಿಗೊಂಡ ಮೂರ್ತರೂಪಕ್ಕೆ ಇನ್ನೊಂದು ಹೆಸರೇ ಕೆ. ಗೋವಿಂದ ಭಟ್. ಅನಗತ್ಯ ಹರಟೆಗೆ ಅವರಲ್ಲಿ ಅವಕಾಶವಿಲ್ಲ. ಮೌನಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಬಿಡಾರದಲ್ಲಿ, ಚೌಕಿಯಲ್ಲಿ ಗಂಟೆಗಟ್ಟಲೆ ಧ್ಯಾನ, ಪಾರಾಯಣ, ಜಪ, ಪ್ರಾಣಾಯಾಮ ಇತ್ಯಾದಿ ಆಧ್ಯಾತ್ಮಿಕ ಸಾಧನೆ. ಯಾರೊಡನೆಯೂ ಬೆರೆಯದ ನಿರ್ಲಿಪ್ತತೆ. ಸುಖ



– ದುಃಖಗಳಲ್ಲಿ ಧೃತಿಗೆಡದ ಯುಧಿಷ್ಠಿರ ಪ್ರಜ್ಞೆ. 'ಕಲ್ಲಾಗಿರಬೇಕು ಕಠಿಣ ಭವತೊರೆಯೊಳಗೆ...' ಎಂದು ದಾಸರು ಹಾಡಿದ್ದಾರಲ್ಲ ಹಾಗೆ. ಸಂಕಷ್ಟಕ್ಕೊಳಗಾಗಿ ಕೈ ಚಾಚಿದರೆ ಸಹಾಯ ಹಸ್ತ ನೀಡುವ ಕಾರುಣ್ಯ. ದಿನದ ಕ್ಷಣ ಕ್ಷಣಗಳನ್ನು ಸಾರ್ಥಕಗೊಳಿಸಿದ ಅವರ ಜೀವನವೇ ಒಂದು ಯಶೋಗಾಥೆ. ಜನನ ಮಾರ್ಚ್ 10, 1940. ತಂದೆ ಕಿನಿಲ ಶಂಕರನಾರಾಯಣ ಭಟ್. ತಾಯಿ ಕುಕ್ಕೆಮನೆ ಲಕ್ಷ್ಮಿಯಮ್ಮ. ನಾಲ್ಕು ಮಂದಿ ಒಡಹುಟ್ಟುಗಳು 86 ವರ್ಷ 10 ದಿನಗಳ ಜೀವನಯಾನದಲ್ಲಿ ಬಾಲ್ಯದ 14 ವರ್ಷಗಳು ಮತ್ತು ನಿವೃತ್ತಿ ಜೀವನದ ನಾಲ್ಕೈದು ಸಂವತ್ಸರಗಳನ್ನು ಬಿಟ್ಟರೆ, ಉಳಿದ ಆಯುಷ್ಯವನ್ನೆಲ್ಲ ಯಕ್ಷಗಾನಕ್ಕಾಗಿ ಧಾರೆ ಎರೆದವರು. ಕಲಾವಿದ, ಕಲಾಗುರು, ಹರಿದಾಸ, ಅರ್ಥದಾರಿ, ಬರೆಹಗಾರ, ಪ್ರಸಂಗಕರ್ತ... ಹೀಗೆ ಸಾವಿರ ಬಾಹುಗಳ ವಿರಾಟ್ ಪುರುಷನಂತೆ ಬಹುಮುಖದ ಪ್ರತಿಭೆಗಳಿಂದ ಸಾವಿರದ ನೆನಪಾಗಿ ರಂಗಸ್ಥಳದಲ್ಲಿ ಉಳಿಯಬಹುದಾದ ಕಲಾವಿದ ಕೆ. ಗೋವಿಂದ ಭಟ್.

1985ರಲ್ಲಿ ನಾನು ಸಲ್ಲಿಸಿದ ಗುರುವಂದನೆಯ ಸಮ್ಮಾನದಿಂದ ಆರಂಭಿಸಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಸಹಿತ ಸಾವಿರಾರು ಪ್ರಶಸ್ತಿ ಸಮ್ಮಾನಗಳು ಸಂದರೂ ಎಂದು ಬೀಗದ ವಿದ್ವಜ್ಜನರ ಮುಂದೆ ಬಾಗಿದ ನಟಸಾರ್ವಭೌಮ. ಕಡುಬಡತನದಿಂದ ಜೀವನಕ್ಕಾಗಿ ಯಕ್ಷಗಾನವನ್ನು ಆಶ್ರಯಿಸಿದರೂ ಕೇವಲ ಕಲೋಪಜೀವಿಯಾಗದೆ ಕಲೋಪಾಸಕನಾಗಿ, ಕಲಾ ಶ್ರೀಮಂತಿಕೆಯನ್ನು ಎತ್ತಿ ಹಿಡಿದ ಕಲಾ ಮಂದರಧರ ಗೋವಿಂದ. ಇವರ ಜೀವನಯಾನದ ಹಾದಿ ಹೂವಿನ ಹಾಸಾಗಿರಲಿಲ್ಲ. ಅದು ಕಲ್ಲು ಮುಳ್ಳುಗಳ ಗುಪ್ಪೆ. ಎಲ್ಲಾ ಸವಾಲುಗಳನ್ನು ಎದುರಿಸುತ್ತಾ ಕಲಾಗಂಗೆಯನ್ನು ಯಕ್ಷ ಭುವನಕ್ಕಿಳಿಸಿದ ಈ ಕಲಾ ಭಗೀರಥನ ಸಾಧನೆ ಸಾಮಾನ್ಯವಾದದ್ದಲ್ಲ. 'ಬೆಲೆಯಿಂದಕ್ಕುಮೇ ಕೃತಿ ಭುವನದ ಭಾಗ್ಯದಿಂದಕ್ಕುಂ' ನೇಮಿಚಂದ್ರನ ಈ ಮಾತನ್ನು ಅನ್ವಯಿಸಿ ಹೇಳುವುದಾದರೆ, ಇದು ಗೋವಿಂದಭಟ್ಟರಿಗೆ ಬಹಳ ಒಪ್ಪುತ್ತದೆ. ಕವಿ ಮುದ್ದಣ್ಣ ಹೇಳಿದಂತೆ 'ಕಾಲಪುರುಷಂಗೆ ಗುಣಮಣಿಂ ಇಲ್ಲಂಗಡ'. ಭಾವಹೀನ ಕಾಲ ಯಕ್ಷಗಾನ ಕಲಾ ಸರಸ್ವತಿಯ ತಾರಹಾರದ ಒಂದೊಂದೇ ರತ್ನಮಣಿಗಳನ್ನು ಕೀಳುತ್ತಿದೆ. ಇದೀಗ ಕೊಹಿನೂರ್ ವಜ್ರವೂ ಕಳಚಿ ಹೋಯಿತು. ಯಕ್ಷಗಾನ ಹೋರಾಟವನ್ನು ಅಪೇಕ್ಷಿಸುವ ಕ್ಷಾತ್ರ ಕಲೆ. ಕೆ. ಗೋವಿಂದ ಭಟ್ ಇಲ್ಲಿ ಹೋರಾಡಿ ಗೆದ್ದಿದ್ದಾರೆ. ಚೌಕಿಯ ಒಳಗೆ – ಹೊರಗೆ, ರಂಗಸ್ಥಳದಲ್ಲಿ ಬಿಡಾರದಲ್ಲಿ, ಸಮಾಜದಲ್ಲಿ ಕಲಾವಿದರು ಹೇಗಿರಬೇಕೆಂಬುದಕ್ಕೆ ಇವರೇ ಮಾದರಿ.

ಒಂದು ಪಾತ್ರವನ್ನು ನಿರ್ವಹಿಸುವಾಗ ಅನೇಕ ಪಾತ್ರಗಳನ್ನು ನೋಡಿದವರಾಗಿದ್ದರೂ, ಆ ಕಥೆಯ ಮೂಲ ಆಕರವನ್ನು ಓದಿ, ಆ ಪಾತ್ರಕ್ಕೆ ಸಂಬಂಧಿಸಿದ ಕಥೆ, ಕಾದಂಬರಿ, ಕಾವ್ಯ, ಬರೆಹ, ಇತ್ಯಾದಿ ಯಾವುದೇ ಮೂಲದ ಚಿತ್ರಣಗಳನ್ನು ಶೋಧಿಸಿ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಂತೆ ಇಳಿ ವಯಸ್ಸಿನಲ್ಲಿಯೂ ಓದುತ್ತಾ, ಸ್ವತಂತ್ರವಾಗಿ ಪಾತ್ರಗಳಿಗೆ ಹೊಸ ಜೀವ ತುಂಬುವ ಗೋವಿಂದ ಭಟ್ ಅಧ್ಯಯನಶೀಲ ಕಲಾವಿದರಿಗೆ ಮೇಲ್ಪಂಕ್ತಿಯಾಗಿದ್ದಾರೆ.

ಸಾಧನೆಯ ತೀವ್ರ ಕೊರತೆಯಿಂದ ಸೊರಗುತ್ತಿರುವ ಯಕ್ಷಗಾನ ರಂಗಸ್ಥಳದಲ್ಲಿ ಕೆ. ಗೋವಿಂದ ಭಟ್ ರಂತಹಾ ಕಲಾವಿದರು ಇನ್ನೆಂದು ಹುಟ್ಟಿ ಬರುವರೋ ಕಾದು ನೋಡಬೇಕು.

ಡಾ.ತಾರಾನಾಥ ವರ್ಕಾಡಿ

ಕಿರುಸುದ್ದಿ

ಕೆಕೆಆರ್ ತಂಡಕ್ಕೆ ರಿಂಕು ಸಿಂಗ್ ಉಪನಾಯಕ

• **ಕೋಲ್ಕತ್ತಾ:** ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಬ್ಯಾಟರ್ ರಿಂಕು ಸಿಂಗ್ ಅವರನ್ನು ಉಪನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ವೇಗಿಗಳ ಗಾಯದಿಂದಾಗಿ ಭಾರೀ ಹಿನ್ನಡೆ ಅನುಭವಿಸಲಾರಂಭಿಸಿರುವ ಕೆಕೆಆರ್ ಮಂಗಳವಾರದಂದು ಈ ಬಗ್ಗೆ ಘೋಷಣೆ ಮಾಡಿತು. ಕಳೆದ ಬಾರಿಯ ಮೇಗಾ ಹಾರಜಿನ ವೇಳೆ ಚಾಂಪಿಯನ್ ತಂಡದಿಂದ ಶ್ರೇಯಸ್ ಅಯ್ಯರ್ ಅವರನ್ನು ಬಿಟ್ಟುಕೊಟ್ಟಿದ್ದ ಕೆಕೆಆರ್ ಅಚ್ಚರಿಯ ಆಯ್ಕೆಯಲ್ಲಿ ಅಜಿಂಕ್ಯಾ ರಹಾನೆ ಅವರನ್ನು ಖರೀದಿಸಿ ನಾಯಕರನ್ನಾಗಿ ಮಾಡಿತ್ತು. ಈ ಬಾರಿಯ ಹರಾಜಿನಲ್ಲಿ ವೆಂಕಟೇಶ್ ಅಯ್ಯರ್ ಸೇರಿದಂತೆ ಪ್ರಮುಖ ಆಟಗಾರರನ್ನು ಬಿಟ್ಟುಕೊಟ್ಟಿದೆ. ಗಾಯದಿಂದಾಗಿ ಬೌಲಿಂಗ್ ಪಡೆಯೇ ಬಿದ್ದಂತಿದೆ. ಹೀಗಿರುವಾಗ ಭವಿಷ್ಯದ ಕುರಿತಂತೆ ಪ್ರಮುಖ ನಿರ್ಧಾರ ಮಾಡಿರುವ ಕೆಕೆಆರ್ ರಿಂಕು ಸಿಂಗ್ ಅವರಿಗೆ ಉಪನಾಯಕ ಜವಾಬ್ದಾರಿ ನೀಡಿದೆ.

ಕ್ರೀಡಾ ಆರ್ಥಿಕತೆ: ಭಾರತ ಲೆಕ್ಕ 19 ಸಾವಿರ ಕೋಟಿ

• **ಬೆಂಗಳೂರು:** ಭಾರತದ ಕ್ರೀಡಾ ಆರ್ಥಿಕತೆಯ ಗಾತ್ರ ಅಂದಾಜು 18,864 ಕೋಟಿ ರೂ.ನಷ್ಟಿದೆ ಎಂದು ಡಬ್ಲ್ಯುಪಿಪಿ ಮಿಡಿಯಾದ ವರದಿಯೊಂದು ಹೇಳಿದೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ಕ್ರೀಡಾ ಆರ್ಥಿಕತೆಯ ಗಾತ್ರ ಎರಡು ಬಿಲಿಯನ್ ಡಾಲರ್ ದಾಟಿದೆ. ಡಬ್ಲ್ಯುಪಿಪಿ ಮೀಡಿಯಾದ ವರದಿಯೊಂದರ ಪ್ರಕಾರ ಸ್ಪೋರ್ಟ್ಸ್ ಎಕನಾಮಿ ಗಾತ್ರ 2.13 ಬಿಲಿಯನ್ ಡಾಲರ್ ಮುಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಆ ಸುದ್ದಿಯನ್ನು ಹಂಚಿಕೊಂಡಿದ್ದಾರೆ. ಭಾರತದ ಕ್ರೀಡಾ ಆರ್ಥಿಕತೆಗೆ ಕ್ರಿಕೆಟ್‌ನ ಕೊಡುಗೆಯೇ ಶೇ. 89ರಷ್ಟಿದೆ. ಭಾರತೀಯ ಕ್ರೀಡಾ ಕ್ಷೇತ್ರದ ಆರ್ಥಿಕತೆ ಕಳೆದ ನಾಲ್ಕು ವರ್ಷದಲ್ಲಿ ಅದ್ವಿತೀಯವಾಗಿ ಹಿಗ್ಗಿದೆ. ಶೇ. 19ರ ಸಿಎಜಿಆರ್‌ನಲ್ಲಿ ಬೆಳೆದಿದೆ. ನಾಲ್ಕು ವರ್ಷದ ಹಿಂದೆ ಇದ್ದುದಕ್ಕೆ ಹೋಲಿಸಿದರೆ ಅದರ ಗಾತ್ರ ಎರಡು ಪಟ್ಟು ಹೆಚ್ಚಿದೆ. ಅಂದರೆ, ನಾಲ್ಕೇ ವರ್ಷದಲ್ಲಿ ಡಬಲ್ ಆಗಿದೆ. ಈ ಲೆಕ್ಕಾಚಾರದಲ್ಲಿ ಶೇ 89ರಷ್ಟು ಕೊಡುಗೆ ಕ್ರಿಕೆಟ್‌ನಿಂದಲೇ ಸೇರಿದೆ. 16633 ಕೋಟಿ ರೂ. ಕ್ರಿಕೆಟ್‌ನಿಂದಲೇ ಎಣಿಕೆಯಾಗಿದೆ ಎಂದು ವರದಿಯಾಗಿವೆ.

ಫಿಫಾ ಸರಣಿ ಆಡಲಿದೆ ಭಾರತ

• **ಹೊಸದಿಲ್ಲಿ:** ಭಾರತೀಯ ಮಹಿಳಾ ಫುಟ್ಬಾಲ್ ತಂಡ ಏಪ್ರಿಲ್‌ನಲ್ಲಿ ಕೀನ್ಯಾದಲ್ಲಿ ನಡೆಯಲಿರುವ ಫಿಫಾ ಸರಣಿ 2026 ರಲ್ಲಿ ಭಾಗವಹಿಸಲಿದೆ. 2024 ರಲ್ಲಿ ಪಾದಾರ್ಪಣೆ ಮಾಡಿದ ನಂತರ ಅಂತಾರಾಷ್ಟ್ರೀಯ ಸ್ನೇಹಪರ ಉಪಕ್ರಮದ ಎರಡನೇ ಆವೃತ್ತಿಯಾಗಿದ್ದು, ನಾಲ್ಕು ಗುಂಪುಗಳನ್ನು ಒಳಗೊಂಡ ನಾಲ್ಕು ಗುಂಪುಗಳನ್ನು ಒಳಗೊಂಡಿರುತ್ತದೆ, ಒಂದು ರಾಷ್ಟ್ರವು ಎಲ್ಲಾ ಪಂದ್ಯಗಳನ್ನು ಆಯೋಜಿಸುತ್ತದೆ. ಮಂಗಳವಾರ ಕೀನ್ಯಾದಲ್ಲಿ ನಾಲ್ಕನೇ ಮಹಿಳಾ ಗುಂಪನ್ನು ಪಟ್ಟಿಗೆ ಸೇರಿಸಿದ ನಂತರ ಭಾರತ ಆಡಲಿದೆ ಎಂಬುದು ಖಚಿತವಾಗಿದೆ. ಆಸ್ಟ್ರೇಲಿಯಾ ಮತ್ತು ಮಲಾವಿ ಕೂಡ ಇದೇ ಗುಂಪಿನಲ್ಲಿ ಸ್ಪರ್ಧಿಸಲಿವೆ. ಪಂದ್ಯಗಳು ಕೀನ್ಯಾದ ನೈರೋಬಿಯಲ್ಲಿರುವ ನ್ಯಯೋ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿವೆ. ಭಾರತೀಯ ಮಹಿಳಾ ತಂಡ ಇತ್ತೀಚೆಗೆ ಅಂಡರ್-17 ಮಹಿಳಾ ಏಷ್ಯನ್ ಕಪ್ 2026 ರಲ್ಲಿ ಆಡಿತ್ತು, ಅಲ್ಲಿ ಮೂರರಲ್ಲಿ ಮೂರು ಸೋಲುಗಳ ನಂತರ ಗುಂಪು ಹಂತದಿಂದ ನಿರ್ಗಮಿಸಿತು.

ಎಸಿಕ್ಸ್ ಅಥ್ಲೀಟ್ ವಿಶೇಷ ಶೂ ಬಿಡುಗಡೆ



• **ಬೆಂಗಳೂರು:** ಜಾಗತಿಕ ಮಟ್ಟದ ಜಪಾನಿ ಕ್ರೀಡಾ ಬ್ರಾಂಡ್ ಹಾಗೂ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 2026'ರ ಅಧಿಕೃತ ಕ್ರೀಡಾ ಸಾಮಾಗ್ರಿ ಪಾಲುದಾರ ಸಂಸ್ಥೆಯಾದ ಎಸಿಕ್ಸ್ ಸಂಸ್ಥೆಯು ಬೆಂಗಳೂರು ನಗರದ ಬ್ರಿಗೇಡ್ ರಸ್ತೆಯ ಮಳಿಗೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸೂಪರ್‌ಬ್ಲಾಸ್ಟ್ 3' ರನ್ನಿಂಗ್ ಶೂಗಳನ್ನು ಬಿಡುಗಡೆ ಮಾಡಿತು. ಎಲ್ಲಾ ವಯಸ್ಸಿನ ಓಟಗಾರರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಶೂಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಶೂ ಬಿಡುಗಡೆ ಕಾರ್ಯಕ್ರಮದಲ್ಲಿ ಮುಂಬರುವ ಟಿಸಿಎಸ್ ವರ್ಲ್ಡ್ 10ಕೆ 2026ನ ರೇಸ್ ದಿನದ ಅಧಿಕೃತ ಕ್ರೀಡಾ ಉಡುಪುಗಳನ್ನೂ ಪ್ರದರ್ಶಿಸಲಾಯಿತು. ಟೆನಿಸ್ ದಿಗ್ಗಜ ರೋಹನ್ ಬೋಪಣ್ಣ ಮತ್ತು ಖ್ಯಾತ ಸ್ಕ್ವಾಷ್ ಆಟಗಾರ್ತಿ ಜೋಶ್ನಾ ಚಿನ್ನಪ್ಪ ಅವರು ಈ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದರು. ತರಬೇತಿ ಮತ್ತು ಶಿಸ್ತಿನ ಮಹತ್ವದ ಕುರಿತು ಮಾತನಾಡಿದ ಈ ಖ್ಯಾತ ಕ್ರೀಡಾಪಟುಗಳು, ಎಸಿಕ್ಸ್ ನ ಸೌಂಡ್ ಮೈಂಡ್, ಸೌಂಡ್ ಬಾಡಿ' (ಸ್ವಸ್ಥ ಮನಸ್ಸು, ಸ್ವಸ್ಥ ಶರೀರ) ತತ್ವವನ್ನು ಶ್ಲಾಘಿಸಿದರು.

ವಿಜಯೋತ್ಸವ ದುರಂತ ವೇಳೆ ಮೃತರ ನೆನಪು | ಕಪ್ಪು ಪಟ್ಟಿ ಧರಿಸಿ ರಾಯಲ್ ಬೆಂಗಳೂರು ಆಟ

ಅಭಿಮಾನಿಗಳ ನೆನಪಿಗಾಗಿ 11 ಆಸನ ಖಾಲಿ

• **ಬೆಂಗಳೂರು:** ಕಳೆದ ಆವೃತ್ತಿಯ ಗೆಲುವಿನ ಸಂಭ್ರಮಾಚರಣೆ ವೇಳೆ ಜೀವ ಕಳೆದುಕೊಂಡ 11 ಜನರನ್ನು ಸದಾ ನೆನಪಿಡುವ ನಿಟ್ಟಿನಲ್ಲಿ ಆಟಗಾರರು ತಮ್ಮ ಮೊದಲ ತವರಿನ ಪಂದ್ಯಕ್ಕೆ ಮುಂಚಿತವಾಗಿ ಅಭ್ಯಾಸ ಅವಧಿಯನ್ನು 11 ನಂಬರ್ ಜೆರ್ಸಿಯಲ್ಲಿ ನಡೆಸಲಿದ್ದಾರೆ. ಪಂದ್ಯದ ಸಮಯದಲ್ಲಿ ಕಪ್ಪು ತೋಳುಪಟ್ಟಿಗಳನ್ನು ಧರಿಸಲಿದ್ದು, ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಐದೂ ಆರ್‌ಸಿಬಿ ತವರು ಪಂದ್ಯದ ವೇಳೆ ಮೃತರ ಸ್ಮರಣಾರ್ಥ 11 ಆಸನಗಳನ್ನು ಖಾಲಿ ಇಡಲಾಗುವುದು ಎಂದು ಆರ್‌ಸಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಮೆನನ್ ಮಂಗಳವಾರ ಫ್ರಾಂಚೈಸಿಯ ಪೂರ್ವ ಋತುವಿನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶನಿವಾರದಿಂದ ಶುರುವಾಗಲಿರುವ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ. ಎಲ್ಲಾ ತಂಡಗಳು ಅಭ್ಯಾಸದಲ್ಲಿ ವ್ಯಸ್ಥವಾಗಿವೆ. ಈ ಮಧ್ಯೆ ರಾಯಲ್ ಚಾಲೆಂಜರ್ಸ್ ಬೆಂಗ ಳೂರು ಫ್ರಾಂಚೈಸಿ ಕಳೆದ ಬಾರಿಯ ದುರಂತ ಪಾಠವಾಗಿ ಕಲಿತು ಕೊಂಡು ಹೊಸ ಆರಂಭ ಪಡೆಯುವ ನಿರೀಕ್ಷೆಯಲ್ಲಿದೆ. ಪಂದ್ಯಗಳಿಗಾಗಿ ಆರ್‌ಸಿಬಿ, ಕೆಎಸ್‌ಸಿಎ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿವೆ. ಮೊದಲ ಪಂದ್ಯಕ್ಕೆ ಮೂರೇ ದಿನ ಬಾಕಿ ಇರುವಾಗ ಬೆಂಗಳೂರು ತಂಡ ನಗರದ ಖಾಸಗಿ ಹೋಟೆಲಿನಲ್ಲಿ ಮಾಧ್ಯಮಗೋಷ್ಠಿ ನಡೆಸಿತು.

ಜಂಟಿ ಕಾರ್ಯ: ಮೆನನ್: ಕ್ರೀಡಾಂಗಣ ನಿಯಂತ್ರಿಸುವ ಪರಿಷ್ಕೃತ ಚೌಕಟ್ಟನ್ನು ಮೆನನ್ ತಿಳಿಸಿದರು. ಬಿಸಿಸಿಐ, ಕೆಎಸ್‌ಸಿಎ ಮತ್ತು ಆರ್‌ಸಿಬಿ ನಡುವಿನ ಒಪ್ಪಂದ ಅಡಿಯಲ್ಲಿ, ರಾಜ್ಯ ಸಂಘವು ಪ್ರಮುಖ ಸಂಘಟಕರಾಗಿ ಕಾರ್ಯನಿರ್ವಹಿಸುತ್ತದೆ. ಫ್ರಾಂಚೈಸಿ ತುರ್ತು ಯೋಜನೆ, ಸ್ಟ್ಯಾಂಡರ್ಡ್ ಆಪರೇಟಿಂಗ್ ಕಾರ್ಯವಿಧಾನಗಳನ್ನು ಜಾರಿಗೆ ತರುತ್ತದೆ. ಕ್ರೀಡಾಂಗಣ ಒಪ್ಪಂದದ ಉಲ್ಲಂಘನೆಗೆ ಪರಿಹಾರ ನೀಡುತ್ತದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರೀಡಾಂಗಣದ ಒಳಗೆ ಮತ್ತು ಸುತ್ತಮುತ್ತಲಿನ ಹಲವಾರು ಹೊಸ ಪ್ರೇಕ್ಷಕರ ನಿರ್ವಹಣಾ ಕ್ರಮಗಳನ್ನು ಪರಿಚಯಿಸಿದೆ ಎಂದರು.

ಎಐ ಬಳಕೆ: ನಾವು ಜನಸಂದಣಿ ನಿರ್ವಹಣಾ ಕ್ರಮಗಳನ್ನು ಗಮನಾರ್ಹವಾಗಿ ಬಲಪಡಿಸಿದ್ದೇವೆ. ಜಾರ್ವಿಸ್ ಎಂಬ ಎಐ ಸಾಧನದಿಂದ ಚಾಲಿತವಾದ ಒಳಗೆ, ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಒಳಗೊಂಡಂತೆ ಕ್ರೀಡಾಂಗಣದಾದ್ಯಂತ ನಾವು ಎಐ ನೇತೃತ್ವದ ಸಿಸಿಟಿವಿ ಪರಿಹಾರಗಳನ್ನು ಜಾರಿಗೆ ತಂದಿದ್ದೇವೆ. ಈ ವ್ಯವಸ್ಥೆಯು ಉತ್ತಮ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಲು ಸ್ಟ್ಯಾಂಡ್-ನಿರ್ದಿಷ್ಟ ಜನಸಂದಣಿ ಎಣಿಕೆಗಳನ್ನು ಒಳಗೊಂಡಂತೆ ನೈಜ-ಸಮಯದ ಎಚ್ಚರಿಕೆಗಳನ್ನು ಒದಗಿಸುತ್ತದೆ.



ನಾವು ನೀಡುವ ಗೌರವ

ಇದು ನಮ್ಮ ಅಭಿಮಾನಿಗಳಿಗೆ ಗೌರವವಾಗಿದೆ, ಅವರು ಯಾವಾಗಲೂ ನಮ್ಮ ಪ್ರಯಾಣದ ಭಾಗವಾಗಿ ಉಳಿಯುತ್ತಾರೆ ಎಂದು ಅವರು ಹೇಳಿದರು. ನಾನು ಸರ್ಕಾರಕ್ಕೆ ಧನ್ಯವಾದ ಹೇಳಲು ಬಯಸು ತ್ತೇನೆ. ಜೂನ್ 4 ರಿಂದ ಇದು ಸುದೀರ್ಘ ಪ್ರಯಾಣವಾಗಿದೆ. ನ್ಯಾಯಾಲಯವು ಒದಗಿಸಿದ ಎಸ್‌ಒಪಿಗಳನ್ನು ಅನುಸರಿಸಲು ಮತ್ತು ಎಲ್ಲಾ ಕಾಮಗಾರಿಗಳು ಜಾರಿಯಲ್ಲಿವೆ. ಪಂದ್ಯಕ್ಕೂ ಮುನ್ನ ನಮಗೆ ಸುರಕ್ಷಿತ ಮೈದಾನ ಸಿದ್ಧವಾಗಲಿದೆ ಎಂದು ಹೇಳಿದರು.

ಅಭಿಮಾನಿಗಳ ರಕ್ಷಣೆ ನಮ್ಮ ಮೊದಲ ಆದ್ಯತೆ. ಎಲ್ಲಾ ಸುರಕ್ಷಿತ ಕ್ರಮಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಮುಖ್ಯವಾಗಿ 350 ಎಐ ಕ್ಯಾಮರಾ ಅಳವಡಿಕೆ ಮಾಡಲಾಗಿದೆ. ಕೆಎಸ್‌ಸಿಎ ಕೂಡ ನಮಗೆ ಬೆಂಬಲ ನೀಡುತ್ತಿದೆ. ಹೊಸ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಟಿಕೆಟುಗಳು ಮೊಬೈಲ್-ಟಿಕೆಟ್ ಆಗಿರುತ್ತವೆ.

■ ರಾಜೇಶ್ ಮೆನನ್, ಆರ್‌ಸಿಬಿ ಮುಖ್ಯ ಕಾರ್ಯನಿರ್ವಾಹಕ

ಪಾರ್ಕಿಂಗ್ ವ್ಯವಸ್ಥೆ

ಕ್ರೀಡಾಂಗಣದ ಆವರಣಕ್ಕೆ ಖಾಸಗಿ ವಾಹನಗಳಲ್ಲಿ ಬರುವುದನ್ನು ತಪ್ಪಿಸುವಂತೆ ಪೊಲೀಸರು ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ. ಪಂದ್ಯ ವೀಕ್ಷಿಸಲು ಬರುವವರಿಗೆ ನಿಗದಿತ ಸ್ಥಳಗಳಲ್ಲಿ ಮಾತ್ರ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದ್ದು, ಗರುಡ ಮಾಲ್, ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ಸೆಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್ ಹಾಗೂ ಫ್ರೀಡಂ ಪಾರ್ಕ್ ಆವರಣವನ್ನು ಅಧಿಕೃತ ಪಾರ್ಕಿಂಗ್ ಸ್ಥಳಗಳೆಂದು ಗುರುತಿಸಲಾಗಿದೆ. ಈ ನಿಗದಿತ ಸ್ಥಳಗಳಿಂದ ಕ್ರೀಡಾಂಗಣಕ್ಕೆ ತಲುಪಲು ವಿಶೇಷ ಶಟಲ್ ಬಸ್ ವ್ಯವಸ್ಥೆಯನ್ನು ಮಾಡಲಾಗಿದೆ.

ಮೆಟ್ರೋ ಪ್ರಯಾಣಕ್ಕೆ ಉತ್ತೇಜನ



ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸಾರ್ವಜನಿಕ ಸಾರಿಗೆ, ವಿಶೇಷವಾಗಿ ಮೆಟ್ರೋ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಪಂದ್ಯದ ಟಿಕೆಟ್ ಹೊಂದಿರುವ ಪ್ರೇಕ್ಷಕರಿಗೆ ಮೆಟ್ರೋದಲ್ಲಿ ಉಚಿತವಾಗಿ ಪ್ರಯಾಣಿಸಲು (ಬರುವ ಮತ್ತು ಹೋಗುವ ಪ್ರಯಾಣಕ್ಕೆ) ಅವಕಾಶ ನೀಡಲಾಗಿದೆ. ಕ್ರೀಡಾಂಗಣಕ್ಕೆ ಹತ್ತಿರವಿರುವ ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆ ಮೆಟ್ರೋ ನಿಲ್ದಾಣಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

ವಾಹನಗಳ ಬಿಡುಗಡೆ, ಪಿಕಪ್ ಪಾಯಿಂಟ್

ಕ್ರೀಡಾಂಗಣದ ಗೇಟ್‌ಗಳ ಬಳಿ ವಾಹನಗಳನ್ನು ನಿಲ್ಲಿಸಲು ಅಥವಾ ಪ್ರೇಕ್ಷಕರನ್ನು ಇಳಿಸಲು (ಈಟಟಟ) ಅವಕಾಶವಿರುವುದಿಲ್ಲ. ವಾಹನಗಳ ಪಿಕಪ್ ಮತ್ತು ಡ್ರಾಪ್‌ಗಾಗಿ ಕಬ್ಬನ್ ರಸ್ತೆ ಹಾಗೂ ಎಂ.ಜಿ. ರಸ್ತೆಯಲ್ಲಿ ಪ್ರತ್ಯೇಕ ಪಾಯಿಂಟ್‌ಗಳನ್ನು ನಿಗದಿಪಡಿಸಲಾಗಿದೆ. ಕ್ರೀಡಾಂಗಣದ ಪ್ರವೇಶ ದ್ವಾರಗಳು ಪಂದ್ಯ ಆರಂಭಕ್ಕೂ 4 ಗಂಟೆ ಮುಂಚಿತವಾಗಿಯೇ ತೆರೆಯಲಿದ್ದು, ಸಂಚಾರ ದಟ್ಟಣೆ ತಪ್ಪಿಸಲು ಪ್ರೇಕ್ಷಕರು ಮೊದಲೇ ಆಗಮಿಸುವಂತೆ ಕೋರಲಾಗಿದೆ. ಕ್ವೀನ್ಸ್ ರಸ್ತೆ ಭಾಗದಿಂದ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಕಬ್ಬನ್ ರಸ್ತೆ ಮತ್ತು ಲಿಂಕ್ ರಸ್ತೆಗಳ ಮೂಲಕ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಎಚ್ಚರಿಕೆ ನಿಡಿದ್ದಾರೆ.

ಯಶ್, ಜೋಶ್ ಅಲಭ್ಯ

ವೈಯಕ್ತಿಕ ಕಾರಣಗಳಿಂದಾಗಿ ಯಶ್ ದಯಾಳ್ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಅಲಭ್ಯರಾಗಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಕೂಡ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿ, ಯಶ್ ದಯಾಳ್ ವೈಯಕ್ತಿಕ ಕಾರಣಗಳಿಂದಾಗಿ ಅವರು ತಕ್ಷಣ ತಂಡವನ್ನು ಸೇರುವುದಿಲ್ಲ ಎಂದು ದೃಢಪಡಿಸಿದರು. ಜೋಶ್ ಹ್ಯಾಜೆಲ್ವುಡ್ ಅವರ ಲಭ್ಯತೆಯ ಬಗ್ಗೆ ಮಾತನಾಡುತ್ತಾ, ಫ್ರಾಂಚೈಸಿ ಕ್ರಿಕೆಟ್ ಆಸ್ಟ್ರೇಲಿಯಾದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಹೇಳಿದರು. ಜೋಶ್ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ಗಾಯದಿಂದಾಗಿ ಅವರು ಕ್ರಿಕೆಟ್‌ನಿಂದ ಸ್ವಲ್ಪ ದೂರ ಉಳಿದಿದ್ದಾರೆ, ಫಿಟ್‌ನೆಸ್ ಪ್ರಮಾಣ ಪಡೆದ ತಕ್ಷಣ ಅವರು ತಂಡಕ್ಕೆ ಸೇರುತ್ತಾರೆ ಎಂದು ಅವರು ಹೇಳಿದರು.

ದೇಶಿ ಬೌಲರ್‌ಗಳಿದ್ದಾರೆ: ತಂಡದ ಸಂಯೋಜನೆಯ ಬಗ್ಗೆ ಮಾತನಾಡಿರುವ ಮೊ ಬೊಬಾಟ್, ನಾವು ಚಾಂಪಿಯನ್‌ಗಳಾಗಿ ಮೈದಾನಕ್ಕಿಳಿಯಲಿದ್ದೇವೆ. ಮೊದಲಿನ ಪಂದ್ಯಗಳಲ್ಲಿ ಯಶ್ ದಯಾಳ್ ಅಲಭ್ಯರಿದ್ದಾರೆ. ಹ್ಯಾಜೆಲ್ವುಡ್ ಕೂಡ ಲಭ್ಯರಿಲ್ಲ. ಆದಾಗ್ಯೂ ಬೌಲಿಂಗ್ ವಿಚಾರದಲ್ಲಿ ನಾವು ಮುಂದಿದ್ದೇವೆ. ವಿವಿಧ ಬೌಲರುಗಳನ್ನು ತಂಡದಲ್ಲಿ ಹೊಂದಿದ್ದೇವೆ. ರಾಸಿಕ್ ಸಲಾಂ, ಮಂಗೇಶ್ ಯಾದವ್ ಅಂಥ ದೇಶಿ ಯುವ ಬೌಲರ್‌ಗಳನ್ನು ತಂಡ ಹೊಂದಿದೆ. ಹೀಗಿರುವಾಗ ಹೆಚ್ಚಿನ ಪರಿಣಾಮ ಬೀಳಲ್ಲ ಎಂದರು. ಈಗ ಗುರಿ ಸರಳವಾಗಿದೆ, ನಾವು ಕೊನೆಯದನ್ನು ಮುಗಿಸಿದ ರೀತಿಯಲ್ಲಿ ಈ ಋತುವನ್ನು ಪ್ರಾರಂಭಿಸುವುದು. ನಾವು ಪ್ರತಿ ತಂಡದ ಬಗ್ಗೆ ಸಾಕಷ್ಟು ಗೌರವವನ್ನು ಹೊಂದಿದ್ದೇವೆ ಮತ್ತು ಇದೀಗ, ನಮ್ಮ ಎಲ್ಲಾ ಗಮನವು ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಮೊದಲ ಪಂದ್ಯದ ಮೇಲೆ ಇದೆ ಎಂದು ಬೊಬಾಟ್ ತಿಳಿಸಿದರು.

ಔಪಚಾರಿಕ ಪಂದ್ಯಗಳಿಗೆ ಭಾರತ ತಂಡ

• **ಹೊಸದಿಲ್ಲಿ:** ಎಎಫ್‌ಸಿ ಏಷ್ಯನ್ ಕಪ್ 2027 ಪಂದ್ಯಾವಳಿಯ ಅರ್ಹತಾ ಸುತ್ತಿನ ಪಂದ್ಯಗಳಿಗಾಗಿ ಭಾರತ ತನ್ನ ತಂಡವನ್ನು ಪ್ರಕಟಿಸಿತು. ಭಾರತದ ಪುರುಷರ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಖಾಲಿದ್ ಜಮೀಲ್ ಮುಂಬರುವ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯಕ್ಕಾಗಿ ಹಾಂಗ್ ಕಾಂಗ್ ವಿರುದ್ಧ 23 ಸದಸ್ಯರ ತಂಡವನ್ನು ಪ್ರಕಟಿಸಿದ್ದಾರೆ. ಹಿಂದಿನ ತಂಡಕ್ಕೆ ಹೋಲಿಸಿದರೆ ಈ ಬಾರಿ 14 ಬದಲಾವಣೆಗಳನ್ನು ಮಾಡಲಾಗಿದೆ. ಗೋಲ್‌ಕೀಪರ್ ಅಲ್ಬಿನೋ ಗೋಮ್ಸ್ ಮತ್ತು ಡಿಫೆಂಡರ್ ಬಿಜೆಯ್ ವರ್ಗೀಸ್ ಅವರನ್ನು ಅಚ್ಚರಿ ಆಯ್ಕೆಗಳಾಗಿ ಸೇರಿಸಲಾಗಿದೆ. ಅಲ್ಬಿನೋ ಗೋಮ್ಸ್ ಸುಮಾರು ಒಂದು ದಶಕದ ಬಳಿಕ ಮತ್ತೆ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಬಿಜೆಯ್ ವರ್ಗೀಸ್ ಮೊದಲ ಬಾರಿ ಹಿರಿಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಭಾರತ ಈಗಾಗಲೇ ಅರ್ಹತಾ ಹೋರಾಟದಿಂದ ಹೊರಬಿದ್ದಿದೆ. ಆಡಿದ 5 ಪಂದ್ಯಗಳಲ್ಲಿ 3 ಸೋಲು ಮತ್ತು 2 ಡ್ರಾ ಫಲಿತಾಂಶಗಳೊಂದಿಗೆ ತಂಡಕ್ಕೆ ಇನ್ನೂ ಜಯ ಸಿಕ್ಕಿಲ್ಲ. ಆದರೂ ಮುಂದಿನ ಪಂದ್ಯಗಳು ಔಪಚಾರಕತೆಗೆ ಮಾತ್ರ ನಡೆಯಲಿವೆ.

ಭಾರತ ತಂಡ

ಗೋಲ್‌ಕೀಪರ್‌ಗಳು: ಅಲ್ಬಿನೋ ಗೋಮ್ಸ್, ಗುರುಪ್ರೀತ್ ಸಿಂಗ್ ಸಂಧು, ವಿಶಾಲ್ ಕೈತ್

ಡಿಫೆನ್ಸ್: ಅಭಿಷೇಕ್ ಸಿಂಗ್ ಟೆಕಚಂ, ಆಕಾಶ್ ಮಿಶ್ರಾ, ಅನ್ವರ್ ಅಲಿ, ಬಿಜೆಯ್ ವರ್ಗೀಸ್, ನಿಖಿಲ್ ಪೂಜಾರಿ, ರೋಷನ್ ಸಿಂಗ್ ನೊರೇಮ್, ಸಂದೇಶ್ ಜಿಂಗನ್, ರಾಹುಲ್ ಬೇಕೆ

ಮಿಡಲ್‌ಫೀಲ್ಡರ್: ಆಶಿಕ್ ಕುರುನಿಯನ್, ಡ್ಯಾನಿಶ್ ಫಾರೂದ್ ಭಟ್, ಜೀಕ್ಸನ್ ಸಿಂಗ್ ಥೌನೋಜಾಮ್, ಲಾಲೆಂಗ್ಮಾವಿಯಾ ರಾಲ್ತೆ, ಸಹಲ್ ಅಬ್ದುಲ್ ಸಮದ್

ಫಾರ್ವರ್ಡ್‌ಗಳು: ಎಡ್ಮಂಡ್ ಲಾಲ್ರಿಂಡಿಕಾ, ಫಾರುಕ್ ಚೌಧರಿ, ಲಾಲಿಯಾಂಜುವಾಲಾ ಛಾಂಗ್ಟೆ, ಲಿಸ್ಟನ್ ಕೋಲಾಸೋ, ಮನ್‌ವೀರ್ ಸಿಂಗ್, ರಹೀಂ ಅಲಿ, ರಿಯಾನ್ ವಿಲಿಯಮ್ಸ್

ಎಲ್ಲಿಸ್ ಬದಲಿಗೆ ಆಯ್ಕೆ | ದಿಲ್ಲಿ ತಂಡಕ್ಕೆ ಡಕೆಟ್ ಅಲಭ್ಯ

ಚೆನ್ನೈ ತಂಡಕ್ಕೆ ಸ್ಪೆನ್ಸರ್ ಜಾನ್ಸನ್

• **ಮುಂಬೈ:** ಆಸ್ಟ್ರೇಲಿಯಾ ವೇಗಿ ನಾಥನ್ ಎಲ್ಲಿಸ್ ಗಾಯದ ಕಾರಣಗಳಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಬಿದ್ದ ಬೆನ್ನಲ್ಲೇ ಅದೇ ಆಸ್ಟ್ರೇಲಿಯಾದ ಸ್ಪೆನ್ಸರ್ ಜಾನ್ಸನ್ ಅವರನ್ನು ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಬದಲಿ ಆಟಗಾರನಾಗಿ ಆಯ್ಕೆ ಮಾಡಿಕೊಂಡಿದೆ.

ಐಪಿಎಲ್‌ಗೆ ದಿನಗಣನೆ ಶುರುವಾಗಿದೆ. ಆಸ್ಟ್ರೇಲಿಯಾ ಮೂಲದ ಪ್ರಮುಖ ಆಟಗಾರರು ಪಂದ್ಯಾವಳಿಯಲ್ಲಿ ಹಾಜರಾಗುತ್ತಿಲ್ಲ. ವಿಶೇಷವಾಗಿ ವೇಗಿಗಳಾದ ಜೋಶ್ ಹ್ಯಾಜೆಲ್ವುಡ್, ಮಿಚೆಲ್ ಸ್ಟಾರ್ಕ್, ನಾಥನ್ ಎಲ್ಲಿಸ್ ಸೇರಿದಂತೆ ಪ್ರಮುಖ ಆಟಗಾರರು ಗಾಯದಿಂದಾಗಿ ಪಂದ್ಯಾವಳಿಗೆ ಲಭ್ಯವಿಲ್ಲ ಎಂದಿದ್ದಾರೆ. ಹರಾಜಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಎಲ್ಲಿಸ್ ಅವರನ್ನು ಪ್ರಮುಖ ವೇಗಿಯಾಗಿ ಖರೀದಿಸಿತ್ತು. ಅವರ ಅನುಪಸ್ಥಿತಿ ಬೆನ್ನಲ್ಲೇ 1.5 ಕೋಟಿ ರೂ.ಗೆ ಜಾನ್ಸನ್ ಅವರನ್ನು ಖರೀದಿಸಿದೆ.

ಐಪಿಎಲ್ ತೊರೆದ ದಿಲ್ಲಿಯ ಡಕೆಟ್

ಇಂಗ್ಲೆಂಡ್ ಕ್ರಿಕೆಟ್ ತಂಡಕ್ಕೆ ಆಡುವ ಕುರಿತಂತೆ ಗಮನ ಹರಿಸುವುದಾಗಿ ಹೇಳಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಆಟಗಾರ ಬೆನ್ ಡಕೆಟ್ ಐಪಿಎಲ್ ತ್ಯಜಿಸಿದರು. ಪಂದ್ಯಾವಳಿಗೆ ಮೂರೇ ದಿನ ಉಳಿದಿರುವಾಗಲೇ ಅವರ ದಿಢೀರ್ ನಿರ್ಧಾರ ಹೊರಬಿದ್ದಿದೆ. ಕೆ.ಎಲ್. ರಾಹುಲ್ ಅಂತಹ ಆಟಗಾರರನ್ನು ಹೊಂದಿರುವ ದಿಲ್ಲಿ ಕ್ಯಾಪಿಟಲ್ಸ್, ಡು-ಪ್ಲೆಸಿ ಅವರನ್ನು ಬಿಡುಗಡೆ ಮಾಡಿದ್ದಲ್ಲದೆ ಇಂಗ್ಲೆಂಡ್ ಮೂಲದ ಬೆನ್ ಡಕೆಟ್ ಅವರನ್ನು ಖರೀದಿಸಿತ್ತು. ಈ ಬಗ್ಗೆ ಇಂಗ್ಲೆಂಡಿನ ಮಾಧ್ಯಮದೊಂದಿಗೆ ಮಾತನಾಡುತ್ತಾ ಅವರು, ಇದು ತುಂಬಾ ಕಠಿಣ ನಿರ್ಧಾರವಾಗಿತ್ತು. ನಾನು ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಕ್ಷಮೆಯಾಚಿಸುತ್ತೇನೆ. ದೇಶದ ಕ್ರಿಕೆಟ್ ಮೇಲೆ ಗಮನ ಹರಿಸುವ ನಿರ್ಧಾರಕ್ಕೆ ಬಂದಿದ್ದೇನೆ. ಐಪಿಎಲ್‌ನಿಂದಲೇ ಹೊರಬೀಳುತ್ತಿಲ್ಲ, ಮುಂದೊಂದು ದಿನ ದಿಲ್ಲಿ ತಂಡವನ್ನು ಪ್ರತಿನಿಧಿಸುವ ಆಸೆ ಹೊಂದಿದ್ದೇನೆ ಎಂದಿದ್ದಾರೆ. ಕಾರಣ ರಹಿತ ಭಾಗವಹಿಸುವಿಕೆ ಹಿಂಪಡೆದರೆ ಬಿಸಿಸಿಐನಿಂದ 3 ವರ್ಷ ನಿಷೇಧದ ನಿಯಮವಿದೆ.

ಆರ್‌ಸಿಬಿಗೆ ಕೆಎಂಎಫ್ ಪ್ರಾಯೋಜಕತ್ವ

• **ಬೆಂಗಳೂರು:** ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣಕ್ಕೆ ಐಪಿಎಲ್ ಮರಳಿದ ಹೊತ್ತಲ್ಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕರ್ನಾಟಕದ ಬ್ರಾಂಡ್ ಕೆಎಂಎಫ್ 2026ರ ಆವೃತ್ತಿಯಲ್ಲಿ ಆರ್‌ಸಿಬಿಗೆ ಪ್ರಾಯೋಜಕತ್ವ ನೀಡಿದೆ.

ಬಹು ದಿನಗಳಿಂದ ಕೆಎಮ್‌ಎಫ್ ಈ ಪ್ರಾಯೋಜಕತ್ವದ ಬಗ್ಗೆ ಮಾತುಗಳು ಕೇಳಿಬರುತ್ತಿದ್ದವು. ಮಂಗಳವಾರದಂದು ಅಧಿಕೃತವಾಗಿ ಕೆಎಂಎಫ್ ಆರ್‌ಸಿಬಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಬಾರಿಯ ಕ್ರೀಡಾ ಋತುವಿಗೆ ಕರ್ನಾಟಕ ಹಾಲು ಮಹಾಮಂಡಳಿ ಆರ್‌ಸಿಬಿ ತಂಡದ ಅಧಿಕೃತ ಪಾಲುದಾರನಾಗಿ ಒಪ್ಪಂದ ಮಾಡಿಕೊಂಡಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಘೋಷಿಸಿದರು. ಈ ಮೂಲಕ ಸ್ಥಳೀಯ ಬ್ರ್ಯಾಂಡ್ ನಂದಿನಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗುರುತಿಸುವಂತೆ ಮಾಡುವುದು ಮಂಡಳಿಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

4 ಕೋಟಿ ರೂ.ಗೆ ಒಪ್ಪಂದ: ಈ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ, ಈ ಒಪ್ಪಂದದ ಮೂಲಕ ನಂದಿನಿ ಉತ್ಪನ್ನಗಳು ದೇಶಕ್ಕೆ ಪರಿಚಯವಾಗಲಿದೆ. ಆರ್‌ಸಿಬಿ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ತಂಡ, ಹಾಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಂದಿನಿ ಉತ್ಪನ್ನ ಪರಿಚಯವಾಗಲಿದೆ. ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ದೇವದತ್ತ ಪಡಿಕ್ಕಲ್ ಅಂಥವರಿಂದ ಉತ್ಪನ್ನ ಪ್ರಚಾರಕ್ಕೆ ಮುಂದಾಗಿದ್ದೇವೆ. 4 ಕೋಟಿ ರೂ ವೆಚ್ಚದಲ್ಲಿ ಒಂದು ವರ್ಷದ ಟೆಂಡರ್ ಪಡೆದಿದೆ ಎಂದು ಮಾಹಿತಿ ನೀಡಿದ್ದಾರೆ.



- ಪಾಲುದಾರಿಕೆ ಈಗ ಅಧಿಕೃತ
- 4 ಕೋಟಿ ರೂ. ಒಪ್ಪಂದ
- ಕೊಹ್ಲಿ, ಪಡಿಕ್ಕಲ್, ಪಾಟಿದಾರ್ ಅವರಿಂದ ಬ್ರಾಂಡ್ ಪ್ರಚಾರ

ನಂದಿನಿ ವಿಶ್ವಾಸಾರ್ಹತೆ ಕೇಂದ್ರ ಬಿಂದು: ಈ ಕುರಿತಾಗಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದ್ದು, ಕರ್ನಾಟಕದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಕಳೆದ ಐಪಿಎಲ್ ಹಾಲಿ ಚಾಂಪಿಯನ್ ಆರ್‌ಸಿಬಿಯ ಅಧಿಕೃತ ಡೈರಿ ಪಾಲುದಾರನಾಗಿದೆ. ನಂದಿನಿಯ ವಿಶ್ವಾಸಾರ್ಹತೆ ಮತ್ತು ಆರ್‌ಸಿಬಿಯ ಕ್ರೀಡಾ ಬದ್ಧತೆ ಈ ಬಾರಿಯ ಐಪಿಎಲ್‌ನ ಆಕರ್ಷಣೆಯ ಕೇಂದ್ರಬಿಂದುವಾಗಲಿದೆ ಎಂದಿದ್ದಾರೆ.

₹16.6 ಸಾವಿರ ಕೋಟಿಗೆ ಆರ್‌ಸಿಬಿ ಖರೀದಿ

• **ಬೆಂಗಳೂರು:** ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಆದಿತ್ಯ ಬಿರ್ಲಾ ಹಾಗೂ ಟೈಮ್ಸ್ ಆಫ್ ಇಂಡಿಯಾ ಒಕ್ಕೂಟ 16,600 ಕೋಟಿಗೆ ಖರೀದಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಕೆಲವೇ ದಿನಗಳು ಬಾಕಿಯಿದ್ದು, ಫ್ರಾಂಚೈಸಿಗಳಾದ ಆರ್‌ಸಿಬಿ ಮತ್ತು ಆರ್ ಆರ್ ತಂಡಗಳು ಮಾರಾಟಕ್ಕಿದ್ದವು. ಯುಎಸ್‌ಎ ಮೂಲದ ಕಂಪೆನಿ ಆರ್‌ಆರ್ ತಂಡವನ್ನು ಖರೀದಿಸಿದೆ. ಬೆಂಗಳೂರು ತಂಡವನ್ನು ಆದಿತ್ಯ ಬಿರ್ಲಾ ಹಾಗೂ ಟೈಮ್ಸ್ ಆಫ್ ಇಂಡಿಯಾ ಒಕ್ಕೂಟ 16 ,6 ಸಾವಿರ ಕೋಟಿಗೆ ಖರೀಸಿದೆ ಎಂದು ವರದಿಯಾಗಿವೆ. ಫ್ರಾಂಚೈಸಿಗೆ ಆದಿತ್ಯ ಬಿರ್ಲಾ ಗ್ರೂಪ್‌ನ ನಿರ್ದೇಶಕ ಆರ್ಯಮನ್ ವಿಕ್ರಮ್ ಬಿರ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದು, ಟೈಮ್ಸ್ ಆಫ್ ಇಂಡಿಯಾ ಗ್ರೂಪ್‌ನ ಸತ್ಯನ್ ಗಜ್ವಾನಿ ಫ್ರಾಂಚೈಸಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ ಎಂದು ಹೇಳಲಾಗಿದೆ. ಕಳೆದ ಎರಡು ದಶಕಗಳಲ್ಲಿ, ಐಪಿಎಲ್ ಜಾಗತಿಕ ಕ್ರೀಡಾ ಶಕ್ತಿ ಕೇಂದ್ರವಾಗಿ ಮಾರ್ಪಟ್ಟಿದ್ದು, ಇದು ಭಾರತೀಯ ಕ್ರಿಕೆಟ್‌ನ ಮುಖವನ್ನೇ ಬದಲಾಯಿಸಿದೆ. ಆಧುನಿಕ ಕ್ರೀಡೆಯಲ್ಲಿ ಅತ್ಯಂತ ಪ್ರಭಾವಶಾಲಿ ಫ್ರಾಂಚೈಸಿಗಳಲ್ಲಿ ಒಂದಾದ ಆರ್‌ಸಿಬಿ, ಆದಿತ್ಯ ಬಿರ್ಲಾ ಗ್ರೂಪ್‌ಗೆ ತನ್ನ ಸಂಸ್ಥೆ-ನಿರ್ಮಾಣದ ಪರಂಪರೆಯನ್ನು ಜಾಗತಿಕ ಕ್ರೀಡಾ ಕ್ಷೇತ್ರಕ್ಕೆ ವಿಸ್ತರಿಸಲು ಒಂದು ವಿಶಿಷ್ಟ ವೇದಿಕೆಯನ್ನು ನೀಡುತ್ತದೆ. ಈ ಆಸ್ತಿಯ ಪಾಲಕರಾಗಲು ನಾವು ಸಂತೋಷಪಡುತ್ತೇವೆ. ಈ ಅಸಾಧಾರಣ ಪರಂಪರೆಯನ್ನು ಮತ್ತಷ್ಟು ನಿರ್ಮಿಸಲು ಬದ್ಧರಾಗಿದ್ದೇವೆ ಎಂದು ಆದಿತ್ಯ ಬಿರ್ಲಾ ಗ್ರೂಪ್‌ನ ಅಧ್ಯಕ್ಷ ಕುಮಾರ್ ಮಂಗಲಂ ಬಿರ್ಲಾ ತಿಳಿಸಿದ್ದಾರೆ.

ದಾಖಲೆಯ ಮೊತ್ತಕ್ಕೆ ಆರ್‌ಆರ್ ಬಿಕರಿ: ಐಪಿಎಲ್ ಫ್ರಾಂಚೈಸಿ ರಾಜಸ್ಥಾನ ರಾಯಲ್ಸ್ ಫ್ರಾಂಚೈಸಿಯು ದಾಖಲೆಯ 15,286 ರೂ.ಗಳಿಗೆ ಬಿಕರಿಯಾಗಿದೆ. ಬಹು ದಿನಗಳಿಂದ ನಡೆಯುತ್ತಿದ್ದ ಬಿಡ್ಡಿಂಗ್ ಫೈಟ್ ಅಂತ್ಯಗೊಂಡಿದ್ದು, ಅಮೆರಿಕ ಮೂಲದ ಉದ್ಯಮಿ ಕಾಲ್ ಸೋಮಾನಿ ನೇತೃತ್ವದ ಒಕ್ಕೂಟ ಫ್ರಾಂಚೈಸಿಯನ್ನು ಮಂಗಳವಾರದಂದು ಖರೀದಿಸಿದೆ ಎಂದು ವರದಿಯಾಗಿವೆ. ಕಾಲ್ ಅವರ ಒಕ್ಕೂಟವು ಭಾರತ ಮೂಲದ ಬಿರ್ಲಾ ಬೆಂಬಲಿತ ಟೈಮ್ಸ್ ಆಫ್ ಇಂಡಿಯಾದೊಂದಿಗೆ ಹರಾಜಿನಲ್ಲಿ ಪೈಪೋಟಿ ನಡೆಸಿತು. ಟಿಒಐ ಅಂದಾಜು 13500-13600 ಕೋಟಿ ರೂ. ತನಕ ಬಿಡ್ ಸಲ್ಲಿಸಿತ್ತು ಎಂದು ಹೇಳಲಾಗುತ್ತಿದೆ. ಐಪಿಎಲ್ ಶನಿವಾರದಿಂದ ಶುರುವಾಗಲಿದ್ದು, ರಿಯಾನ್ ಪರಾಗ್ ಅವರ ನೇತೃತ್ವದಲ್ಲಿ ರಾಜಸ್ಥಾನ ತಂಡ ಪಂದ್ಯಾವಳಿಯಲ್ಲಿ ಭಾಗವಹಿಸಲಿದೆ. ಉಭಯ ತಂಡಗಳು ಬಿಕರಿಯಾದರೂ ಅಧಿಕೃತ ಮಾಲಿಕತ್ವವನ್ನು ಐಪಿಎಲ್ ನಂತರ ಪಡೆಯಲಿದೆ.

ಸೇನ್, ಸಿಂಧು ಸೇರಿದಂತೆ ಪ್ರಮುಖ ಷಟ್ಲರ್‌ಗಳು ಆಯ್ಕೆ

ಥಾಮಸ್ ಕಪ್ ಫೈನಲ್ಸ್‌ಗೆ ಭಾರತ ತಂಡ

• **ಹೊಸದಿಲ್ಲಿ:** ಭಾರತ ಬ್ಯಾಡ್ಮಿಂಟನ್ ಅಸೋಸಿಯೇಷನ್ (ಬಿಎಐ) ಥಾಮಸ್ ಮತ್ತು ಉಬರ್ ಕಪ್ 2026 ಫೈನಲ್ಸ್‌ಗೆ ಭಾರತ ಪುರುಷ ಮತ್ತು ಮಹಿಳಾ ತಂಡಗಳನ್ನು ಪ್ರಕಟಿಸಿದೆ. ಈ ಟೂರ್ನಿ ಏಪ್ರಿಲ್ 24ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆಯಲಿದೆ.

ಮಂಗಳವಾರದಂದು ತಂಡ ಘೋಷಿಸಿದ ಬಿಎಐ ಮಹಾಸಚಿವ ಸಂಜಯ್ ಮಿಶ್ರಾ ಅವರು, ತಂಡದಲ್ಲಿ ಅನುಭವ ಮತ್ತು ಯುವ ಶಕ್ತಿಯ ಉತ್ತಮ ಸಮತೋಲನ ಇದೆ. ಹಿರಿಯ ಆಟಗಾರರು ಸ್ಥಿರತೆ ನೀಡುತ್ತಾರೆ, ಯುವಕರು ಉತ್ತಮ ಫಾರ್ಮ್‌ನಲ್ಲಿ ಇದ್ದಾರೆ ಎಂದು ಹೇಳಿದ್ದಾರೆ.

ಪುರುಷರ ತಂಡದಲ್ಲಿ 2022ರ ಐತಿಹಾಸಿಕ ಥಾಮಸ್ ಕಪ್ ಗೆದ್ದ ತಂಡದ ಪ್ರಮುಖ ಆಟಗಾರರನ್ನು ಉಳಿಸಲಾಗಿದೆ. ಲಕ್ಷ್ಯ ಸೇನ್, ಕಿಡಂಬಿ ಶ್ರೀಕಾಂತ್ ಮತ್ತು ಎಚ್. ಎಸ್. ಪ್ರಣಯ್




ಸಿಂಗಲ್ಸ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ಜೊತೆಗೆ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಡಬಲ್ಸ್‌ನಲ್ಲಿ ಪ್ರಮುಖ ಭರವಸೆ ಆಗಿದ್ದಾರೆ. ಯುವ ಆಟಗಾರ ಆಯುಷ್ ಶೆಟ್ಟಿ ಮೊದಲ ಬಾರಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ. ಪುರುಷರ ತಂಡದ ಗುಂಪು: ಚೀನಾ, ಕೆನಡಾ ಮತ್ತು ಆಸ್ಟ್ರೇಲಿಯಾ ಜೊತೆಗೆ ಎ ಗುಂಪಿನಲ್ಲಿ ಭಾರತ ಸೇರಿದೆ.

ಮಹಿಳಾ ತಂಡದಲ್ಲಿ: ಮಹಿಳಾ ತಂಡದಲ್ಲಿ ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ. ವಿ. ಸಿಂಧು ತಂಡವನ್ನು ಮುನ್ನಡೆಸಲಿದ್ದಾರೆ. ಜೊತೆಗೆ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಲಿ ಪ್ರಮುಖ ಡಬಲ್ಸ್ ಜೋಡಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಯುವ ಆಟಗಾರ್ತಿಯರಾದ ಉನ್ನತಿ ಹೂಡಾ, ದೇವಿಕಾ ಸಿಹಾಗ್, ಇಶರಾಣಿ ಮತ್ತು ಟ್ಯಾನ್ವಿ ಶರ್ಮ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಮಹಿಳಾ ತಂಡದ ಗುಂಪು: ಚೀನಾ, ಡೆನ್ಮಾರ್ಕ್ ಮತ್ತು ಉಕ್ರೇನ್ ಜೊತೆ ಭಾರತ ಎ ಗುಂಪಿನಲ್ಲಿ ಇದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5933

ಎಡದಿಂದ ಬಲಕ್ಕೆ
1.ಬುಲ್-ಬುಲ್ ಹಕ್ಕಿ ಕನ್ನಡದಲ್ಲಿ... (4)
3.ಜನಪದ ಗಾನಕ್ಕೆ ಮಾರುಹೋದ ಗಣಪ (4)
5.ತಾವರೆಗಳಿಗೆ ಆಶ್ರಯಿತ ತಾಣ (5)
6.ಅಭಿಪ್ರಾಯ ತಿರುಗಿ ಕತ್ತಲಾಯ್ತು (2)
8.ನೆಂಟನನ್ನು ಹೀಗೂ ಕರೆಯುತ್ತೇವೆ (2)
9.ವಾಸನೆಯನ್ನು ನೋಡು-ಆಘ್ರಾಣಿಸು(2)
12.ನೆರವಿಗೆ ಬಂದ ಸೂರ್ಯ (2)
14.ನಿರ್ದಿಷ್ಟ ಉದ್ದೇಶವಿಲ್ಲದ ಸಾಮಾನ್ಯ ಮಾತುಕತೆ (5)
15.ರುಚಿಕರ, ಸಕಲ ಲಕ್ಷಣಗಳಿಂದ ಕೂಡಿದ ಅಡುಗೆ (4)
16.ಕತ್ತಲೆ-ಅಜ್ಞಾನವನ್ನು ಹೋಗಲಾಡಿಸುವವನು (4)

ಮೇಲಿನಿಂದ ಕೆಳಕ್ಕೆ
1.ವಂಶದ ಪೂರ್ವಿಕರು ಗಳಿಸಿದ ಸಂಪತ್ತು (4)
2. ವೇಳೆ ಕಡೆಯಲ್ಲಿರುವ ಸತ್ವದಿಂದ ಕೂಡಿದ್ದು (4)
3. ಆನೆ-ಕಿವಿ ಕೂಡಿ ವ್ಯಾಧಿಯಾಯ್ತು (4)
4. ಇದೀಗ ತಾನೇ ಮದುವೆಯಾದ ಹೆಣ್ಣು(4)
7.ಇದು ಅರಿವಿನ ಕೇಂದ್ರ-ಚಿತ್ತ (3)
8. ಅಮೂಲ್ಯವಾದ ಹಳದಿ ಬಣ್ಣದ ಲೋಹ (3)
9.ಮುಖ್ಯವಾದ ಆಳತೆಗೋಲು (4)
10. ಸಮಯೋಚಿತ- ಕಾಲಕ್ಕೆ ತಕ್ಕಂತೆ ಎಂಬರ್ಥದ ಶಬ್ದ (4)
11.ತೇಜಸ್ವಿ-ಪ್ರಕಾಶಿಸುವಂಥದ್ದು (4)
12. ಜ್ಞಾನವನ್ನು ಹೊಂದಿರುವವನು-ವಿದ್ವಾಂಸ (4)

5932 ಉತ್ತರ

ಎಡದಿಂದ ಬಲಕ್ಕೆ:
1.ಪಾಕ 2.ದಿವಾನ
4.ತಾಪ 6.ಗಾನಲೋಕ
8.ಮದುಮಗ 12.ಬರಗಾಲ
14.ವಿರಚಿತ 15.ತುಪ್ಪ
16.ರಭಸ 17.ಭಾಗ

ಮೇಲಿನಿಂದ ಕೆಳಕ್ಕೆ:
1.ಪಾಲುಗಾರ 2.ದಿನಾಂಕ
3.ಮದನ 5.ಪರಗಣೆ
7.ಲೋಕೋಪಕಾರ
9.ದುರಹಂಕಾರ
10.ಮೂಲಧಾತು
11.ಅಂತರಂಗ 13.ಬವರ
14.ವಿರಸ

ಕಿರುಸುದ್ದಿ

ಅಪಘಾತದಿಂದ ಸಾವು ಪ್ರಕರಣ: ಆರೋಪಿಗೆ ಶಿಕ್ಷೆ

ಮಂಗಳೂರು: ಅಪಘಾತವೊಂದರಲ್ಲಿ ನಡೆದ ಸಾವು ಪ್ರಕರಣಕ್ಕೆ ಸಂಬಂಧಿಸಿ ಅಪರಾಧಿ ಬಸ್ ಚಾಲಕನಿಗೆ 1 ವರ್ಷ 6 ತಿಂಗಳು ಜೈಲು ಶಿಕ್ಷೆ ಮತ್ತು 2 ಸಾವಿರ ದಂಡ ವಿಧಿಸಲಾಗಿದೆ. 2022ರ ಡಿ.3ರಂದು ಸಂಜೆ 6.35ರ ವೇಳೆಗೆ ನಗರದ ಕೊಟ್ಟಾರ ಚೌಕಿ ಬಳಿ ನಡೆದ ಬಸ್ ಅಪಘಾತದಲ್ಲಿ ಮಹಿಳೆಯೊಬ್ಬರು ಸಾವನ್ನಪ್ಪಿದ್ದರು. ಈ ಬಗ್ಗೆ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿ ಅಪರಾಧಿ ಬಸ್ ಚಾಲಕ ಶರಣ್ ಕುಮಾರ್ ಎಂಬಾತನಿಗೆ ಮಂಗಳೂರಿನ ಜೆಎಂಎಫ್‌ಸಿ 8ನೇ ನ್ಯಾಯಾಲಯ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಜೆಎಂಎಫ್‌ಸಿ 8ನೇ ನ್ಯಾಯಾಲಯದ ನ್ಯಾಯಾಧೀಶರಾದ ಫವಾಜ್ ಪಿ.ಎ. ಅವರು ಪ್ರಕರಣದಕ್ಕೆ ಸಂಬಂಧಪಟ್ಟಂತೆ ಸಮಗ್ರ ವಿಚಾರಣೆ ನಡೆಸಿ ಅಪರಾಧವನ್ನು ಸಾಬೀತುಪಡಿಸಿ ತೀರ್ಪು ಪ್ರಕಟಿಸಿದ್ದಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಾದ ಗೀತಾ ರೈ ಸಾಕ್ಷಿ ವಿಚಾರಣೆ ನಡೆಸಿದ್ದು, ಬಳಿಕ ಸರಕಾರಿ ಅಭಿಯೋಜಕರಾದ ಆನೋನ್ ಡಿಸೋಜ ವಿಟ್ಲ ಸಾಕ್ಷಿ ವಿಚಾರಣೆ ನಡೆಸಿ ವಾದ ಮಂಡಿಸಿದ್ದರು.

ಕಾರು-ಕಂಟೈನರ್ ಡಿಕ್ಕಿ : ಓರ್ವ ಮೃತ್ಯು

ಸುಳ್ಯ: ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಬೊಳುಬೈಲು ಎಂಬಲ್ಲಿ ಕಾರು ಮತ್ತು ಕಂಟೈನರ್ ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಓರ್ವ ಮೃತಪಟ್ಟ ಘಟನೆ ಮಂಗಳವಾರ ಸಂಜೆ ನಡೆದಿದೆ. ಮೃತ ವ್ಯಕ್ತಿಯನ್ನು ನೆಟ್ಟಣಿಗೆ ಗ್ರಾಮದ ಕಿನ್ನಿಂಗಾರುವಿನ ಸತೀಶ ಕೆ. (45) ಎಂದು ಗುರುತಿಸಲಾಗಿದ್ದು ಅಪಘಾತದಲ್ಲಿ ಕಾರಿನ ಮುಂಭಾಗ ನಜ್ಜುಗುಜ್ಜಾಗಿದ್ದು ಕಂಟೈನರ್ ಮಗುಚಿ ಬಿದ್ದಿದೆ. ಈ ಕುರಿತು ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಲಾಗುತ್ತಿದೆ.

ನಿಲ್ಲಿಸಲಾಗಿದ್ದ ಲಾರಿ ಕಳವುಗೈದ ಇಬ್ಬರು ಆರೋಪಿಗಳ ಸೆರೆ

ಕುಂಬಳೆ: ಬಂದ್ಯೋಡು ಬಳಿಯ ಅಡ್ಕದಿಂದ ಲಾರಿಯನ್ನು ಕಳವುಗೈದ ಪ್ರಕರಣದ ಆರೋಪಿಗಳನ್ನು ಗಂಟೆಗಳೊಳಗೆ ಪೊಲೀಸರು ಬಂಧಿಸಿದ್ದಾರೆ. ಅಲ್ಲದೆ ಕಳವಿಗೀಡಾದ ಲಾರಿಯನ್ನು ಸೀತಾಂಗೋಳಿ ಬಳಿಯಿಂದ ಪತ್ತೆಹಚ್ಚಲಾಗಿದೆ. ಕೊಡ್ಯಮ್ಮೆ ಇಚ್ಲಂಪಾಡಿ ಮುಳಿಯಡ್ಕ ನಿವಾಸಿ ಅಬ್ದುಲ್ಲ ಎ.ಪಿ. (32), ಎಡನಾಡು ಮುಕಾರಿಖಂಡದ ಮೊಹಮ್ಮದ್ ರಿಸ್ವಾನ್ (27) ಎಂಬವರನ್ನು ಕುಂಬಳೆ ಪೊಲೀಸ್ ಇನ್ಸ್ ಪೆಕ್ಟರ್ ಬೈಜು ಕೆ.ಜೋಸ್, ಎಸ್‌ಐ ಸನಿತ್ ಎಂಬಿವರು ಬಂಧಿಸಿದ್ದಾರೆ. ಅಡ್ಕ ಝುಡ್‌ಎಂಎಸ್ ಫಿಶ್ ಸರ್ವೀಸ್ ಕಚೇರಿಯ ಮುಂಭಾಗದಲ್ಲಿ ಲಾರಿಯನ್ನು ಮಾರ್ಚ್ 21ರಂದು ರಾತ್ರಿ ನಿಲ್ಲಿಸಲಾಗಿತ್ತು. 22ರಂದು ಬೆಳಗ್ಗೆ 8.30ರ ವೇಳೆ ನೋಡಿದಾಗ ಲಾರಿ ಅಲ್ಲಿ ನಾಪತ್ತೆಯಾಗಿತ್ತು. ಈ ಬಗ್ಗೆ ಮಂಗಲ್ಪಾಡಿ ಅಡ್ಕ ಶಮೀಮ ಮಂಜಿಲ್ ಝುಕರಿಯ ಎಂ. ಕುಂಬಳೆ ಪೊಲೀಸರಿಗೆ ದೂರು ನೀಡಿದ್ದರು. ಅದರಂತೆ ಪೊಲೀಸರು ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದ ವೇಳೆ ಲಾರಿಯನ್ನು ಕಳವುಗೈದು ಸಾಗಿಸಿರುವುದಾಗಿ ಪೊಲೀಸರಿಗೆ ಸ್ಪಷ್ಟಗೊಂಡಿದೆ. ಈ ಹಿನ್ನೆಲೆಯಲ್ಲಿ ಸಿಸಿಟಿವಿ ಕೇಂದ್ರೀಕರಿಸಿ ತನಿಖೆ ನಡೆಸಿದಾಗ ಎಡನಾಡಿನ ರಸ್ತೆ ಬದಿ ನಿಲ್ಲಿಸಿದ್ದ ಸ್ಥಿತಿಯಲ್ಲಿ ಲಾರಿ ಪತ್ತೆಯಾಗಿದೆ. ಬಳಿಕ ನಡೆಸಿದ ತನಿಖೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಯಿತು. ಬಂಧಿತರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಈ ವೇಳೆ ಅವರಿಗೆ ರಿಮಾಂಡ್ ವಿಸಲಾಗಿದೆ.

ಕೋಲ್ಚಾರು: ಬೈಕ್ ಅಪಘಾತ ಸವಾರ ಮೃತ್ಯು

ಸುಳ್ಯ: ಸುಳ್ಯ ತಾಲೂಕು ಆಲೆಟ್ಟಿ ಗ್ರಾಮದ ಕೋಲ್ಚಾರ್ ಎಂಬಲ್ಲಿ ಬೈಕೊಂದು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೆ ಮೃತಪಟ್ಟ ಘಟನೆ ಸೋಮವಾರ ರಾತ್ರಿ ನಡೆದಿದೆ. ಮೃತ ವ್ಯಕ್ತಿಯನ್ನು ಬಂದಡ್ಕ ಮೂಲದ ಶ್ರೀಧರ (39) ಎಂದು ಗುರುತಿಸಲಾಗಿದ್ದು, ಅಪಘಾತದ ಕುರಿತು ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಸಲಾಗುತ್ತಿದೆ.

ಆಕಸ್ಮಿಕ ಬೆಂಕಿ: ಸ್ಕೂಟಿ ಭಸ್ಮ

ನಾಪೋಕ್ಲು: ದ್ವಿಚಕ್ರ ವಾಹನ ಒಂದು ಆಕಸ್ಮಿಕ ಬೆಂಕಿ ತಗಲಿ ಹೊತ್ತಿ ಉರಿದ ಘಟನೆ ಸೋಮವಾರ ಚೈಯಂಡಾಣೆಯ ನರಿಯಂದಡ ಗ್ರಾಮದಲ್ಲಿ ಜರುಗಿದೆ. ಸ್ಥಳೀಯ ಆಶಾ ಕಾರ್ಯಕರ್ತೆ ಗೀತಾ ತಮ್ಮ ಸ್ಕೂಟಿಯಲ್ಲಿ ಸಹಪಾಠಿ ಆಶಾ ಕಾರ್ಯಕರ್ತೆ ರಮ್ಯ ಅವರ ಜೊತೆ ಚೈಯಂಡಾಣೆಯಲ್ಲಿ ಸಂಘಕ್ಕೆ ಸಂಬಂಧಿಸಿದ ಸಭೆ ಮುಗಿಸಿ ನಾಪೋಕ್ಲುವಿಗೆ ಹಿಂತಿರುಗುವ ಸಂದರ್ಭ ಈ ದುರ್ಘಟನೆ ಸಂಭವಿಸಿದೆ. ಗೀತಾ ಚಲಾಯಿಸುತ್ತಿದ್ದ ಸ್ಕೂಟಿ ಚೈಯಂಡಾಣೆಯ ನರಿಯಂದಡ ಗ್ರಾಮದ ಇಳಿಜಾರು ರಸ್ತೆಯಲ್ಲಿ ಸಂಚರಿಸುತ್ತಿರುವ ಸಂದರ್ಭ ಆಕಸ್ಮಿಕವಾಗಿ ಸ್ಕೂಟಿಯಲ್ಲಿ ಹೊಗೆ ಕಾಣಿಸಿಕೊಂಡಿದೆ. ಕೂಡಲೇ ಸ್ಕೂಟಿಯನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿದ ಕಾರಣ ಯಾವುದೇ ಜೀವ ಅಪಾಯ ಸಂಭವಿಸಿಲ್ಲ. ಬೆಂಕಿ ನಂದಿಸಲು ಪ್ರಯತ್ನ ಪಟ್ಟರೂ ಯಾವುದೇ ಪ್ರಯೋಜನವಾಗದೆ ನೋಡು ನೋಡುತ್ತಿದ್ದಂತೆ ಕ್ಷಣಾರ್ಧದಲ್ಲಿ ಸ್ಕೂಟಿ ಸಂಪೂರ್ಣ ಸುಟ್ಟು ಕರಕಲಾಗಿದೆ. ಈ ಬಗ್ಗೆ ಗೀತಾ ದೂರು ನೀಡಿದ್ದು ಘಟನಾ ಸ್ಥಳಕ್ಕೆ ಪೊಲೀಸರು ತೆರಳಿ ಪರಿಶೀಲಿಸಿದ್ದಾರೆ.

ಲೀಡ್ ಬ್ಯಾಂಕ್ ನೇತೃತ್ವದಲ್ಲಿ ಸಮಾಲೋಚನಾ ಸಭೆ, ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆ

ಸಾಲಸೌಲಭ್ಯಕ್ಕೆ ವಿಳಂಬ ಸಲ್ಲ: ಕಾರ್ಬಾರಿ

ಮಂಗಳೂರು: ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸರಿಯಾಗಿ ತಲುಪಬೇಕು. ಬ್ಯಾಂಕುಗಳು ಸಾಲಸೌಲಭ್ಯ ನೀಡುವಲ್ಲಿ ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ ಸೂಚಿಸಿದ್ದಾರೆ.

ದ.ಕ. ಜಿಲ್ಲಾ ಪಂಚಾಯತ್‌ನ ನೇತ್ರಾವತಿ ಸಭಾಂಗಣದಲ್ಲಿ ಮಂಗಳವಾರ ಲೀಡ್ ಬ್ಯಾಂಕ್ ವತಿಯಿಂದ ನಡೆದ ಜಿಲ್ಲಾ ಸಮಾಲೋಚನಾ ಸಭೆ ಮತ್ತು ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಕ್ಷಿಣ ಕನ್ನಡ ವಿಮಾನ ಯಾನ, ಜಲಮಾರ್ಗ ಹಾಗೂ ಹೆದ್ದಾರಿ ಸಂಪರ್ಕಗಳಿಂದ ಕೂಡಿರುವ ಜಿಲ್ಲೆ. ಇಲ್ಲಿ ವಿನೂತನ ಉದ್ಯಮಗಳಿಗೆ ವಿಫುಲ ಅವಕಾಶಗಳಿವೆ. ಬ್ಯಾಂಕ್ ಇದರ ಪ್ರಯೋಜನವನ್ನು ಗಮನಿಸಿಕೊಂಡು ಅರ್ಹ ಫಲಾನುಭವಿಗಳಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡಬೇಕು. ಸರಕಾರ ನೀಡುವ ಯೋಜನೆಗಳ ಪ್ರಯೋಜನ ಜನರಿಗೆ ಸಿಗುವಂತಾಗಬೇಕು. ಈ ಬಗ್ಗೆ ಲೀಡ್ ಬ್ಯಾಂಕ್ ಗಮನ ಹರಿಸಬೇಕು ಎಂದು ಅವರು ಹೇಳಿದರು.

ಯೋಜನೆಗಳಿಗೆ ಸಾಲ ಸೌಲಭ್ಯ ಸಾಲದು

ಮುದ್ರಾ ಯೋಜನೆ, ಪಿಎಂ ಸ್ವನಿಧಿ ಸೇರಿದಂತೆ ಸರಕಾರಿ ಪ್ರಾಯೋಜಿತ ಯೋಜನೆಗಳಿಗೆ ಸಂಬಂಧಿಸಿ ಸಾಲ ನೀಡುವಲ್ಲಿ ಕೆಲವು ಬ್ಯಾಂಕ್‌ಗಳ ಪ್ರಗತಿಯಲ್ಲಿ ಕುಂಠಿತ ಆಗಿರುವ ಬಗ್ಗೆ ಸಿಇಒ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.



2025ರ ಎಪ್ರಿಲ್‌ನಿಂದ ಡಿಸೆಂಬರ್ ತನಕ ಮುದ್ರಾ ಯೋಜನೆಯಡಿ ಜಿಲ್ಲೆಯಲ್ಲಿ 644.29 ಕೋಟಿ ರೂ.ಸಾಲ ವಿತರಿಸಲಾಗಿದ್ದು, ಪ್ರಧಾನ ಮಂತ್ರಿ ಜನಧನ್ ಯೋಜನೆಯಡಿ 29010 ಉಳಿತಾಯ ಖಾತೆಗಳನ್ನು ತೆರೆಯಲಾಗಿದೆ. ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯಡಿ 41657 ಮಂದಿಯನ್ನು ಯೋಜನೆಗೆ ನೋಂದಣಿ ಮಾಡಲಾಗಿದೆ. ಪಿಎಂ ಸ್ವ ನಿಧಿ ಯೋಜನೆಯಡಿ ಪ್ರಥಮ ಕಂತಿನಡಿ 13,234, ದ್ವಿತೀಯ ಕಂತಿನಡಿ 6352 ಹಾಗೂ ತೃತೀಯ ಕಂತಿನಡಿ 2181 ಮಂದಿಗೆ ಮಂಜೂರಾತಿ ನೀಡಲಾಗಿದೆ ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಕವಿತಾ ಎನ್. ಶೆಟ್ಟಿ ಸಭೆಯಲ್ಲಿ ಮಾಹಿತಿ ನೀಡಿದರು.

ಆದ್ಯತಾ ವಲಯವಾದ ಶೈಕ್ಷಣಿಕ ಕ್ಷೇತ್ರದಲ್ಲಿ 157.09 ಕೋಟಿ ರೂ. ಸಾಲ ವಿತರಣೆಯ ಮೂಲಕ ತ್ರೈಮಾಸಿಕ ಗುರಿಯಾದ 164.22 ಕೋಟಿ ರೂ.ಗಳಲ್ಲಿ ಶೇ. 95.65 ನಿರ್ವಹಣೆ ಸಾಧಿಸಲಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಡಿ 6806.78 ಕೋಟಿ ರೂ. ಸಾಲ ವಿತರಣೆಯಾಗಿದ್ದು, ಶೇ. 115.41ರಷ್ಟು ನಿರ್ವಹಣೆಯಾಗಿದೆ. ಕೃಷಿ ಕ್ಷೇತ್ರದಲ್ಲಿಯೂ ಗುರಿ ಮೀರಿದ ಸಾಧನೆಯಾಗಿದ್ದು, 10346.21 ಕೋಟಿ ರೂ. ವಿತರಣೆಯಾಗಿದೆ ಎಂದು ಅವರು ಹೇಳಿದರು.

> ▸▸ ಡಿಸೆಂಬರ್ ಅಂತ್ಯಕ್ಕೆ ಜಿಲ್ಲೆಯ ಬ್ಯಾಂಕ್‌ಗಳ ಒಟ್ಟು ವ್ಯವಹಾರ 138769.88 ಕೋಟಿ ರೂ. ಆಗಿದ್ದು, ವರ್ಷದಿಂದ ವರ್ಷಕ್ಕೆ ಶೇ. 8.50ರಷ್ಟು ಬೆಳವಣಿಗೆಯಾಗಿದೆ.
>
> ▸▸ ಈ ಅವಧಿಯಲ್ಲಿ ಜಿಲ್ಲೆಯ ಬ್ಯಾಂಕ್‌ಗಳ ಒಟ್ಟು ಠೇವಣಿ 82,070.67 ಕೋ.ರೂ.ಗಳಾಗಿದ್ದು. ಸಾಲವು 56,699.21 ಕೋಟಿ ರೂ.ಗಳಾಗಿವೆ

ಡಿಸೆಂಬರ್ ಅಂತ್ಯಕ್ಕೆ ಜಿಲ್ಲೆಯ ಬ್ಯಾಂಕ್‌ಗಳ ಒಟ್ಟು ವ್ಯವಹಾರ 138769.88 ಕೋಟಿ ರೂ. ಆಗಿದ್ದು, ವರ್ಷದಿಂದ ವರ್ಷಕ್ಕೆ ಶೇ. 8.50ರಷ್ಟು ಬೆಳವಣಿಗೆಯಾಗಿದೆ. ಈ ಅವಧಿಯಲ್ಲಿ ಜಿಲ್ಲೆಯ ಬ್ಯಾಂಕ್‌ಗಳ ಒಟ್ಟು ಠೇವಣಿ 82,070.67 ಕೋ. ರೂ.ಗಳಾಗಿದ್ದು. ಸಾಲವು 56,699.21 ಕೋಟಿ ರೂ.ಗಳಾಗಿವೆ ಎಂದರು.

> ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ 88,780 ಮಂದಿಯನ್ನು ನೋಂದಣಿ ಮಾಡಲಾಗಿದ್ದು, ಅಟಲ್ ಪಿಂಚಣಿ ಯೋಜನೆಯಡಿ 25,425 ಮಂದಿಯನ್ನು ನೋಂದಣಿ ಮಾಡಿಕೊಳ್ಳಲಾಗಿದೆ.
>
> ■ **ಕವಿತಾ ಎನ್. ಶೆಟ್ಟಿ,** ಲೀಡ್ ಬ್ಯಾಂಕ್ ವ್ಯವಸ್ಥಾಪಕರು

> ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸುವ, ಹೊಸ ಸ್ಟಾರ್ಟ್‌ಅಪ್‌ಗಳಿಗೆ ಪ್ರೇರಣೆ ನೀಡುವ ಮೌಲ್ಯವರ್ಧಿತ ಯೋಜನೆಗಳಿಗೆ ಬ್ಯಾಂಕ್‌ಗಳು ಸಾಲ ನೀಡುವ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು.
>
> ■ **ನರ್ವಾಡೆ ವಿನಾಯಕ ಕಾರ್ಬಾರಿ,** ಜಿ.ಪಂ.ಸಿಇಒ

ಆರ್‌ಬಿಐ ಎಜಿಎಂ ಅರುಣ್ ಕುಮಾರ್ ಪಿ., ಲೀಡ್ ಬ್ಯಾಂಕ್ ಆದ ಕೆನರಾ ಬ್ಯಾಂಕ್ನ ಡಿಜಿಎಂ ಶೈಲೇಂದ್ರನಾಥ್ ಶೇಟ್, ನಬಾರ್ಡ್‌ನ ಡಿಜಿಎಂ ಸಂಗೀತ ಕರ್ತಾ ಉಪಸ್ಥಿತರಿದ್ದರು.

ದ.ಕ.ದಲ್ಲಿ 22,473 ಹೆಣ್ಣುಮಕ್ಕಳಿಗೆ ಎಚ್‌ಪಿವಿ ಲಸಿಕೆ ಗುರಿ : ಡಿಎಚ್‌ಒ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 22,473 ಮಂದಿಗೆ ಎಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮಾ ವೈರಸ್) ಲಸಿಕಾ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಈ ಪೈಕಿ ಇದುವರೆಗೆ 527 ಮಂದಿಗೆ ಲಸಿಕೆ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಚ್.ಆರ್. ತಿಮ್ಮಯ್ಯ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ರಾಷ್ಟ್ರ ಮಟ್ಟದಲ್ಲಿ ಫೆ.28ರಂದು ಎಚ್‌ಪಿವಿ ಲಸಿಕಾ ಅಭಿಯಾನ ಆರಂಭಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಯಶಸ್ವಿಯಾಗಿ ನೀಡಲಾಗುತ್ತಿದೆ ಎಂದರು.

14 ವರ್ಷ ಪೂರ್ಣಗೊಂಡಿದ್ದು, 15 ವರ್ಷ ಪೂರ್ಣವಾಗದ ಹೆಣ್ಣು ಮಕ್ಕಳಿಗೆ ಈ ಅಭಿಯಾನದಲ್ಲಿ ಲಸಿಕೆ ನೀಡಲಾಗುತ್ತಿದೆ. ಇದು 3 ತಿಂಗಳ ಅಭಿಯಾನವಾಗಿದ್ದು, ಮೇ ತಿಂಗಳವರೆಗೆ ನಡೆಯಲಿದೆ. ದ.ಕ. ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯ ಶೇ.1ರಷ್ಟು ಮಂದಿಗೆ ಅಂದರೆ 22,473 ಹೆಣ್ಮಕ್ಕಳಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಹೇಳಿದರು.



ರಾಜ್ಯಕ್ಕೆ 2.54 ಲಕ್ಷ ಡೋಸ್ ಎಚ್‌ಪಿವಿ ಲಸಿಕೆ ಉಚಿತವಾಗಿ ಸರಬರಾಜಾಗಿದ್ದು, ಎಲ್ಲ ಜಿಲ್ಲೆಗಳಿಗೆ ರವಾನಿಸಲಾಗಿದೆ. ಈ ಅಭಿಯಾನದಲ್ಲಿ ಶಾಲೆ, ಮನೆಗಳಿಗೆ ತೆರಳಿ ಲಸಿಕೆ ನೀಡಲಾಗುವುದಿಲ್ಲ. ಬದಲಾಗಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ/ ತಾಲೂಕು ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಒಂದು ಡೋಸ್ ಗಾರ್ಡಸಿಲ್- 4 ಎಚ್‌ಪಿವಿ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ. ಲಸಿಕೆ ಸ್ವಯಂಪ್ರೇರಿತವಾಗಿದ್ದು, ಪೋಷಕರು/ ಪಾಲಕರಿಂದ ಒಪ್ಪಿಗೆ ಪಡೆಯುವುದು ಕಡ್ಡಾಯ. ಎಲ್ಲ ಅರ್ಹ ಹೆಣ್ಣುಮಕ್ಕಳಿಗೆ ಲಸಿಕೆ ದೊರಕುವಂತೆ ಸಿದ್ಧತೆ ನಡೆಸಲಾಗಿದೆ ಎಂದು ಡಾ. ತಿಮ್ಮಯ್ಯ ತಿಳಿಸಿದರು.

2022ರಲ್ಲಿ ದೇಶದಲ್ಲಿ 79,103 ಗರ್ಭಕಂಠದ ಕ್ಯಾನ್ಸರ್‌ನ ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಈ ಪೈಕಿ 34,805 ಸಾವು ಸಂಭವಿಸಿದೆ. ಆದರೆ ಲಸಿಕೆ ಮಾತ್ರದಿಂದ ತಡೆಗಟ್ಟಬಹುದಾದ ಏಕೈಕ ಕ್ಯಾನ್ಸರ್ ಕೂಡ ಇದಾಗಿದೆ. ಆದ್ದರಿಂದ ಎಲ್ಲ ಅರ್ಹ ಹೆಣ್ಮಕ್ಕಳು ಈ ಲಸಿಕೆ ಪಡೆಯಲು ಮುಂದಾಗಬೇಕು ಎಂದು ಹೇಳಿದರು.

> **ಉಷ್ಣಾಂಶ ಏರಿಕೆ: ಎಚ್ಚರವಿರಲಿ**
>
> ದ.ಕ. ಜಿಲ್ಲೆಯಲ್ಲಿ ದಿನೇ ದಿನೇ ಉಷ್ಣಾಂಶ ಏರಿಕೆಯಾಗುತ್ತಿದ್ದು, ಜನತೆ ಅಗತ್ಯ ಮುಜಾಗೃತಾ ಕ್ರಮ ತೆಗೆದುಕೊಳ್ಳಬೇಕು. ಸಡಿಲವಾದ ಉಡುಪುಗಳನ್ನು ಧರಿಸುವುದು, ಸಾಕಷ್ಟು ನೀರು ಕುಡಿಯುವುದು, ಬಿಸಿಲಿನಿಂದ ಆದಷ್ಟು ದೂರ ಇರುವುದು, ಕಾರ್ಬೋನೇಟೆಡ್ ಪಾನೀಯಗಳನ್ನು ತ್ಯಜಿಸಿ, ನೀರು, ಎಳನೀರು, ಮನೆಯಲ್ಲೇ ಪಾನೀಯಗಳನ್ನು ಕುಡಿಯುವತ್ತ ಆದ್ಯತೆ ನೀಡಬೇಕು ಎಂದು ಡಿಎಚ್‌ಒ ತಿಳಿಸಿದ್ದಾರೆ.

> ಲಸಿಕೆ ಹಾಕಿಸಿ
>
> ಎಚ್‌ಪಿವಿ ಲಸಿಕೆಯ ಕುರಿತು ಸುಳ್ಳು ಸುದ್ದಿಯನ್ನು ಜನತೆ ನಂಬಬಾರದು. ಈ ಲಸಿಕೆಗೆ ಖಾಸಗಿ ಮಾರುಕಟ್ಟೆಯಲ್ಲಿ 8000 ರೂ.ನಷ್ಟು ದರ ಇದೆ. ಸರ್ಕಾರ ಉಚಿತವಾಗಿ ನೀಡುತ್ತಿರುವುದರಿಂದ ಪ್ರತಿ ಅರ್ಹ ಹೆಣ್ಣುಮಕ್ಕಳು ಲಸಿಕೆ ಹಾಕಿಸಿಕೊಳ್ಳಬೇಕು.
>
> ■ **ಡಾ.ಎಚ್.ಆರ್ ತಿಮ್ಮಯ್ಯ, ಡಿಎಚ್‌ಒ**

ಮಾದಕ ವಸ್ತು ಸೇವನೆ: 2 ಪ್ರತ್ಯೇಕ ಪ್ರಕರಣದಲ್ಲಿ ಆರು ಮಂದಿ ಬಂಧನ

ಮಂಗಳೂರು: ಇತ್ತೀಚಿನ ದಿನಗಳಲ್ಲಿ ಮಂಗಳೂರು ನಗರದಲ್ಲಿ ಮಾಧಕ ವಸ್ತುಗಳ ಮಾರಾಟ ಮತ್ತು ಸಾಗಾಟ ಪ್ರಕರಣಗಳು ಹೆಚ್ಚುತ್ತಿವೆ. ನಿತ್ಯ ಒಂದಲ್ಲಾ ಒಂದು ಘಟನೆಗಳು ಬೆಳಕಿಗೆ ಬರುತ್ತಲೇ ಇವೆ. ಈ ನಡುವೆ ಮಾದಕ ದ್ರವ್ಯ ಸೇವನೆ ಮಾಡಿ ಸಾರ್ವಜನಿಕರೊಂದಿಗೆ ಅಸಭ್ಯವಾಗಿ ವರ್ತಿಸುವ ಘಟನೆಗಳೂ ಅಲ್ಲಲ್ಲಿ ನಡೆಯುತ್ತಿವೆ. ಕಸಬಾ ಬೆಂಗ್ರೆ, ಕುದ್ರೋಳಿ, ಉರ್ವ, ವಾಮಂಜೂರು ಸೇರಿದಂತೆ ಮಂಗಳೂರು ನಗರದ ಹೆಚ್ಚಿನಕಡೆಗಳಲ್ಲಿ ಮಾದಕ ವ್ಯಸನಿಗಳ ಹಾವಳಿ ಕಂಡುಬರುತ್ತಿದೆ. ಎರಡು ಪ್ರತ್ಯೇಕ ಪ್ರಕರಣದಲ್ಲಿ ಮಾದಕ ವಸ್ತು ಸೇವನೆ ಮಾಡಿದ ಆರೋಪದಡಿ ಆರು ಮಂದಿಯನ್ನು ಉರ್ವ ಮತ್ತು ಕಂಕನಾಡಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಲಿಂಬಿ ಮಲರಾಯ ದೈವಸ್ಥಾನ ಬಳಿಯ ಲೇ ಔಟ್ ಒಂದರಲ್ಲಿ ಸಿಗರೇಟಿಗೆ ಮಾದಕ ವಸ್ತು ಬೆರೆಸಿ ಸೇವಿಸುತ್ತಿದ್ದ ಆರೋಪದಡಿ 5 ಮಂದಿಯನ್ನು ಉರ್ವ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕೇರಳದ ಕಾಸರಗೋಡು ಜಿಲ್ಲೆಯ ಪಡಮಾರುತ್ತು ನಿವಾಸಿ ಅಜಿಲ್ ಸಾಜಿ (21), ಕಣ್ಣೂರು ಜಿಲ್ಲೆಯ ತಳಿಪರಂಬ ನಿವಾಸಿ ಸಾಜಿಲ್ ಅಬ್ದುಲ್ ಸಮದ್ (21), ವಾರಪಳ್ಳಿ ಚಂಗನಸ್ಸೇರಿ ನಿವಾಸಿ ಅಬು ಥೋಮಸ್ (23), ಕೊಟ್ಟಾಯಂ ಜಿಲ್ಲೆ ಕಂಜ್ರಿಪಳ್ಳಿ ನಿವಾಸಿ ಅಶ್ವಿನ್ ಸಾಜಿ (20), ಮೂಡುಬಿದಿರೆ ವಾಲ್ಪಾಡಿಯ ಮೆಲ್ವಿನ್ ಟೆಲ್ಲಿಸ್ (19) ಬಂಧಿತರು.

ಪಡೀಲ್ ಬಸ್ ನಿಲ್ದಾಣದ ಬಳಿ ರಸ್ತೆಯ ಬದಿಯಲ್ಲಿ ಮಾದಕ ವಸ್ತು ಸೇವನೆ ಮಾಡಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದ ಆರೋಪದಡಿ ಓರ್ವನನ್ನು ಕಂಕನಾಡಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಉಳ್ಳಾಲ ಪೆರ್ಮನ್ನೂರು ಚೆಂಬುಗುಡ್ಡೆ ನಿವಾಸಿ ಶೇಖ್ ಲುಕ್ಮಾನುಲ್ ಹಕೀಮ್ (29) ಬಂಧಿತ ಆರೋಪಿ.



> **ನಿಗಾ ಇರಿಸಿ**
>
> ಬಂಧಿತರು ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಾಗಿದ್ದಾರೆ. ಇವರು ಮನೆ ಯೊಂದನ್ನು ಬಾಡಿಗೆಗೆ ಪಡೆದು ವಾಸವಾಗಿದ್ದರು. ಸಾರ್ವಜನಿಕರು ಮನೆ ಬಾಡಿಗೆ ನೀಡುವಾಗ ಬಾಡಿಗೆದಾರರ ವಿವರ ಪಡೆ ಯುವುದರೊಂದಿಗೆ ಅವರ ಮೇಲೆ ನಿಗಾ ಇರಿಸಬೇಕು ಎಂದು ಪೊಲೀಸ್ ಕಮಿಷನರ್ ಸೂಚನೆ ನೀಡಿದ್ದಾರೆ.

ಇ-ರೈಲ್ವೆ ಟಿಕೇಟ್: ಈಗ ಶೇಕಡಾ 88ರಷ್ಟು ಮುಂಗಡ ಬುಕ್ಕಿಂಗ್ ಆನ್‌ಲೈನ್ ಮೂಲಕ

ಕಾಸರಗೋಡು: ರೈಲು ಪ್ರಯಾಣಕ್ಕಾಗಿರುವ ಮುಂಗಡ ಟಿಕೇಟ್ ಬುಕ್ಕಿಂಗ್ ಅತಿ ಹೆಚ್ಚು ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಇನ್ನು ರೈಲು ನಿಲ್ದಾಣಕ್ಕೆ ಬಂದು ಮುಂಗಡ ಟಿಕೇಟ್ ಬುಕ್ಕಿಂಗ್ ನಡೆಸುತ್ತಿರುವವರ ಸಂಖ್ಯೆ ಇಗ ಶೇಕಡಾ 12ಕ್ಕೆ ಕುಸಿದಿದೆ.

2024ರಲ್ಲಿ ಆನ್‌ಲೈನ್ ಮೂಲಕ ಶೇಕಡಾ 82ರಷ್ಟು ಮಂದಿ ರೈಲ್ವೇ ಟಿಕೇಟ್ ಬುಕ್ಕಿಂಗ್ ನಡೆಸುತ್ತಿದ್ದಾರೆ. ಶೇಕಡಾ 19ರಷ್ಟು ಮಂದಿ ರೈಲು ನಿಲ್ದಾಣಗಳಿಗೆ ಬಂದು ಮುಂಗಡ ಬುಕ್ಕಿಂಗ್ ನಡೆಸುತ್ತಿದ್ದಾರೆ. ಐಆರ್‌ಸಿಟಿ ಮೂಲಕ ಆನ್‌ಲೈನ್ ಟಿಕೇಟ್ ಬುಕ್ಕಿಂಗ್ ನಡೆಸಲಾಗುತ್ತದೆ.

ರೈಲ್ವೇ ವನ್-ಆ್ಯಪ್ ಸೌಕರ್ಯ ಆರಂಭಗೊಂಡು ಬಳಿಕ ರೈಲು ನಿಲ್ದಾಣಕ್ಕೆ ಬಂದು ಮುಂಗಡ ಬುಕ್ಕಿಂಗ್ ನಡೆಸುವವರ ಸಂಖ್ಯೆ ಕುಸಿಯತೊಡಗಿದೆ. ಹೆಚ್ಚಿನ ಪ್ರಯಾಣಿಕರು ಈಗ ಆನ್ ಲೈನ್ ಮೂಲಕ ಇ-ಟಿಕೇಟ್ ಪಡೆಯತೊಡಗಿದ್ದಾರೆ.

ರೈಲ್ವೆ ಇಲಾಖೆಯ ಲೆಕ್ಕಾಚಾರ ಪ್ರಕಾರ ದೇಶದಲ್ಲಿ ಪ್ರತಿದಿನ ಸರಾಸರಿ 15.75 ಲಕ್ಷ ರೈಲ್ವೇ ಟಿಕೇಟ್‌ಗಳನ್ನು ಮುಂಗಡವಾಗಿ ಪಡೆಯಲಾಗುತ್ತಿದೆ. ಇದರಲ್ಲಿ 13,88 ಲಕ್ಷದಷ್ಟು ಮುಂಗಡ ಬುಕ್ಕಿಂಗ್‌ಗಳು ಐಆರ್‌ಟಿಸಿ ಮೂಲಕ ನಡೆಯುತ್ತಿದೆ. ಇನ್ನು ರೈಲು ನಿಲ್ದಾಣಗಳ ಕೌಂಟರ್‌ಗಳ ಮೂಲಕ 1.90 ಲಕ್ಷದಷ್ಟು ಟಿಕೇಟ್‌ಗಳ ಮುಂಗಡ ಬುಕ್ಕಿಂಗ್ ಮಾತ್ರವೇನಡೆಯುತ್ತಿದೆ. ಹಲವು ನೋಂದಾಯಿತ ಖಾಸಗಿ ಸಂಸ್ಥೆಗಳು ರೈಲ್ವೇ ಮುಂಗಡ ಬುಕ್ಕಿಂಗ್ ಸೇವೆ ನಡೆಯುತ್ತಿದೆ.

ನಿಲ್ಲಿಸಲಾಗಿದ್ದ ಟೋರಸ್ ಲಾರಿಗೆ ಇನ್ನೊಂದು ಲಾರಿ ಡಿಕ್ಕಿ

ಕ್ಯಾಬಿನ್‌ನಲ್ಲಿ ಸಿಲುಕಿಕೊಂಡ ಕ್ಲೀನರ್

ಕಾಸರಗೋಡು: ನಗರದ ಕರಂದಕ್ಕಾಡ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಟೋರಸ್ ಲಾರಿಯ ಹಿಂಬದಿಗೆ ಲಾರಿ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಅಪಘಾತದ ಹಿನ್ನೆಲೆಯಲ್ಲಿ ಒಂದೂವರೆ ಗಂಟೆ ಕಾಲ ಕ್ಯಾಬಿನ್‌ನಲ್ಲಿ ಸಿಲುಕಿದ ಲಾರಿ ಕ್ಲೀನರ್‌ನನ್ನು ಅಗ್ನಿಶಾಮಕ ದಳ ಹಾಗೂ ನಾಗರಿಕರು ಸೇರಿ ಸಾಹಸಿಕವಾಗಿ ರಕ್ಷಿಸಿದ್ದಾರೆ. ಪಶ್ಚಿಮ ಬಂಗಾಳ ನಿವಾಸಿಯಾದ ಸ್ವರೂಪ್ ಮೋದಿ (28) ಎಂಬವರನ್ನು ರಕ್ಷಿಸಲಾಗಿದೆ.

ಸೋಮವಾರ ರಾತ್ರಿ 12 ಗಂಟೆಯ ವೇಳೆ ಕಾಸರಗೋಡು ಅಗ್ನಿಶಾಮಕ ದಳ ಕಚೇರಿಯ ಮುಂಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಟೋರಸ್ ಲಾರಿಯ ಹಿಂಬದಿಗೆ ಕಾಸಗೋಡು ಕೆಎಸ್‌ಇಬಿಗೆ ಇಲೆಕ್ಟ್ರಿಕ್ ಕೇಬರ್ ಹೇರಿ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ.

ಆಘಾತದಿಂದ ಲಾರಿಯ ಮುಂಭಾಗ ಪೂರ್ಣ ನಜ್ಜುಗುಜ್ಜಾಗಿದೆ. ಡಿಕ್ಕಿಯ ರಭಸದಿಂದ ತಲಾ 600 ಕಿಲೋ ಭಾರವಿರುವ 16 ರೋಲ್ ಕೇಬಲ್‌ಗಳು ಕ್ಯಾಬಿನ್‌ನ ಹಿಂಭಾಗಕ್ಕೆ ತಳ್ಳಲ್ಪಟ್ಟಿದೆ. ಇದರಿಂದ ಚಾಲಕ ಬಿಶ್ವಜಿತ್ ಮಂಡಲ್, ಕ್ಲೀನರ್ ಸ್ವರೂಪ್ ಎಂಬವರು ಕ್ಯಾಬಿನ್‌ನಲ್ಲಿ ಸಿಲುಕಿದ ಕ್ಯಾಬಿನ್‌ನಲ್ಲಿ ಸಿಲುಕಿ ಕೊಂಡಿದ್ದರು. ಅಪಘಾತವನ್ನು ಕಂಡ ವ್ಯಕ್ತಿಯೊಬ್ಬರು ರಾಷ್ಟ್ರೀಯ ಹೆದ್ದಾರಿಯಿಂದ ಬೊಬ್ಬೆ ಹಾಕಿದ ಹಿನ್ನೆಲೆಯಲ್ಲಿ ಅಗ್ನಿಶಾಮಕದಳದ ಗಮನಕ್ಕೆ ಬಂದಿದೆ. ಕೂಡಲೇ ಅಗ್ನಿಶಾಮಕ ದಳದವರು ಸ್ಥಳಕ್ಕಾಗಮಿಸಿ ವಿವಿಧ ಉಪಕರಣಗಳನ್ನು ಉಪಯೋಗಿಸಿ ಲಾರಿಯ ಕ್ಯಾಬಿನ್ ಭಾಗಕ್ಕೆ ಆಧಾರವಾಗಿ ನಿಲ್ಲಿಸಲಾಯಿತು. ಬಳಿಕ ಚಾಲಕನನ್ನು ಕೆಳಗಿಳಿಸಲಾಯಿತು.

ಮೇಲ್ಪರಂಬ ಭಾಗದಿಂದ ಕ್ರೇನ್ ತಲುಪಿ ಕೇಬಲ್ ರೋಲ್‌ಗಳನ್ನು ಒಂದೊಂದಾಗಿ ಕೆಳಗಿಳಿಸಲಾಯಿತು. ಅಷ್ಟರಲ್ಲಿ ಒಂದೂವರೆ ಗಂಟೆ ಕಳೆದಿತ್ತು. ಬಳಿಕ ಕ್ಯಾಬಿನ್ ಮುರಿದು ಒಳಗೆ ಸಿಲುಕಿಕೊಂಡಿದ್ದ ಕ್ಲೀನರ್‌ನನ್ನು ಸುರಕ್ಷಿತವಾಗಿ ಹೊರಗಳಿಸಿ ತಕ್ಷಣ ಅಗ್ನಿಶಾಮಕ ದಳದ ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ತಲುಪಿಸಲಾಯಿತು. ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಕ್ಲೀನರ್ ಚೇತರಿಸಿಕೊಂಡಿದ್ದಾರೆ.

ಜೀವ ರಕ್ಷಿಸಿದ ಅಗ್ನಿಶಾಮಕ ದಳಕ್ಕವರು ಕೃತಜ್ಞತೆ ಸಲ್ಲಿಸಿದರು.

ಒಂದೂವರೆ ಗಂಟೆ ಕಾಲ ಮುಂದುವರಿದರಕ್ಷಣಾ ಚಟುವಟಿಕೆಗಳ ಮೂಲಕ ಕ್ಲೀನರ್‌ನ ಜೀವ ರಕ್ಷಿಸಿದ ಅಗ್ನಿಶಾಮಕ ದಳದವರನ್ನು ನಾಗರಿಕರು ಅಭಿನಂದಿಸಿದ್ದಾರೆ.

> ▸▸ ಹೆದ್ದಾರಿಯಲ್ಲಿ ನಿಲ್ಲಿಸಿದ್ದ ಟೋರಸ್ ಲಾರಿಯ ಹಿಂಬದಿಗೆ ಕಾಸಗೋಡು ಕೆಎಸ್‌ಇಬಿಗೆ ಇಲೆಕ್ಟ್ರಿಕ್ ಕೇಬಲ್ ಹೇರಿ ಬರುತ್ತಿದ್ದ ಲಾರಿ ಡಿಕ್ಕಿ
>
> ▸▸ ಡಿಕ್ಕಿಯ ರಭಸದಿಂದ ತಲಾ 600 ಕಿಲೋ ಭಾರವಿರುವ 16 ರೋಲ್ ಕೇಬಲ್‌ಗಳು ಕ್ಯಾಬಿನ್‌ನ ಹಿಂಭಾಗಕ್ಕೆ ತಳ್ಳಲ್ಪಟ್ಟಿದೆ.

ಕೇಂದ್ರ ಸರ್ಕಾರದ ನ್ಯಾಷನಲ್ ಪಂಚಾಯತ್ ಆವಾರ್ಡ್‌ಗೆ ನಾಮ ನಿರ್ದೇಶನ । ಪರಿಶೀಲನೆಗೆ ಪಂಚಾಯತ್ ರಾಜ್ ಮಂತ್ರಾಲಯದ ಅಧಿಕಾರಿಗಳ ಭೇಟಿ

‘ಆರೋಗ್ಯಕರ ಗ್ರಾಮ ಪಂಚಾಯತ್’ ರೇಸ್‌ನಲ್ಲಿ ವಂಡ್ಸೆ ಗ್ರಾಮ ಪಂಚಾಯತ್!

ಕುಂದಾಪುರ: ಕೇಂದ್ರ ಸರಕಾರದ ಪಂಚಾಯತ್ ರಾಜ್ ಮಂತ್ರಾಲಯದಿಂದ ‘ಸುಸ್ಥಿರ ಅಭಿವೃದ್ಧಿ ಗುರಿಗಳು ವಿಷಯದ ಮೇಲೆ ಒಂಭತ್ತು ವಿಭಾಗಗಳಲ್ಲಿ ನ್ಯಾಷನಲ್ ಪಂಚಾಯತ್ ಆವಾರ್ಡ್ ನೀಡುತ್ತಿದ್ದು, ‘ಆರೋಗ್ಯಕರ ಗ್ರಾಮ ಪಂಚಾಯತ್’ ವಿಭಾಗದಲ್ಲಿ ರಾಜ್ಯದಿಂದ ವಂಡ್ಸೆ ಗ್ರಾಮ ಪಂಚಾಯತ್ ಕೇಂದ್ರ ಸರಕಾರಕ್ಕೆ ನಾಮ ನಿರ್ದೇಶನಗೊಂಡಿದೆ.

ಅಂತಿಮ 55ರ ಪಟ್ಟಿಯಲ್ಲಿದೆ ವಂಡ್ಸೆ

ಈ ದೇಶದಲ್ಲಿ ಒಟ್ಟು 2.68 ಲಕ್ಷ ಗ್ರಾಮ ಪಂಚಾಯತ್‌ಗಳಿದ್ದು ಅಂತಿಮ 55ರ ಪಟ್ಟಿಯಲ್ಲಿ ವಂಡ್ಸೆ ಗ್ರಾಪಂ ಒಳಗೊಂಡಿದೆ. ಈಗಾಗಲೇ ಘನತ್ಯಾಜ್ಯ ವಿಲೇವಾರಿ ಘಟಕದ ಮೂಲಕ ರಾಜ್ಯ, ದೇಶದ ಗಮನ ಸೆಳೆದಿರುವ ವಂಡ್ಸೆ ಗ್ರಾಪಂ ರಾಜ್ಯದಲ್ಲಿ ಪ್ರಥಮ ಬಾರಿಗೆ ‘ಸಮುದಾಯ ಉಪಶಮನ ಆರೈಕೆ ಕೇಂದ್ರ’ ನಿರಾಮಯ ಸೊಸೈಟಿ ಮೂಲಕ ಅನುಷ್ಠಾನ ಮಾಡುವುದರರೊಂದಿಗೆ ರಾಜ್ಯದ ಗಮನ ಸೆಳೆದಿದೆ.



ಪರಿಶೀಲನೆಗೆ ಬಂದಿದೆ ಅಧಿಕಾರಿಗಳ ತಂಡ

ಅಂತಿಮ ಪ್ರಶಸ್ತಿ ಸುತ್ತಿಗಾಗಿ ಪರಿಶೀಲನೆ ಮಾಡಲು ಕೇಂದ್ರ ಸರಕಾರದ ಪಂಚಾಯತ್ ರಾಜ್ ಮಂತ್ರಾಲಯದ ಹಿರಿಯ ಅಧಿಕಾರಿಗಳಾದ ಪಿನಾಕಿ ತಹಬಿಲ್ದಾರ್ ಮತ್ತು ಡಾ. ಮಮತಾ ಕುಮಾರಿ ಅಧಿಕಾರಿಗಳ ತಂಡ ಗ್ರಾಮ ಪಂಚಾಯತ್‌ಗೆ ಭೇಟಿ ನೀಡಿದೆ. ವಂಡ್ಸೆ ಗ್ರಾಪಂನ ಮಾಜಿ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ, ಮಾಜಿ ಉಪಾಧ್ಯಕ್ಷ ಗೋವರ್ದನ್ ಜೋಗಿ, ಗ್ರಾಮಪಂಚಾಯಿತಿ ಎಲ್ಲಾ ಮಾಜಿ ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಎಂ.ಜಿ ರಾಮ, ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಭಾಗ್ಯವತಿ, ಗ್ರಾಮ ಆಡಳಿತ ಅಧಿಕಾರಿ ವಿಘ್ನೇಶ, ಕೃಷಿ ಅಧಿಕಾರಿ ಪರಶುರಾಮ, ಪಶು ವೈದ್ಯಾಧಿಕಾರಿ ಡಾ. ಶ್ರೀದೀಕ್ಷಾ, ವಂಡ್ಸೆ ಶಾಲೆಯ ಮುಖ್ಯೋಪಾಧ್ಯಾಯ ಶಂಕರ್, ನಿರಾಮಯ ಸೊಸೈಟಿ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಸಂಘದ ಪ್ರತಿನಿಧಿಗಳು, ಪಂಚಾಯತ್ ಸಿಬ್ಬಂದಿಗಳು ಮುಂತಾದವರೊಂದಿಗೆ ತಂಡ ಚರ್ಚಿಸಿ, ದಾಖಲೆ ಪರಿಶೀಲಿಸಿ, ಕ್ಷೇತ್ರ ಭೇಟಿ ನಡೆಸಿದರು. ಹಾಗೂ ಆರೋಗ್ಯ, ಶಿಕ್ಷಣ ಮತ್ತು ಘನತ್ಯಾಜ್ಯ ವಿಲೇವಾರಿ ಘಟಕದ ಸಾಧನೆಗೆ ಪ್ರಶಂಸೆ ವ್ಯಕ್ತ ಪಡಿಸಿದರು.

ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿ.ಪಂ. ಮುಖ್ಯ ಯೋಜನಾಧಿಕಾರಿ ಉದಯ ಶೆಟ್ಟಿ, ಕುಂದಾಪುರ ತಾಪಂ ಕಾರ್ಯ ನಿರ್ವಹಣಾಧಿಕಾರಿ ಮಹೇಶ್ ಕೆ.ಜಿ., ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ, ಜಿಲ್ಲಾ ಪಂಚಾಯತ್ ಎಸ್.ಡಿ.ಜಿ ಸೆಲ್ ಮೇಲ್ವಿಚಾರಕ ಅನಿಲ್ ಶೆಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ ನಾಯ್ಕ, ತಾಪಂ ಪ್ರಭಾರ ಯೋಜನಾಧಿಕಾರಿ ಸತೀಶ, ಸಹಾಯಕ ನಿರ್ದೇಶಕಿ ದೀಪಾ ಉಪಸ್ಥಿತರಿದ್ದರು.

> ▸▸ ಈ ದೇಶದಲ್ಲಿ ಒಟ್ಟು 2.68 ಲಕ್ಷ ಗ್ರಾಮ ಪಂಚಾಯತ್‌ಗಳಿದ್ದು ಅಂತಿಮ 55ರ ಪಟ್ಟಿಯಲ್ಲಿ ವಂಡ್ಸೆ ಗ್ರಾಮ ಪಂಚಾಯತ್ ಒಳಗೊಂಡಿದೆ.
>
> ▸▸ ವಂಡ್ಸೆ ಗ್ರಾಮ ಪಂಚಾಯತ್ ರಾಜ್ಯದಲ್ಲಿ ಪ್ರಥಮ ಬಾರಿಗೆ ‘ಸಮುದಾಯ ಉಪಶಮನ ಆರೈಕೆ ಕೇಂದ್ರ’ವನ್ನು ನಿರಾಮಯ ಸೊಸೈಟಿಯ ಮೂಲಕ ಅನುಷ್ಠಾನ ಮಾಡುವುದರರೊಂದಿಗೆ ರಾಜ್ಯದ ಗಮನ ಸೆಳೆದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 25° | ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು



ಸಂದೇಹಾಸ್ಪದ ಪಿಂಚಣಿ ಪಟ್ಟಿ ಪರಿಶೀಲನೆ ಕಾರ್ಯ ಚುರುಕು



ಬಿ.ಸಿ.ರೋಡು, ಬಂಟ್ವಾಳ: ರಾರಾಜಿಸುತ್ತಿವೆ ಅನಧಿಕೃತ ಪ್ಲೆಕ್ಸ್!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಬುಧವಾರ 25, ಮಾರ್ಚ್ 2026 | e-mail dighanthamlr@gmail.com | Website www.hosadigantha.com | e-paper epaper.hosadigantha.com | MANGALURU

ಕರ್ನಾಟಕ ಸರಕಾರ ಧಾರ್ಮಿಕ ದತ್ತಿ ಇಲಾಖೆ

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಶ್ರೀಕ್ಷೇತ್ರ ಶರವೂರು

ಅಂಚೆ: ಶರವೂರು, ಆಲಂಕಾರು ಗ್ರಾಮ, ಕಡಬ ತಾಲೂಕು, ದ.ಕ.– 574285

ದಿನಾಂಕ: 25.03.2026 ಬುಧವಾರದಿಂದ 02.04.2026 ಗುರುವಾರದ ತನಕ



ಮತ್ತು

ನೂತನ ಏಕಶಿಲಾ ಧ್ವಜಸ್ತಂಭ ಪ್ರತಿಷ್ಠೆ, ನೂತನ ಬ್ರಹ್ಮರಥ ಸಮರ್ಪಣೆ, ನೂತನ ಪುಷ್ಪರಥ ಸಮರ್ಪಣೆ

ಧಾರ್ಮಿಕ ಕಾರ್ಯಕ್ರಮಗಳು

ದಿನಾಂಕ: 25.03.2026 ಬುಧವಾರ

ಪ್ರಾತಃಕಾಲ 8.00: ಕ್ಷೇತ್ರದ ತಂತ್ರಿಗಳಿಗೆ ಮತ್ತು ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ, ಶಿಲ್ಪಿ ಸಮ್ಮಾನ, ಆಲಯ ಪರಿಗ್ರಹ, ಸಾಮೂಹಿಕ ದೇವತಾ ಪ್ರಾರ್ಥನೆ, ಗಣಹೋಮ, ಭದ್ರಕಾಳೀ ಅಮ್ಮನವರಲ್ಲಿ ಕ್ಷಾಳನಾದಿ ಬಿಂಬ ಶುದ್ಧಿ, ಪ್ರಾಯಶ್ಚಿತ್ತ ಹೋಮಗಳು. ಪೂರ್ವಾಹ್ನ 11.30: ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಊರ ಹಾಗೂ ಪರವೂರ ಭಗವದ್‌ಭಕ್ತರಿಂದ ಹಸಿರುವಾಣಿ, ಹೊರೆಕಾಣಿಕೆ ಸಮರ್ಪಣೆ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಂಜೆ 6.00: ಸ್ವಸ್ತಿ ಪುಣ್ಯಾಹವಾಚನ, ಆಚಾರ್ಯಾದಿ ಋತ್ವಿಗ್ವರಣ, ಅಂಕುರಾರೋಪಣ, ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಪೂಜೆ, ವಾಸ್ತುಬಲಿ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 26.03.2026 ಗುರುವಾರ

ಪ್ರಾತಃಕಾಲ 6.00: ಉಷಾ ಪೂಜೆ, ಮಹಾಗಣಪತಿ ಹೋಮ, ಅಂಕುರಪೂಜೆ, ಬಾಲಾಲಯದಲ್ಲಿ ಕ್ಷಾಳನಾದಿ ಚತುಃಶುದ್ಧಿ, ಧಾರೆ, ಪಂಚಗವ್ಯ, ಪಂಚಕ, ಬಿಂಬಶುದ್ಧಿ, ಖನನಾದಿ ಸ್ಥಳಶುದ್ಧಿ, ದಹನ ಪ್ರಾಯಶ್ಚಿತ್ತ, ದ್ವಾರಪ್ರಾಯಶ್ಚಿತ್ತ ಹೋಮಗಳು, ಹೋಮಗಳ ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಭದ್ರಕಾಳೀ ಗುಡಿಯಲ್ಲಿ ಶಾಂತಿಹೋಮ. ಸಾಯಂಕಾಲ 6.00: ದುರ್ಗಾಪೂಜೆ, ಅಂಕುರಪೂಜೆ, ಕುಂಡಶುದ್ಧಿ, ಗಂಗಾದೇವಿಯ ಗರ್ಭಗೃಹಕ್ಕೆ ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಪೂಜೆ, ವಾಸ್ತುಬಲಿ, ಗಂಗಾದೇವಿಯ ಬಿಂಬ ಶುದ್ಧಿ, ಬಿಂಬಾಧಿವಾಸ 49 ಕಲಶ ಪೂರಣ, ಅಧಿವಾಸ ಹೋಮ, ಕಲಶಾಧಿವಾಸ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 27.03.2026 ಶುಕ್ರವಾರ

ಪ್ರಾತಃಕಾಲ 6.00: ಉಷಾ ಪೂಜೆ, ಗಣಪತಿ ಹೋಮ, ಅಂಕುರ ಪೂಜೆ, ಸ್ವಶಾಂತಿ, ಶ್ವಾನ ಶಾಂತಿ, ಚೋರಶಾಂತಿ ಹೋಮಾದಿಗಳು ಮೃತ್ಯುಂಜಯ ಹೋಮ. ಪೂರ್ವಾಹ್ನ 10.15ರ ಸಮಯ ನಡೆಯುವ ವೃಷಭ ಲಗ್ನ ಸುಮುಹೂರ್ತದಲ್ಲಿ– ಗಂಗಾದೇವಿ ಪ್ರತಿಷ್ಠೆ, ಕಲಶಾಭಿಷೇಕ, ಪ್ರಸನ್ನಪೂಜೆ, ಶಾಂತಿಹೋಮಗಳ ಕಲಶಾಭಿಷೇಕ, ಭದ್ರಕಾಳೀ ಅಮ್ಮನವರಿಗೆ 49 ಕಲಶಾಭಿಷೇಕ, ಪ್ರಸನ್ನಪೂಜೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಾಯಂಕಾಲ 6.00: ಅಂಕುರಪೂಜೆ, ದುರ್ಗಾಪೂಜೆ, ಕುಂಡಶುದ್ಧಿ, 81 ಅನುಜ್ಞಾ ಕಲಶ ಪೂರಣ, ಅಧಿವಾಸ ಹೋಮ, ಕಲಶಾಧಿವಾಸ, ಧ್ವಜಪ್ರತಿಷ್ಠೆಗೆ ಅಂಕುರಾರೋಪಣ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ.

ದಿನಾಂಕ: 28.03.2026 ಶನಿವಾರ

ಪ್ರಾತ:ಕಾಲ 6.00: ಉಷಾ ಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ತತ್ವಹೋಮ, ತತ್ವಕಲಶ ಪ್ರತಿಷ್ಠೆ, ತತ್ವಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ, ಅನುಜ್ಞಾಬಲಿ, ಅನುಜ್ಞಾ ಪ್ರಾರ್ಥನೆ, ನವಗ್ರಹ ಶಾಂತಿಹೋಮ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಾಯಂಕಾಲ 6.00: ಕುಂಡ ಶುದ್ಧಿ, ಅಂಕುರಪೂಜೆ, ದುರ್ಗಾಪೂಜೆ, ಚತುರ್ಥ ಸ್ನಪನಕ್ಕೆ ಅಂಕುರಾರೋಪಣ, ಬಿಂಬಶುದ್ಧಿ, ಕಲಶಪೂರಣ, ಅಧಿವಾಸಹೋಮ ಕಲಶಾಧಿವಾಸ, ಧ್ವಜವಾಹನಬಿಂಬ ಜಲಾಧಿವಾಸ, ನಾಗದೇವರಿಗೆ ಆಶ್ಲೇಷಾಬಲಿ, ರಾತ್ರಿ–ಮೊಗೇರ್ಕಳ ಗುಡಿಯಲ್ಲಿ ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಪೂಜೆ, ವಾಸ್ತುಬಲಿ ಮಹಾಪೂಜೆ, ಪ್ರಸಾದವಿತರಣೆ, ಅನ್ನಸಂತರ್ಪಣೆ

ದಿನಾಂಕ: 29.03.2026 ರವಿವಾರ

ಪ್ರಾತಃಕಾಲ 6.00: ಉಷಾ ಪೂಜೆ, ಅಂಕುರಪೂಜೆ, ಮಂಟಪ ಸಂಸ್ಕಾರ, ಕುಂಭೇಶ ಕರ್ಕರಿ ಪೂಜೆ, ಶಯ್ಯಾಪೂಜೆ, ನಿದ್ರಾಕುಂಭಪೂಜೆ, ಅಗ್ನಿಜನನ, ಸಂಹಾರತತ್ವಹೋಮ, ಸಂಹಾರತತ್ವ ಕಲಶಪೂಜೆ, ಸಂಹಾರ ತತ್ವಕಲಶಾಭಿಷೇಕ, ಜೀವಕಲಶಪೂರಣ, ಜೀವೋದ್ವಾಸನ, ಜೀವಕಲಶ ಶಯ್ಯಾನಯನ, ಗಣಪತಿ, ಲಕ್ಷ್ಮೀನಾರಾಯಣ ದೇವರಿಗೆ ಶಯ್ಯಾಪೂಜೆ, ನಿದ್ರಾಕಲಶಪೂರಣ, ದುರ್ಗೆ, ಗಣಪತಿ, ಲಕ್ಷ್ಮೀನಾರಾಯಣ ದೇವರುಗಳ ಬಿಂಬಶುದ್ಧಿ ಪ್ರಕ್ರಿಯೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಾಯಂಕಾಲ 6.00: ಧ್ಯಾನಾಧಿವಾಸ, ಶಿರಸ್ತತ್ವಹೋಮ ಅಧಿವಾಸಹೋಮ, ಶಕ್ತಿದಂಡಕ, ಮಂಡಲ ಪೂಜೆ, ಗೋದೋಹನ, ಬಿಂಬಾಧಿವಾಸ, ಪೀಠಾಧಿವಾಸ, ಪ್ರಾಸಾದ ಅಧಿವಾಸ, ಗಣಪತಿ, ಲಕ್ಷ್ಮೀನಾರಾಯಣ ದೇವರುಗಳ ಧ್ಯಾನಾಧಿವಾಸ, ಕಲಶಪೂರಣ, ಅಧಿವಾಸಹೋಮ, ಕಲಶಾಧಿವಾಸ, ಅಧಿವಾಸ ಬಲಿ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 30.03.2026 ಸೋಮವಾರ

ಪ್ರಾತಃ ಕಾಲ 6.00: ಅಷ್ಟೋತ್ತರಶತನಾಳಿಕೇರ ಗಣಪತಿಹೋಮ, ಪ್ರಾಸಾದ ಪ್ರತಿಷ್ಠೆ, ನಪುಂಸಕ ಶಿಲಾಪ್ರತಿಷ್ಠೆ, ರತ್ನನ್ಯಾಸಾದಿ ಪೀಠಪ್ರತಿಷ್ಠೆ, ಜೀವ ಕಲಶ, ಬಿಂಬ ನಿದ್ರಾಕಲಶಾದಿ, ಗರ್ಭಗೃಹಾನಯನ. ಪೂರ್ವಾಹ್ನ 9.07–11:07ರ ಸಮಯ ನಡೆಯುವ ವೃಷಭ ಲಗ್ನ ಸುಮುಹೂರ್ತದಲ್ಲಿ– ಶ್ರೀ ದುರ್ಗಾಪರಮೇಶ್ವರೀ ದೇವರ ಪುನಃ ಪ್ರತಿಷ್ಠೆ, ಅಷ್ಟಬಂಧಕ್ರಿಯೆ, ಕುಂಭೇಶ, ನಿದ್ರಾಕುಂಭ, ಜೀವಕಲಶ ಅಭಿಷೇಕ, ಪ್ರಸನ್ನಪೂಜೆ. ಪೂರ್ವಾಹ್ನ 11.07–1:08ರ ಸಮಯ ನಡೆಯುವ ಮಿಥುನ ಲಗ್ನ ಸುಮುಹೂರ್ತದಲ್ಲಿ– ಶ್ರೀ ಗಣಪತಿ, ಲಕ್ಷ್ಮೀನಾರಾಯಣ ದೇವರುಗಳ ಪುನಃ ಪ್ರತಿಷ್ಠೆ ಕಲಶಾಭಿಷೇಕ, ಪ್ರಸನ್ನ ಪೂಜೆ. ಮಧ್ಯಾಹ್ನ 12.00: ಶ್ರೀ ದೇವರಿಗೆ ಪ್ರತಿಷ್ಠಾ ಬಲಿ, ನಿತ್ಯಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ಸಾಯಂಕಾಲ 6.00: ನಿತ್ಯನೈಮಿತ್ತಿಕ ನಿಶ್ಚಯ ಭದ್ರದೀಪ ಪ್ರತಿಷ್ಠೆ, ಗರ್ಭಗೃಹ ಕವಾಟಬಂಧನ ಅಂಕುರಪೂಜೆ, ಸೋಪಾನಪೂಜೆ, ಮಹಾಬಲಿಪೀಠ, ಶುದ್ಧಿ, ಅಧಿವಾಸ, ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 31.03.2026 ಮಂಗಳವಾರ

ಪ್ರಾತಃಕಾಲ ಗಂಟೆ 6:00ರಿಂದ: ಬಲಿಶಿಲಾ ಪ್ರತಿಷ್ಠೆಗಳು, ಸಪ್ತಮಾತೃಕಾಪೀಠ ಪ್ರತಿಷ್ಠೆ, ನಿರ್ಮಾಲ್ಯಧಾರಿ ಪ್ರತಿಷ್ಠೆ, ಮಹಾಬಲಿಪೀಠ ಪ್ರತಿಷ್ಠೆ, ಚಂಡಿಕಾಯಾಗ, ಮಂಟಪಶುದ್ಧಿ, ಶಯ್ಯಾ ಪೂಜೆ, ನಿದ್ರಾಕಲಶ ಪೂಜೆ, ಅಗ್ನಿಜನನ ಧ್ವಜವಾಹನಬಿಂಬ ಶುದ್ಧಿ, ವಾಹನಬಿಂಬ, ಶಯ್ಯಾ ನಯನ, ಅಂಕುರಪೂಜೆ, ಸೋಪಾನಪೂಜೆ, ಪ್ರಸಾದ ವಿತರಣೆ, ಅನ್ನಸರ್ತಣೆ. ಸಾಯಂಕಾಲ ಗಂಟೆ 6:00ರಿಂದ: ಧ್ವಜಾಧಿವಾಸ, ವಾಹನಬಿಂಬಾಧಿವಾಸ, ಅಧಿವಾಸಹೋಮ, ಚಾಮುಂಡಿ ಪೀಠಶುದ್ಧಿ, ಅಧಿವಾಸ, ಪುಷ್ಪರಥ ಶುದ್ಧಿ, ಅಧಿವಾಸ, ಕುಂಡಶುದ್ಧಿ, ಅಂಕುರಪೂಜೆ, ಸೋಪಾನ ಪೂಜೆ, ಪ್ರಸಾದವಿತರಣೆ, ಅನ್ನಸಂತರ್ಪಣೆ

ದಿನಾಂಕ: 01.04.2026 ಬುಧವಾರ

ಪ್ರಾತಃಕಾಲ 6.00: ಅಂಕುರಪೂಜೆ, ಸೋಪಾನಪೂಜೆ, ದ್ವಾರ ಪ್ರಾಯಶ್ಚಿತ್ತಹೋಮ, ಶಾಂತಿಹೋಮ ತತ್ವಹೋಮ, ತತ್ವಕಲಶ ಪ್ರತಿಷ್ಠೆ, ಮಂಟಪ ಸಂಸ್ಕಾರ, ಕುಂಭೇಶ ಕರ್ಕರಿ ಪೂರಣ ಅಗ್ನಿಜನನ. ಪೂರ್ವಾಹ್ನ 10.30ರ ಸಮಯ ನಡೆಯುವ ಮಿಥುನ ಲಗ್ನದ ಸುಮುಹೂರ್ತದಲ್ಲಿ– ಧ್ವಜಪ್ರತಿಷ್ಠೆ, ಶ್ರೀ ಚಾಮುಂಡಿ ದೈವ ಪ್ರತಿಷ್ಠೆ, ಕಲಶಾಭಿಷೇಕ, ಪುಷ್ಪರಥಕ್ಕೆ ಕಲಶಾಭಿಷೇಕ ಮಹಾಪೂಜೆ, ಪ್ರಸಾದವಿತರಣೆ, ಅನ್ನಸಂತರ್ಪಣೆ. ಸಾಯಂಕಾಲ 6.00: ಬ್ರಹ್ಮಕಲಶ ಪೂರಣ, ದ್ರವ್ಯನ್ಯಾಸ ಸಹಸ್ರ ಪರಿಕಲಶಪೂರಣ, ಅಧಿವಾಸ ಹೋಮಗಳು, ಕಲಶಾಧಿವಾಸ, ಸೋಪಾನ ಪೂಜೆ ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 02.04.2026 ಗುರುವಾರ

ಪ್ರಾತಃಕಾಲ 4.30: ಶ್ರೀ ದೇವರ ಗರ್ಭಗೃಹದ ಕವಾಟ ಉದ್ಘಾಟನೆ, ನಿರ್ಮಾಲ್ಯದರ್ಶನ, ತೈಲಾಭಿಷೇಕ ಪ್ರಾಯಶ್ಚಿತ್ತ ಶಾಂತಿಹೋಮಗಳ, ಕಲಶಾಭಿಷೇಕ, ತತ್ವಕಲಶಾಭಿಷೇಕ, ಪ್ರಾತಃಕಾಲ 6.00: ಪರಿಕಲಶಾಭಿಷೇಕ ಪ್ರಾರಂಭ. ಪೂರ್ವಾಹ್ನ 9.00–9.30ರ ಸಮಯ ನಡೆಯುವ ವೃಷಭ ಲಗ್ನ ಸುಮುಹೂರ್ತದಲ್ಲಿ–ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ, ಪ್ರಸನ್ನಪೂಜೆ, ಅವಸ್ರುತೋಕ್ಷಾ ಬಲಿ, ಪ್ರಸಾದ ವಿತರಣೆ. ಮಧ್ಯಾಹ್ನ 11.30: ಶ್ರೀ ದೇವರಿಗೆ ಮಹಾಪೂಜೆ, ಪಲ್ಲಪೂಜೆ. ಮಧ್ಯಾಹ್ನ 12.30: ಮಹಾಅನ್ನಸಂತರ್ಪಣೆ, ವೈದಿಕ ಮಂತ್ರಾಕ್ಷತೆ. ಸಾಯಂಕಾಲ 7.00: ಶ್ರೀ ದೇವರಿಗೆ ಮಹಾಪೂಜೆ, ಭೂತಬಲಿ ಉತ್ಸವ, ಪುಷ್ಪರಥೋತ್ಸವ, ವಸಂತಕಟ್ಟೆ ಪೂಜೆ ನೂತನ ಬ್ರಹ್ಮರಥಕ್ಕೆ ಶುದ್ಧಿ ಪ್ರಕ್ರಿಯೆ ರಥಾಧಿವಾಸ

ದಿನಾಂಕ: 03.04.2026 ಶುಕ್ರವಾರ

ಪ್ರಾತಃಕಾಲ 8.00: ನೂತನ ಬ್ರಹ್ಮರಥಕ್ಕೆ ಕಲಶಪೂರಣ, ಕಲಶಾಭಿಷೇಕ, ರಥಬಲಿ, ಶ್ರೀ ದೇವರಿಗೆ ಬ್ರಹ್ಮರಥ ಸಮರ್ಪಣೆ. ಪೂರ್ವಾಹ್ನ 11.30: ಜಾತ್ರೋತ್ಸವಕ್ಕೆ ಗೊನೆ ಮುಹೂರ್ತ, ಮಹಾಪೂಜೆ, ಅನ್ನಸಂತರ್ಪಣೆ. ರಾತ್ರಿ 7.00: ಧ್ವಜಾರೋಹಣ, ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ, ಅನ್ನಸಂತರ್ಪಣೆ

ದಿನಾಂಕ: 04.04.2026 ಶನಿವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ರಾತ್ರಿ 7.00: ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ.

ದಿನಾಂಕ: 05.04.2026 ಆದಿತ್ಯವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 7.00: ಮಹಾಪೂಜೆ, ಭೂತಬಲಿ ಪ್ರಸಾದವಿತರಣೆ ಅನ್ನಸಂತರ್ಪಣೆ. ರಾತ್ರಿ 8.30: ಅರಸು ಉಳ್ಳಾಯ ಮಹಿಷಂತಾಯ ಮತ್ತು ರಕ್ತೇಶ್ವರೀ ದೈವಗಳ ನರ್ತನೋತ್ಸವ

ದಿನಾಂಕ: 06.04.2026 ಸೋಮವಾರ

ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 6.00: ಉಗ್ರಾಣ ಮುಹೂರ್ತ, ಬಲಿ ಹೊರಟು ಉತ್ಸವ, ವಸಂತ ಕಟ್ಟೆಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ. ರಾತ್ರಿ 9.00: ಚಾಮುಂಡಿ, ಧೂಮಾವತಿ, ಬಂಟ ಮತ್ತು ಕೊಡಮಣಿತ್ತಾಯ ದೈವಗಳ ನರ್ತನೋತ್ಸವ

ದಿನಾಂಕ: 07.04.2026 ಮಂಗಳವಾರ

ಪೂರ್ವಾಹ್ನ 7.00: ಬಲಿಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ ನಿತ್ಯಬಲಿ ಪ್ರಸಾದ ವಿತರಣೆ. ಸಂಜೆ 6.30: ಬಲಿಹೊರಟು ಉತ್ಸವ, ವಸಂತಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ

ದಿನಾಂಕ: 08.04.2026 ಬುಧವಾರ

ಪೂರ್ವಾಹ್ನ 7.00: ಬಲಿಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 4.30: ಬಲಿ ಹೊರಟು ಉತ್ಸವ, ಅಲಂಕಾರು ಪೇಟೆ ಸವಾರಿ ಆಲಂಕಾರು ಸಾರ್ವಜನಿಕ ಕಟ್ಟೆಪೂಜೆ ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ. ರಾತ್ರಿ 7.00: ತುಳು ಹಾಸ್ಯಮಯ ನಾಟಕ "ಎಲ್ಲೆ ದಾದ ಏರೆಗ್ ಗೊತ್ತು"

ದಿನಾಂಕ: 09.04.2026 ಗುರುವಾರ

ಪೂರ್ವಾಹ್ನ 7.00: ಬಲಿ ಹೊರಟು ಉತ್ಸವ. ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಸಾಯಂಕಾಲ 6.30: ಬಲಿಹೊರಟು ಉತ್ಸವ, ವಸಂತಕಟ್ಟೆಪೂಜೆ, ಮಹಾಪೂಜೆ, ಭೂತಬಲಿ, ಪ್ರಸಾದ ವಿತರಣೆ

ದಿನಾಂಕ: 10.04.2026 ಶುಕ್ರವಾರ

ಪೂರ್ವಾಹ್ನ 830: ಬಲಿಹೊರಟು ಉತ್ಸವ, ದರ್ಶನಬಲಿ, ಬಟ್ಟಲು ಕಾಣಿಕೆ, ಮಹಾಪೂಜೆ, ನಿತ್ಯಬಲಿ, ಪ್ರಸಾದ ವಿತರಣೆ. ಮಧ್ಯಾಹ್ನ 1.00: ಮಹಾಅನ್ನಸಂತರ್ಪಣೆ. ಸಾಯಂಕಾಲ 6.30: ಸವಾರಿ ಮಂಟಪ ಕಟ್ಟೆಪೂಜೆಗಳು, ಕೆರೆಉತ್ಸವ, ಉತ್ಸವ, ವಸಂತಕಟ್ಟೆ ಪೂಜೆ, ಮಹಾಪೂಜೆ, ಭೂತಬಲಿ ಪ್ರಸಾದ ವಿತರಣೆ

ದಿನಾಂಕ: 11.04.2026 ಶನಿವಾರ

ಪೂರ್ವಾಹ್ನ 6.00: ಬಲಿಹೊರಟು ಉತ್ಸವ. ಪೂರ್ವಾಹ್ನ 10.00: ನಾಗಬನದಲ್ಲಿ ಆಶ್ಲೇಷಬಲಿ. ಮಧ್ಯಾಹ್ನ 12.00: ಮಹಾಪೂಜೆ, ನಿತ್ಯಬಲಿ, ಪ್ರಸಾದವಿತರಣೆ, ಅನ್ನಸಂತರ್ಪಣೆ. ರಾತ್ರಿ 9.00: ಶ್ರೀ ಮಹಾರಥೋತ್ಸವ, ವಸಂತಕಟ್ಟೆಪೂಜೆ, ಮಹಾಪೂಜೆ, ಶ್ರೀ ಭೂತ ಬಲಿ, ಕವಾಟಬಂಧನ

ದಿನಾಂಕ: 12.04.2026 ಆದಿತ್ಯವಾರ

ಪೂರ್ವಾಹ್ನ 8.00: ಕವಾಟೋದ್ಘಾಟನೆ, ಪ್ರಸನ್ನಪೂಜೆ, ಶಯನ ಪ್ರಸಾದ ವಿತರಣೆ. ಪೂರ್ವಾಹ್ನ 10:00: ಯಾತ್ರಾಹೋಮ. ಮಧ್ಯಾಹ್ನ 12.00: ಮಹಾಪೂಜೆ, ಪ್ರಸಾದ ವಿತರಣೆ. ಸಂಜೆ 5.00: ಅವಭೃತ ಮೆರವಣಿಗೆ, ಕಟ್ಟೆಪೂಜೆಗಳು, ಶಾಂತಿಮೊಗರು ಕುಮಾರಧಾರೆಯಲ್ಲಿ ಅವಭೃತ ಧ್ವಜಾವರೋಹಣ ಮಹಾಪೂಜೆ, ಪ್ರಸಾದ ವಿತರಣೆ

ದಿನಾಂಕ: 13.04.2026 ಸೋಮವಾರ

ಪೂರ್ವಾಹ್ನ 9.00: ಭದ್ರಕಾಳಿ ಅಮ್ಮನವರ ಗುಡಿಯಲ್ಲಿ ವಿಶೇಷಪೂಜೆ–ಶಿರಾಡಿ ಮತ್ತು ಗುಳಿಗ ದೈವಗಳ ನೇಮ.

ಸಭಾ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 25.03.2026 ಬುಧವಾರ

ಬೆಳಿಗ್ಗೆ 9.00: ಹಸಿರುವಾಣಿ ಉದ್ಘಾಟನೆ ಮತ್ತು ಮೆರವಣಿಗೆ–ಆಲಂಕಾರು ಪೇಟೆ ಸ್ವಾಗತ ಗೋಪುರದಿಂದ. ಉದ್ಘಾಟನೆ: ಶ್ರೀ ಹರೀಶ ಅರಿಕೋಡಿ ಧರ್ಮದರ್ಶಿಗಳು, ಶ್ರೀ ಚಾಮುಂಡೇಶ್ವರೀ ಕ್ಷೇತ್ರ ಅರಿಕೋಡಿ, ಬೆಳಾಲು–ಬೆಳ್ತಂಗಡಿ. ಬೆಳಿಗ್ಗೆ 10.00: ಮಹಾದ್ವಾರ ಉದ್ಘಾಟನೆ– ವೇದಮೂರ್ತಿ ಶ್ರೀ ಕುಡುಪು ನರಸಿಂಹ ತಂತ್ರಿಗಳು. ಬೆಳಿಗ್ಗೆ 10.30: ರಾಜಗೋಪುರ ಉದ್ಘಾಟನೆ– ಡಾ. ಕೂಳೂರು ಕನ್ಯಾನ ಸದಾಶಿವ ಶೆಟ್ಟಿ ಆಡಳಿತ ನಿರ್ದೇಶಕರು, ಹೇರಂಭ ಇಂಡಸ್ಟ್ರೀಸ್ ಲಿ. ಮುಂಬಯಿ. ಬೆಳಿಗ್ಗೆ 10.45: ಕಾರ್ಯಾಲಯ ಉದ್ಘಾಟನೆ– ಶ್ರೀ ಯಸ್. ಅಂಗಾರ ಮಾಜಿ ಸಚಿವರು, ಕರ್ನಾಟಕ ಸರಕಾರ. ಭದ್ರತಾ ಕೊಠಡಿ ಉದ್ಘಾಟನೆ: ಡಾ. ಮಮತಾ ಪಿ. ಶೆಟ್ಟಿ ಆಡಳಿತ ಪಾಲುದಾರರು, ಅಭಿಮತ ಟಿ.ವಿ. ಮಂಗಳೂರು. ಬೆಳಿಗ್ಗೆ 11.30: ಉಗ್ರಾಣ ಮುಹೂರ್ತ– ಶ್ರೀ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಶ್ರೀಧಾಮ ಮಾಣಿಲ. ಮಧ್ಯಾಹ್ನ 12.30: ಸಭಾ ಕಾರ್ಯಕ್ರಮ. ಆಶೀರ್ವಚನ: ಶ್ರೀ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಶ್ರೀಧಾಮ ಮಾಣಿಲ. ಸಭಾಧ್ಯಕ್ಷತೆ: ಶ್ರೀ ಕೆ. ಸುಬ್ರಹ್ಮಣ್ಯ ರಾವ್ ನಗ್ರಿ ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ವೇದಮೂರ್ತಿ ಶ್ರೀ ಕುಡುಪು ನರಸಿಂಹ ತಂತ್ರಿಗಳು. ಬೆಳಿಗ್ಗೆ 10.00 ರಿಂದ ರಾತ್ರಿ 10.30: ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 26.03.2026 ಗುರುವಾರ

ಬೆಳಿಗ್ಗೆ 11.00ರಿಂದ ಸಂಜೆ 6.00: ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ ಗಂಟೆ 6.00–8.00: ಸಭಾ ಕಾರ್ಯಕ್ರಮ. ಆಶೀರ್ವಚನ: ಪರಮಪೂಜ್ಯ ಶ್ರೀ ಶ್ರೀ ಡಾ। ಧರ್ಮಪಾಲನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠ, ಕಾವೂರು, ಮಂಗಳೂರು. ಸಭಾಧ್ಯಕ್ಷತೆ: ಶ್ರೀ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಶ್ರೀ ಅರುಣ್ ಕುಮಾರ್ ಪುತ್ತಿಲ, ಧಾರ್ಮಿಕ ಮುಖಂಡರು. ಧಾರ್ಮಿಕ ಉಪನ್ಯಾಸ: ವಿದ್ವಾನ್ ಶ್ರೀ ಪಂಜ ಭಾಸ್ಕರ ಭಟ್. ವಿಷಯ: "ಬ್ರಹ್ಮಕಲಶೋತ್ಸವ–ಧಾರ್ಮಿಕ ವಿಧಿ ವಿಧಾನ". ರಾತ್ರಿ ಗಂಟೆ 8.00: "ಕಲಾ ಸಂಗಮದ 'ಶಿವದೂತೆ ಗುಳಿಗೆ' ನಾಟಕ ತಂಡದಿಂದ ಛತ್ರಪತಿ ಶಿವಾಜಿ

ದಿನಾಂಕ: 27.03.2026 ಶುಕ್ರವಾರ

ಮಧ್ಯಾಹ್ನ 12.00–600: ಸಂಗೀತ ಕಾರ್ಯಕ್ರಮ. ಸಂಜೆ ಗಂಟೆ 6.00–8.00: ಸಭಾ ಕಾರ್ಯಕ್ರಮ. ಆಶೀರ್ವಚನ: ಶ್ರೀ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠ, ಸುಬ್ರಹ್ಮಣ್ಯ. ಅಧ್ಯಕ್ಷತೆ: ಡಾ. ಹೇಮಂತ ರೈ ಮನವಳಿಕೆಗುತ್ತು ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಶ್ರೀ ಶಶಿಕಿರಣ್ ಶೆಟ್ಟಿ ಸ್ಥಾಪಕಾಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು, ಆಲ್ ಕಾರ್ಗೋ ಲಾಜಿಸ್ಟಿಕ್ಸ್ ಮುಂಬಯಿ. ಧಾರ್ಮಿಕ ಉಪನ್ಯಾಸ: ಡಾ. ಯಂ. ಪ್ರಭಾಕರ ಜೋಷಿ ಮಂಗಳೂರು. ರಾತ್ರಿ ಗಂಟೆ 8.00: ನೃತ್ಯ ನಿನಾದ ಕಡಬ, ಅಲಂಕಾರು ಇವರಿಂದ–"ನೃತ್ಯ ಕುಸುಮಾಂಜಲಿ" ನೃತ್ಯ ಪ್ರಸ್ತುತಿ

ದಿನಾಂಕ: 28.03.2026 ಶನಿವಾರ

ಪೂರ್ವಾಹ್ನ 11.00 ರಿಂದ ಸಂಜೆ 6.00: ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಜೆ 6.00–8.00: ಸಭಾ ಕಾರ್ಯಕ್ರಮ. ಆಶೀರ್ವಚನ: ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನಮ್ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ಶ್ರೀಮದ್ ಎಡನೀರು ಮಠ. ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಶ್ರೀ ಗುರುದೇವದತ್ತ ಸಂಸ್ಥಾನಮ್, ಶ್ರೀ ಕ್ಷೇತ್ರ ಒಡಿಯೂರು. ಅಧ್ಯಕ್ಷತೆ: ಶ್ರೀ ಸುಬ್ರಹ್ಮಣ್ಯ ರಾವ್ ನಗ್ರಿ ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಶ್ರೀ ರಾಜೇಶ್ ರೈ ಕಲ್ಲಂಗಳ ಗೌರವಾನ್ವಿತ ಮಾನ್ಯ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು. ಧಾರ್ಮಿಕ ಉಪನ್ಯಾಸ: ಡಾ. ಪ್ರಸಾದ್ ಮುನಿಯಂಗಳ ಖ್ಯಾತ ವಾಸ್ತುಶಿಲ್ಪಿಗಳು. ರಾತ್ರಿ 8.00: ತ್ರಿನೇತ್ರ ಕಲಾವಿದರು ಕುಡ್ಲ ಇವರಿಂದ "ಪೌರಾಣಿಕ ನಾಟಕ" ಕ್ಷುದ್ರಶಕ್ತಿಯೊಂದರ ಭಯಾನಕ ಕಥೆ

ದಿನಾಂಕ: 29.03.2026 ಆದಿತ್ಯವಾರ

ಪೂರ್ವಾಹ್ನ 10.00–2.00: ಯಕ್ಷಗಾನ ತಾಳಮದ್ದಳೆ "ದಕ್ಷಾಧ್ವರ". ಸಂಜೆ 2.00–4.00: ಯಕ್ಷಗಾನ ತಾಳಮದ್ದಳೆ "ಸಮರ ಸೌಗಂಧಿಕಾ". ಸಂಜೆ 4.00–5.30: ಸಾಮೂಹಿಕ ಕುಂಕುಮಾರ್ಚನೆ. ಸಂಜೆ 6.00–8.00: ಸಭಾ ಕಾರ್ಯಕ್ರಮ. ಆಶೀರ್ವಚನ: ಪರಮಪೂಜ್ಯ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ, ಪಡುಕುತ್ಯಾರು, ಉಡುಪಿ. ಶ್ರೀ ಶ್ರೀ ಡಾ॥ ವಿದ್ಯಾವಾಚಸ್ಪತಿ ವಿಶ್ವಸಂತೋಷ ಭಾರತಿ ಶ್ರೀಪಾದರು ಶ್ರೀ ಬಾರ್ಕೂರು ಮಹಾಸಂಸ್ಥಾನ (ಭಾರ್ಗವ ಬೀಡು ಬಾರ್ಕೂರು). ಅಧ್ಯಕ್ಷತೆ: ಕುಮಾರಿ ಭಾಗೀರಥಿ ಮುರುಳ್ಯ ಮಾನ್ಯ ಶಾಸಕರು, ಸುಳ್ಯ ವಿಧಾನಸಭಾ ಕ್ಷೇತ್ರ. ದೀಪ ಪ್ರಜ್ವಲನೆ: ಶ್ರೀಮತಿ ಮಲ್ಲಿಕಾ ಪಿ. ಪಕ್ಕಳ, ಮಲಾರುಬೀಡು ಸದಸ್ಯರು, ರಾಜ್ಯ ಧಾರ್ಮಿಕ ಪರಿಷತ್, ಕರ್ನಾಟಕ ಸರ್ಕಾರ. ಧಾರ್ಮಿಕ ಉಪನ್ಯಾಸ: ಶ್ರೀ ವೇದಮೂರ್ತಿ ಅನಂತನಾರಾಯಣ ಭಟ್ ಪರಕ್ಕಜೆ. ರಾತ್ರಿ 8.00: ನೃತ್ಯ ಸಂಭ್ರಮ

ದಿನಾಂಕ: 30.03.2026 ಸೋಮವಾರ

ಮಧ್ಯಾಹ್ನ 12.00 ರಿಂದ 4.00: ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 4.00–5.30: ಸಾಮೂಹಿಕ ಕುಂಕುಮಾರ್ಚನೆ. ಸಂಜೆ 6.00: ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಕೃಪಾಪೋಷಿತ ಯಕ್ಷಗಾನ ಮಂಡಳಿ, ನಾಗವೃಜ ಕ್ಷೇತ್ರ ಪಾವಂಜೆ ಇವರಿಂದ ಯಕ್ಷಗಾನ ಬಯಲಾಟ "ಶ್ರೀ ದೇವಿ ಮಹಾತ್ಮೆ"

ದಿನಾಂಕ: 31.03.2026 ಮಂಗಳವಾರ

ಪೂರ್ವಾಹ್ನ 10.00 ರಿಂದ 4.00: ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 4.00–5.30: ಸಾಮೂಹಿಕ ಕುಂಕುಮಾರ್ಚನೆ. ಸಂಜೆ 6.00–8.00: ಸಭಾ ಕಾರ್ಯಕ್ರಮ. ಆಶೀರ್ವಚನ: ಅನಂತ ಶ್ರೀ ವಿಭೂಷಿತ ಶ್ರೋತ್ರಿಯ ಬ್ರಹ್ಮನಿಷ್ಠ ಮಹಾಮಂಡಲೇಶ್ವರ 1008 ಶ್ರೀಸ್ವಾಮಿ ಸದ್ಗುರು ಬ್ರಹ್ಮಾನಂದ ಸರಸ್ವತಿ ಜೀ ಮಹಾರಾಜ್ ಶ್ರೀ ಪಂಚದಶನಾಮ ಜುನಾ ಅಖಾಡ ಮಠಾಧೀಶರು, ಶ್ರೀ ರಾಮ ಕ್ಷೇತ್ರ ಮಹಾಸಂಸ್ಥಾನಮ್, ಕನ್ಯಾಡಿ–ಧರ್ಮಸ್ಥಳ. ಅಧ್ಯಕ್ಷತೆ: ಶ್ರೀ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಶ್ರೀ ಪ್ರಭಾಕರ ಭಟ್ ಕಲ್ಲಡ್ಕ ಅಧ್ಯಕ್ಷರು, ಶ್ರೀ ವಿವೇಕಾನಂದ ವಿದ್ಯಾವರ್ಧಕ ಸಂಘ, ಪುತ್ತೂರು. ಧಾರ್ಮಿಕ ಉಪನ್ಯಾಸ: ಶ್ರೀ ರೋಹಿತ್ ಚಕ್ರತೀರ್ಥ. ರಾತ್ರಿ 8.00: ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ "ಭಕ್ತಿ ರಸಮಂಜರಿ"

ದಿನಾಂಕ: 01.04.2026 ಬುಧವಾರ

ಪೂರ್ವಾಹ್ನ 10.00–11.30: "ಶ್ರೀ ನಾರಾಯಣೀಯಂ ಪಾರಾಯಣ". ಮಧ್ಯಾಹ್ನ 12.00–2.00: ಸಭಾ ಕಾರ್ಯಕ್ರಮ. ಆಶೀರ್ವಚನ: ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಂ, ಪೇಜಾವರ ಅಧೋಕ್ಷಜ ತೀರ್ಥಮಠ, ಉಡುಪಿ ಶ್ರೀ ಶ್ರೀ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದಂಗಳವರು ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನಂ, ಕಾಣಿಯೂರು ಮಠ, ಉಡುಪಿ. ಸಭಾಧ್ಯಕ್ಷತೆ: ಡಾ. ಹೇಮಂತ ರೈ ಮನವಳಿಕೆಗುತ್ತು ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಶ್ರೀ ಯನ್. ಹರೀಶ ಆಚಾರ್ಯ ನಗ್ರಿಗುತ್ತು ಪವಿತ್ರಪಾಣಿಗಳು, ಶ್ರೀ ಕ್ಷೇತ್ರ ಶರವೂರು. ಪುಷ್ಪರಥ ಹಾಗೂ ಪಲ್ಲಕ್ಕಿ ಸಮರ್ಪಣೆ. ಡಾ. ಯಂ. ವೀರಪ್ಪ ಮೊೈಲಿ ಮಾಜಿ ಮುಖ್ಯ ಮಂತ್ರಿಗಳು, ಕರ್ನಾಟಕ ಸರಕಾರ. ಅಪರಾಹ್ನ 2.00ರಿಂದ ಸಾಯಂಕಾಲ 5.30: ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು. ಸಂಜೆ 6.00–8.00: ಸಭಾ ಕಾರ್ಯಕ್ರಮ. ಅಧ್ಯಕ್ಷತೆ: ಶ್ರೀ ಜಿ. ಭೀಮೇಶ್ವರ ಜೋಷಿ ಧರ್ಮಕರ್ತರು, ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಶ್ರೀ ಕ್ಷೇತ್ರ ಹೊರನಾಡು. ದೀಪ ಪ್ರಜ್ವಲನೆ: ಶ್ರೀ ಶಿವಧ್ವಜ್ (ಸಿನಿಮಾ ನಟರು & ನಿರ್ದೇಶಕರು). ಧಾರ್ಮಿಕ ಉಪನ್ಯಾಸ: ಡಾ. ಶ್ರೀಶ ಕುಮಾರ್ ಎಂ. ಕೆ. ರಾತ್ರಿ 8.00: ಕುದ್ರೋಳಿ ಗಣೇಶ್ ಹಾಗೂ ಬಳಗದವರಿಂದ "ವಿಸ್ಮಯ ಜಾದೂ" ಅದ್ಭುತ–ಹಾಸ್ಯಮಯ–ವಿನೂತನ ಮ್ಯಾಜಿಕ್

ದಿನಾಂಕ: 02.04.2026 ಗುರುವಾರ

ಪೂರ್ವಾಹ್ನ 11.30–3.00: ಸಾಂಸ್ಕೃತಿಕ ಕಾರ್ಯಕ್ರಮಗಳು. ಅಪರಾಹ್ನ 3.00–6.00: ಯಕ್ಷ ಗಾನ ವೈಭವ. ಸಂಜೆ 6.00–8.00: ಸಭಾ ಕಾರ್ಯಕ್ರಮ. ಅಧ್ಯಕ್ಷತೆ: ಡಾ. ಕೂಳೂರು ಕನ್ಯಾನ ಸದಾಶಿವ ಶೆಟ್ಟಿ ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಶ್ರೀ ಕ್ಷೇತ್ರ ಶರವೂರು. ದೀಪ ಪ್ರಜ್ವಲನೆ: ಡಾ. ಕೆ. ಪ್ರಕಾಶ್ ಶೆಟ್ಟಿ ಛೇರ್‌ಮ್ಯಾನ್ ಅಂಡ್ ಮೇನೆಜಿಂಗ್ ಡೈರೆಕ್ಟರ್ MRG ಗ್ರೂಪ್. ರಾತ್ರಿ 8.00: "ಭಕ್ತಿ ಸಂಗೀತ ಕಾರ್ಯಕ್ರಮ"

ಪ್ರತಿನಿತ್ಯ ಬೆಳಿಗ್ಗೆ ಭಜನಾ ಕಾರ್ಯಕ್ರಮ ನಡೆಯಲಿದೆ

ಕಾರ್ಯಕ್ರಮಕ್ಕೆ ಪ್ರೀತಿಪೂರ್ವಕವಾಗಿ ಆಮಂತ್ರಿಸುವ

ಡಾ. ಕೂಳೂರು ಕನ್ಯಾನ ಸದಾಶಿವ ಶೆಟ್ಟಿ
ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ

ಕೆ. ಸುಬ್ರಹ್ಮಣ್ಯ ರಾವ್ ನಗ್ರಿ
ಅಧ್ಯಕ್ಷರು ಮತ್ತು ಸದಸ್ಯರು, ವ್ಯವಸ್ಥಾಪನಾ ಸಮಿತಿ

ಯನ್. ಹರೀಶ್ ಆಚಾರ್ಯ ನಗ್ರಿಗುತ್ತು
ಪವಿತ್ರಪಾಣಿ ಅರ್ಚಕರು

ಯಂ. ಗೋಪಾಲಕೃಷ್ಣ ಪಡ್ಡಿಲ್ಲಾಯ
ಅಧ್ಯಕ್ಷರು ಮತ್ತು ಸದಸ್ಯರು, ಬ್ರಹ್ಮಕಲಶೋತ್ಸವ ಸಮಿತಿ

ಡಾ. ಹೇಮಂತ ರೈ ಮನವಳಿಕೆಗುತ್ತು
ಅಧ್ಯಕ್ಷರು ಮತ್ತು ಸದಸ್ಯರು, ಜೀರ್ಣೋದ್ಧಾರ/ಅಭಿವೃದ್ಧಿ ಸಮಿತಿ

ಸಿಬ್ಬಂದಿ ವರ್ಗ ಮತ್ತು ಸೀಮೆಯ ಹತ್ತು ಸಮಸ್ತರು

ದ.ಕ. ಜಿಲ್ಲೆಯ ಆಯಾ ತಾಲೂಕುಗಳಲ್ಲಿಯೇ ನಡೆಯಲಿದೆ ಈ ಕಾರ್ಯ | ದಾಖಲೆ ಒದಗಿಸಲು ಸೂಚನೆ
ಸಂದೇಹಾಸ್ಪದ ಪಿಂಚಣಿ ಪಟ್ಟಿ ಪರಿಶೀಲನೆ ಕಾರ್ಯ ಚುರುಕು

■ ಮಿಥುನ್ ಕರ್ಲಪ್ಪಾಡಿ

ಸಾಂದರ್ಭಿಕ ಚಿತ್ರ



ಸುಳ್ಯ: ರಾಜ್ಯ ಸರಕಾರ ಈ ಹಿಂದೆ ಅನಧಿಕೃತ ಬಿಪಿಎಲ್ ಪಡಿತರ ಚೀಟಿ ಹಾಗೂ ನಕಲು ಪಡಿತರ ಚೀಟಿಗಳ ತಪಾಸಣೆ ಕೈಗೊಂಡು ಹಲವಾರು ಪಡಿತರ ಚೀಟಿಗಳನ್ನು ಎಪಿಎಲ್ ಆಗಿ ಪರಿವರ್ತನೆ ನಡೆಸಿದ್ದು ಇದೀಗ ಸಾಮಾಜಿಕ ಭದ್ರತಾ ಪಿಂಚಣಿಗಳ ಮೇಲೆ ಕಣ್ಣಿಟ್ಟಿದ್ದು ಸಂದೇಹಾಸ್ಪದ ಪಿಂಚಣಿಗಳ ಪಟ್ಟಿಯನ್ನು ಆಯಾ ತಾಲೂಕು ಕೇಂದ್ರಗಳಿಗೆ ಕಳುಹಿಸಿದ್ದು, ಅದರಂತೆ ದ.ಕ. ಜಿಲ್ಲೆಯ ಆಯಾ ತಾಲೂಕುಗಳಲ್ಲಿ ಪರಿಶೀಲನೆ ಪ್ರಕ್ರಿಯೆ ಆರಂಭಿಸಲಾಗಿದೆ.

ಸಾಮಾಜಿಕ ಭದ್ರತೆ ಯೋಜನೆ

ರಾಜ್ಯ ಸರಕಾರದ ಆದೇಶದ ಅನ್ವಯ ವಾರ್ಷಿಕ ಆದಾಯ ಮಿತಿ ರೂ.32 ಸಾವಿರ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ಈ ಹಿಂದೆ ಪಿಂಚಣಿಗಳನ್ನು ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ಸಾಮಾಜಿಕ ಭದ್ರತೆ ಯೋಜನೆ ಅಡಿಯಲ್ಲಿ ನೀಡಲಾಗುತ್ತಿದ್ದು ಆದರೆ ಇದೀಗ ರಾಜ್ಯದಲ್ಲಿ ಪಿಂಚಣಿಯಲ್ಲಿ ಸಂದೇಹಾಸ್ಪದ ಕಂಡು ಬಂದ ಹಿನ್ನೆಲೆಯಲ್ಲಿ ಪರಿಶೀಲನೆಗೆ ಮುಂದಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಲಾನುಭವಿಗಳ ಪರಿಶೀಲನೆ ಪ್ರಕ್ರಿಯೆ ಇದೀಗ ಆರಂಭಿಸಲಾಗಿದೆ.

ಆಡಳಿತಾಧಿಕಾರಿಗಳ ಮೂಲಕ ಪ್ರಕ್ರಿಯೆ

ಈ ಹಿಂದೆ ಬಿಪಿಎಲ್ ಮತ್ತು ವಾರ್ಷಿಕ ಆದಾಯ ರೂ.32 ಸಾವಿರಕ್ಕಿಂತ ಕಡಿಮೆ ಇರುವ ಅರ್ಹ ಫಲಾನುಭವಿಗಳಿಗೆ ವಿಧವಾವೇತನ, ವೃದ್ಧಾಪ್ಯ, ಸಂಧ್ಯಾ ಸುರಕ್ಷ, ವಿಕಲ ಚೇತನ, ಇಂದಿರಾ ಗಾಂಧಿ ಪಿಂಚಣಿ ಹಾಗೂ ಆ್ಯಸಿಡ್ ದಾಳಿಗೊಳಗಾದವರಿಗೆ ಪಿಂಚಣಿ ಸೇರಿದಂತೆ ಸಾಮಾಜಿಕ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಪಿಂಚಣಿಗಳನ್ನು ರಾಜ್ಯ ಸರಕಾರ ನೀಡುತ್ತಿದ್ದು ಇದೀಗ ರಾಜ್ಯಾದ್ಯಂತ ಪರಿಷ್ಕರಣೆ ಆರಂಭಗೊಂಡಿದ್ದು ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಂಶಯ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಅವುಗಳನ್ನು ಒಳಗೊಂಡಂತೆ ಸುಳ್ಯ ತಾಲೂಕಿನ 34 ಗ್ರಾಮಗಳಲ್ಲಿ ಒಟ್ಟಾರೆಯಾಗಿ 8992 ಪಿಂಚಣಿದಾರರ ಪೈಕಿ 2643 ಪಿಂಚಣಿದಾರರ ಬಗ್ಗೆ ಸರಕಾರ ಸ್ಥಳ ಹಾಗೂ ಇತರ ಮಾಹಿತಿಗಳನ್ನು ಒಳಗೊಂಡು ಛಾಯಾಚಿತ್ರ ಸಹಿತವಾಗಿ ಸರಕಾರಿ ಆ್ಯಪ್ ಮೂಲಕ ಮಾಹಿತಿ ನೀಡಲು ಸೂಚಿಸಲಾಗಿದೆ.

ತಾಲೂಕುವಾರು ಮಾಹಿತಿ

ಬಂಟ್ವಾಳ 12,276, ಬೆಳ್ತಂಗಡಿ 9411, ಕಡಬ 3162, ಮಂಗಳೂರು 16510, ಮೂಡುಬಿದ್ರೆ 3323, ಮೂಲ್ಕಿ 3071, ಪುತ್ತೂರು 5358 ಹಾಗೂ ಸುಳ್ಯ 2643 ಒಟ್ಟಾರೆಯಾಗಿ ಜಿಲ್ಲೆಯಲ್ಲಿ 64,239 ಪಿಂಚಣಿದಾರರ ಪೈಕಿ 55,754 ಕುರಿತಾಗಿ ಪರಿಶೀಲನೆ ನಡೆಸಲಾಗುತ್ತಿದೆ.

ಪರಿಷ್ಕರಣೆಗೆ ಮಾನದಂಡಗಳು

ಆಯಾ ಗ್ರಾಮಗಳ ಗ್ರಾಮ ಆಡಳಿತಾಧಿಕಾರಿಗಳಿಗೆ ಪಟ್ಟಿಗಳನ್ನು ಕಂದಾಯ ಇಲಾಖೆ ನೀಡಿದ್ದು, ಮಾನದಂಡಗಳಂತೆ ಖುದ್ದು ಸ್ಥಳ ಭೇಟಿ ನಡೆಸಿ ದಾಖಲೆಗಳನ್ನು ಸಂಗ್ರಹಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ಸೂಚಿಸಿದೆ. ಪಿಂಚಣಿ ಪಡೆಯುವವರ ಪೈಕಿ ರೂ.32 ಸಾವಿರಕ್ಕಿಂತ ಅಧಿಕ ವಾರ್ಷಿಕ ಆದಾಯ, ಸರಕಾರಿ ನೌಕರರ ಕುಟುಂಬಸ್ಥರು, ಆದಾಯ ತೆರಿಗೆ ಪಾವತಿದಾರರು ಹೀಗೆ ವಿವಿಧ ರೀತಿಗಳಲ್ಲಿ ಸಾಮಾಜಿಕ ಭದ್ರತೆಯಲ್ಲಿ ದೊರೆಯುವ ಪಿಂಚಣಿಗಳನ್ನು ಪರಿಷ್ಕರಣೆ ನಡೆಸಲಾಗುತ್ತಿದೆ.

ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು 105, ಐವರ್ನಾಡು 109, ತೊಡಿಕಾನ 57, ಅಜ್ಜಾವರ 185, ಆಲೆಟ್ಟಿ 177, ಅಮರ ಮುಡ್ನೂರು 66, ಅಮರ ಪಡ್ನೂರು 68, ಅರಂತೋಡು 65, ಬಾಳಿಲ 43,ಬೆಳ್ಳಾರೆ 101, ಜಾಲ್ಸೂರು 131, ಕಳಂಜ 54, ಕನಕಮಜಲು 40, ಕೊಡಿಯಾಲ 47, ಮಡಪ್ಪಾಡಿ 25, ಮಂಡೆಕೋಲು 120, ಮರ್ಕಂಜ 109, ಮುಪ್ಪೇರಿಯ 36, ನೆಲ್ಲೂರು ಕೆಮ್ರಾಜೆ 77, ಸುಳ್ಯ 341, ಪೆರುವಾಜೆ 63 ಹಾಗೂ ಸಂಪಾಜೆ 132 ಹಾಗೂ ಪಂಜ ಹೋಬಳಿ ಗ್ರಾಮಗಳಾದ ಐವತ್ತೊಕ್ಲು 84, ಬಾಳುಗೋಡು 13, ದೇವಚಳ್ಳ 73, ಗುತ್ತಿಗಾರು 56, ಹರಿಹರ ಪಲ್ಲತ್ತಡ್ಕ 22, ಕಲ್ಮಡ್ಕ 46, ಕಲ್ಮಕಾರು 23, ಕೊಲ್ಲಮೊಗ್ರು 41, ಕುತ್ಕುಂಜ 34, ಮುರುಳ್ಯ 43, ನಾಲ್ಕೂರು 35 ಹಾಗೂ ಪಂಬೆತ್ತಾಡಿ 22 ಹೀಗೆ ಒಟ್ಟಾರೆಯಾಗಿ 2643 ಪಿಂಚಣಿದಾರರ ಕುರಿತ ಪಟ್ಟಿಯನ್ನು ಆಯಾ ತಾಲೂಕು ಕಚೇರಿಗಳ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಕಚೇರಿಗಳಿಗೆ ಪಟ್ಟಿಯನ್ನು ರಾಜ್ಯ ಸರಕಾರ ನೀಡಿದ್ದು ಇದೀಗ ಇವುಗಳ ಪರಿಷ್ಕರಣೆ ಪ್ರಕ್ರಿಯೆ ಪ್ರಾರಂಭಗೊಂಡಿದೆ.

ಸುತ್ತಮುತ್ತ

ಖಾಸಗಿ ಬಸ್‌ಗಳ ಟ್ರಿಪ್ ಕಡಿತದಿಂದ ಜನರಿಗೆ ಸಮಸ್ಯೆ: ಶಾಸಕ ಕಾಮತ್

ಮಂಗಳೂರು: ಮಂಗಳೂರು ನಗರ ವ್ಯಾಪ್ತಿಯಲ್ಲಿ ಅನೇಕ ಸಿಟಿ ಬಸ್‌ಗಳು ನಿಗದಿತ ಸ್ಥಳಕ್ಕೆ ಹೋಗದಿರುವುದರಿಂದ ಸಾರ್ವಜನಿಕರು ತೀವ್ರ ಸಮಸ್ಯೆ ಅನುಭವಿಸುತ್ತಿದ್ದು ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕೆಂದು ಅಧಿವೇಶನದಲ್ಲಿ ಶಾಸಕ ವೇದವ್ಯಾಸ ಕಾಮತ್ ಅವರು ಆಗ್ರಹಿಸಿದರು. ನಗರದ ಕೆಲವು ಸಿಟಿ ಬಸ್‌ಗಳು ಆರ್ಥಿಕ ಕಾರಣ ನೀಡಿ ಒಂದಷ್ಟು ಪ್ರದೇಶಗಳಿಗೆ ಸೇವೆಯನ್ನು ಸೀಮಿತಗೊಳಿಸುವುದು, ಟ್ರಿಪ್ ಕಡಿತಗೊಳಿಸುವುದು ಮೊದಲಾದ ಕಾರಣಗಳಿಗೆ ಅಲ್ಲಿ ಸರ್ಕಾರಿ ಬಸ್‌ಗಳನ್ನು ಹಾಕಲಾಗಿತ್ತು. ಆದರೆ ನಂತರ ಅವುಗಳನ್ನೂ ಸ್ಥಗಿತಗೊಳಿಸಲಾಗಿದೆ. ಇದರಿಂದಾಗಿ ಶಕ್ತಿನಗರ, ಬಜಾಲ್-ಪಡ್ಪು-ಕೊಟ್ಟಾರ, ಪಡೀಲ್-ಕಣ್ಣಗುಡ್ಡೆ, ಬೋಳೂರು ಮಾತಾ ಅಮೃತಾನಂದಮಯಿನಿಂದ ರೈಲ್ವೆ ಸ್ಟೇಷನ್, ಜಲ್ಲಿಗುಡ್ಡೆ, ಸರಿಪಲ್ಲ ಮೊದಲಾದ ಭಾಗದ ಜನರು ಸೂಕ್ತ ಸಾರಿಗೆ ವ್ಯವಸ್ಥೆಯಿಲ್ಲದೇ ಪರಿತಪಿಸುವಂತಾಗಿದೆ ಎಂದರು. ಈ ಬಗ್ಗೆ ದ.ಕ ಬಸ್ ಮಾಲಕರ ಸಂಘ, ಆರ್.ಟಿ.ಒ, ಪೊಲೀಸ್ ಇಲಾಖೆ, ಜಿಲ್ಲಾಧಿಕಾರಿ, ಕೊನೆಗೆ ಉಸ್ತುವಾರಿ ಸಚಿವರಿದ್ದ ಕೆಡಿಪಿ ಸಭೆ ಹೀಗೆ ಎಲ್ಲರ ಗಮನಕ್ಕೂ ತಂದಾಗ ಒಂದೆರಡು ದಿನ ಸಮಸ್ಯೆ ಬಗೆಹರಿದಂತೆ ಕಂಡರೂ ಅಂತಿಮ ಫಲಿತಾಂಶ ಮಾತ್ರ ಶೂನ್ಯ. ಹೀಗಾಗಿ ಅಧಿವೇಶನದಲ್ಲಿಯೇ ಪ್ರಸ್ತಾಪಿಸುತ್ತಿದ್ದು ದಯವಿಟ್ಟು ಸಾರ್ವಜನಿಕರ ಸಮಸ್ಯೆಗೆ ಮುಕ್ತಿ ನೀಡಿ ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.




ಮಾ. 26ರಿಂದ ಏ.2ರ ವರೆಗೆ ಎಡಪದವು ಹನುಮೋತ್ಸವ

ಕುಪ್ಪೆಪದವು: ಎಡಪದವು ಶ್ರೀ ಹನುಮಾನ್ ಮಂದಿರದಲ್ಲಿ ಶ್ರೀ ಹನುಮಾನ್ ದೇವರ 5ನೇ ವರ್ಷದ ಪ್ರತಿಷ್ಠಾ ವರ್ಧಂತಿ ಹಾಗೂ ಹನುಮಜ್ಜಯಂತಿ ಪ್ರಯುಕ್ತ ಎಡಪದವು ವೇದಮೂರ್ತಿ ಶ್ರೀ ವೆಂಕಟೇಶ್ ತಂತ್ರಿಗಳ ಮಾರ್ಗದರ್ಶನದಲ್ಲಿ ವೇದಮೂರ್ತಿ ಪಲ್ಲೆ ಶ್ರೀ ರತೀಶ್ ಭಟ್ ಇವರ ನೇತೃತ್ವದಲ್ಲಿ ಮಾ.26ರಿಂದ ಏ.2ರವರೆಗೆ ಎಡಪದವು ಹನುಮೋತ್ಸವ ಜರಗಲಿದೆ. 26ಕ್ಕೆ ಸಂಜೆ 6.30ರಿಂದ 8 ಗಂಟೆಯವರೆಗೆ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ, ಶ್ರೀ ದೇವರಿಗೆ ರಂಗ ಪೂಜೆಯ ಬಳಿಕ ಅನ್ನಸಂತರ್ಪಣೆ ನಡೆಯಲಿದೆ. ಏ.2ಕ್ಕೆ ಬೆಳಗ್ಗೆ 7.30ರಿಂದ ಸ್ವಸ್ತಿವಾಚನ ಗಣಪತಿ ಹೋಮ, ಶ್ರೀ ಹನುಮಾನ್ ದೇವರಿಗೆ ಅಷ್ಟೋತ್ತರ ಶತ ಸಹಸ್ರ ಸೀಯಾಳಾಭಿಷೇಕ ಬಳಿಕ ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ ಬಳಿಕ ಅನ್ನಸಂತರ್ಪಣೆ ನಡೆಯಲಿದೆ. ಬೆಳಗ್ಗೆ 6.30ರಿಂದ ಸಂಜೆ 7.30ರವರೆಗೆ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ. ಸಂಜೆ 7.30ಕ್ಕೆ ರಂಗ ಪೂಜೆ, ಅನ್ನಸಂತರ್ಪಣೆಯ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿಧಾತ್ರಿ ಕಲಾವಿದೆರ್ ಕುಡ್ಲ ಇವರಿಂದ ವಿಜಯಕುಮಾರ್ ಕೋಡಿಯಾಲ್ ಬೈಲ್ ನಿರ್ದೇಶನದ ಜೈ ಹನುಮಾನ್ ಎಂಬ ಪೌರಾಣಿಕ ನಾಟಕ ಪ್ರದರ್ಶನವಾಗಲಿದೆ ಎಂದು ಮಂದಿರದ ಪ್ರಕಟಣೆ ತಿಳಿಸಿದೆ.

ವಿವಿಧೆಡೆ ನಾಳೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಂಗಳೂರು: ಕೃಷ್ಣಾಪುರ ಮತ್ತು ಚೇಳಾರು ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಪೆಡ್ಡಿಯಂಗಡಿ, 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, 4ನೇ ಬ್ಲಾಕ್, 5ನೇ ಬ್ಲಾಕ್, 6ನೇ ಬ್ಲಾಕ್, 7ನೇ ಬ್ಲಾಕ್, 9ನೇ ಬ್ಲಾಕ್, ಆಶ್ರಯ ಕಾಲೊನಿ, ಬಾಳ, ಎಂ.ಆರ್.ಪಿ.ಎಲ್ ಕಾರ್ಗೋ ಗೇಟ್, ಕೈಕಂಬ, ಮಂಗಳಪೇಟೆ, ಮಧ್ಯ ಚೇಳಾರ್, ಚೊಕ್ಕಬೆಟ್ಟು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.26ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.



ಮುಲ್ಕಿ ಪರಿಸರ

ವಿದ್ಯುತ್ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿ ರುವುದರಿಂದ ಮುಲ್ಕಿ, ಬಪ್ಪನಾಡು, ಕೊಳಚಿಕಂಬ್ಳ, ಒಡೆಯರಬೆಟ್ಟು, ಪಡುಬೈಲು, ಪಂಚಮಹಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾ.26ಕ್ಕೆ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಅತ್ತಾವರ ಶ್ರೀ ಅಯ್ಯಪ್ಪಸ್ವಾಮಿ ಕ್ಷೇತ್ರದ ಬ್ರಹ್ಮಕಲಶ: ಆಮಂತ್ರಣ ಪತ್ರಿಕೆ ಬಿಡುಗಡೆ



ಮಂಗಳೂರು: ನೂರಾರು ವರ್ಷಗಳ ಇತಿಹಾಸವುಳ್ಳ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಬ್ರಹ್ಮಕಲಶಾಭಿಷೇಕವು ಏ.19ರಿಂದ ಏ.23ರತನಕ ನಡೆಯಲಿದೆ. ಇದರ ಪ್ರಯುಕ್ತ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮವು ಮಾ.22ರಂದು ಶ್ರೀ ಅಯ್ಯಪ್ಪಸ್ವಾಮಿ ಕ್ಷೇತ್ರದಲ್ಲಿ ನಡೆಯಿತು.

ದ.ಕ. ಜಿಲ್ಲೆಯ ಮೊದಲ ದೇವಸ್ಥಾನ

ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಆಮಂತ್ರಣ ಬಿಡುಗಡೆ ಗೊಳಿಸಿದರು. ದ.ಕ. ಜಿಲ್ಲೆಯ ಮೊದಲ ಅಯ್ಯಪ್ಪ ದೇವಸ್ಥಾನದ ಬ್ರಹ್ಮಕಲಶದಲ್ಲಿ ಪಾಲ್ಗೊಳ್ಳುವ ಸೌಭಾಗ್ಯ ದೊರಕಿರುವುದು ಪುಣ್ಯದ ಫಲ. ಒಂದು ಊರಿನಲ್ಲಿ ಬ್ರಹ್ಮಕಲಶ ನಡೆದರೆ ಆ ಊರಿನ ಉನ್ನತಿಗೆ ಕಾರಣವಾಗುತ್ತದೆ. ಊರಿಗೆ ಸಂಕಷ್ಟ ಬರುವುದಿಲ್ಲ. ಈ ದೇವತಾ ಕಾರ್ಯದಲ್ಲಿ ಊರ ಪರವೂರಿನ ಎಲ್ಲರೂ ಭಾಗವಹಿಸಿ ಸುಸೂತ್ರವಾಗಿ ಬ್ರಹ್ಮಕಲಶ ನಡೆಯುವಂತೆ ಪ್ರಾರ್ಥಿಸುವುದರೊಂದಿಗೆ ಅಳಿಲ ಸೇವೆ ಮೂಲಕ ಭಾಗಿಗಳಾಗೋಣ ಎಂದರು.

ಮುಖ್ಯ ಅತಿಥಿಗಳಾಗಿ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ರತೀಂದ್ರನಾಥ್, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಸೂರಜ್ ರಾಘವನ್, ಕಾರ್ಯಾಧ್ಯಕ್ಷ ಗೋಕುಲದಾಸ್ ಮತ್ತು ಮುರುಳೀಧರ್, ಗೌರವ ಕೋಶಾಧಿಕಾರಿಗಳಾದ ಸಂತೋಷ್ ಶೆಟ್ಟಿ ಸ್ವಾಗತ ಸಮಿತಿಯ ಅಧ್ಯಕ್ಷ ರಾಜಶ್ರೀ ಸುನಿಲ್, ಗೌರವ ಕಾರ್ಯದರ್ಶಿಗಳಾದ ಜನಾರ್ದನ್ ಅತ್ತಾವರ, ಅಯ್ಯಪ್ಪ ದೇವಸ್ಥಾನ ಪಡೀಲ್ ಇದರ ಅಧ್ಯಕ್ಷ ಮೋಹನ್ ಪಡೀಲ್, ಆತ್ರೇಕ್ಷ ಕೋ ಆಪರೇಟಿವ್ ಸೊಸೈಟಿ ಚೇರ್ಮನ್ ಚಿತ್ತರಂಜನ್, ಕರುಣ್ ಇನ್ಫ್ರಾಸ್ಟ್ರಕ್ಚರ್ ಮಾಲಕ ಕರುಣಾಕರ್, ಹಿಮಾಲಯ ರೋಡ್ ಲೈನ್ ಮಂಗಳೂರು ಮಾಲೀಕ ಅಶೋಕ್ ಯೆಯ್ಯಾಡಿ, ಉದ್ಯಮಿ ಸುರೇಶ್ ಪೂಜಾರಿ ಕಣ್ಣೂರು, ಶಶಿಧರ್, ರಾಮ ಪ್ರಸಾದ್ ಆರ್ಕ್ ಮೂರ್ವರ್ಕ್ಸ್ ಅಜಿತ್, ಗುತ್ತಿಗೆದಾರ ಕೇಶವ ಬಲರಾಜ್, ಉಪಾಧ್ಯಕ್ಷ ಪದ್ಮನಾಭನ್, ಪ್ರಧಾನ ಕಾರ್ಯದರ್ಶಿ ಕ್ಷಿತಿ ಮಮ್ಮೂರು, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸೂರ್ಯಕಾಂತ್ ಹಾಗೂ ಇತರ ಪದಾಧಿಕಾರಿಗಳು ಇದ್ದರು. ಸಾಹಿತಿ, ಅಮೃತ ಪ್ರಕಾಶ ಪತ್ರಿಕೆ ಸಂಪಾದಕಿ, ಬ್ರಹ್ಮಕಲಶ ಸಮಿತಿಯ ಉಪಾಧ್ಯಕ್ಷೆ ಡಾ. ಮಾಲತಿ ಶೆಟ್ಟಿ ಮಾಣೂರು ಸ್ವಾಗತಿಸಿ, ರಘುವೀರ್ ಬಾಬುಗುಡ್ಡೆ ನಿರೂಪಿಸಿ, ವಂದಿಸಿದರು.

ಇಂದಿನಿಂದ ಶರವೂರು ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ಆರಂಭ

ಆಲಂಕಾರು: ನಾಲ್ಕು ಗ್ರಾಮಗಳ ಗ್ರಾಮದ ಒಡತಿ ಸೀಮೆಯ ಅಧಿದೇವತೆಯೆಂದೆ ಆರಾಧಿಸಲ್ಪಡುವ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಿಯ ಬ್ರಹ್ಮಕಲಶೋತ್ಸವ ಇಂದಿನಿಂದ ಆರಂಭಗೊಳ್ಳಲಿದ್ದು ಇಂದು ಹಸಿರುವಾಣಿ ಸಮರ್ಪಣೆಯ ಜೊತೆಗೆ ಆಲಂಕಾರು ಅಲಂಕಾರ ಸಮಿತಿಯಿಂದ ಆ್ಯಂಬುಲೆನ್ಸ್ ಲೋಕಾರ್ಪಣೆಯ ಮಹಾ ಕಾರ್ಯ ನಡೆಯಲಿದೆ.

ಸುಮಾರು ರೂ.10 ಕೋಟಿ ವೆಚ್ಚದಲ್ಲಿ ಪುನರ್ ನಿರ್ಮಿತ ದೇವಾಲಯ ಇದಾಗಿದ್ದು ಸಂಪೂರ್ಣ ಶಿಲಾಮಯ ಹಾಗೂ ಏಕಶಿಲಾ ಧ್ವಜಸ್ತಂಭ ಇಲ್ಲಿನ ವಿಶೇಷತೆಯಾಗಿದೆ. ಸುಮಾರು 52 ಅಡಿ ಎತ್ತರದ ಬೃಹತ್ ಸ್ವಾಗತ ಗೋಪುರ, ನೂತನ ಬ್ರಹ್ಮರಥ, ಪುಷ್ಪ ರಥ, ಪಲ್ಲಕ್ಕಿ ರಾಜಗೋಪುರ ಮುಂತಾದುವುಗಳು ಬ್ರಹ್ಮಕಲಶೋತ್ಸವ ಈ ಸಂದರ್ಭ ಲೋಕಾರ್ಪಣೆಗೊಳ್ಳಲಿದೆ. ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಾಲಯ ನವೀಕರಣಗೊಂಡು ಪುನಃ ಪ್ರತಿಷ್ಠಾ ಷ್ಟಬಂಧ ಬ್ರಹ್ಮಕಲಶೋತ್ಸವವು ಮಾ.25ರಿಂದ ಏ.2ರವರಗೆ ನಡೆಯಲಿದ್ದು ಸೀಮೆಯ ಜನತೆ ಕಾತರದಿಂದ ಕಾಯುತ್ತಿದ್ದ ದಿನಕ್ಕೆ ಕ್ಷಣ ಗಣನೆ ಆರಂಭಗೊಂಡಿದೆ.

ದೇವಾಲಯದ ಎಲ್ಲಾ ಅಭಿವೃದ್ಧಿಯ ಕಾಮಗಾರಿಗಳು ಪೂರ್ಣಗೊಂಡಿದ್ದು ದೇವಾಲಯದ ವಠಾರ ಸೇರಿದಂತೆ ದೇವಾಲಯವನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳು ಕೇಸರಿಮಯವಾಗಿದ್ದು ತಳಿರು ತೋರಣ ವಿದ್ಯುತ್ ದೀಪಗಳಿಂದ ಸಂಪೂರ್ಣವಾಗಿ ಶೃಂಗಾರಗೊಂಡಿದೆ.

ಬೃಹತ್ ಮೆರವಣಿಗೆ

ಬೆಳಗ್ಗೆ9ಕ್ಕೆ ಹಸಿರುವಾಣಿ ಮೆರವಣಿಗೆಯನ್ನು ಆರಿಕೋಡಿ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಹರೀಶ ಆರಿಕೋಡಿ ಉದ್ಘಾಟಿಸಲಿದ್ದಾರೆ. ನೂರಕ್ಕೂ ಅಧಿಕ ಬೇರೆ ಬೇರೆ ಗ್ರಾಮಗಳ ದೇವಾಲಯ, ಮಠ, ಮಂದಿರಗಳಿಂದ ಹಸಿರುವಾಣಿ ಸಮರ್ಪಣೆಯಾಗಲಿದೆ. 6 ಗ್ರಾಮಗಳ ಸುಮಾರು 5000ಕ್ಕೂ ಅಧಿಕ ಭಕ್ತಾದಿಗಳು ಹೊರೆಕಾಣಿಕೆ ಮೆರವಣಿಗೆಯಲ್ಲಿ ಸೇರಲಿದ್ದು 1000ಕ್ಕೂ ಅಧಿಕ ವಾಹನಗಳು ಮೆರವಣಿಗೆಯಲ್ಲಿ ಸಾಗಿ ಬರಲಿದೆ. 500ಕ್ಕೂ ಅಧಿಕ ಕಾರ್ಯಕರ್ತರ ಸಹಕಾರದೊಂದಿಗೆ 20 ಕುಣಿತ ಭಜನಾ ತಂಡಗಳು, ನಾಸಿಕ್ ಬ್ಯಾಂಡ್ ಟ್ಯಾಬ್ಲೋ, ಚೆಂಡೆ, ಸೇರಿದಂತೆ 500 ಮಹಿಳೆಯರಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಮೆರವಣಿಗೆ ಸಾಗಲಿದೆ.

ಕಾರ್ಯಕರ್ತರ ಪ್ರೇರಣೆ

ಹಸಿರುವಾಣಿಗೆ ಒಂದೇ ಬ್ರಾಂಡಿನ ಅಕ್ಕಿ ಯನ್ನು ದೇವಾಲಯಕ್ಕೆ ಸಲ್ಲಿಸಬೇಕೆಂಬ ಮಹತ್ತರ ಉದ್ದೇಶವನ್ನಿಟ್ಟುಕೊಂಡು ಹೊರೆಕಾಣಿಕೆ ಸಮಿತಿ ಕಾರ್ಯ ಪ್ರವೃತ್ತವಾಗಿದೆ. 2232 ಮನೆಗಳಿಗೆ ನಮ್ಮ ಕಾರ್ಯಕರ್ತರು ಭೇಟಿ ನೀಡಿ ಹಸಿರುವಾಣಿ ಸಂಗ್ರಹ ಮಾಡಿದ್ದಾರೆ. ಜೊತೆಗೆ ಬೇರೆ ಬೇರೆ ರೀತಿಯ ಪ್ರಚಾರ ಮೂಲಕ ಇದೀಗ ಇದು 5000ಕ್ಕೂ ಅಧಿಕ ಮನೆಗಳಿಂದ ಹೊರೆಕಾಣಿಕೆ ಸಂಗ್ರಹವಾಗಿ ಸಮರ್ಪಣೆಯಾಗುತ್ತಿದೆ. ಇದು ನಮ್ಮ ಕಾರ್ಯಕರ್ತರ ದುಡಿಮೆಯ ಪ್ರತಿಫಲವಾಗಿದೆ.

● ಜನಾರ್ದನ ಗೌಡ ಕಯ್ಯಪ್ಪೆ
ಪ್ರಧಾನ ಸಂಚಾಲಕ
ಹೊರೆಕಾಣಿಕೆ ಸಮಿತಿ

ಹನುಮಗಿರಿ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶ: ನಾರಿಕೇಳ ಸಮರ್ಪಣೆ



ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ ಹಾಗೂ ಶ್ರೀ ಆಂಜನೇಯ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವದ ಹಿನ್ನೆಲೆ ಬಡಗನ್ನೂರು ಗ್ರಾಮ ಸಮಿತಿಯ ನೇತೃತ್ವದಲ್ಲಿ ಆಕರ್ಷಕ ಬೃಹತ್ ಮೆರವಣಿಗೆಯೊಂದಿಗೆ ನಾರಿಕೇಳ ಸಮರ್ಪಣಾ ಕಾರ್ಯ ಮತ್ತು ಶ್ರೀ ಕ್ಷೇತ್ರದಲ್ಲಿ 10,800 ರಾಮತಾರಕ ಜಪ ನಡೆಯಿತು.

ಈ ಸಂದರ್ಭ ಬ್ರಹ್ಮಕಲಶೋತ್ಸವ ಸಮಿತಿಯ ಸಂಚಾಲಕ ಜನಾರ್ದನ ಪೂಜಾರಿ ಪದಡ್ಕ, ಬಡಗನ್ನೂರು ಗ್ರಾಮ ಸಮಿತಿಯ ಅಧ್ಯಕ್ಷ ಸಂತೋಷ್ ಆಳ್ವ ಗಿರಿಮನೆ, ಲಕ್ಷೋತ್ತರ ನಾರಿಕೇಳ ಸಮರ್ಪಣಾ ಸಂಚಾಲಕ ಪ್ರಭಾಕರ ರೈ, ಪಡುಮಲೆ ಕೂವೆ ಶಾಸ್ತಾರ ಶ್ರೀ ವಿಷ್ಣುಮೂರ್ತಿ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಸತೀಶ್ ರೈ ಕಟ್ಟಾವು, ಶ್ರೀನಿವಾಸ ಭಟ್ ಚೆಂದುಕ್ಕೂಡು, ಸುಬ್ಬಯ್ಯ ರೈ, ಡಾ. ಹರಿಪ್ರಸಾದ್ ಸೇರಿದಂತೆ ಸಮಿತಿಯ ವಿವಿಧ ಸಂಚಾಲಕರು, ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಉಪ್ಪಿನಂಗಡಿ ಸಹಕಾರಿ ಸಂಘದ 'ಸೇವಾ ಸಿಂಧೂರ' ಕೇಂದ್ರ ಉದ್ಘಾಟನೆ



ಉಪ್ಪಿನಂಗಡಿ: ಇಲ್ಲಿನ ಉಪ್ಪಿನಂಗಡಿ ಸಹಕಾರಿ ವ್ಯವಸಾಯಿಕ ಸಂಘ ನಿಯಮಿತದ ವತಿಯಿಂದ ಪ್ರಾರಂಭಿಸಲಾದ ಜೆರಾಕ್ಸ್ ಹಾಗೂ ಅಂತರ್ಜಾಲ ಸೇವಾ ವಿಭಾಗದ 'ಸೇವಾ ಸಿಂಧೂರ' ಕೇಂದ್ರವನ್ನು ಮಂಗಳವಾರ ಮಾಜಿ ಶಾಸಕ, ಸಹಕಾರಿ ಧುರೀಣ ಸಂಜೀವ ಮಠಂದೂರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಹಕ ವರ್ಗಕ್ಕೆ ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಯೋಜನೆಗಳನ್ನು ಒದಗಿಸುವ ಸಲುವಾಗಿ ಸೇವಾ ಸಿಂಧು ವಿಭಾಗವನ್ನು ತೆರೆದಿರುವುದು ಸಂತಸದಾಯಕ ವಿದ್ಯಮಾನ. ಅದಕ್ಕೆ ಸಿಂಧೂರದ ಹೆಸರನ್ನು ಇಡುವ ಮೂಲಕ ರಾಷ್ಟ್ರಭಕ್ತಿಯನ್ನು ಉತ್ತೇಜಿಸಿದಂತಾಗಿದೆ ಎಂದರು.

ಗ್ರಾಹಕರ ಆಶೋತ್ತರ ಈಡೇರಿಕೆ

ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ದಡ್ಡು, ಗ್ರಾಹಕರ ಬೇಡಿಕೆಯ ಅನುಸಾರ ಈ ಸೇವಾ ಕೇಂದ್ರವನ್ನು ಸಂಸ್ಥೆಯು ಆರಂಭಿಸಿದೆ. ಗ್ರಾಹಕ ವರ್ಗದ ಆಶೋತ್ತರ ಈಡೇರಿಸುವ ನಿಟ್ಟಿನಲ್ಲಿ ಸಂಘವು ವಿಸ್ತೃತ ಯೋಜನೆಗಳನ್ನು ಅನುಷ್ಠಾನಿಸಿದೆ ಎಂದರು.

ಈ ಸಂದರ್ಭ ಸಂಘದ ಉಪಾಧ್ಯಕ್ಷ ದಯಾನಂದ ಎಸ್., ನಿರ್ದೇಶಕರಾದ ರಾಜೇಶ್ ಮುಖಾರಿ, ವಸಂತ ಪಿ., ಸುಬ್ರಹ್ಮಣ್ಯ ಕುಮಾರ್ ಅಗರ್ತ, ಬೆಳ್ಳಿಪ್ಪಾಡಿ ಪ್ರಕಾಶ್ ರೈ, ಉಷಾ ಮುಳಿಯ, ಸಂಧ್ಯಾ, ಗೀತಾ, ರಾಘವ ನಾಯ್ಕ್, ಶ್ರೀರಾಮ ಪಾತಾಳ, ಸುಂದರ ಕೆ., ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೋಭಾ ಕೆ., ಪ್ರಮುಖರಾದ ಕಂಗ್ವೆ ವಿಶ್ವನಾಥ ಶೆಟ್ಟಿ, ವೆಲಪ್ಪಾರು ವೆಂಕಟರಮಣ ಭಟ್, ಚಂದ್ರಶೇಖರ್ ತಾಳ್ತಜೆ, ಯಶವಂತ ಜಿ., ಕೆ.ವಿ. ಪ್ರಸಾದ್, ಅಜೀಜ್ ಬಸ್ತಿಕಾರ್, ರವೀಂದ್ರ ಆಚಾರ್ಯ, ಡಾ. ಸುಪ್ರೀತ್ ಲೋಬೋ, ಶೌಕತ್ ಅಲಿ, ಹರೀಶ್, ಮುಕುಂದ ಗೌಡ, ರಮೇಶ್ ನಾಯ್ಕ, ಯತೀಶ್ ಶೆಟ್ಟಿ ಜಯಂತ ಪೊರೋಳಿ, ಗಂಗಾಧರ ಪಿ.ಎನ್., ರಾಮಚಂದ್ರ ಮಣಿಯಾಣಿ, ಪ್ರಶಾಂತ್ ಪೆರಿಯಡ್ಕ ಮತ್ತಿತರರು ಭಾಗವಹಿಸಿದ್ದರು.

ಪಶುವೈದ್ಯಾಧಿಕಾರಿ ಡಾ. ಸಮೀಕ್ಷಾ ರೆಡ್ಡಿ ಸಾವು ಪ್ರಕರಣ: ಸಮಗ್ರ ತನಿಖೆಗೆ ಆಗ್ರಹ



ಸುಳ್ಯ: ಶಿವಮೊಗ್ಗ ತಾವರೆಕೊಪ್ಪ ಮೃಗಾಲಯದಲ್ಲಿ ಪಶು ವೈದ್ಯಾಧಿಕಾರಿ ಡಾ. ಸಮೀಕ್ಷಾ ರೆಡ್ಡಿ ಮೇಲೆ ನೀರಾನೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ದಾಳಿ ನಡೆಸಿ, ಗಂಭೀರ ಗಾಯಗೊಂಡ ಅವರು ಸಾವಿಗೀಡಾಗಿದ್ದು ಈ ಕುರಿತು ಸರಕಾರ ಸಮಗ್ರ ತನಿಖೆ ನಡೆಸಬೇಕೆಂದು ಸುಳ್ಯ ಪಶು ಇಲಾಖೆ ಮತ್ತು ಪಶು ವೈದ್ಯಕೀಯ ಆಸ್ಪತ್ರೆ ವೈದ್ಯಾಧಿಕಾರಿಗಳು ಶ್ರದ್ಧಾಂಜಲಿ ಸಲ್ಲಿಸಿ ಕಪ್ಪುಪಟ್ಟಿ ಧರಿಸಿ ಸರಕಾರವನ್ನು ಒತ್ತಾಯಿಸಿದ್ದಾರೆ.

ಸುಳ್ಯ ಪಶು ಸಂಗೋಪನಾ ಇಲಾಖೆಯಲ್ಲಿ ಡಾ. ಸಮೀಕ್ಷಾ ರೆಡ್ಡಿಗೆ ಶ್ರದ್ಧಾಂಜಲಿ ಸಲ್ಲಿಸಿ ಸುಳ್ಯ ಪಶು ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ನಿತಿನ್ ಪ್ರಭು ಮಾತನಾಡಿ, ಯುವ ವೈದ್ಯೆಯನ್ನು ಕಳೆದುಕೊಂಡಿದ್ದು, ಅವರ ಸಾವಿಗೆ ಕಾರಣ ತಿಳಿಯಬೇಕಾಗಿದೆ. ಈ ಘಟನೆಯ ಕುರಿತು ಸಮಗ್ರ ತನಿಖೆ ನಡೆಸಬೇಕಿದ್ದು, ಈ ನಿಟ್ಟಿನಲ್ಲಿ ಕಪ್ಪು ಪಟ್ಟಿ ಧರಿಸಿ ಶಾಂತಿಯುತ ಮುಷ್ಕರ ನಡೆಸುತಿದ್ದೇವೆ ಎಂದು ಹೇಳಿದರು.

ಕೊಯಿಲ ಜಾನುವಾರು ತಳಿ ಸಂವರ್ಧನಾ ಕೇಂದ್ರದ ಉಪನಿರ್ದೇಶಕ ಡಾ. ಚಿದಾನಂದ ಮಾತನಾಡಿ, ಯುವ ಪಶುವೈದ್ಯೆಯನ್ನು ಕಳೆದುಕೊಂಡಿದ್ದು ಡಾ. ಸಮೀಕ್ಷಾ ರೆಡ್ಡಿ ಮಂಗಳೂರಿನಲ್ಲಿ ಕೆಲ ಕಾಲ ಸೇವೆ ಸಲ್ಲಿಸಿದ್ದರು. ಅವರ ಸಾವಿನ ಕುರಿತು ಸಂಶಯವಿದೆ. ಈ ಬಗ್ಗೆ ತನಿಖೆ ನಡೆದು ಸತ್ಯಾಸತ್ಯತೆ ಬೆಳಕು ಚೆಲ್ಲುವ ಕೆಲಸ ಸರಕಾರ ಮಾಡಬೇಕು ಎಂದು ಒತ್ತಾಯಿಸಿದರು.

ಕಡಬ ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಅಜಿತ್, ಕಳಂಜ ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಮೇಘಶ್ರೀ, ಕೊಯಿಲ ಹಂದಿ ತಳಿ ಸಂವರ್ದನಾ ಕೇಂದ್ರದ ವೈದ್ಯಾಧಿಕಾರಿ ಡಾ. ಪುನೀತ್, ಗುತ್ತಿಗಾರು ಪಶು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ವೆಂಕಟಾಚಲಪತಿ ಹಾಗೂ ಇಲಾಖಾ ಸಿಬ್ಬಂದಿಗಳು ಶ್ರದ್ಧಾಂಜಲಿ ಸಭೆಯಲ್ಲಿ ಉಪಸ್ಥಿತರಿದ್ದರು.

ಏ.1ರಿಂದ 3ರ ವರೆಗೆ ನಂದನಹಿತ್ಲು ದೈವಸ್ಥಾನದ ನೇಮ: ಕೋಳಿಗುಂಟ



ಬಂಟ್ವಾಳ: ಇಲ್ಲಿಯ ನಗರದ ನಂದನಹಿತ್ಲು ಶ್ರೀ ವೈದ್ಯನಾಥ, ಅರಸು, ಜುಮಾದಿ ಬಂಟ ದೈವಸ್ಥಾನದ ವರ್ಷಾವಧಿ ಉತ್ಸವವು ಏ.1ರಿಂದ 3ರ ವರೆಗೆ ನಡೆಯಲಿರುವ ಪ್ರಯುಕ್ತ ಕೋಳಿಗುಂಟವು ಮಂಗಳವಾರ ನೆರವೇರಿತು.

ಈ ಸಂದರ್ಭ ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ಕ್ಷೇತ್ರದ ಮನೆತನದವರಾದ ವಿಶ್ವನಾಥ ಪೊಣ್ಣಂಗಿಲಗುತ್ತು, ಲೋಕೇಶ್ ಬಂಗೇರ ಗಾಣದ ಪಡ್ಪು, ಲೋಕನಾಥ ಬಡಕೊಟ್ಟು, ಸಂಜೀವ ಪೆಲತ್ತಿಮಾರು ಹಾಗೂ ಸ್ಥಳೀಯ ಪ್ರಮುಖರು, ಗ್ರಾಮಸ್ಥರು, ಉಪಸ್ಥಿತರಿದ್ದರು. ಕ್ಷೇತ್ರದಲ್ಲಿ ಪುನರ್ ಕಲಶಾಭಿಷೇಕ ಪ್ರಯುಕ್ತ ಮಾ. 30ಕ್ಕೆ ಸಂಜೆ ವೈದಿಕ ವಿಧಿ ವಿಧನಗಳು ನಡೆಯಲಿದೆ.ಮಾ.31ಕ್ಕೆ ಕಲಶಾಭಿಷೇಕ, ನಾಗತಂಬಿಲ ಸೇವೆ ಬಳಿಕ ಹಿಂದುಯುವ ಸೇನೆ ಬಂಟ್ವಾಳ ತಾಲೂಕು ಹಾಗೂ ಕ್ಷೇತ್ರದ ಆಡಳಿತ ಸಮಿತಿ ವತಿಯಿಂದ ನಿರ್ಮಿಸಲಾದ ನೂತನ ದ್ವಾರದ ಉದ್ಘಾಟನೆ ನಡೆಯಲಿದೆ.

ತತ್ವಹೋಮ, ತತ್ವಕಲಶಾಭಿಷೇಕ, ಚಂಡಿಕಾಯಾಗ, ಕಲಶಾಭಿಷೇಕ ಸಂಪನ್ನ
ದೇಂದಡ್ಕ ಶ್ರೀಕ್ಷೇತ್ರದಲ್ಲಿ ಇಂದು ಬ್ರಹ್ಮಕಲಶೋತ್ಸವ





ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ಅಷ್ಟಬಂಧ ಪ್ರತಿಷ್ಠಾ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕದ ಅಂಗವಾಗಿ ಕ್ಷೇತ್ರದಲ್ಲಿ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳ ಅಮೃತ ಹಸ್ತದಲ್ಲಿ ಪ್ರಧಾನ ಅನುವಂಶಿಕ ಅರ್ಚಕ ಪಿ ಸುಬ್ರಹ್ಮಣ್ಯ ಭಟ್ ರವರ ಉಪಸ್ಥಿತಿಯಲ್ಲಿ ಮಂಗಳವಾರ ಬೆಳಿಗ್ಗೆ ತತ್ವಹೋಮ, ತತ್ವಕಲಶಾಭಿಷೇಕ, ಚಂಡಿಕಾಯಾಗ, ಶ್ರೀ ಗಣಪತಿ ದೇವರಿಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾ ಅನ್ನ ಸಂತರ್ಪಣೆ, ಸಂಜೆ 5ರಿಂದ ಬ್ರಹ್ಮಕಲಶಾಧಿವಾಸ ನಡೆಯಿತು. ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು

ಇಂದಿನ ಕಾರ್ಯಕ್ರಮಗಳು

ಇಂದು (ಮಾ.25) ಶ್ರೀದೇವರಿಗೆ ಬ್ರಹ್ಮಕಲಶೋತ್ಸವ ನಡೆಯಲಿದೆ. ಬೆಳಿಗ್ಗೆ 8.30ರಿಂದ ಬ್ರಹ್ಮಕಲಶಾಭಿಷೇಕ ಪ್ರಾರಂಭ, ರುದ್ರ ಯಾಗ, ಬೆಳಿಗ್ಗೆ 11ರಿಂದ ಭಜನಾಮೃತ, ಶ್ರೀ ದೇವರ ಮಹಾಪೂಜೆ ಪಲ್ಲಪೂಜೆ ಮಧ್ಯಾಹ್ನ 12.30ರಿಂದ ಮಹಾ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ 7ರಿಂದ ರಂಗ ಪೂಜೆ, ಉತ್ಸವ ಬಲಿ, ಮಹಾಮಂತ್ರಾಕ್ಷತೆ ಪ್ರಸಾದ ವಿತರಣೆ ನಡೆಯಲಿದೆ. ರಾತ್ರಿ 10ರಿಂದ ಮಂಗಳೂರು ಉರ್ವ ಚಿಲಿಂಬಿ ಶ್ರೀ ಶಿರಡಿ ಸಾಯಿಬಾಬಾ ಮಂದಿರ ಆಶ್ರಿತ ಸಾಯಿ ಶಕ್ತಿ ಕಲಾಬಳಗ ವತಿಯಿಂದ ತುಳು ನಾಟಕ 'ಜೋಡು ದೀಟಿಕೆ' ನಡೆಯಲಿದೆ.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದಲ್ಲಿ ಬ್ರಹ್ಮಕಲಶ ವರ್ಧಂತಿ
ವಿಶೇಷ ಪ್ರಾರ್ಥನೆ, ಪೂಜೆ, ಚಂಡಿಕಾ ಯಾಗ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಬ್ರಹ್ಮಕಲಶ ವರ್ಧಂತಿ ಮಾ.24ಕ್ಕೆ ವಿಜೃಂಭಣೆಯಿಂದ ನಡೆಯಿತು.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಶ್ರೀ ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ಶ್ರೀಪತಿ ಉಪಾಧ್ಯಾಯ ಹಾಗೂ ನರಸಿಂಹ ಭಟ್ ನೇತೃತ್ವದಲ್ಲಿ ಬೆಳಗ್ಗೆ ವಿಶೇಷ ಪ್ರಾರ್ಥನೆ, ಚಂಡಿಕಾಯಾಗ, ಮಧ್ಯಾಹ್ನ ಪ್ರಸನ್ನ ಪೂಜೆ, ಮಹಾ ಅನ್ನ ಸಂತರ್ಪಣೆ ನಡೆಯಿತು.

ರಾತ್ರಿ ಮಹಾ ರಂಗ ಪೂಜೆ ಶ್ರೀ ದೇವರ ಬಲಿ ಉತ್ಸವ ನಡೆಯಿತು. ಈ ಸಂದರ್ಭ ದೇವಸ್ಥಾನದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ ಅತುಲ್ ಕುಡ್ವ ಸತೀಶ್ ಭಂಡಾರಿ, ಸಂಜೀವ ದೇವಾಡಿಗ, ಚಂದ್ರಶೇಖರ ಸುವರ್ಣ, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಗೋಪಾಲಕೃಷ್ಣ ಭಟ್, ಲಕ್ಷ್ಮಿಕಾಂತ ರಾವ್, ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಬಿಜೆಪಿ ಕಲ್ಲಿಕೋಟೆ ವಲಯ ಪ್ರಭಾರಿಯಾಗಿ ಕೆ.ಶ್ರೀಕಾಂತ್ ನೇಮಕ



ಕಾಸರಗೋಡು: ಕಾಸರಗೋಡು, ಕಣ್ಣೂರು, ಕಲ್ಲಿಕೋಟೆ ಜಿಲ್ಲೆಗಳು ಒಳಗೊಂಡಿರುವ ವಿಧಾನಸಭಾ ಕ್ಷೇತ್ರಗಳ ಚುನಾವಣೆಯ ಚುಕ್ಕಾಣಿ ಹಿಡಿಯಲು ಬಿಜೆಪಿ ರಾಜ್ಯ ನಾಯಕತ್ವವು ಕಲ್ಲಿಕೋಟೆ ವಲಯ ಅಧ್ಯಕ್ಷರಾದ ವಕೀಲ ಕೆ.ಶ್ರೀಕಾಂತ್ ಅವರನ್ನು ವಲಯ ಪ್ರಭಾರಿಯನ್ನಾಗಿ ನೇಮಿಸಿದೆ.
ಈ ಹಿಂದೆ ಈ ಹೊಣೆಗಾರಿಕೆಯು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ಗೋಪಾಲಕೃಷ್ಣನ್ ಅವರಿಗಿತ್ತು. ಮಂಜೇಶ್ವರ ಸಹಿತ ವಿವಿಧ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಚಟುವಟಿಕೆಗಳ ಮೇಲ್ನೋಟ ಇನ್ನು ಮುಂದೆ ಕೆ.ಶ್ರೀಕಾಂತ್ ಅವರಿಗಾಗಿದೆ.

ಎನ್‌ಡಿಎ ಚುನಾವಣಾ ಕಚೇರಿ ಉದ್ಘಾಟನೆ

ಕಾಸರಗೋಡು: ಕಾಞಂಗಾಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಚುನಾವಣಾ ಸಮಿತಿ ಕಚೇರಿಯನ್ನು ತಟ್ಟುಮ್ಮಲ್‌ನಲ್ಲಿ ಅಭ್ಯರ್ಥಿ ಎಂ.ಬಲರಾಜ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡ ಸಿಪಿಐ ಕಾರ್ಯಕರ್ತರಾದ ದೀಪುಮೋನ್ ಜೋಸ್, ಒ.ಕೆ.ಥೋಮಸ್ ಅವರಿಗೆ ಪಕ್ಷದ ಸದಸ್ಯತ್ವ ನೀಡಿ ಬರಮಾಡಿಕೊಳ್ಳಲಾಯಿತು. ಬಿಜೆಪಿ ವೆಳ್ಳರಿಕುಂಡು ಮಂಡಲ ಅಧ್ಯಕ್ಷ ವಿನೀತ್ ಮುಂಡಮಾಣಿ ಅಧ್ಯಕ್ಷತೆ ವಹಿಸಿದ್ದರು. ಕೃಷಿಕ ಮೋರ್ಚಾ ರಾಜ್ಯ ಕಾರ್ಯದರ್ಶಿ ವಿ.ಕುಂಞಿಕಣ್ಣನ್ ಬಳಾಲ್, ಮಹಿಳಾಮೋರ್ಚಾ ಜಿಲ್ಲಾಧ್ಯಕ್ಷೆ ಟಿ.ವಿ.ರಮಣಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಎಚ್.ಆರ್. ಸುಕನ್ಯಾ ಮುಂತಾದವರು ಶುಭಹಾರೈಸಿದರು.

ಮಾ.26ರಿಂದ ಆರಿಯಾಳ ಮಲರಾಯ ಕ್ಷೇತ್ರದಲ್ಲಿ ಧರ್ಮ ನೇಮ

ಉಪ್ಪಳ: ಆರಿಯಾಳ ಶ್ರೀ ಮಲರಾಯ ಬಂಟ ಧೂಮಾವತಿ ಕ್ಷೇತ್ರದಲ್ಲಿ ದೈವಗಳಿಗೆ ಧರ್ಮ ನೇಮ ಮಾ.26 ಮತ್ತು 27ರಂದು ತಂತ್ರಿವರ್ಯ ಬಂಬ್ರಾಣ ಶಂಕರ ನಾರಾಯಣ ಕಡಮಣ್ಣಾಯರ ನೇತೃತ್ವದಲ್ಲಿ ವಿವಿಧ ವೈದಿಕ ಕಾರ್ಯಕ್ರಮ ಜರಗಲಿದೆ,
26ರಂದು ಬೆಳಗ್ಗೆ ವಿವಿಧ ಕಾರ್ಯಕ್ರಮ, ರಾತ್ರಿ ಗಂಟೆ 8ಕ್ಕೆ ಭಂಡಾರ ಏರಿ ಮಲರಾಯ ಬಂಟ ದೈವಗಳ ಧರ್ಮ ನೇಮ, ಮಾ.27ರಂದು ಬೆಳಗ್ಗೆ ಶ್ರೀ ಧೂಮಾವತಿ ಪೊಟ್ಟೋಳ್ ದೈವಗಳ ನೇಮ, ಅಂದು ರಾತ್ರಿ 8ಕ್ಕೆ ಶ್ರೀ ಕಲ್ಲುರ್ಟಿ, ಪಂಜುರ್ಲಿ ದೈವಗಳ ತಂಬಿಲ, ಪ್ರಸಾದ ವಿತರಣೆ ನಡೆಯಲಿದೆ.
ಮನೋರಂಜನಾ ಕಾರ್ಯಕ್ರಮದಂಗವಾಗಿ ಮಾ.26ರಂದು ಸಂಜೆ 6ರಿಂದ ರಾತ್ರಿ 12 ರ ವರೆಗೆ ಶ್ರೀ ಆದಿ ಧೂಮಾವತಿ ಶ್ರೀ ದೇಯಿ ಬೈದೇತಿ ಕೃಪಾಪೋಷಿತ ಯಕ್ಷಗಾನ ಮಂಡಳಿ ಮೂಲಸ್ಥಾನ, ಗೆಜ್ಜೆಗಿರಿ ಇವರಿಂದ ಗೆಜ್ಜೆ ಗಿರಿ ಕ್ಷೇತ್ರ ಮಹಾತ್ಮೆ ಎಂಬ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಮಾ.26 , 27: ಇಕ್ಕೇರಿ ಶ್ರೀ ಶಂಕರನಾರಾಯಣ ಮಠದಲ್ಲಿ ವಾರ್ಷಿಕೋತ್ಸವ

ಬದಿಯಡ್ಕ: ಬಾಂಜತ್ತಡ್ಕ ಇಕ್ಕೇರಿ ಶ್ರೀ ಶಂಕರನಾರಾಯಣ ಸ್ವಾಮಿ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆದುಬರುವಂತೆ ವಾರ್ಷಿಕೋತ್ಸವ ಮಾ.26ರಂದು ಜರಗಲಿದೆ. ಮಾ.25ರಂದು ರಾತ್ರಿ 8 ಗಂಟೆಗೆ ಅತ್ತಾಳ ಪೂಜೆ, ಗಣಪತಿ ಪೂಜೆ ನಡೆಯಲಿದೆ. ಮಾ.26ರಂದು ಬೆಳಿಗ್ಗೆ ಗಣಪತಿ ಹೋಮ, ಶಂಕರನಾರಾಯಣ ಹವನ, ಶತರುದ್ರಾಭಿಷೇಕ, ನವಕಾಭಿಷೇಕ, ಮಧ್ಯಾಹ್ನ 12.30ರಿಂದ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 6.40ಕ್ಕೆ ದೀಪಾರಾಧನೆ, ಕಾರ್ತಿಕ ಪೂಜೆ, ಮಾ.27ರಂದು ಪ್ರಾತಃಕಾಲ 5ರಿಂದ ಶ್ರೀ ಧೂಮಾವತಿ ಮುಂತಾದ ದೈವಗಳ ಕೋಲ ನೆರವೇರಲಿದೆ.



ಗುಳಿಗ ಕೊರಗಜ್ಜ ಸೇವಾ ಸಮಿತಿ ಪಜಿಂಗಾರು ಮೂಡಂಬೈಲು ಇದರ ವರ್ಷಾವಧಿ ಗುಳಿಗ ದೈವ ಕೋಲ, ಕೊರಗ ತನಿಯ ದೈವದ ಕೋಲ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಿತು.



ಮಂಜೇಶ್ವರ ಬಡಾಜೆ ಶ್ರೀ ನಾಗಬೆರ್ಮೆರ್ ಶ್ರೀ ಮಲ್ಲ್ ಧೂಮಾವತಿ ದೈವಸ್ಥಾನದಲ್ಲಿ ಶ್ರೀ ನಾಗಬೆರ್ಮೆರ್ ಸೇವೆಯ ನೇಮ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ವಿಧಾನಸಭಾ ಚುನಾವಣೆ | ಅಂಚೆ ಮತಪತ್ರ ಅರ್ಜಿಗಳಿಗೆ ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರ ಕಾರ್ಯಾಚರಣೆ

ಜಿಲ್ಲಾಧಿಕಾರಿ ಭೇಟಿ, ಕಾರ್ಯಚಟುವಟಿಕೆಗಳ ಪರಿಶೀಲನೆ

ಕಾಸರಗೋಡು: ಕೇರಳ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಅಂಚೆ ಮತಪತ್ರ ಅರ್ಜಿಗಳ ಸ್ವೀಕಾರ ಮತ್ತು ವಿತರಣಾ ಕೇಂದ್ರವಾದ ಕಾಸರಗೋಡು ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆ.
ವಿದ್ಯಾನಗರ ಸಿವಿಲ್ ಸ್ಟೇಷನ್ ಪರಿಸರದಲ್ಲಿರುವ ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಮಾ.22ರಿಂದ ಕಾರ್ಯಾರಂಭ ಗೊಂಡಿರುವ ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮಂಗಳವಾರ ಭೇಟಿ ನೀಡಿ ಚಟುವಟಿಕೆಗಳನ್ನು ಸಮಗ್ರವಾಗಿ ಪರಿಶೀಲಿಸಿದರು.
ಅಲ್ಲದೆ ವಿವಿಧ ವಿಷಯಗಳ ಕುರಿತು ಮಾರ್ಗರ್ಶನ ನೀಡಿದರು. ಅಗತ್ಯ ಸೇವಾ ವಿಭಾಗಗಳಿಗೆ 12ಡಿ ಅರ್ಜಿಯನ್ನು ಅಪ್‌ಲೋಡ್ ಮಾಡುವ ಮೂಲಕ ಜಿಲ್ಲಾಧಿಕಾರಿ ಕೇಂದ್ರವನ್ನು ಉದ್ಘಾಟಿಸಿದರು.
ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರದಲ್ಲಿ ಇಲ್ಲಿಯವರೆಗೆ 1738 ಫಾರ್ಮ್ 12ಡಿ ಅರ್ಜಿಗಳು ಅಂಚೆ ಮತಪತ್ರಕ್ಕಾಗಿ ಸ್ವೀಕರಿಸಲ್ಪಟ್ಟಿವೆ. ಪೊಲೀಸ್, ಅಂಚೆ, ಕೆಎಸ್‌ಆರ್‌ಟಿಸಿ, ಅಬಕಾರಿ, ಅಗ್ನಿಶಾಮಕ ದಳ, ರೈಲ್ವೆ ಪೊಲೀಸ್, ಕೆಎಸ್‌ಇಬಿ ಮುಂತಾದ ಇಲಾಖೆಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಜಿಲ್ಲಾ ಚುನಾವಣಾ ವಿಭಾಗವು ಮಾಹಿತಿ ನೀಡಿದೆ.
ದಿನದ 24 ಗಂಟೆ ಕಾರ್ಯನಿರ್ವಹಿಸುವ ಜಿಲ್ಲಾಮಟ್ಟದ ಕ್ಲಿಯರೆನ್ಸ್ ಕೇಂದ್ರದಲ್ಲಿ 33 ಮಂದಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಕಣ್ಣೂರು, ವಯನಾಡು ಮತ್ತು ಕೋಝಿಕ್ಕೋಡ್ ಜಿಲ್ಲೆಗಳ ಮತದಾರರಿಗಾಗಿ ಕಣ್ಣೂರಿನಲ್ಲಿ ಕಾರ್ಯನಿರ್ವ ಹಿಸುತ್ತಿರುವ ಆರ್ ಎಲ್‌ಸಿಸಿಗೆ ಮತ್ತು ಕಣ್ಣೂರು, ಕೋಝಿಕ್ಕೋಡ್ , ವಯನಾಡು ಜಿಲ್ಲೆಗಳನ್ನು ಹೊರತುಪಡಿಸಿ ಇತರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಎರ್ನಾಕುಳಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್ ಎಲ್‌ಸಿಸಿಗೆ ಅಂಚೆ ಮತಪತ್ರ ಅರ್ಜಿಗಳನ್ನು ಕಳುಹಿಸಲು ಕಾಸರಗೋಡು ಜಿಲ್ಲಾ ಕ್ಲಿಯರೆನ್ಸ್ ಕೇಂದ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ. ಎಲ್‌ಎಸ್‌ಜಿಡಿ ಆಂತರಿಕ ವಿಜಿಲೆನ್ಸ್ ಅಧಿಕಾರಿ ಟಿ.ಟಿ.ಸುರೇಂದ್ರನ್ ಅವರು ಜಿಲ್ಲಾ ಮಟ್ಟದ ಅಂಚೆ ಮತಪತ್ರಗಳ ಉಸ್ತುವಾರಿ ನೋಡಲ್ ಅಧಿಕಾರಿಯಾಗಿ ಕಾರ್ಯವೆಸಗುತ್ತಿದ್ದಾರೆ.
ಜಿಲ್ಲಾ ಮಟ್ಟದ ಕ್ಲಿಯರೆನ್ಸ್ ಕೇಂದ್ರವು ಎಲ್‌ಎಸ್‌ಜಿಡಿ ಜೂನಿಯರ್ ಸೂಪರಿಂಟೆಂಡೆಂಟ್ ಪಿ.ವಿ.ಶಾಜಿ ಅವರ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜನತಾ ಪ್ರಾತಿನಿಧ್ಯ ಕಾಯ್ದೆ 1951 ಮತ್ತು ಚುನಾವಣಾ ನಡವಳಿಕೆ ನಿಯಮಗಳು 1961ರ ಆಧಾರದ ಮೇಲೆ ಯಾರೂ ಮತದಾನ ಮಾಡುವ ಅವಕಾಶ ಕಳೆದುಕೊಳ್ಳದಂತೆ ನೋಡಿಕೊಳ್ಳಲು ಅಂಚೆ ಮತಪತ್ರ ವ್ಯವಸ್ಥೆ ಪರಿಚಯಿಸಲಾಗಿದೆ. ಚುನಾವಣೆ ಭಾಗವಾಗಿ ವಿವಿಧ ಕರ್ತವ್ಯಗಳಿಗೆ ನಿಯೋಜಿಸಲಾದ ವಿವಿಧ ಅಧಿಕಾರಿಗಳು 12ನೇ ಅರ್ಜಿ ನಮೂನೆ, ಮತದಾರರ ಗುರುತಿನ ದಾಖಲೆ ಪ್ರತಿ, ಕರ್ತವ್ಯಕ್ಕೆ ನಿಯೋಜಿಸಲಾದ ಆದೇಶವನ್ನು ಜಿಲ್ಲಾ ಮಟ್ಟದ ಕೇಂದ್ರಕ್ಕೆ ಸಲ್ಲಿಸುವ ಮೂಲಕ ಅಂಚೆ ಮತಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದು ಎಂದು ನೋಡಲ್ ಅಧಿಕಾರಿ ಮಾಹಿತಿ ನೀಡಿದ್ದಾರೆ.



ಅರ್ಜಿ ಸಲ್ಲಿಸಬಹುದು

ಅಗತ್ಯ ಸೇವಾ ವಿಭಾಗಗಳಲ್ಲಿ ಅಧಿಕೃತ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಅರ್ಜಿ ನಮೂನೆ 12ಡಿ ಭರ್ತಿ ಮಾಡುವ ಮೂಲಕ ಅಂಚೆ ಮತ ಪತ್ರಕ್ಕೆ ಅರ್ಜಿ ಸಲ್ಲಿಸಬಹುದು. ಚುನಾವಣಾ ಕರ್ತವ್ಯದಲ್ಲಿರುವ ಅಧಿಕಾರಿಗಳು, ವಿವಿಧ ಸರಕಾರಿ ಇಲಾಖೆಗಳ ಅಧಿಕಾರಿಗಳು ನಮೂನೆ 12 ಭರ್ತಿ ಮಾಡುವ ಮೂಲಕ ಅಂಚೆ ಮತಪತ್ರಕ್ಕೆ ಅರ್ಜಿ ಸಲ್ಲಿಸಬಹುದು. ಪತ್ರಕರ್ತರಿಗೆ 12 ಡಿ ಅರ್ಜಿಗಳ ಮಾ.25ರವರೆಗೆ ಸ್ವೀಕರಿಸಲಾಗುತ್ತದೆ ಎಂದು ಚುನಾವಣಾ ವಿಭಾಗ ತಿಳಿಸಿದೆ.

> **ಎಲ್ಲರೂ ಮತದಾನ ಮಾಡುವಂತಾಗಬೇಕು**
>
> **ಕಾಸರಗೋಡು ಜಿಲ್ಲೆಯ ಪ್ರತಿಯೋರ್ವರಿಗೂ ಮತದಾನದ ಹಕ್ಕು ಖಚಿತಪಡಿಸಲಾಗುವುದು. ಶೇ.100ರಷ್ಟು ಮತದಾರರು ಮತ ಚಲಾಯಿಸಲಿರುವ ಎಲ್ಲಾ ಕಾರ್ಯ ಯೋಜನೆ ಸಿದ್ಧಪಡಿಸಲಾಗುವುದು. ನ್ಯಾಯ ಸಮ್ಮತ, ಶಾಂತಿಯುತ ಮತದಾನಕ್ಕೆ ಅಗತ್ಯದ ಎಲ್ಲಾ ತಯಾರಿ ನಡೆಸಲಾಗುವುದು. ಈ ನಿಟ್ಟಿನಲ್ಲಿ ಜಿಲ್ಲಾ ಚುನಾವಣಾ ವಿಭಾಗದ ನೇತೃತ್ವದಲ್ಲಿ ಸಮಗ್ರ ಚಟುವಟಿಕೆ ತ್ವರಿತಗತಿಯಲ್ಲಿ ಸಾಗುತ್ತಿವೆ.**
>
> **● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ**

ಬೀಡಿ ಉದ್ಯಮ ನಾಶ ಎಡರಂಗ ಸರಕಾರದ ಸಾಧನೆಯಾಗಿದೆ: ಸುರೇಂದ್ರನ್ ಆರೋಪ





ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಕಾಲದಲ್ಲಿ ಬೀಡಿ ಉದ್ಯಮ, ಬೀಡಿ ಕಟ್ಟುವುದು ಇತ್ಯಾದಿ ನೂರಾರು ಕುಟುಂಬಗಳಿಗೆ ಅದರಲ್ಲೂ ಪ್ರಮುಖವಾಗಿ ತಾಯಂದಿರಿಗೆ ಆರ್ಥಿಕತೆ ಸಬಲೀಕರಣದ ಬಹುಮುಖ್ಯ ಗ್ರಾಮೀಣ ಉದ್ಯಮವಾಗಿತ್ತು ಆದರೆ ಇಂದು ಕಾರ್ಮಿಕರ ಪಕ್ಷ ಎಂದು ಹೇಳುತ್ತಿರುವ ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಪಕ್ಷದ ಆಡಳಿತವಿರುವ ಕೇರಳದಲ್ಲಿ ಬೀಡಿ ಉದ್ಯಮ ಮತ್ತು ಈ ಸಂಬಂಧಿತ ಉದ್ಯೋಗ ಸರ್ವನಾಶವಾಗುತ್ತಿದೆ ಎಂದು ಎನ್‌ಡಿಎ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಕೆ.ಸುರೇಂದ್ರನ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಅವರು ಮಂಜೇಶ್ವರ ಗ್ರಾ.ಪಂ.ನ ಮಜಲು ಎಂಬಲ್ಲಿ ಬಿಜೆಪಿ ಸಂಘಟನಾತ್ಮಕ ಚಟುವಟಿಕೆಗಳ ಉದ್ಘಾಟಿಸಿ ಹಾಗೂ ಮನೆ ಮನೆಗಳ ಭೇಟಿ ಸಂದರ್ಭ ಅವರು ಮಾತನಾಡಿದರು.
ಮಂಜೇಶ್ವರ ತಾಲೂಕಿನಲ್ಲಿ ಅನೇಕ ಕುಟುಂಬಗಳ ಆಧಾರ ಸ್ತಂಭವಾಗಿದ್ದ ಬೀಡಿ ಉದ್ಯಮವನ್ನು, ಬೀಡಿ ಸೊಸೈಟಿಗಳನ್ನು ಬೀಡಿ ತಯಾರಿಸದ ಸೊಸೈಟಿ ಹೆಸರಿಟ್ಟು ದಿನೇಶ್ ಬ್ರಾಂಡ್‌ಗೆ ಬದಲಾಯಿಸಿ ಇತರ ಉತ್ಪನ್ನಗಳನ್ನು ಸ್ಥಾಪಿಸುವ ನಾಟಕವಾಡಿ ಈಗ ದಿನೇಶ್ ಬೀಡಿ ಉದ್ಯಮವು ಕೆಲವು ಬಂಡವಾಳಶಾಹಿ ಕಮ್ಯೂನಿಸ್ಟ್ ನಾಯಕರ ದಂಧೆಯ ಸಂಸ್ಥೆಯಾಗಿ ಬದಲಾಗಿದೆ ಎಂದು ಸುರೇಂದ್ರನ್ ಆರೋಪಿಸಿದರು.
ಬೀಡಿ ಕಾರ್ಮಿಕರಿಗೆ ರಾಜ್ಯ ಸರಕಾರವು ಕ್ಷೇಮ ಭತ್ಯೆ ಸರಿಯಾಗಿ ವಿತರಿಸುತ್ತಿಲ್ಲ. ಮಾತ್ರವಲ್ಲದೆ ವಿಧವಾ ವೇತನ, ವೃದ್ಧಾಪ್ಯ ವೇತನ ಪಡೆಯುವವರಿಗೆ ಕ್ಷೇಮ ಭತ್ಯೆ ತಡೆಹಿಡಿಯುವ ಪ್ರಯತ್ನ ಎಡರಂಗ ಒಕ್ಕೂಟದಿಂದ ನಡೆಯುತ್ತಿದೆ. ಮಂಜೇಶ್ವರ ದಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವು ಸಾಧಿಸಿದರೆ ಮಂಜೇಶ್ವರ ತಾಲೂಕಿನ ಬೀಡಿ ಉದ್ಯಮ, ಬೀಡಿ ಕಾರ್ಮಿಕೆಯರನ್ನು ಸಂಪೂರ್ಣ ಸಂರಕ್ಷಿಸುವ ಹೊಣೆ ಬಿಜೆಪಿಯದ್ದಾಗಿದೆ ಎಂದು ಕೆ.ಸುರೇಂದ್ರನ್ ಭರವಸೆ ನೀಡಿದರು.
ಬಿಜೆಪಿ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಪ್ರಮುಖರಾದ ಯಾದವ ಬಡಾಜೆ, ರಾಜೇಶ್ ತೂಮಿನಾಡು, ರಾಜೇಶ್ ಮಜಲು ಮತ್ತಿತರರು ಜೊತೆಗಿದ್ದರು.

ಮತಗಟ್ಟೆ ಅಧಿಕಾರಿಗಳ ಮೊದಲ ಹಂತದ ತರಬೇತಿ: ಡೀಸಿ ಅರ್ಜುನ್ ಉದ್ಘಾಟನೆ



ಕಾಸರಗೋಡು: ವಿಧಾನಸಭಾ ಚುನಾವಣೆ ಅಂಗವಾಗಿ ಉದುಮ ಮತ್ತು ಮಂಜೇಶ್ವರ ಕ್ಷೇತ್ರಗಳ ಪ್ರಿಸೈಡಿಂಗ್ ಆಫೀಸರ್‌ಗಳು , ಮೊದಲ ಮತಗಟ್ಟೆ ಅಧಿಕಾರಿಗಳಿಗೆ ಪ್ರಥಮ ಹಂತದ ತರಬೇತಿ ಆರಂಭವಾಗಿದ್ದು, ಈ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿದರು.
ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಹಮ್ಮಿಕೊಳ್ಳಲಾದ ಉದುಮ ಕ್ಷೇತ್ರದ ತರಬೇತಿ ಕಾರ್ಯಕ್ರಮದ ಮೊದಲ ದಿನವಾದ ಮಂಗಳವಾರ ಎರಡು ಅವಧಿಗಳಲ್ಲಿ ನಡೆದ ತರಬೇತಿಯಲ್ಲಿ ಸುಮಾರು 600 ಮಂದಿ ಅಧಿಕಾರಿಗಳು ಭಾಗವಹಿಸಿದ್ದರು.
ಚುನಾವಣಾ ರಾಜ್ಯಮಟ್ಟದ ಮಾಸ್ಟರ್ ತರಬೇತುದಾರರಾದ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಟಿ.ಸಜಿತ್ ಕುಮಾರ್, ರಾಜ್ಯ ಜಿಎಸ್‌ಟಿ ಕಚೇರಿ ತೆರಿಗೆ ಅಧಿಕಾರಿ ಮಧು ಕರಿಂಬಿಲ್, ಲೈಫ್ ಮಿಷನ್ ಜಿಲ್ಲಾ ಸಂಯೋಜಕ ಎಂ.ವಲ್ಸನ್, ಜಿಲ್ಲಾ ಮಟ್ಟದ ಮಾಸ್ಟರ್ ತರಬೇತುದಾರರಾದ ಕಾರಡ್ಕ ಬ್ಲಾಕ್ ಪಂಚಾಯತ್ ಮೇಲ್ವಿಚಾರಕ ಕೆ.ಪದ್ಮನಾಭನ್, ಕ್ಷೇತ್ರ ಮಟ್ಟದ ಮಾಸ್ಟರ್ ತರಬೇತುದಾರರು ತರಗತಿಗಳನ್ನು ನಡೆಸಿಕೊಟ್ಟರು.
ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ನಡೆದ ತರಬೇತಿ ಕಾರ್ಯಕ್ರಮದ ನೇತೃತ್ವವನ್ನು ರಾಜ್ಯ ಮಟ್ಟದ ಮಾಸ್ಟರ್ ತರಬೇತುದಾರರಾದ ಪಿ.ಸಜಿತ್-ವಲ್ಸನ್ ಕರಿವೆಳ್ಳೂರ್ ವಹಿಸಿದ್ದರು. ಜಿಲ್ಲಾಮಟ್ಟದ ಮಾಸ್ಟರ್ ತರಬೇತುದಾರರಾದ ಬಿ.ಅಜಿತ್ ಕುಮಾರ್, ಎಂ.ಬಿ.ಲೋಕೇಶ್, ಜಯರಾಜನ್ ತರಗತಿ ನಿರ್ವಹಿಸಿದರು.
ವಿಧಾನಸಭಾ ಮಟ್ಟದ ಮಾಸ್ಟರ್ ತರಬೇತುದಾರರಾದ ಪಿ.ಎ.ಮುಹಮ್ಮದ್ ಹ್ಯಾರಿಸ್, ಅನೀಶ್, ಶಹೀಂ ಫಾರಿಸ್, ಎಂ.ಜಮಾಲುದ್ದೀನ್, ಎ.ಜೆ.ಅನಸ್, ಎ.ತಸ್ಲೀನುಲ್ಲಾ, ಎ. ಅಬ್ದುಲ್ ರಹಮಾನ್, ಎ.ರತ್ನಾಕರನ್, ಎಂ. ಕೃಷ್ಣನ್, ಶ್ರೀಜಿತ್ ಜಿ.ನಾಯರ್, ಅಬ್ದುಲ್ ಬಶೀರ್ ಅಧಿಕಾರಿಗಳಿಗೆ ವಿವಿಧ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಮಾ.25 ರಂದು ತರಬೇತಿ ಮುಂದುವರಿಯಲಿದೆ.
ಮಾ.26,27 ರಂದು ಕಾಸರಗೋಡು, ಕಾಞಂಗಾಡು -ತೃಕ್ಕರೀಪುರ ವಿಧಾನ ಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ ನಡೆಯಲಿದೆ.

> **1606 ಪ್ರಿಸೈಡಿಂಗ್ ಆಫೀಸರ್‌ಗಳ ನೇಮಕ**
>
> **ಜಿಲ್ಲೆಯ 1146 ಬೂತ್‌ಗಳಲ್ಲಿ ಒಟ್ಟು 1606 ಪ್ರಿಸೈಡಿಂಗ್ ಆಫೀಸರ್‌ಗಳನ್ನು ಚುನಾವಣಾ ಕರ್ತವ್ಯಕ್ಕಾಗಿ ನೇಮಿಸಲಾಗಿದೆ. ಈ ಪೈಕಿ 868 ಮಹಿಳೆಯರು, 738 ಪುರುಷರು ಸೇರಿದ್ದಾರೆ. ಜಿಲ್ಲೆಯಲ್ಲಿ ನೇಮಕಗೊಂಡ ಮೊದಲ ಮತಗಟ್ಟೆ ಅಧಿಕಾರಿಗಳ ಸಂಖ್ಯೆ 1606 ಆಗಿದ್ದು ಈ ಪೈಕಿ 1020 ಮಹಿಳೆಯರು ಮತ್ತು 586 ಪುರುಷರು ಒಳಗೊಂಡಿದ್ದಾರೆ. ನೇಮಕ ಗೊಂಡ 3212 ಮತಗಟ್ಟೆ ಅಧಿಕಾರಿಗಳಲ್ಲಿ 2047 ಮಹಿಳೆಯರು ಮತ್ತು 1165 ಪುರುಷರು ಸೇರಿದ್ದಾರೆ.**

ಕೇರಳ ಕೇಂದ್ರೀಯ ವಿವಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ



ಕಾಸರಗೋಡು: ಕೇರಳ ಆರ್ಥಿಕ ಸಂಘದ (ಕೆಇಎ) ಸಹಯೋಗದೊಂದಿಗೆ ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗವು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿತ್ತು.
'ಮ್ಯಾಕ್ರೋ ಮತ್ತುಸೂಕ್ಷ್ಮ ಅರ್ಥಶಾಸ್ತ್ರಕ್ಕೆ ಪರಿಮಾಣಾತ್ಮಕ ತಂತ್ರಗಳು' ಎಂಬ ವಿಷಯದ ಕುರಿತು ಹಮ್ಮಿಕೊಳ್ಳಲಾದ ವಿಚಾರ ಸಂಕಿರಣವನ್ನು ಪ್ರಭಾರಿ ಕುಲಸಚಿವ ಪ್ರೊ.ವಿ.ಬಿ.ಸಮೀರ್ ಕುಮಾರ್ ಉದ್ಘಾಟಿಸಿ ವಿವಿಧ ವಿಷಯಗಳಕುರಿತು ಮಾತನಾಡಿದರು. ಅರ್ಥಶಾಸ್ತ್ರದ ಮೂಲಕ ದೇಶದ ಆರ್ಥಿಕ ಆಗುಹೋಗುಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಬಹುದು. ಈ ನಿಟ್ಟಿನಲ್ಲಿ ಇನ್ನಷ್ಟು ಪ್ರೋತ್ಸಾಹದ ಅಗತ್ಯವಿದೆ ಎಂದರು.
ವಿಭಾಗದ ಡೀನ್ ಮತ್ತು ಮುಖ್ಯಸ್ಥ ಪ್ರೊ.ಅಬ್ದುಲ್ ಕರೀಂ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು. ಅಸೋಸಿಯೇಟ್ ಪ್ರೊಫೆಸರ್ ಡಾ.ಜೋಸೆಫ್ ಟಿ.ಜೆ. ಸ್ವಾಗತಿಸಿ, ಕೆಇಎ ರಾಜ್ಯ ಕಾರ್ಯಕಾರಿ ಸದಸ್ಯ ಬೆನೆಟ್ ಥೋಮಸ್ ವಂದಿಸಿದರು.

ಸಮಾರೋಪ ಸಮಾರಂಭ

ಸಮಾರೋಪದಲ್ಲಿ ಉಪಕುಲಪತಿ ಪ್ರೊ.ಸಿದ್ದು ಪಿ.ಅಲ್ಗೂರ್ ಸಮಾರೋಪ ಭಾಷಣ ಮಾಡಿದರು. ಕೆಇಎ ಕಣ್ಣೂರು ಅಧ್ಯಾಯದ ಸಂಯೋಜಕ ಡಾ.ವಿ.ಶಹರ್ಬನ್ ಮಾತನಾಡಿದರು.



ಶ್ರೀ ಸದಾಶಿವ ಶೆಟ್ಟಿ ಸೇವಾ ಬಳಗ ಕೇಂದ್ರೀಯ ಸಮಿತಿ ಚಿಗುರುಪಾದೆ, ಕೆ.ಎಸ್.ಹೆಗ್ಡೆ ವೈದ್ಯಕೀಯ ಕಾಲೇಜು -ಆಸ್ಪತ್ರೆ ದೇರಳಕಟ್ಟೆ ಇವುಗಳ ಸಹಯೋಗದೊಂದಿಗೆ ನಡೆಯಲಿರುವ ಉಚಿತ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರದ ಆಮಂತ್ರಣ ಪತ್ರಿಕೆಯನ್ನು ಶ್ರೀ ಸದಾಶಿವ ಶೆಟ್ಟಿ ಸೇವಾ ಬಳಗದ ಕೇಂದ್ರ ಕಚೇರಿಯಲ್ಲಿ ವಿವಿಧ ವಲಯಗಳ ಪ್ರಮುಖರು ಬಿಡುಗಡೆಗೊಳಿಸಿದರು.

ಕಿದೂರು ಶ್ರೀ ಕೋಮಾರು ದೈವಸ್ಥಾನದ ಬ್ರಹ್ಮಕಲಶ: ಆಮಂತ್ರಣ ಪತ್ರ ಬಿಡುಗಡೆ



ಕುಂಬಳೆ: ಕಿದೂರು ಸಮೀಪದ ಆರ್ತಲ ಶ್ರೀ ಕೋಮಾರು ಚಾಮುಂಡಿ ಬೊಬ್ಬರ್ಯ ದೈವಸ್ಥಾನದ ಪುನರ್ ಪ್ರತಿಷ್ಠ ಬ್ರಹ್ಮಕಲಶ ಮತ್ತು ನೂತನವಾಗಿ ನಿರ್ಮಿಸಿದ ತರವಾಡು ಮನೆಯ ಗೃಹ ಪ್ರವೇಶ ಏ.28ರಿಂದ 30ರ ವರೆಗೆ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಯವರ ನೇತೃತ್ವ ಜರಗಲಿದೆ. ಇದರ ಆಮಂತ್ರಣ ಪತ್ರಿಕೆಯನ್ನು ಕುಟುಂಬದ ಯಜಮಾನ ಕೃಷ್ಣ ಶೆಟ್ಟಿ ಉಪಸ್ಥಿತಿಯಲ್ಲಿ ಶಂಕರನಾರಾಯಣ ಮಯ್ಯ ಸಿರಿಬಾಗಿಲು ಬಿಡುಗಡೆಗೊಳಿಸಿದರು.
ಜೀರ್ಣೋದ್ಧಾರ ಸಮಿತಿ, ಆಡಳಿತ ಸಮಿತಿ ಮತ್ತು ಕುಟುಂಬಸ್ತರು ಊರ ಹತ್ತು ಸಮಸ್ತರು ಪಾಲ್ಗೊಂಡಿದ್ದರು. ಬ್ರಹ್ಮಕಲಶದ ಅಂಗವಾಗಿ ಏಪ್ರಿಲ್ 22ರಂದು ಬೆಳಗ್ಗೆ ಗೊನೆ ಮುಹೂರ್ತ ನಡೆಯಲಿದೆ. ಏ.28ರಂದು ಸಂಜೆ ಗಂಟೆ 6ಕ್ಕೆ ತಂತ್ರಿವರ್ಯರ ಆಗಮನ, ಪೂರ್ಣಕುಂಭ ಸ್ವಾಗತ, ವಿವಿಧ ವೈದಿಕ ಕಾರ್ಯಕ್ರಮಗಳು ಜರಗಲಿದೆ. ಏ.29ರಂದು ಬೆಳಿಗ್ಗೆ 6ರಿಂದ ಗಣಪತಿ ಹವನ, ಬ್ರಹ್ಮಕಲಶ ಪೂಜೆ, 9.50ರಿಂದ 11.25ರ ಮಿಥುನಲಗ್ನ ಮುಹೂರ್ತದಲ್ಲಿ ನೂತನ ತರವಾಡು ಮನೆಯ ಗೃಹಪ್ರವೇಶ ಹಾಗೂ ಶ್ರೀ ಕೋಮಾರು ಚಾಮುಂಡಿ, ಬೊಬ್ಬರ್ಯ- ಪರಿವಾರ ದೈವಗಳ ಪ್ರತಿಷ್ಠೆ ಬ್ರಹ್ಮಕಲಶ, ತಂಬಿಲ, ನಿತ್ಯ ನೈಮಿತ್ಯಗಳ ನಿರ್ಣಯ ಜರಗಲಿದೆ. ಬೆಳಿಗ್ಗೆ ಗಂಟೆ 11ರಿಂದ ಹರಿಸೇವೆ, ಸಂಜೆ 5ರಿಂದ ಶ್ರೀ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ, ಮಧ್ಯಾಹ್ನ 1ರಿಂದ ಅನ್ನಸಂತರ್ಪಣೆ, ರಾತ್ರಿ ಗಂಟೆ 7ರಿಂದ ಗುಳಿಗ ದೈವದ ನೇಮ, 8.30ಕ್ಕೆ ಭಂಡಾರ ಏರುವುದು, 9ರಿಂದ ಅನ್ನಸಂತರ್ಪಣೆ ಜರಗಲಿದೆ.
ಏಪ್ರಿಲ್ 30ರಂದು ಬೆಳಗ್ಗೆ 10.30ಕ್ಕೆ ಶ್ರೀ ಬೊಬ್ಬರ್ಯ ದೈವದ ನೇಮ, 11.30ಕ್ಕೆ ಧರ್ಮ ದೈವ ಶ್ರೀ ಕೋಮಾರು ಚಾಮುಂಡಿ ದೈವದ ನೇಮ, ಮಧ್ಯಾಹ್ನ 1ರಿಂದ ಅನ್ನಸಂತರ್ಪಣೆ, 2 ರಿಂದ ಕೊರತ್ತಿ ದೈವದ ನೇಮದೊಂದಿಗೆ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ.

ಎನ್‌ಡಿಎ ಅಭ್ಯರ್ಥಿ ಅಶ್ವಿನಿಯಿಂದ ಮತಯಾಚನೆ



ಬದಿಯಡ್ಕ: ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರು ಮಂಗಳವಾರ ಬದಿಯಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಮತಯಾಚನೆ ನಡೆಸಿದರು. ಬೆಳಗ್ಗೆ ದರ್ಬೆತ್ತಡ್ಕ, ಕಿಳಿಂಗಾರು ಬಡ್ಸ್ ಸ್ಕೂಲ್, ಶಾಲೆಯ ಪರಿಸರದಲ್ಲಿ ಕಾರ್ಯಕರ್ತರೊಂದಿಗೆ ಮತಯಾಚನೆಯಲ್ಲಿ ಭಾಗವಹಿಸಿದ್ದರು. ಅಲ್ಲದೆ ಕಾಲನಿ ನಿವಾಸಿಗಳನ್ನು ಭೇಟಿ ಮಾಡಿದ ಅವರು , ಅಳಕ್ಕೆ ತರವಾಡು ಮನೆ, ನೀರ್ಚಾಲು ಪೇಟೆಯಲ್ಲಿ ಮತಯಾಚಿಸಿ ಕುಮಾರಮಂಗಲ ಪರಿಸರದಲ್ಲಿ ವಿವಿಧ ಕಡೆಗಳಿಗೆ ತೆರಳಿದರು.

ಗುರುನರಸಿಂಹ ಯಕ್ಷಬಳಗ: ತಾಳಮದ್ದಳೆ



ಮಂಜೇಶ್ವರ: ತಾಡ ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನ ಹೇರೂರು ಮಂಗಲ್ಪಾಡಿ ದೇವಳ ವರ್ಷಾವಧಿ ಜಾತ್ರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ಪ್ರಯುಕ್ತ ಮೀಯಪದವು ಶ್ರೀ ಗುರುನರಸಿಂಹ ಯಕ್ಷ ಬಳಗದವರಿಂದ 'ಇಂದ್ರಜಿತು ಕಾಳಗ' ಯಕ್ಷಗಾನ ತಾಳಮದ್ದಳೆ ಪ್ರಸ್ತುತಿಗೊಂಡಿತು.
ಹಿಮ್ಮೇಳದಲ್ಲಿ ಭಾಗವತರಾಗಿ ರಾಮಪ್ರಸಾದ ಮಯ್ಯ ಕೂಡ್ಲು, ಚೆಂಡೆ ಮದ್ದಳೆಯಲ್ಲಿ ಮಧ್ವರಾಜ್ ಅಡಿಗ, ವಿಕ್ರಂ ಮಯ್ಯ ಪೈವಳಿಕೆ ಭಾಗವಹಿಸಿದ್ದರು. ಮುಮ್ಮೇಳದಲ್ಲಿ ಅರ್ಥದಾರಿಗಳಾಗಿ ರಾಜಾರಾಮ ರಾವ್ ಮೀಯಪದವು, ವೇದ ಮೂರ್ತಿ ಹರಿನಾರಾಯಣ ಮಯ್ಯ ಬಜೆ, ಯೋಗೀಶ ರಾವ್ ಚಿಗುರುಪಾದೆ, ಗುರುರಾಜ ಹೊಳ್ಳ ಬಾಯಾರು, ಗುರುಪ್ರಸಾದ ಹೊಳ್ಳ ತಿಂಬರ, ಶಿವರಾಮ ಪ್ರಸಾದ್ ಮಯ್ಯ ಇಚ್ಲಂಗೋಡು, ಡಾ.ಅಭಿಲಾಷ್ ಮಯ್ಯ ಕಡೆಗದ್ದೆ ಭಾಗವಹಿಸಿದ್ದರು.

ವಿಶ್ವ ಕ್ಷಯರೋಗ ದಿನಾಚರಣೆ, ಕ್ಷಯರೋಗ ಮುಕ್ತ ಪಂಚಾಯತ್ ಪ್ರಶಸ್ತಿಗಳ ವಿತರಣೆ





ಕಾಸರಗೋಡು: ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಭಾಗವಾಗಿ ಕಾಸರಗೋಡು ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ), ರಾಷ್ಟ್ರೀಯ ಆರೋಗ್ಯ ಮಿಷನ್, ಜಿಲ್ಲಾ ಟಿಬಿ ಕೇಂದ್ರ ಇವುಗಳು ಜಂಟಿಯಾಗಿ ವಿಶ್ವ ಕ್ಷಯರೋಗ ದಿನಾಚರಣೆ ಮತ್ತು ಕ್ಷಯರೋಗ ಮುಕ್ತ ಪಂಚಾಯತ್ ಪ್ರಶಸ್ತಿಗಳ ವಿತರಣೆ ಕಾರ್ಯಕ್ರಮ ಮಂಗಳವಾರ ಆಯೋಜಿಸಿದ್ದವು.
ಜಿಲ್ಲಾಧಿಕಾರಿ ಕಚೇರಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸಮಾರಂಭವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿ ಮಾತನಾಡಿದರು. ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಸಂತೋಷ್ ಬಿ. ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ ಕ್ಷಯರೋಗವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಜಾರಿಗೆ ತರಲಾದ ಕಾರ್ಯಕ್ರಮವಾಗಿದೆ. ಈ ಗುರಿ ಸಾಧಿಸಲು ರೋಗ ತಡೆಗಟ್ಟುವಿಕೆ, ಜಾಗೃತಿ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಇದಕ್ಕಾಗಿ ಸಾರ್ವಜನಿಕ ಭಾಗವಹಿಸುವಿಕೆ ಖಚಿತಪಡಿಸಿಕೊಳ್ಳುವ ಮೂಲಕ ಸ್ಥಳೀಯಾಡಳಿತ ಇಲಾಖೆ ಸಹಕಾರದೊಂದಿಗೆ ವಿವಿಧ ಚಟುವಟಿಕೆ ಹಮ್ಮಿಕೊಳ್ಳಲಾಗುತ್ತಿದೆ. ಕ್ಷಯ ರೋಗ ಚಟುವಟಿಕೆಗಳಿಗೆ ಸಂಬಂಧಿಸಿದ ಆರು ಪ್ರಮುಖ ಸೂಚಕಗಳನ್ನು ಪರಿಗಣಿಸಿ ಗ್ರಾ.ಪಂ.ಗಳು ಮತ್ತು ನಗರಸಭೆಗಳಿಗೆ ಕ್ಷಯರೋಗ ಮುಕ್ತ ಸ್ಥಾನಮಾನ ನೀಡುವ ಕೇಂದ್ರ ಟಿಬಿ ವಿಭಾಗದ ನಿರ್ಧಾರದ ಪ್ರಕಾರ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು 2025ರ ಪ್ರಶಸ್ತಿಗಳನ್ನು ವಿತರಿಸಿದರು.
ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಅರುಣ್ ಕುಮಾರ್ ಅವರು ಕ್ಷಯರೋಗ ಮುಕ್ತ ದಿನದ ಸಂದೇಶ ನೀಡಿದರು. ರಾಷ್ಟ್ರೀಯ ಆರೋಗ್ಯ ಮಿಷನ್‌ನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಡಾ.ಅರುಣ್ ಪಿ.ವಿ. ಮಾತನಾಡಿದರು. ಎಆರ್‌ಟಿ ನೋಡಲ್ ಅಧಿಕಾರಿ ಡಾ.ಜನಾರ್ದನ ನಾಯ್ಕ್, ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನ ಅಧಿಕಾರಿ ಡಾ.ಪ್ರವೀಣ್, ಸ್ಥಳೀಯಾಡಳಿತ ಇಲಾಖೆ ಉಪನಿರ್ದೇಶಕ ಕೆ.ವಿ.ಹರಿದಾಸ್, ಸಾರ್ವಜನಿಕ ಆರೋಗ್ಯ ತಜ್ಞೆ ಡಾ.ಲಕ್ಷ್ಮಿ, ತಾಂತ್ರಿಕ ಸಹಾಯಕ ಎಂ.ಚಂದ್ರನ್, ಜಿಲ್ಲಾ ಸಾಂಕ್ರಾಮಿಕ ರೋಗ ತಜ್ಞರಾದ ಫ್ಲೋರಿ ಜೋಸೆಫ್, ಜಿಲ್ಲಾ ಕೈಗಾರಿಕಾ ಕೇಂದ್ರ ಜನರಲ್ ಮೆನೇಜರ್ ರಂಜಿತ್ ಬಾಬು, ಡಾ.ನಾರಾಯಣ ಪ್ರದೀಪ್, ಡಾ.ಪ್ರವೀಣ್ ಎಸ್. ಬಾಬು, ಡಾ.ನೀತು ಸುಕುಮಾರನ್, ಜಿಲ್ಲಾ ಪರಿಶಿಷ್ಟ ಪಂಗಡ ವಿಭಾಗದ ಅಭಿವೃದ್ಧಿ ಅಧಿಕಾರಿ ರಾಘವನ್ ಮಾತನಾಡಿದರು. ಜಿಲ್ಲಾ ಕ್ಷಯರೋಗ ವಿಭಾಗ ಅಧಿಕಾರಿ ಡಾ.ಆರತಿ ರಂಜಿತ್ ಸ್ವಾಗತಿಸಿ, ಆಸ್ಪಿರೇಷನ್ ಬ್ಲಾಕ್ ಆರೋಗ್ಯ ಮೇಲ್ವಿಚಾರಕ ಅಜಿತ್ ಸಿ.ಫಿಲಿಪ್ ವಂದಿಸಿದರು.

> **ಪ್ರಶಸ್ತಿ ಪಡೆದವರ ವಿವರ**
>
> **ಬೆಳ್ಳೂರು, ವಲಿಯಪರಂಬ, ಕಯ್ಯೂರು ಚೀಮೇನಿ, ಚೆರುವತ್ತೂರು ಗ್ರಾ.ಪಂ.ಗಳಿಗೆ ಚಿನ್ನದ ಪದಕ ಲಭಿಸಿವೆ. ಬೇಡಡ್ಕ, ಕುತ್ತಿಕೋಲ್, ಬಳಾಲ್, ಕಳ್ಳಾರು, ಪನತ್ತಡಿ, ಮಡಿಕ್ಕೈ ಗ್ರಾ.ಪಂ.ಗಳಿಗೆ ಬೆಳ್ಳಿಯ ಪದಕ ದೊರೆಯಿತು. ಕಾಸರಗೋಡು ನಗರಸಭೆ, ನೀಲೇಶ್ವರ ನಗರಸಭೆ, ಕೋಡೋಂ ಬೇಳೂರು, ಈಸ್ಟ್ ಎಳೇರಿ, ಪೀಲಿಕೋಡ್, ವೆಸ್ಟ್ ಎಳೇರಿ, ಪುಲ್ಲೂರು ಪೆರಿಯ ಗ್ರಾ.ಪಂ.ಗಳು ಕಂಚಿನ ಪದಕ ತನ್ನದಾಗಿಸಿಕೊಂಡಿವೆ.**

ಸುತ್ತಮುತ್ತ

ಮಾಲೇಶ್ವರ ಕ್ಷೇತ್ರ: ಇಂದು ಬ್ರಹ್ಮಕಲಶಾಭಿಷೇಕ

ಕಡಬ: ತಾಲೂಕಿನ ಕೋಡಿಂಬಾಳ ಗ್ರಾಮದ ಮಾಲೇಶ್ವರ ಶ್ರೀ ಮಹಾಬಲೇಶ್ವರ ಸ್ವಾಮಿ ದೇವಸ್ಥಾನ ಮತ್ತು ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಗ್ಗೆ ದೇವಸ್ಥಾನದಲ್ಲಿ ಅಷ್ಟಬಂಧ ಕ್ರಿಯೆ, ಬ್ರಹ್ಮಕಲಶಾಭಿಷೇಕ ಹಾಗೂ ಶ್ರೀ ರುದ್ರಯಾಗ ನೆರವೇರಲಿದೆ. ಸಂಜೆ ಮಹಾಪೂಜೆ, ಶ್ರೀ ಭೂತ ಬಲಿ, ವಸಂತಕಟ್ಟೆ ಪೂಜೆ, ದರ್ಶನಬಲಿ, ಬಟ್ಟಲು ಕಾಣಿಕೆ, ಪ್ರಸಾದ ವಿತರಣೆ ಹಾಗೂ ರಾತ್ರಿ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಸಮಿತಿಯು ಪ್ರಕಟಣೆ ತಿಳಿಸಿದೆ.

ನಾಳೆ ಎಡಪದವು ಗಡುಸ್ಥಳದಲ್ಲಿ ದೊಂಪದ ಬಲಿ

ಕೈಕಂಬ: ಎಡಪದವು ಕೊಂದೋಡಿ ಗಡುಸ್ಥಳದ ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ವ್ಯಾಘ್ರಚಾಮುಂಡಿ ಹಾಗೂ ಮಹಿಷಂತಾಯ ದೈವಗಳ ದೊಂಪದ ಬಲಿ ನೇಮವು ಮಾ.26ಕ್ಕೆ ನಡೆಯಲಿದೆ. ಅಂದು ಸಂಜೆ 4ಕ್ಕೆ ಕೊರ್ಡೇಲು ಬಲ್ಲಾಳರ ಮನೆಯಿಂದ ಭಂಡಾರ ಹೊರಡುವುದು. 5ಕ್ಕೆ ಕೊಂದೋಡಿ ಗಡುಸ್ಥಳಕ್ಕೆ ಭಂಡಾರ ಆಗಮನ, 6ಕ್ಕೆ ಪ್ರತಿಷ್ಠಾ ದಿನಾಚರಣೆ ಮತ್ತು ನವಕ ಕಲಶ, 6.30ಕ್ಕೆ ಹೂವಿನ ಪೂಜೆ, ರಾತ್ರಿ 7ರಿಂದ ಸಾರ್ವಜನಿಕ ಅನ್ನಸಂತರ್ಪಣೆ. ರಾತ್ರಿ 8ಕ್ಕೆ ಮೂಲ ಮೈಸಂದಾಯ ದೈವದ ಗಗ್ಗರ ಸೇವೆ, 9ರಿಂದ ಪಿಲ್ಚಂಡಿ ದೈವದ ನೇಮ ನಡೆಯಲಿದೆ. ಮಾ.27ಕ್ಕೆ ಬೆಳಗ್ಗೆ ಭಂಡಾರ ನಿರ್ಗಮನವಾಗಲಿದೆ ಎಂದು ವ್ಯಾಘ್ರ ಚಾಮುಂಡಿ ಸೇವಾ ಸಮಿತಿಯ ಪ್ರಕಟಣೆ ತಿಳಿಸಿದೆ.

ಪಿಂಚಣಿ ಯೋಜನೆಗಳಿಗೆ ಆದಾಯ ಮಿತಿ ಹೆಚ್ಚಿಸಲು ಯಶ್‌ಪಾಲ್ ಆಗ್ರಹ

ಉಡುಪಿ: ಶಾಸಕ ಯಶ್ ಪಾಲ್ ಸುವರ್ಣ ಅವರು ರಾಜ್ಯ ಬಜೆಟ್ ಅಧಿವೇಶನದಲ್ಲಿ ಮಾಸಾಶನ (ಪಿಂಚಣಿ) ಯೋಜನೆಗಳಿಗೆ ಸಂಬಂಧಿಸಿದ ಮಹತ್ವದ ಸಮಸ್ಯೆಯನ್ನು ಸದನದ ಗಮನಕ್ಕೆ ತಂದಿದ್ದಾರೆ.



ಮಾಸಾಶನ ಸೌಲಭ್ಯ ಪಡೆಯಲು ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 32,000 ಆಗಿರುವುದರಿಂದ ಅನೇಕ ಅರ್ಹ ಬಡ ಕುಟುಂಬಗಳು ಯೋಜನೆಯ ಲಾಭದಿಂದ ವಂಚಿತರಾಗುತ್ತಿರುವುದಾಗಿ ಅವರು ತಿಳಿಸಿದ್ದಾರೆ. ಪ್ರಸ್ತುತ ಮಾಸಾಶನ ಪಡೆಯುತ್ತಿರುವ ಜಿಲ್ಲೆಯ 50,000 ಜನರು ಮತ್ತು ರಾಜ್ಯದ 24 ಲಕ್ಷಕ್ಕೂ ಹೆಚ್ಚು ಜನ ಮಾಸಾಶನ ಕಳೆದು ಕೊಳ್ಳುವ ಭೀತಿಯಲ್ಲಿದ್ದು ಸದ್ಯ ಮಾಸಾಶನದ ಮಿತಿಯನ್ನು ಹೆಚ್ಚಿಸುವ ಅಗತ್ಯತೆಯಿದೆ. ಈ ಹಿನ್ನೆಲೆಯಲ್ಲಿ ಮಾಸಾಶನದ ಆದಾಯ ಮಿತಿಯನ್ನು ರೂ. 32,000 ದಿಂದ ರೂ. 1,20,000ಕ್ಕೆ ಹೆಚ್ಚಿಸಲು ಸರ್ಕಾರವನ್ನು ಒತ್ತಾಯಿಸಿ, ಸದನದ ಗಮನ ಸೆಳೆದರು.

ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ದಿನ ವೇತನವೇ 370 ರೂಪಾಯಿ ಇದೆ. ತೀರ ಅವೈಜ್ಞಾನಿಕವಾಗಿರುವ ಈ ಹಿಂದಿನ 32 ಸಾವಿರ ಆದಾಯ ಮಿತಿಯನ್ನು ಏರಿಕೆ ಮಾಡದಿದ್ದಲ್ಲಿ ಬಡ ವಿಧವೆಯರು, ಹಿರಿಯ ನಾಗರಿಕರು ಸರ್ಕಾರದ ಸಾಮಾಜಿಕ ಬದ್ಧತೆ ಯೋಜನೆಗಳಿಂದ ವಂಚಿತರಾಗಲಿದ್ದಾರೆ. ರಾಜ್ಯ ಸರ್ಕಾರ ತಕ್ಷಣ ಈ ಗಂಭೀರ ಸಮಸ್ಯೆಗೆ ಪರಿಹಾರ ನೀಡಬೇಕು ಆದಾಯ ಮಿತಿ ಹೆಚ್ಚಳ ಮಾಡುವವರೆಗೆ ಪ್ರಸ್ತುತ ನಡೆಸುತ್ತಿರುವ ಪಿಂಚಣಿ ಪರಿಶೀಲನೆ ಮತ್ತು ರದ್ದತಿ ಪ್ರಕ್ರಿಯೆಯನ್ನು ತಡೆಹಿಡಿಯಬೇಕು ಎಂದು ಆಗ್ರಹಿಸಿದರು.

ಪಾಣಾಜೆ ಭರಣ್ಯ ದೇವಸ್ಥಾನದಲ್ಲಿ ಭಜನಾ ಸಂಕೀರ್ತನೆ

ನಿಡ್ಪಳ್ಳಿ: ಪಾಣಾಜೆ ಗ್ರಾಮದ ಭರಣ್ಯ ಶ್ರೀ ವೆಂಕಟರಮಣ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮಾ.22ರ ಸೂರ್ಯಾಸ್ತಮಾನದಿಂದ ಆರಂಭವಾಗಿ ಮಾ.23ರ ಸೂರ್ಯೋದಯದವರೆಗೆ ವಿವಿಧ ಭಜನಾ ತಂಡಗಳಿಂದ ಭಜನಾ ಸಂಕೀರ್ತನೆ ಕಾರ್ಯಕ್ರಮ ನಡೆಯಿತು. ದೇಗುಲದ ಅರ್ಚಕರಿಂದ ಮಾ.22ರಂದು ಸಂಜೆ ದೀಪ ಪ್ರತಿಷ್ಠೆ ನಡೆದು ರಾತ್ರಿ ದೇವರಿಗೆ ಮಂಗಳಾರತಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು. ಮಾ.23ರಂದು ಬೆಳಗ್ಗೆ ಭಜನಾ ಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು.
ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟ್ ಸದಸ್ಯರು, ಶ್ರೀ ವೆಂಕಟರಮಣ ದುರ್ಗಾಪರಮೇಶ್ವರಿ ಭಜನಾ ತಂಡದ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು. ಸುಮಾರು 12 ಭಜನಾ ತಂಡಗಳು ಭಜನಾ ಸಂಕೀರ್ತನೆಯಲ್ಲಿ ಪಾಲ್ಗೊಂಡರು.

ಮಂಗಳೂರಿನಲ್ಲಿ 'ಸಮರ್ಪಣಂ ಕಲೋತ್ಸವ' ಉದ್ಘಾಟಿಸಿ ಕಾಳಹಸ್ತೇಂದ್ರ ಸರಸ್ವತಿ ಸ್ವಾಮೀಜಿ ಆಶೀರ್ವಚನ

ವಿಶ್ವಕರ್ಮ ಸಮುದಾಯದ ವೃತ್ತಿಪರರು ಪ್ರಯತ್ನಶೀಲರಾಗಿ

ಮಂಗಳೂರು: 'ಸ್ವಾರ್ಥಿಯಾಗುವುದಕ್ಕಿಂತ ಸಾರಥಿಯಾಗು' ಅನ್ನುವ ಮಾತಿನಂತೆ ಎಲ್ಲಾ ಸದಸ್ಯರ ಸಕ್ರಿಯ ಸಹಕಾರದಿಂದ ವಿಶ್ವಕರ್ಮ ಕಲಾ ಪರಿಷತ್ತು ಸಾರಥಿಯ ರೀತಿಯಲ್ಲಿ ಸಮಾಜದ ಕಲಾವಿದರನ್ನು ಮುನ್ನಡೆಸುತ್ತಿದೆ. ಗೃಹ ಕೈಗಾರಿಕೆಯಿಂದ ಬೃಹತ್ ಕೈಗಾರಿಕೆಯೆಡೆಗೆ ಕುಲಕಸುಬನ್ನು ಕೊಂಡೊಯ್ಯುವಲ್ಲಿ ವಿಶ್ವಕರ್ಮ ಸಮುದಾಯ ವೃತ್ತಿಪರರು ಪ್ರಯತ್ನಶೀಲರಾಗಬೇಕು ಎಂದು ಆನೆಗುಂದಿ ಮಹಾ ಸಂಸ್ಥಾನದ ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳು ಹೇಳಿದರು.

ಅವರು ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಶ್ರಯದಲ್ಲಿ ಯುಗಾದಿ ಉತ್ಸವದ ಪಂಚಮಿ ದಿನದಂದು ಶ್ರೀ ಕ್ಷೇತ್ರದ ಆವರಣದಲ್ಲಿ ವಿಶ್ವಕರ್ಮ ಕಲಾ ಪರಿಷತ್ ಮಂಗಳೂರು ಇದರ ವತಿಯಿಂದ ಆಯೋಜಿಸಿದ್ದ 'ಸಮರ್ಪಣಂ ಕಲೋತ್ಸವ- 2026' ಕಾರ್ಯಕ್ರಮ ಉದ್ಘಾಟಿಸಿ, ಆಶೀರ್ವಚನ ನೀಡಿದರು.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ ಕಲೋತ್ಸವಕ್ಕೆ ಚಾಲನೆ ನೀಡಿ, ನಿಗಮದಿಂದ ಸಮುದಾಯದ ವಿದ್ಯಾರ್ಥಿಗಳಿಗೆ, ಕುಶಲಕರ್ಮಿಗಳಿಗೆ ಹಾಗೂ ಮಹಿಳೆಯರಿಗೆ ಸಿಗುವ ವಿಶೇಷ ಸವಲತ್ತುಗಳ ಕುರಿತಾಗಿ ಮಾಹಿತಿ ನೀಡಿದರು.

ವಿಶ್ವಕರ್ಮ ಕಲಾ ಪರಿಷತ್‌ನ ನೂತನ ವೆಬ್‌ಸೈಟ್‌ಗೆ ಲೆಕ್ಕ ಪರಿಶೋಧಕ ಎಸ್.ಎಸ್ ನಾಯಕ್ ಚಾಲನೆ



ನೀಡಿ, ಕೇವಲ ಮೂರು ವರ್ಷದಲ್ಲೇ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳ ಮೂಲಕ ಕಲಾ ಪರಿಷತ್ ಎಲ್ಲರ ಗಮನ ಸೆಳೆದಿದೆ. ಸಮಾನ ಮನಸ್ಕರು ಒಗ್ಗೂಡಿ ಕೆಲಸ ಮಾಡಿದರೆ ಯಶಸ್ಸು ಸಾಧ್ಯ. ಉತ್ತಮ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಮೂಲಕ ಕಲಾ ಪರಿಷತ್ ಯೋಗ್ಯ ಕೆಲಸವನ್ನು ಮಾಡುತ್ತಿದೆ ಎಂದು ಪರಿಷತ್ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ಇದೇ ಸಂದರ್ಭ ಶ್ರೇಷ್ಠ ರಥಶಿಲ್ಪಿ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಲ್ಪಗುರು ಶಿಲ್ಪಿ ಶ್ರೀ ಲಕ್ಷ್ಮೀನಾರಾಯಣ ಆಚಾರ್ಯ ಕೋಟೇಶ್ವರ ಅವರಿಗೆ ವಿಶ್ವಕರ್ಮ ಕುಲತಿಲಕ ಬಿರುದು ಸಹಿತ ಭೌವನ ವಿಶ್ವಕರ್ಮ ಕಲಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಿರಿಯ ಕಲಾ ಸಾಧಕ ಎಸ್.ವಿ ಆಚಾರ್, ಶಿಲ್ಪಿ ಎಸ್. ಮಂಜುನಾಥ ಆಚಾರ್ಯ, ಶಿಲ್ಪಿ ದಾಮೋದರ ಆಚಾರ್ಯ, ಬಿ. ರವಿಶಂಕರ್, ಗುಲಾಬಿ ಪಟ್ಟಾಭಿರಾಮ ಅವರಿಗೆ ಡಾ. ಎಸ್.ಪಿ ಗುರುದಾಸ್ ಮತ್ತು ಎಸ್.ಪಿ ಹರಿದಾಸ್ ಪ್ರಾಯೋಜಕತ್ವದಲ್ಲಿ ದಿ.ಶಿವಪುರ ಪದ್ಮನಾಭ ಆಚಾರ್ಯ ಪುರಸ್ಕಾರ, ವಿಶಿಷ್ಟ ಕಲಾ ಸಾಧಕರಾದ ಶಿಲ್ಪಿ ದಿವಾಕರ ಆಚಾರ್ಯ ಕೋಟೆಕಾರು, ಕಲ್ಲಮುಂಡ್ಕೂರು ಶಿಲ್ಪಿ ಹರೀಶ್ ಆಚಾರ್ಯ, ಶಿಲ್ಪಿ ಪ್ರಮೋದ್ ಸಿ.ಕೆ, ಶಿಲ್ಪಿ ಶ್ರೀಕಾಂತ ಆಚಾರ್ಯ ಕಲ್ಲಬೆಟ್ಟು, ಶಾಂತಲಾ ಸೀತಾರಾಮ ಆಚಾರ್ಯ ಅವರಿಗೆ ಪಿ.ಎನ್ ಆಚಾರ್ಯ ಅಭಿಮಾನ ಬಳಗ ಉಡುಪಿ ಇವರ ಪ್ರಾಯೋಜಕತ್ವದಲ್ಲಿ ಪಿ.ಎನ್. ಆಚಾರ್ಯ ಪುರಸ್ಕಾರದ ಸಹಿತ ವಿಶ್ವಕರ್ಮ ಕಲಾ ಪ್ರಶಸ್ತಿ, ಯುವ ಸಾಧಕರಾದ ವಾರಣ ನಾಗರಾಜ್, ಮನೋಜ್ಞ ಟಿ. ಆಚಾರ್ಯ, ಬಿಂದು ಕೆ.ಮಂಗಳೂರು, ಅಶ್ವಿತ್ ಆಚಾರ್ಯ ಎ.ಎಸ್, ಗಾಯತ್ರಿ ಕೆ.ಆಚಾರ್ಯ ಕೊಂಡೆವೂರು ಅವರಿಗೆ ಓಂ ಗುರೂಜೀ ಜುವೆಲ್ಲರ್ ವರ್ಕ್ಸ್ ಮಂಗಳೂರು ಇದರ ಮಾಲಕ ರಾಜಗೋಪಾಲ ಆಚಾರ್ಯ ಇವರ ಪ್ರಾಯೋಜಕತ್ವದಲ್ಲಿ ಶಾಂತಾ ಸುಬ್ರಾಯ ಆಚಾರ್ಯ ಸ್ಮಾರಕ ಪುರಸ್ಕಾರ ಸಹಿತ ವಿಶ್ವಕರ್ಮ ಕಲಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ವಿಶ್ವದಾಖಲೆ ನಿರ್ಮಿಸಿದ ಕಲಾವಿದೆ ಕವಿತಾ ಸಂದೀಪ್ ಪಾಲ್ಕೆ ಅವರನ್ನು ಅಭಿನಂದಿಸಲಾಯಿತು. ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಡಳಿತಾಧಿಕಾರಿ ಕೆ. ಉಮೇಶ್ ಆಚಾರ್ಯ ಶುಭಾಶಂಸನೆಗೈದರು. ಕಲಾ ಪರಿಷತ್ತಿನ ಅಧ್ಯಕ್ಷ ಡಾ. ಎಸ್. ಪಿ. ಗುರುದಾಸ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

> ವಿಶ್ವಕರ್ಮ ಸಮುದಾಯದವರು ಪಾರಂಪರಿಕ ವಿಧಾನದ ಜೊತೆಗೆ ತಂತ್ರಜ್ಞಾನ ಮತ್ತು ಸರಕಾರದಿಂದ ಸಿಗುವ ಸವಲತ್ತು ಬಳಸಿಕೊಂಡು ತಮ್ಮ ಕುಲ ಕಸುಬಿನಲ್ಲಿ ಉದ್ಯಮಶೀಲರಾಗಬೇಕು. ಇದಕ್ಕಾಗಿ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಬೇಕಾದ ನೆರವು ನೀಡುತ್ತೇನೆ.
> ● ಸುಜ್ಞಾನ ಮೂರ್ತಿ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ

ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ರಮಾನಾಥ ರೈ, ಲೋಕೇಶ್ ಎಂ.ಬಿ ಆಚಾರ್, ಸಂಧ್ಯಾ ಲಕ್ಷ್ಮಣ ಆಚಾರ್ಯ, ಪಿ.ಎನ್. ಆಚಾರ್ಯ, ಹರಿದಾಸ್ ಎಸ್.ಪಿ. ಆಚಾರ್ಯ, ಪ್ರೊ.ಜಿ.ಯಶವಂತ ಆಚಾರ್ಯ ಸುಂದರ ಆಚಾರ್ಯ ಬೆಳುವಾಯಿ, ಆಲೆವೂರು ಯೋಗೀಶ್ ಆಚಾರ್ಯ, ಜಗದೀಶ್ ಆಚಾರ್ಯ, ಪಿ. ಉಪೇಂದ್ರ ಆಚಾರ್ಯ, ದಿನೇಶ್ ಟಿ. ಶಕ್ತಿನಗರ, ಪುರೋಹಿತ ಶಶಿಧರ ಆಚಾರ್ಯ, ಪಿ. ರವೀಂದ್ರ ರಾವ್, ಜಗದೀಶ್ ಆಚಾರ್ಯ ಸಿದ್ದಕಟ್ಟೆ, ಅರುಣಾ ಸುರೇಶ್, ಖಜಾಂಚಿ ಎ. ಜಿ. ಸದಾಶಿವ, ಕಾರ್ಯದರ್ಶಿ ರಮ್ಯ ಲಕ್ಷ್ಮೀಶ್, ಮುಂತಾದವರು ಇದ್ದರು. ಪರಿಷತ್ತಿನ ಉಪಾಧ್ಯಕ್ಷೆ ರತ್ನಾವತಿ ಜೆ. ಬೈಕಾಡಿ ವಾರ್ಷಿಕ ವರದಿ ವಾಚಿಸಿದರು. ಯಜ್ಞೇಶ್ವರ ಕೃಷ್ಣಾಪುರ ವಂದಿಸಿದರು. ದಾಮೋದರ ಶರ್ಮ, ಉದಯಭಾಸ್ಕರ್ ಸುಳ್ಯ, ವಾರಣ ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

ಕಲೋತ್ಸವಕ್ಕೆ ಚಾಲನೆ ನೀಡುವುದಕ್ಕಾಗಿ ಶಿಲ್ಪಿ ದಿವಾಕರ ಆಚಾರ್ಯ ಕೋಟೆಕಾರ್ ತಯಾರಿಸಿದ ವಿಶ್ವಕರ್ಮನ ವಿಗ್ರಹ ಹಾಗೂ ಇದನ್ನು ರಿಮೋಟ್ ತಂತ್ರಜ್ಞಾನದ ಮೂಲಕ ಸ್ವಯಂಚಾಲಿತವಾಗಿ ಮೇಲೆ ಬರುವಂತೆ ಶ್ರೀ ಅಶ್ವಿತ್ ಎ.ಎಸ್ ವಿನ್ಯಾಸಗೊಳಿಸಿದ್ದು ವಿಶೇಷವಾಗಿ ಎಲ್ಲರ ಗಮನ ಸೆಳೆಯಿತು.

ಶಿಲ್ಪಿ ಡಾ. ಅರುಣ್ ಯೋಗಿರಾಜ್ ಅವರ ಶಿಷ್ಯ ಪ್ರಮೋದ್ ಸಿ.ಕೆ. ಸ್ಥಳದಲ್ಲೇ ರಚಿಸಿದ ಅನಂತ ಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳ ಆವೆಮಣ್ಣಿನ ಶಿಲ್ಪ, ಲಕ್ಷ್ಮೀನಾರಾಯಣ ಆಚಾರ್ಯರು ಸ್ಥಳದಲ್ಲೇ ರಚಿಸಿ ಉಡುಗೊರೆಯಾಗಿ ನೀಡುತ್ತಿದ್ದ ಗಣ್ಯರ ಭಾವಚಿತ್ರ, ಕೃಷ್ಣಲೀಲೆ ಅನ್ನುವ ಲೈವ್ ಆರ್ಟ್, ಸಮುದಾಯದ ಕಲಾವಿದರು ತಯಾರಿಸಿದ ವಿವಿಧ ಕಲಾಕೃತಿಗಳ ಪ್ರದರ್ಶನ, ಭಜನಾ ಸಂಕೀರ್ತನೆ ಮತ್ತು ಸಾಂಸ್ಕೃತಿಕ ವೈವಿಧ್ಯ ಕಾರ್ಯಕ್ರಮ ವಿಶೇಷ ಆಕರ್ಷಣೆಯಾಗಿತ್ತು.

ಮಾ.28ರಂದು ವಿಜಯ-ವಿಕ್ರಮ ಜೋಡುಕರೆ ಕಂಬಳ: ಸಿದ್ಧತಾ ಸಭೆ



ಉಪ್ಪಿನಂಗಡಿ: ವಿಜಯ- ವಿಕ್ರಮ ಜೋಡುಕರೆ ಕಂಬಳವು ಈ ಬಾರಿ ಮಾ.28ರಂದು ನಡೆಯಲಿದ್ದು, ಇದರ ಪೂರ್ವ ಸಿದ್ಧತಾ ಪರಿಶೀಲನಾ ಸಭೆ ಸಮಿತಿಯ ಅಧ್ಯಕ್ಷ, ಶಾಸಕ ಅಶೋಕ್ ಕುಮಾರ್ ರೈ ಕೋಡಿಂಬಾಡಿ ಅವರ ಅಧ್ಯಕ್ಷತೆಯಲ್ಲಿ ಹಳೆಗೇಟುವಿನ ನೇತ್ರಾವತಿ ನದಿ ಕಿನಾರೆಯ ಬದಿಯಲ್ಲಿರುವ ಕಂಬಳ ಕರೆಯ ಬಳಿ ನಡೆಯಿತು.

ಕರೆಯ ಸಿದ್ಧತೆ, ವೇದಿಕೆ, ವೀಕ್ಷಕರಿಗೆ ಆಸನ ವ್ಯವಸ್ಥೆ, ಸ್ವಚ್ಛತಾ ವ್ಯವಸ್ಥೆ ಹಾಗೂ ಕೋಣಗಳಿಗೆ ಮಾಡಿರುವ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದ ಅವರು ಬಳಿಕ ಮಾತನಾಡಿ, ಉಪ್ಪಿನಂಗಡಿ ಕಂಬಳೋತ್ಸವವು ಎಲ್ಲೆಡೆ ಹೆಸರುವಾಸಿ. ವರ್ಷಂಪ್ರತಿ ವಿಭಿನ್ನ ಕಾರ್ಯಕ್ರಮಗಳ ಜೋಡಣೆ ಯೊಂದಿಗೆ ಅದ್ದೂರಿಯಾಗಿ ಇಲ್ಲಿ ಕಂಬಳೋತ್ಸವವು ನಡೆಯುತ್ತಿದೆ. ಇಲ್ಲಿನ ಕಂಬಳವು ರಾಜ್ಯಕ್ಕೆ ಮಾದರಿಯಾಗಿದ್ದು, ಮುಖ್ಯಮಂತ್ರಿಯವರಿಂದಲೂ ಮೆಚ್ಚುಗೆ ವ್ಯಕ್ತವಾಗಿದೆ. ಈ ಬಾರಿಯೂ ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದಂತೆ ಅದ್ದೂರಿಯಾಗಿ ಕಂಬಳ ಆಯೋಜನೆಗೆ ಸಮಿತಿಯವರ ಒಗ್ಗಟ್ಟಿನ ಸಹಕಾರ ಅತೀ ಅಗತ್ಯ ಎಂದರು.

ಸಭೆಯಲ್ಲಿ ವಿಜಯ- ವಿಕ್ರಮ ಜೋಡುಕರೆ ಕಂಬಳ ಸಮಿತಿಯ ಗೌರವಾಧ್ಯಕ್ಷ ಎನ್. ಉಮೇಶ ಶೆಣೈ, ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಅರ್ಪಿಣಿಗುತ್ತು, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಬೆಳ್ಳಿಪ್ಪಾಡಿ ಕೈಪ, ಕೋಶಾಧಿಕಾರಿ ಸೀತಾರಾಮ ಶೆಟ್ಟಿ ಹೆಗ್ಡೆಹಿತ್ಲು, ಕಾರ್ಯದರ್ಶಿ ಶಿವರಾಮ ಶೆಟ್ಟಿ ಗೋಳ್ತಮಜಲು, ಚಂದ್ರಶೇಖರ ಮಡಿವಾಳ, ಜೊತೆ ಕಾರ್ಯದರ್ಶಿ ವಿಶ್ವನಾಥ ಶೆಟ್ಟಿ ಕಂಗ್ವೆ, ಉಪಾಧ್ಯಕ್ಷ ವಿಠಲ ಶೆಟ್ಟಿ ಕೊಲ್ಲೊಟ್ಟು, ವಾರಿಸೇನ ಜೈನ್ ಕೋಡಿಯಾಡಿಗುತ್ತು, ಗೌರವ ಸಲಹೆಗಾರ ನಿರಂಜನ್ ರೈ ಮಠಂತಬೆಟ್ಟು, ಸಂಘಟನಾ ಕಾರ್ಯದರ್ಶಿ ಯೋಗೀಶ್ ಎಸ್. ಸಾಮಾನಿ ಸಂಪಿಗೆದಡಿ ಮಠಂತಬೆಟ್ಟು, ಕೃಷ್ಣಪ್ರಸಾದ್ ಬೊಳ್ಳಾವು, ವಿಜಯ ಪೂಜಾರಿ ಚೀಮುಳ್ಳು, ಸಹ ಸಂಚಾಲಕ ಜಯಪ್ರಕಾಶ್ ಬದಿನಾರು, ಕುಮಾರನಾಥ ಪಲ್ಲತ್ತಾರು, ಸ್ವಾಗತ ಸಮಿತಿಯ ವಿಕ್ರಂ ಶೆಟ್ಟಿ ಅಂತರ, ಕೃಷ್ಣನಾಯ್ಕ ನೀರಾವರಿ ಸಮಿತಿಯ ಜಗದೀಶ್ ಕುಮಾರ್ ಪರಕಜೆ, ಫಾರೂಕ್ ಪೆರ್ನೆ, ಅಬ್ದುಲ್ ಖಾದರ್ ಮತ್ತಿತರರು ಉಪಸ್ಥಿತರಿದ್ದರು.

ಬಾಳೆಪುಣಿ: ತರಬೇತಿ ಕಾರ್ಯಾಗಾರ



ಕೊಣಾಜೆ: ಬಾಳೆಪುಣಿ ಮಂದಾರ ಸಂಜೀವಿನಿ ಒಕ್ಕೂಟ ಮತ್ತು ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಹಾಗೂ ವಿಕಾಸ ಟ್ರಸ್ಟ್ ಇದರ ವತಿಯಿಂದ ಎಂಬ್ರಾಯ್ಡರಿ ತರಬೇತಿಯ ಕಾರ್ಯಾಗಾರದ ಉದ್ಘಾಟನಾ ಸಮಾರಂಭ ಇತ್ತೀಚೆಗೆ ಬಾಳೆಪುಣಿ ಗ್ರಾಮ ಪಂಚಾಯತ್‌ನ ರಾಜೀವ ಗಾಂಧಿ ಸಭಾಂಗಣದಲ್ಲಿ ನಡೆಯಿತು.

ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಸಿಇಓ ಜ್ಯೋತಿರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ಒಕ್ಕೂಟದ ಕಾರ್ಯದರ್ಶಿ ನಿವೇದಿತಾ, ತರಬೇತುದಾರರಾದ ಕಾಂಚನ ಮೊದಲಾದವರು ಉಪಸ್ಥಿತರಿದ್ದರು. ಪಂಚಾಯತ್ ಕಾರ್ಯದರ್ಶಿ ಆಯಿಷಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನೀತಾ ಸ್ವಾಗತಿಸಿದರು. ಹರಿಣಾಕ್ಷಿ ವಂದಿಸಿದರು. ಗೀತಾ ನಿರೂಪಿಸಿದರು.

ಸಂತ ಫಿಲೋಮಿನಾ ಕಾಲೇಜಿನಿಂದ ಪುತ್ತೂರಿನಲ್ಲಿ ಗ್ರಾಹಕ ಜಾಗೃತಿ ಮೆರವಣಿಗೆ



ಪುತ್ತೂರು: ಅಂತಾರಾಷ್ಟ್ರೀಯ ಗ್ರಾಹಕರ ಹಕ್ಕುಗಳ ದಿನಾಚರಣೆ ಅಂಗವಾಗಿ ನಗರದ ಸಂತ ಫಿಲೋಮಿನಾ ಕಾಲೇಜಿನ ಗ್ರಾಹಕ ಕ್ಲಬ್, ಡಿ.ಕೆ. ಜಿಲ್ಲಾ ಗ್ರಾಹಕ ಸಂಘಟನೆಗಳ ಫೆಡರೇಶನ್ ಸಹಯೋಗದಲ್ಲಿ 'ಗ್ರಾಹಕ ಜಾಗೃತಿ ಮೆರವಣಿಗೆ-2ಕೆ26' ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆಂಟನಿ ಪ್ರಕಾಶ್ ಮೊಂತೆರೊ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪುತ್ತೂರಿನ ಡಿವೈಎಸ್ಪಿ ಪ್ರಮೋದ್ ಕುಮಾರ್ ಬಿ., ದಕ್ಷಿಣ ಕನ್ನಡ ಗ್ರಾಹಕ ಸಂಘಗಳ ಫೆಡರೇಶನ್ ಅಧ್ಯಕ್ಷೆ ಸುನಂದಾ ಕೆ. ಹಾಗೂ ಕಾರ್ಯದರ್ಶಿ ಡಿ.ಆರ್. ಸುನಂದಾ ದಂಬೆಕೋಡಿ ಉಪಸ್ಥಿತರಿದ್ದರು. ಸುಮಾರು 100 ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಭಾಗವಹಿಸಿದ ಈ ಮೆರವಣಿಗೆ ಬೆಳಗ್ಗೆ 9.45ಕ್ಕೆ ಕಾಲೇಜಿನ ಆವರಣದಿಂದ ಪ್ರಾರಂಭವಾಗಿ, ದರ್ಬೆ ಸರ್ಕಲ್ ಮೂಲಕ ಗಾಂಧಿ ಕಟ್ಟೆವರೆಗೆ ಸಾಗಿತು. ವಿದ್ಯಾರ್ಥಿಗಳು ಘೋಷಣೆಗಳು ಹಾಗೂ ಫಲಕಗಳ ಮೂಲಕ ಗ್ರಾಹಕರ ಹಕ್ಕುಗಳು, ಜವಾಬ್ದಾರಿಗಳು ಹಾಗೂ ಅನ್ಯಾಯ, ವಾಣಿಜ್ಯ ಕ್ರಮಗಳಿಂದ ರಕ್ಷಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

'ಜಾಗರೂಕರಾಗಿರಿ-ಸುರಕ್ಷಿತರಾಗಿರಿ-ಜವಾಬ್ದಾರಿಯುತ ಗ್ರಾಹಕರಾಗಿರಿ' ಎಂಬ ಸಂದೇಶದೊಂದಿಗೆ ನಡೆದ ಈ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು. ದರ್ಬೆ ಸರ್ಕಲ್‌ನಲ್ಲಿ ವಿದ್ಯಾರ್ಥಿಗಳು ಬೀದಿ ನಾಟಕವನ್ನು ಪ್ರದರ್ಶಿಸಿ, ಆನ್‌ಲೈನ್ ವಂಚನೆ, ತಪ್ಪು ಜಾಹೀರಾತುಗಳು ಹಾಗೂ ಗ್ರಾಹಕರ ಶೋಷಣೆ ಮೊದಲಾದ ಸಮಸ್ಯೆಗಳ ಬಗ್ಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸಿದರು. ವಾಣಿಜ್ಯ ವಿಭಾಗದ ಗ್ರಾಹಕ ಕ್ಲಬ್ ಸಂಯೋಜಕರಾದ ಪ್ರವೀಣ್ ಡಿ. ಮತ್ತು ಸ್ವಾತಿ ಶೆಟ್ಟಿ ಕಾರ್ಯಕ್ರಮವನ್ನು ಸಂಯೋಜಿಸಿದರು.

ಕಾಲುಸಂಕ ನಿರ್ಮಾಣಕ್ಕೆ ಭೂಮಿಪೂಜೆ



ಬೈಂದೂರು: ಸಮೃದ್ಧ ಬೈಂದೂರು ಪರಿಕಲ್ಪನೆಯ ಅರುಣಾಚಲಂ ಕಾಲುಸಂಕ ಯೋಜನೆಯಲ್ಲಿ ಡಾ. ಆರ್. ಅರುಣಾಚಲಂ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಇವರ ಸಹಯೋಗದೊಂದಿಗೆ ಬೈಂದೂರು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ನೂತನ ಕಾಲುಸಂಕ ನಿರ್ಮಾಣಕ್ಕೆ ಶಾಸಕ ಗುರುರಾಜ್ ಗಂಟಿಹೊಳೆ ಭೂಮಿಪೂಜೆ ನೆರವೇರಿಸಿದರು.

ಕಾಲ್ತೋಡು ಗ್ರಾಮದ ಗುಡಿಕೇರಿ ಹಾಗೂ ಬೋಳಂಬಳ್ಳಿ ನಾರ್ಕಡಿ ಬೀಜಮಕ್ಕಿ ಜಡ್ಕಲ್ ಗ್ರಾಮದ ಬಸ್ರಿಬೇರು ಕುಡ್ತಾರು, ಇಡೂರು ಗ್ರಾಮದ ಹೊಸೂರು ಕೆಳಜಡ್ಡು, ಕಮಲಶಿಲೆ ಗ್ರಾಮದ ಯಳಬೇರು, ಕೊಡ್ಲಾಡಿ ಗ್ರಾಮದ ಮೂರ್ಸಾಲುಜಡ್ಡು, ಶಂಕರನಾರಾಯಣ ಗ್ರಾಮದ ಬಟ್ಟೆಹಕ್ಲು ಇಲ್ಲಿ ನೂತನ ಅರುಣಾಚಲಂ ಕಾಲುಸಂಕಕ್ಕೆ ಭೂಮಿಪೂಜೆ ನೆರವೇರಿಸಲಾಯಿತು.

ಮಾರ್ಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಆರ್‌ಪಿಎಲ್ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಮಂಜೂರಾದ ರೂ.14 ಲಕ್ಷ ವೆಚ್ಚದಲ್ಲಿ ಬಾಲಕ ಮತ್ತು ಬಾಲಕಿಯರ ಹೈಟೆಕ್ ಶೌಚಾಲಯದ ಕಾಮಗಾರಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು. ಕೊಡ್ಲಾಡಿ ಮೂರ್ಸಾಲು ಜಡ್ಡು ಕಾಲುಸಂಕ ನಿರ್ಮಾಣಕ್ಕೆ ಐದು ದಶಕಗಳಿಂದ ಬೇಡಿಕೆ ಇದ್ದು.. ನಿರ್ಮಾಣದ ನಂತರ ಬೈಂದೂರು ಕ್ಷೇತ್ರದಲ್ಲಿ ಅತಿ ಉದ್ದದ ಕಾಲುಸಂಕ ಎಂಬ ಖ್ಯಾತಿಗೆ ಒಳಗಾಗಲಿದೆ. ಸುಮಾರು 170 ಅಡಿ ಉದ್ದದ ಕಾಲುಸಂಕ ಲಾರಿ ಚೆಸ್ಸಿ ಬಳಸಿ ನವೀನ ಮಾದರಿಯಲ್ಲಿ ನಿರ್ಮಾಣವಾಗಲಿದೆ.

ಡಾ. ಟಿ.ಎಂ.ಎ ಪೈ ರೋಟರಿ ಆಸ್ಪತ್ರೆ: ಮಂಡಿ ಬದಲಾವಣೆ ಶಸ್ತ್ರಚಿಕಿತ್ಸೆ ಯಶಸ್ವಿ



ಕಾರ್ಕಳ: ಇಲ್ಲಿನ ಡಾ. ಟಿ.ಎಂ.ಎ. ಪೈ ರೋಟರಿ ಆಸ್ಪತ್ರೆಯಲ್ಲಿ ಮೊದಲ ಬಾರಿಗೆ ಸಂಪೂರ್ಣ ಮೊಣಕಾಲು ಬದಲಿ (ಮಂಡಿ ಬದಲಾವಣೆ) ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ದೀರ್ಘಕಾಲದ ಮೊಣಕಾಲು ನೋವಿನಿಂದ ಬಳಲುತ್ತಿದ್ದ ಮತ್ತು ನಡೆಯಲು ತೊಂದರೆಯಾಗುತ್ತಿದ್ದ 63 ವರ್ಷದ ಮಹಿಳೆಗೆ ಈ ಮಂಡಿ ಬದಲಾವಣೆ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಉಡುಪಿಯ ಡಾ. ಟಿ.ಎಂ.ಎ ಪೈ ಆಸ್ಪತ್ರೆಯ ಮೂಳೆಚಿಕಿತ್ಸಾ ಸಲಹೆಗಾರ ಡಾ. ಅರವಿಂದ್ ಶಾನಭಾಗ್ ಅವರು ಕಾರ್ಕಳದ ಡಾ. ಸುನಿಲ್ ಬಾಳಿಗಾ ಮತ್ತು ಡಾ. ಫ್ರಾಂಕ್ಲಿನ್ ನೇತೃತ್ವದ ಮೂಳೆಚಿಕಿತ್ಸಾ ತಂಡದ ಸಹಯೋಗದೊಂದಿಗೆ ಸಂಪೂರ್ಣ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದರು.

ಐತಿಹಾಸಿಕ ಮೈಲಿಗಲ್ಲು

ಈ ಬಗ್ಗೆ ಟಿಎಂಎ ಪೈ ರೋಟರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಕೀರ್ತಿನಾಥ್ ಬಲ್ಲಾಳ ಅವರು ಸಂತಸ ವ್ಯಕ್ತಪಡಿಸಿ, ಮೂಳೆ ಶಸ್ತ್ರಚಿಕಿತ್ಸಕರು, ಅರಿವಳಿಕೆ ತಂಡ, ನರ್ಸಿಂಗ್ ಸಿಬ್ಬಂದಿ, ಫಿಸಿಯೋಥೆರಪಿಸ್ಟ್, ಆಡಳಿತ ಸಿಬ್ಬಂದಿ ಮತ್ತು ಬೆಂಬಲ ತಂಡಗಳ ಸಂಘಟಿತ ಪ್ರಯತ್ನಗಳನ್ನು ಶ್ಲಾಘಿಸಿದರು. ಈ ಐತಿಹಾಸಿಕ ಮೈಲಿಗಲ್ಲು ಸಾಧ್ಯವಾಗಲು ಕಾರಣರಾದ ಎಲ್ಲಾ ಪಾಲುದಾರರಿಗೆ ಅವರು ನಿರಂತರ ಬೆಂಬಲಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿದರು.



ಮುಲ್ಕಿ ಸೀಮೆಯ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಶ್ರೀ ದೇವರಿಗೆ ಇಂದು ನಡೆಯಲಿರುವ ಅಷ್ಟಬಂಧ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕದ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿಗಳ ಅಮೃತ ಹಸ್ತದಲ್ಲಿ, ಪ್ರಧಾನ ಅನುವಂಶಿಕ ಅರ್ಚಕ ಪಿ. ಸುಬ್ರಹ್ಮಣ್ಯ ಭಟ್ ಉಪಸ್ಥಿತಿಯಲ್ಲಿ ಮಂಗಳವಾರ ಸಂಜೆ ವಿಶೇಷ ಪ್ರಾರ್ಥನೆ ಹಾಗೂ ಬ್ರಹ್ಮಕಲಶಾಧಿವಾಸ ಹೋಮ ನಡೆಯಿತು.



ಶಿವಮೊಗ್ಗದ ತಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ ನೀರಾನೆ ದಾಳಿಯಿಂದ ಮರಣ ಹೊಂದಿದ ಡಾ. ಸಮೀಕ್ಷಾ ರೆಡ್ಡಿ ಸಾವನ್ನು ಖಂಡಿಸಿ ಕುಶಾಲನಗರ ಪಶುವೈದ್ಯ ಆಸ್ಪತ್ರೆ ಆವರಣದಲ್ಲಿ ಪಶು ವೈದ್ಯಕೀಯ ಸಂಘದ ಕೊಡಗು ಶಾಖಾ ವತಿಯಿಂದ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಯಿತು. ಸಂಘದ ಅಧ್ಯಕ್ಷ ಡಾ. ಲಿಂಗರಾಜ್ ದೊಡ್ಡಮನಿ, ಪಶುವೈದ್ಯ ಡಾ. ಸಂಜೀವ ಕುಮಾರ್ ಶಿಂಧೆ, ಡಾ. ಸಿದ್ದಲಿಂಗಯ್ಯ ಹಿರೇಮಠ್, ಡಾ. ಅಮೃತಾ ಹಾಗೂ ಇಲಾಖೆ ಸಿಬ್ಬಂದಿಗಳಾದ ಸತ್ತಾರ್ ಖಾನ್, ಮೀನಾಕ್ಷಿ, ಶೋಭಾವತಿ, ಭವ್ಯ, ಗಣೇಶ್ ಮತ್ತಿತರರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆಯಿಂದ ಸಮಾಲೋಚನ ಸಭೆ | ಬಂಟ್ವಾಳ ತಾಲೂಕು ಸಮಿತಿ ರಚನೆ

ತುಳುನಾಡಿನ ಸಾಂಪ್ರದಾಯಿಕ ಜೂಜು ರಹಿತ ಕೋಳಿ ಅಂಕಕ್ಕೆ ಅವಕಾಶ ಕಲ್ಪಿಸಿ: ಬಂಗೇರ ಆಗ್ರಹ

ಬಂಟ್ವಾಳ: ತುಳುನಾಡಿನ ಸಾಂಪ್ರದಾಯಿಕ ಕೋಳಿ ಅಂಕಗಳಿಗೆ ಜೂಜು ರಹಿತವಾಗಿ ನಡೆಸಲು ಅವಕಾಶ ಕಲ್ಪಿಸಬೇಕು. ಜಾನಪದ ಕ್ರೀಡೆಯಾದ ಕಂಬಳದಂತೆ ಜೂಜುರಹಿತ ಕೋಳಿ ಅಂಕ ಉಳಿಸಲು ಎಲ್ಲರೂ ಒಗ್ಗಟ್ಟಾಗಿ ಸರಕಾರವನ್ನು ಒತ್ತಾಯಿಸಬೇಕಾಗಿದೆ ಎಂದು ಜಿ.ಪಂ.ಮಾಜಿ ಸದಸ್ಯ ಎಂ. ತುಂಗಪ್ಪ ಬಂಗೇರ ಅವರು ಹೇಳಿದರು.

ದ.ಕ. ಜಿಲ್ಲಾ ಸಾಂಪ್ರದಾಯಿಕ ಆಚರಣಾ ಹಿತ ರಕ್ಷಣಾ ವೇದಿಕೆಯಿಂದ ಬಂಟ್ವಾಳ ತಾಲೂಕಿನ ವಗ್ಗ ಕಾವಳಪಡೂರು ಪ್ರಾ.ಕೃ.ಪ.ಸ. ಸಂಘದ ಸಮೃದ್ಧಿ ಸಹಕಾರ ಸೌಧ ಸಭಾಂಗಣದಲ್ಲಿ ಮಂಗಳವಾರ ನಡೆದ ಸಮಾಲೋಚನ ಸಭೆಯಲ್ಲಿ ಅವರು ಮಾತನಾಡಿದರು.

ಜೂಜಿಗಾಗಿ ಕೋಳಿ ಅಂಕವನ್ನು ಸಿಕ್ಕಸಿಕ್ಕ ಕಡೆಯಲ್ಲಿ ನಡೆಸಬಾರದು. ಕೋಳಿ ಅಂಕ ಉಳಿಸುವ ಕುರಿತಂತೆ ಜಿಲ್ಲಾ ಪಂಚಾಯತ್‌ನಲ್ಲಿಯೂ ಈ ಹಿಂದೆ ಧ್ವನಿ



ಎತ್ತಿದ್ದೇನೆ. ಕಂಬಳದ ರೀತಿಯಾಗಿ ತಾಲೂಕುವಾರು ಸಮಿತಿ ರಚಿಸಿ ಜೂಜು ರಹಿತ ಕೋಳಿ ಅಂಕ ನಡೆಸುವಂತಾಗಬೇಕು ಎಂದು ಅವರು ಹೇಳಿದರು.

ಬಂಟ್ವಾಳ ನಗರ ಯೋಜನ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಬೇಬಿ ಕುಂದರ್ ಮಾತನಾಡಿ, ಈ ಹೋರಾಟಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದರು.

ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಶಿವಣ್ಣ ಗೌಡ ಇಡ್ಯಾಡಿ ಮಾತನಾಡಿ, ಕಳೆದ ಕೆಲವು ತಿಂಗಳುಗಳಿಂದ ಕೋಳಿ ಅಂಕ ನಿಂತಿರುವುದು ವಿಷಾದನೀಯ. ಮುಂದಿನ ದಿನಗಳಲ್ಲಿ ಅದನ್ನು ಪುನರಾರಂಭಿಸಿ ಮುಂದುವರಿಸುವುದು ನಮ್ಮ ಕರ್ತವ್ಯ ಎಂದರು.

> ಜಾನಪದ ಕ್ರೀಡೆಗಳು ರೈತರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ದ.ಕ. ಜಿಲ್ಲೆಯಲ್ಲಿ ಜಾತ್ರೆ, ನೇಮ, ಕೋಲ, ಕಂಬಳ, ಅಂಕ, ಆಯನ ಮೊದಲಾದ ಧಾರ್ಮಿಕ ಆಚರಣೆಗಳು ನಡೆಯುವುದು ಸಂಪ್ರದಾಯವಾಗಿದ್ದು, ಇದರ ಜೊತೆ ಕೋಳಿ ಅಂಕವೂ ಪ್ರಮುಖ ಆಚರಣೆಯಾಗಿದೆ.
> ● ಶಿವಣ್ಣ ಗೌಡ ಇಡ್ಯಾಡಿ

ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿ, ಕಾರ್ಕಳ, ಕುಂದಾಪುರ ಭಾಗಗಳಲ್ಲಿ ಸುಮಾರು 25 ಲಕ್ಷಕ್ಕೂ ಅಧಿಕ ಕೋಳಿ ಅಂಕ ಅಭಿಮಾನಿಗಳಿದ್ದು, ಹಲವರು ಇದನ್ನೇ ಜೀವನೋಪಾಯವಾಗಿ ಅವಲಂಬಿಸಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಇದ್ದರೆ ಮಾತ್ರ ಸಂಘಟನೆಗೆ ಬಲ ಬರುತ್ತದೆ ಎಂದು ಹೇಳಿದರು.

ಜಿಲ್ಲಾ ಸಮಿತಿ ಅಧ್ಯಕ್ಷ ಬೆಳ್ಳಿಯಪ್ಪ ಗೌಡ ತಿಮರೆಗುಡ್ಡೆ ಅವರು ಮಾತನಾಡಿ, ಕುದುರೆ ರೇಸ್, ಕಂಬಳ, ಜಲ್ಲಿಕಟ್ಟು ಬೆಂಬಲಿಸುವ ಸರಕಾರ ಕೋಳಿ ಅಂಕಕ್ಕೆ ಮಾತ್ರ ಯಾಕೆ ಅಡ್ಡಿ ಪಡಿಸಲಾಗುತ್ತಿದೆ. ಈ ಬಗ್ಗೆ ಸಿಎಂ., ಗೃಹಸಚಿವರು ಸಹಿತ ಜಿಲ್ಲೆಯ ಎಲ್ಲಾ ಶಾಸಕರಿಗೂ ಮನವಿ ಸಲ್ಲಿಸಲಾಗಿದೆ. ಸರಕಾರವನ್ನು ಎಲ್ಲ ಕಡೆಯಿಂದಲೂ ಒತ್ತಡ ಹಾಕಿದಾಗ ಯಶಸ್ಸು ಸಾಧ್ಯವಾಗುವುದು ಎಂದು ಹೇಳಿದರು.

ಉದ್ಯಮಿ ವೀರೇಂದ್ರ ಬಿ.ಅಮೀನ್, ಪ್ರಮುಖರಾದ ಬಟ್ಯಪ್ಪ ಪೂಜಾರಿ ಬಲ್ನಾಡು, ಆನಂದ ಪೂಜಾರಿ ಕಡಬ, ಗಂಗಾಧರ ಪೂಜಾರಿ ಕಚೆಕಾರು, ಜಯಚಂದ್ರ ಬೊಳ್ಳಾರ್, ಮೋನಪ್ಪ ಪೂಜಾರಿ ಮುಲ್ಲಾಜೆಮಾಡ, ಹರೀಶ್ ದಾಸ್ ಕಾವಳಕಟ್ಟೆ ಮತ್ತಿತರರು ಇದ್ದರು.

ಈ ಸಂದರ್ಭ ಸಾಂಪ್ರದಾಯಿಕ ಆಚರಣಾ ಹಿತ ರಕ್ಷಣಾ ವೇದಿಕೆಯ ಬಂಟ್ವಾಳ ತಾಲೂಕು ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಗಂಗಾಧರ ಪೂಜಾರಿ ಕಚೆಕಾರು, ಗೌರವಾಧ್ಯಕ್ಷರಾಗಿ ಬಟ್ಯಪ್ಪ ಪೂಜಾರಿ, ಕೃಷ್ಣಪ್ಪ ಪೂಜಾರಿ ನರ್ಸಿಕುಮೇರ್, ಉಪಾಧ್ಯಕ್ಷರಾಗಿ ಅಜಿತ್ ವಗ್ಗ ಚಂದ್ರಶೇಖರ ಪೂಜಾರಿ ಕುಮಂಗಿಲ, ಪ್ರ. ಕಾರ್ಯದರ್ಶಿಯಾಗಿ ಹರೀಶ್ ದಾಸ್, ಗೌರವ ಸಲಹೆಗಾರರರಾಗಿ ಪ್ರಕಾಶ್ ಪೂಜಾರಿ, ಜಗದೀಶ್ ಪಚ್ಚಾಜೆ, ದಿವಾಕರದಾಸ್ ಅವರನ್ನು ಆಯ್ಕೆ ಮಾಡಲಾಯಿತು. ದಿವಾಕರ ದಾಸ್ ಕಾವಳಕಟ್ಟೆ ಸ್ವಾಗತಿಸಿ, ಜಯ ಪ್ರಸನ್ನ ನಿಡ್ವಾಲ್ ನಿರೂಪಿಸಿದರು.

ಸುತ್ತ ಮುತ್ತ

'ಯುಕ್ತಿ 2026'ರಲ್ಲಿ ಬಂಟಕಲ್ ವಿದ್ಯಾರ್ಥಿಗಳು ದ್ವಿತೀಯ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ವಿದ್ಯಾರ್ಥಿಗಳಾದ ಗೌರವ್ ಶೆಟ್ಟಿ ಮತ್ತು ಕಾರ್ತಿಕ್ ಎ ಆಚಾರ್ಯ ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ 'ಯುಕ್ತಿ 202', ರಾಷ್ಟ್ರೀಯ ಮಟ್ಟದ ಲೈನ್ ಫಾಲೋವರ್ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿದ್ದಾರೆ.

ವರ್ಗಾವಣೆ ಮಾಡುವ ಅಧಿಕಾರ ನೀಡದೇ ಇದ್ದಲ್ಲಿ ಜಿಪಿಎ ನೋಂದಣಿ ಐಚ್ಛಿಕ

ಬೈಂದೂರು: ಪತ್ತಿನ ಸಹಕಾರಿ ಸಂಘಗಳಲ್ಲಿ ಜಂಟಿ ಮಾಲಿಕತ್ವದ ಆಧಾರದ ಮೇಲೆ ಸಾಲ ತೆಗೆದುಕೊಳ್ಳಲು ನೀಡುವ ಜಿಪಿಎಗಳಲ್ಲಿ ಸ್ಥಿರಾಸ್ತಿಯನ್ನು ವರ್ಗಾವಣೆ ಮಾಡುವ ಅಧಿಕಾರ ನೀಡದೇ ಇದ್ದಲ್ಲಿ ಅಂತಹ ಜಿಪಿಎಗಳ ನೋಂದಣಿಯು ಐಚ್ಛಿಕವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸದನದಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬೆಳೆಸಾಲಕ್ಕೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಜಿಪಿಎ ನೋಂದಣಿ ಕಡ್ಡಾಯ ಮಾಡುವುದನ್ನು ಕೈಬಿಡಲು, ಜಂಟಿ





ಆಸ್ತಿ ಮಾಲಿಕತ್ವ ಇರುವಲ್ಲಿ ಜಿಪಿಎಯನ್ನು ನೊಂದಣಿ ಕಡ್ಡಾಯ ಮಾಡುವ ನಿಯಮವನ್ನು ಸಡಿಲಗೊಳಿಸಿ ಈ ಹಿಂದಿನಂತೆಯೇ ಕೃಷಿಕರಿಗೆ ಅನುಕೂಲವಾಗುವಂತೆ ಮರುಜಾರಿ ಮಾಡುವಂತೆ ಪ್ರಸ್ತಾಪಿಸಿದ ಸಂದರ್ಭ ಉತ್ತರಿಸಿದ ಮುಖ್ಯಮಂತ್ರಿಗಳು, ಸ್ಥಿರಾಸ್ತಿಯನ್ನು ವರ್ಗಾವಣೆ ಮಾಡಲು ಅಧಿಕಾರ ನೀಡುವ ಜಿಪಿಎಗಳ ತಿದ್ದುಪಡಿ ತರುವ ಕ್ರಮವನ್ನು ಕಂದಾಯ ಇಲಾಖೆಯಿಂದ ಕ್ರಮವಹಿಸಲಾಗಿದೆ. ಈ ಕ್ರಮವನ್ನು ಸ್ಥಿರಾಸ್ತಿಗಳ ಖರೀದಿದಾರರಿಗೆ ಹಾಗೂ ಮಾರಾಟಗಾರರಿಗೆ ಹೆಚ್ಚಿನ ಭದ್ರತೆಯನ್ನು ಒದಗಿಸುವ ಉದ್ದೇಶಕ್ಕಾಗಿ ಮಾಡಲಾಗಿದೆ. ಸ್ಥಿರಾಸ್ತಿಯನ್ನು ವರ್ಗಾವಣೆ ಮಾಡಲು ಅಧಿಕಾರ ನೀಡುವ ಜಿಪಿಎಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಅಂಕಿ ಅಂಶಗಳ ಪ್ರಕಾರ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಲ್ಲಿ ಜಿಪಿಎ ಆಧಾರವಾಗಿ (ಜಂಟಿ ಮಾಲಿಕತ್ವಕ್ಕೆ) ವಿತರಿಸಿದ ಕೃಷಿ ಸಾಲ ಒಟ್ಟು ಸಂಖ್ಯೆ 30507, ಒಟ್ಟು ಮೊತ್ತ 658 ಕೋಟಿ, ಅಲ್ಪಾವಧಿ ಸಾಲ ಸಂಖ್ಯೆ 21101, ಮೊತ್ತ 437 ಕೋಟಿ. ಮಧ್ಯಮಾವಧಿ /ದೀರ್ಘಾವಧಿ ಸಾಲ ಸಂಖ್ಯೆ 9406 ಕೋಟಿ, ಮೊತ್ತ 221 ಕೋಟಿ ಆಗಿದೆ ಎಂದು ಮಾಹಿತಿ ನೀಡಿದ್ದಾರೆ ಎಂದು ಹೇಳಿದ್ದಾರೆ.

ಮಾ.27ರಂದು ತಲ್ಲೂರಿನಲ್ಲಿ ಮೆಸ್ಕಾಂ ಜನಸಂಪರ್ಕ ಸಭೆ

ಉಡುಪಿ: ಮೆಸ್ಕಾಂ ತಲ್ಲೂರು ಉಪವಿಭಾಗ ಕಚೇರಿಯಲ್ಲಿ ಮಾ. 27ರಂದು ಬೆಳಗ್ಗೆ 10.30ರಿಂದ 12 ಗಂಟೆಯವರೆಗೆ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ಸಂಪರ್ಕಸಹಾಯಕ ದೂರವಾಣಿ ಸಂಖ್ಯೆ:- 08254-238182.

ವೆಂಟೆಡ್ ಡ್ಯಾಂ ಗೇಟ್ ಕಳವು: ಕಾರ್ಯಕರ್ತರ ಮೇಲೆ ಹಲ್ಲೆಗೆ ಆಕ್ರೋಶ

ಉಡುಪಿ: ಕಾರ್ಕಳ ತಾಲೂಕಿನ ಮುಂಡ್ಲಿ ವೆಂಟೆಡ್ ಡ್ಯಾಂನಲ್ಲಿದ್ದ ಭಾರಿ ಗಾತ್ರದ ಕಬ್ಬಿಣದ ಗೇಟ್‌ಗಳನ್ನು ಕಳವು ಮಾಡಿ ಮಾರಾಟ ಮಾಡಿರುವ ಗಂಭೀರ ಪ್ರಕರಣ ನಡೆದಿದ್ದು, ಈ ಬಗ್ಗೆ ಸಮಗ್ರ ತನಿಖೆಯಾಗಬೇಕು ಎಂದು ಕಾಂಗ್ರೆಸ್ ಮುಖಂಡ ಮುನಿಯಾಲು ಉದಯಕುಮಾರ್ ಶೆಟ್ಟಿ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಗರದ ಕುಡಿಯುವ ನೀರಿನ ಮೂಲವಾಗಿರುವ ಮುಂಡ್ಲಿ ವೆಂಟೆಡ್ ಡ್ಯಾಂನ ಮೂರು ಪ್ರಮುಖ ಕಬ್ಬಿಣದ ಗೇಟ್‌ಗಳನ್ನು ಕತ್ತರಿಸಿಕೊಂಡು ಹೋಗಿ ಮಾರಾಟ ಮಾಡಲಾಗಿದೆ. ಇದು ಕೇವಲ ಕಳವಲ್ಲ, ವ್ಯವಸ್ಥಿತವಾದ ಲೂಟಿಯಾಗಿದೆ ಎಂದು ಅವರು ಟೀಕಿಸಿದರು. ಈ ಕೃತ್ಯದಲ್ಲಿ ಭಾಗಿಯಾಗಿರುವವರನ್ನು ತಕ್ಷಣವೇ ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಬೇಕು ಎಂದು ಅವರು ಆಗ್ರಹಿಸಿದರು. ಇದೇ ವೇಳೆ ಮುಂಡ್ಕೂರಿನಲ್ಲಿ ನಡೆದ ಘಟನೆಯನ್ನು ಪ್ರಸ್ತಾಪಿಸಿದ ಅವರು, ಅಲ್ಲಿನ ಈಶ್ವರ ದೇವಸ್ಥಾನದ ಜಾತ್ರೆಯ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬಿಜೆಪಿ ಬೆಂಬಲಿತ ಗೂಂಡಾಗಳು ಹಲ್ಲೆ ನಡೆಸಿರುವುದು ಖಂಡನೀಯ ಎಂದರು. ಕಾರ್ಯಕರ್ತರಿಗೆ ಬೆದರಿಕೆ ಹಾಕಿ ದೈಹಿಕವಾಗಿ ಹಲ್ಲೆ ಮಾಡುವ ಮೂಲಕ ಹತಾಶೆಯ ರಾಜಕಾರಣ ಮಾಡಲಾಗುತ್ತಿದೆ. ಇಂತಹ ದಾದಾಗಿರಿ ಮತ್ತು ಗೂಂಡಾವರ್ತನೆಗೆ ನಾವು ಹೆದರುವುದಿಲ್ಲ. ದೌರ್ಜನ್ಯ ಎಸಗಿದವರ ವಿರುದ್ಧ ಪೊಲೀಸ್ ಇಲಾಖೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಭಾನು ಭಾಸ್ಕರ್, ಪ್ರಸನ್ನ ಶೆಟ್ಟಿ, ದಿನೇಶ್ ಶೆಟ್ಟಿ, ಗೋಪಿನಾಥ್ ಭಟ್ ಉಪಸ್ಥಿತರಿದ್ದರು.

ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ- ಮಾಜಿ ಶಾಸಕ ರಘುಪತಿ ಭಟ್ ಬೆಂಬಲಿಗರ ವಾಕ್ಸಮರ

ರಾಜಕೀಯ ಹತಾಶೆಯಿಂದ ಆಧಾರರಹಿತ ಆರೋಪ: ಅಮೀನ್

ಉಡುಪಿ: ಶಾಸಕ ಯಶ್‌ಪಾಲ್ ಸುವರ್ಣ ವಿರುದ್ಧ ರಾಜಕೀಯ ಹತಾಶೆಯಿಂದ ಮಾಜಿ ಶಾಸಕ ರಘುಪತಿ ಭಟ್ ಮಾಡುತ್ತಿರುವ ಆಧಾರರಹಿತ ಆರೋಪಗಳನ್ನು ತಕ್ಷಣ ಹಿಂಪಡೆದು ಬೇ?ರತ್ ಕ್ಷಮೆಯಾಚಿಸಬೇಕೆಂದು ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್ ಆಗ್ರಹಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡಾನಿಡಿಯೂರು ಗ್ರಾಮದಲ್ಲಿ ಮಾಜಿ ಶಾಸಕರ ಒಡೆತನದ ಜಮೀನಿನ ನಕಲಿ ದಾಖಲೆ ಸೃಷ್ಟಿಸಿ ಅರ್ಜಿ ಸಲ್ಲಿಸಿರುವ ಬಗ್ಗೆ ಸಾರ್ವಜನಿಕರ ದೂರಿನಂತೆ ಶಾಸಕರು ಕಾನೂನು ಕ್ರಮಕ್ಕೆ ಪತ್ರ ಬರೆದಿದ್ದಾರೆ. 3 ಬಾರಿ ಶಾಸಕರಾಗಿದ್ದ ರಘುಪತಿ ಭಟ್ ಅವರಿಗೆ ಹಿಂದುಳಿದ ವರ್ಗದ ಸಾಮಾನ್ಯ ಕಾರ್ಯಕರ್ತ ಶಾಸಕನಾಗಿದ್ದನ್ನು ಒಪ್ಪುವ ಮನಸ್ಥಿತಿಯಿಲ್ಲ, ಕಳೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷಕ್ಕೆ ದ್ರೋಹ ಬಗೆದು ಬಂಡಾಯವೆದ್ದ ಅವರಿಗೆ ಶಾಸಕರ ಬದ್ಧತೆಯನ್ನು ಟೀಕಿಸುವ ನೈತಿಕತೆ ಇಲ್ಲ, ಅಧಿಕಾರದ ಲಾಲಸೆಯಿಂದ ಕಾರ್ಯಕರ್ತರನ್ನು ನಡುನೀರಲ್ಲಿ



ಕೈಬಿಟ್ಟ ಭಟ್, ಹಗಲಿರುಳು ಶ್ರಮಿಸುತ್ತಿರುವ ಯಶ್‌ಪಾಲ್ ಸುವರ್ಣ ಅವರ ತೇಜೋವಧೆ ಮಾಡುತ್ತಿದ್ದಾರೆ ಎಂದು ದಿನೇಶ್ ಅಮೀನ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ರಾಜೀವ್ ಕುಲಾಲ್, ಪ್ರಭಾಕರ್ ಪೂಜಾರಿ, ಪ್ರದೀಪ್, ಶ್ರೀವತ್ಸ ಮೊದಲಾದವರು ಉಪಸ್ಥಿತರಿದ್ದರು.



ಮಹೇಶ್ ಠಾಕೂರ್ ತಿರುಗೇಟು

ದಿನೇಶ್ ಅಮೀನ್ ಅವರ ಟೀಕೆಗೆ ಮಾಜಿ ನಗರಾಧ್ಯಕ್ಷ ಮಹೇಶ್ ಠಾಕೂರ್ ಪ್ರಬಲ ಕೌಂಟರ್ ನೀಡಿದ್ದಾರೆ. 'ದಿನೇಶ್ ಅಮೀನ್ ಅವರ ಮಾತುಗಳು ಹೃದಯದಿಂದ ಬಂದಿದ್ದಲ್ಲ, ಅದು ಒತ್ತಡದ ಸ್ವರಗಳು' ಎಂದು ಲೇವಡಿ ಮಾಡಿರುವ ಅವರು, ರಘುಪತಿ ಭಟ್ ಬಿಜೆಪಿ ಸಕ್ರಿಯ ಕಾರ್ಯಕರ್ತರಾಗಿದ್ದಾಗಲೇ (2024) ಅವರ ವಿರುದ್ಧ ಶಾಸಕ ಯಶ್‌ಪಾಲ್ ದೂರು ನೀಡಿದ್ದ ದಾಖಲೆಗಳು ಕಣ್ಣ ಮುಂದೆಯೇ ಇವೆ. ತನ್ನ ಗೆಲುವಿಗೆ ಕಾರಣರಾದ ನಾಯಕರ ವಿರುದ್ಧವೇ ದೂರು ನೀಡುವ ಮೂಲಕ ಶಾಸಕರೇ ದ್ವೇಷದ ರಾಜಕಾರಣ ಆರಂಭಿಸಿದ್ದಾರೆ ಎಂಬುದು ಇದರಿಂದ ಸಾಬೀತಾಗುತ್ತದೆ ಎಂದರು.

ರಘುಪತಿ ಭಟ್ ಎಂದೂ ಜಾತಿ ರಾಜಕಾರಣ ಮಾಡಿದವರಲ್ಲ, ಉಡುಪಿ ನಗರಸಭೆಯಲ್ಲಿ ತಮ್ಮದೇ ಜಾತಿಯವರಿದ್ದರೂ ಹಿಂದುಳಿದ ವರ್ಗದವರಿಗೆ ಅತಿಹೆಚ್ಚು ಬಾರಿ ಅಧ್ಯಕ್ಷ ಪಟ್ಟ ನೀಡಿದ್ದು ಭಟ್ಟರು. ಮೀನುಗಾರ ಸಮುದಾಯಕ್ಕೆ ಅತಿಹೆಚ್ಚು ಯೋಜನೆ ತಂದವರನ್ನು 'ಜಾತಿವಾದಿ' ಎಂದು ಕರೆಯುವುದು ಸರಿಯಲ್ಲ, ರಘುಪತಿ ಭಟ್ ಈಗ ಎಲ್ಲವನ್ನೂ ಮೆಟ್ಟಿ ನಿಂತು ನ್ಯಾಯ ಪಡೆದಿದ್ದಾರೆ. ನಾವು ಅಧಿಕೃತವಾಗಿ ಪಕ್ಷದಲ್ಲಿಲ್ಲದಿದ್ದರೂ ಭಾವನಾತ್ಮಕವಾಗಿ ಅದರ ಜೊತೆಗಿದ್ದೇವೆ ಎಂದು ಠಾಕೂರ್ ಸ್ಪಷ್ಟಪಡಿಸಿದರು.

ಏಕವಿನ್ಯಾಸ ನಕ್ಷೆಯನ್ನು ಮಂಜೂರು: ಧರಣಿ ಅಂತ್ಯ

ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಮುಂದೆ ಮಾಜಿ ಶಾಸಕ ರಘುಪತಿ ಭಟ್ ನಡೆಸುತ್ತಿದ್ದ ಅನಿರ್ದಿ?ಷ್ಟಾವಧಿ ಧರಣಿ ಸತ್ಯಾಗ್ರಹ ಎರಡನೇ ದಿನಕ್ಕೆ ಯಶಸ್ವಿಯಾಗಿದೆ. ಬಡಾನಿಡಿಯೂರು ಗ್ರಾಮದಲ್ಲಿ ರೆಸಾರ್ಟ್ ನಿರ್ಮಿಸಲು ಉದ್ದೇಶಿಸಿದ್ದ ಜಾಗಕ್ಕೆ ಏಕ ವಿನ್ಯಾಸ ನಕ್ಷೆ ಅನುಮೋದಿಸಲು ಪ್ರಾಧಿಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಅವರು ಧರಣಿ ಕುಳಿತಿದ್ದರು. ಪ್ರತಿಭಟನೆಗೆ ಮಣಿದ ಪ್ರಾಧಿಕಾರವು ಅಂತಿಮವಾಗಿ ಏಕವಿನ್ಯಾಸ ನಕ್ಷೆಯನ್ನು ಮಂಜೂರು ಮಾಡಿದ್ದು, ತಮ್ಮ ಧರಣಿಯನ್ನು ಅಂತ್ಯಗೊಳಿಸಿದ್ದಾರೆ.

- **ಶಾಸಕರ ಬದ್ಧತೆಯನ್ನು ಟೀಕಿಸುವ ನೈತಿಕತೆ ಇಲ್ಲ: ದಿನೇಶ್ ಅಮೀನ್**
- **ಮೀನುಗಾರ ಸಮುದಾಯಕ್ಕೆ ಅತಿಹೆಚ್ಚು ಯೋಜನೆ ತಂದವರನ್ನು 'ಜಾತಿವಾದಿ' ಎಂದು ಕರೆಯುವುದು ಸರಿಯಲ್ಲ: ಮಹೇಶ್ ಠಾಕೂರ್**

ಸಚ್ಚೇರಿ ಗಾಂದಡ್ಪು ಶ್ರೀ ಮಹಾದೇವಿ ದೇವಸ್ಥಾನದಲ್ಲಿ ಉತ್ಸವ

ಏ.1ರಂದು ಪುನಃ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ

ಕಾರ್ಕಳ: ಕಾರ್ಕಳ ತಾಲೂಕಿನ ಮುಂಡ್ಕೂರು ಗ್ರಾಮದ ಸಚ್ಚೇರಿ ಗಾಂದಡ್ಪು ಶ್ರೀ ಮಹಾದೇವಿ ದೇವಸ್ಥಾನದಲ್ಲಿ ಮಾ. 30ರಿಂದ ಏ. 1ರವರೆಗೆ ಶ್ರೀ ಮಹಾದೇವಿ ಅಮ್ಮನವರ ಪುನಃ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ, ಶ್ರೀ ನಾಗದೇವರ ಪುನಃ ಪ್ರತಿಷ್ಠಾ ಮಹೋತ್ಸವ, ಶ್ರೀ ಅಣ್ಣಪ್ಪ ಸ್ವಾಮಿಯ ಪುನಃ ಪ್ರತಿಷ್ಠಾ ಕಲಶಾಭಿಷೇಕವು ಕಡಂದಲೆ ವೇದಮೂರ್ತಿ ಶ್ರೀ ಸ್ಕಂದ ಭಟ್‌ರವರ ಪೌರೋಹಿತ್ಯದಲ್ಲಿ, ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕ ವೇದಮೂರ್ತಿ ಶ್ರೀ ಹರಿನಾರಾಯಣ ಅಸ್ರಣ್ಣರ ಉಪಸ್ಥಿತಿಯಲ್ಲಿ ನೆರವೇರಲಿದೆ

ಈ ಬಗ್ಗೆ ದೇಗುಲದ ಶ್ರೀ ದೇವಿ ಪಾತ್ರಿ ಹಾಗೂ ವ್ಯವಸ್ಥಾಪಕ ಕೇಶವ ಅಂಚನ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಮಾ. 30ರ ಸೋಮವಾರ ಬೆಳಿಗ್ಗೆ 9 ಗಂಟೆಗೆ ತೋರಣ ಮುಹೂರ್ತ, ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡು ವಿವಿಧ ಧಾರ್ಮಿಕ ಕಾರ್ಯಕ್ರಮಗಳ ನಡೆಯಲಿದೆ. ಬಳಿಕ, ರಾತ್ರಿ ಗಂಟೆ 7ರಿಂದ ಸಾರ್ವಜನಿಕ ಅನ್ನಸಂತರ್ಪಣೆ, 7.30ರಿಂದ ಸಭಾ ಕಾರ್ಯಕ್ರಮ ಹಾಗೂ ರಾತ್ರಿ ಗಂಟೆ 8ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿಜಯ ಕುಮಾರ್ ಕೊಡಿಯಾಲ್‌ಬೈಲ್ ತಂಡದವರಿಂದ 'ಶಿವದೂತ ಗುಳಿಗೆ' ಎಂಬ ಭಕ್ತಿ ಪ್ರಧಾನ ತುಳು ನಾಟಕ ಜರುಗಲಿದೆ.

ಮಾ. 31ರಂದು ಬೆಳಿಗ್ಗೆ 9ಕ್ಕೆ ವಿವಿಧ ದೇವತಾ ಕಾರ್ಯಗಳು ಪ್ರಾರಂಭಗೊಂಡು, ಬಳಿಕ ರಾತ್ರಿ ಗಂಟೆ 7ರಿಂದ ಸಾರ್ವಜನಿಕ ಅನ್ನಸಂತರ್ಪಣೆ ನಡೆದು, ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಕುದ್ರೋಳಿ ಗಣೇಶ್ ಹಾಗೂ ಬಳಗದವರಿಂದ 'ವಿಸ್ಮಯ ಜಾದೂ' ವಿನೂತನ ಮ್ಯಾಜಿಕ್ ಪ್ರದರ್ಶನ ನಡೆಯಲಿದೆ.

ಏ. 1ರಂದು ಬೆಳಿಗ್ಗೆ ಮೀನಲಗ್ನದಲ್ಲಿ ಶ್ರೀ ದೇವರ ಪ್ರತಿಷ್ಠೆ, ನಾಗದೇವರಿಗೆ ಪಂಚ ವಿಂಶತಿಕಲಶಾಧಿವಾಸ, ನಾಗಬಿಂಬ ಪ್ರತಿಷ್ಠೆ, ಆಶ್ಲೇಷಾ ಬಲಿ, ಅಣ್ಣಪ್ಪ ಸ್ವಾಮಿಯ ಪ್ರತಿಷ್ಠೆ ಜರುಗಲಿದೆ. ಬಳಿಕ ಬೆಳಿಗ್ಗೆ 10.30ಕ್ಕೆ ಶ್ರೀ ಮಹಾದೇವಿ ಅಮ್ಮನವರ ದರ್ಶನ ಸೇವೆ, 11ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಮಹಾ ಅನ್ನಸಂತರ್ಪಣೆ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ರಾತ್ರಿ ಗಂಟೆ 8ಕ್ಕೆ ಬೆನಕ ಆರ್ಟ್ಸ್ ಕುಡ್ಲ ಇವರಿಂದ 'ಪೊರಿಪುದಪ್ಪೆ ಜಲದುರ್ಗೆ' ಎಂಬ ಸಿನಿನಾಟಕ ನಡೆಯಲಿದೆ. ರಾತ್ರಿ ಗಂಟೆ 10ರಿಂದ ಶ್ರೀ ಅಣ್ಣಪ್ಪ ಸ್ವಾಮಿಯ ನೇಮ ಜರುಗಲಿದೆ. ಏ.3ರಂದು ಸಂಜೆ 6.30ರಿಂದ ಪೊಸ್ರಾಲು ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾ ಮಂಡಳಿ ಸಚ್ಚೇರಿಪೇಟೆ ಇವರಿಂದ 'ಕಾರ್ಣಿಕದ ಉಳ್ಳಾಲ್ತಿ' ಎಂಬ ಯಕ್ಷಗಾನ ಬಯಲಾಟ ನಡೆಯಲಿದೆ. ಬ್ರಹ್ಮಕಲಶಾಭಿಷೇಕದಂದು ಸುಮಾರು ನಾಲ್ಕು ಸಾವಿರ ಜನ ಸೇರುವ ನಿರೀಕ್ಷೆ ಇದ್ದು, ಸ್ಥಳೀಯ ಪರಿಸರಗಳಿಂದ ಬಸ್ಸಿನ ವ್ಯವಸ್ಥೆ ಇದೆ ಎಂದು ತಿಳಿಸಿದ್ದಾರೆ.

ಗೋಷ್ಠಿಯಲ್ಲಿ ಪೊಸ್ರಾಲು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರ ಜಗದೀಶ ಶೆಟ್ಟಿ ಸಚ್ಚರಪರಾರಿ, ಪೊಸ್ರಾಲು ಮುಂಡ್ಕೂರು ಬ್ರಹ್ಮ ಶ್ರೀ ನಾರಾಯಣ ಗುರು ಸಂಘದ ಗೌರವಾಧ್ಯಕ್ಷ ಶ್ರೀಧರ ಸನಿಲ್, ಆದಿಜಾರಾಂದಯ ದೈವಸ್ಥಾನ ಶಿರ್ವ ಇದರ ವ್ಯವಸ್ಥಾಪಕ ತಮ್ಮಣ್ಣ ಪೂಜಾರಿ, ಕಾರ್ಯಕ್ರಮದ ಸಂಯೋಜಕ ಕೃಷ್ಣ ಸಾಲ್ಯಾನ್ ಸಂಕಲಕರಿಯ, ಶರತ್ ಶೆಟ್ಟಿ ಸಚ್ಚೇರಿಪೇಟೆ ಉಪಸ್ಥಿತರಿದ್ದರು.

- **ಮಾ. 31ರ ಬೆಳಿಗ್ಗೆ 9ಕ್ಕೆ ವಿವಿಧ ದೇವತಾ ಕಾರ್ಯಗಳು ಆರಂಭ**
- **ಏ. 1ರಂದು ಬೆಳಿಗ್ಗೆ ಮೀನಲಗ್ನದಲ್ಲಿ ಶ್ರೀ ದೇವರ ಪ್ರತಿಷ್ಠೆ, ನಾಗಬಿಂಬ ಪ್ರತಿಷ್ಠೆ, ಅಣ್ಣಪ್ಪ ಸ್ವಾಮಿಯ ಪ್ರತಿಷ್ಠೆ, ಶ್ರೀ ಅಣ್ಣಪ್ಪ ಸ್ವಾಮಿಯ ನೇಮ**
- **ಬ್ರಹ್ಮಕಲಶಾಭಿಷೇಕದಂದು ಸುಮಾರು ನಾಲ್ಕು ಸಾವಿರ ಜನ ಸೇರುವ ನಿರೀಕ್ಷೆ**

ಹೊಸಾಡು ಗ್ರಾಮ ಪಂಚಾಯತ್‌ನ ಪ್ರಥಮ ಸುತ್ತಿನ ಗ್ರಾಮಸಭೆ

ಸ್ವಚ್ಛತೆಗೆ ಆದ್ಯತೆ ನೀಡಲು ಗ್ರಾಮಸ್ಥರ ಆಗ್ರಹ

ಕುಂದಾಪುರ: ಹೊಸಾಡು ಗ್ರಾ.ಪಂ. ಸಭಾಭವನದಲ್ಲಿ ಸೋಮವಾರ ನಡೆದ 2025-26ನೇ ಸಾಲಿನ ಪ್ರಥಮ ಸುತ್ತಿನ ಗ್ರಾಮಸಭೆ ನಡೆಯಿತು.

ಹೊಸಾಡು ಗ್ರಾಮಪಂಚಾಯತ್ ವ್ಯಾಪ್ತಿಯ ಬಹುತೇಕ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಈಗ ಸರಬರಾಜು ಮಾಡುತ್ತಿರುವ ಕುಡಿಯುವ ನೀರು ಕೆಸರಿನಿಂದ ಕೂಡಿದ್ದು ನೀರಿನ ಮೇಲೆ ಎಣ್ಣೆ ಪಸೆಯಂತೆ ನಿಲ್ಲುತ್ತಿದೆ. ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಶುದ್ಧ ಕುಡಿಯುವ ನೀರು ಸರಬರಾಜು ಮಾಡುವಂತೆ ಸ್ಥಳೀಯರಾದ ಸಾವಿತ್ರಿ ಆಗ್ರಹಿಸಿದರು. ಸೇನಾಪುರ ಗ್ರಾಮದ ಹಲವು ಮನೆಗಳಿಗೆ ಕುಡಿಯುವ ನೀರಿನ ಪೂರೈಕೆ ಆಗುತ್ತಿಲ್ಲ ಎಂದು ಸ್ಥಳೀಯರೊಬ್ಬರು ಸಭೆಯ ಗಮನ ಸೆಳೆದರು.

ಗ್ರಾಪಂ. ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಬಾವಿಯಿಲ್ಲ, ಎರಡು ಬೋರ್‌ವೆಲ್ ಇದ್ದು, ಬೇಸಿಗೆಯಲ್ಲಿ ನೀರಿನ ಮಟ್ಟ ಕಡಿಮೆಯಾಗಿ ಕೆಸರು ಮಿಶ್ರಿತ ನೀರು ಬರುತ್ತಿದೆ. ಶುದ್ಧ ಕುಡಿಯುವ ನೀರು ನೀಡಲು ಕ್ರಮಕೈಗೊಳ್ಳುವುದಾಗಿ ಪಿಡಿಒ ಶೋಭಾ ಭರವಸೆ ನೀಡಿದರು.



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅನುದಾನವನ್ನು ಸಮರ್ಪಕವಾಗಿ ಬಳಸಬೇಕು. ಈ ಅನುದಾನವನ್ನು ಅನ್ಯ ಕಾರ್ಯಗಳಿಗೆ ಬಳಸದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಬಳಸಬೇಕು ಎಂದು ಆಗ್ರಹಿಸಿದ ಸ್ಥಳೀಯರಾದ ಲಕ್ಷ್ಮಣ, ಎಸ್.ಸಿ ಮತ್ತು ಎಸ್.ಟಿ ಕಾಲೋನಿಯಲ್ಲಿ ರಸ್ತೆ ಮತ್ತು ದಾರಿದೀಪದ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು. ಕಳೆದ ಆರು ತಿಂಗಳಿನಿಂದ 11ಬಿ ಅರ್ಜಿ ಬಾಕಿ ಇದ್ದು, ಬಹಳಷ್ಟು ತೊಂದರೆಯಾಗುತ್ತಿದೆ ಎಂದು ಕಂಚುಗೋಡು ಭಾಗದ ಮಹಿಳೆಯೊಬ್ಬರು ಹೇಳಿದರು. ಗ್ರಾಪಂ. ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸ್ಥಳೀಯರು ಮನವಿ ಮಾಡಿದರು.

ಮುಳ್ಳಿಕಟ್ಟೆ- ಗುಜ್ಜಾಡಿ ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿದ್ದ ಸುಮಾರು 900 ಚೀಲ ತ್ಯಾಜ್ಯವನ್ನು ಸಂಗ್ರಹಿಸಿ ಪರಿಸರ ಸ್ವಚ್ಛಗೊಳಿಸಲಾಗಿದೆ. ಈ ಪರಿಸರದಲ್ಲಿ ಕಸ ಎಸೆದ ಇಬ್ಬರಿಗೆ ದಂಡ ವಿಧಿಸಲಾಗಿದೆ. ಎಸ್‌ಎಲ್‌ಆರ್‌ಎಂ ಘಟಕಕ್ಕೆ ಕಸ ನೀಡದವರ ಮತ್ತು ಬೀದಿ ಬದಿಗಳಲ್ಲಿ ಕಸ ಎಸೆಯುವವರ ವಿರುದ್ಧವೂ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ ಎಂದು ಪಿಡಿಒ ಶೋಭಾ ಹೇಳಿದರು.

ಕಳೆದ 10 ವರ್ಷಗಳಲ್ಲಿ ಗ್ರಾ.ಪಂ. ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಎನ್‌ಆರ್‌ಇಜಿ ಮತ್ತು ತೆರಿಗೆ ಸಂಗ್ರಹದಲ್ಲಿ ಮುಂಚೂಣಿಯಲ್ಲಿದೆ. ಗ್ರಾ.ಪಂ. ಸೇವೆಯಲ್ಲಿ ಯಾವುದೇ ತೊಂದರೆಯಾದರೆ ಗಮನಕ್ಕೆ ತರುವಂತೆ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ, ಆಡಳಿತಾಧಿಕಾರಿ ಸಂಜೀವ ಅರಕೇರಿ ಹೇಳಿದರು. ಸೇನಾಪುರ ಗ್ರಾಮ ಆಡಳಿತ ಅಧಿಕಾರಿ ಅನಿಲ್, ಅಂಗನವಾಡಿ ಮೇಲ್ವಿಚಾರಕಿ ರೇಖಾ, ಪಶು ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್, ಆರೋಗ್ಯ ಇಲಾಖೆಯ ಭಾಗ್ಯಲಕ್ಷ್ಮೀ ಇಲಾಖೆ ಮಾಹಿತಿ ನೀಡಿದರು. ಹೊಸಾಡು ಗ್ರಾಮ ಆಡಳಿತಾಧಿಕಾರಿ ಮಾಧವ ಕೊಠಾರಿ, ಗ್ರಾಮ ಸಿಬ್ಬಂದಿ ಶಿವಾನಂದ, ದಿವ್ಯಾ ಮೊದಲಾದವರು ಉಪಸ್ಥಿತರಿದ್ದರು.

ಸಾಮೂಹಿಕ ಶ್ರೀ ಅಶ್ವತ್ಥ ಪೂಜೆ, ಶ್ರೀ ಸತ್ಯನಾರಾಯಣ ಪೂಜೆ, ಯುಗಾದಿ



ಶಿರ್ವ: ಸಾರ್ವಜನಿಕ ಶ್ರೀಗಣೇಶೋತ್ಸವ ಸಮಿತಿ ಶಿರ್ವ ಮತ್ತು ಶಿರ್ವ ಮಹಿಳಾ ಮಂಡಲದ ಆಶ್ರಯದಲ್ಲಿ ಜರುಗುತ್ತಿರುವ 23ನೇ ವರ್ಷದ -ಸಾಮೂಹಿಕ ಶ್ರೀ ಅಶ್ವತ್ಥ ಪೂಜೆ-ಶ್ರೀ ಸತ್ಯನಾರಾಯಣ ಪೂಜೆ-ಯುಗಾದಿ ಸಂಭ್ರಮ ಕಾರ್ಯಕ್ರಮ ಶಿರ್ವ ಸಾರ್ವಜನಿಕ ಶ್ರೀಗಣೇಶೋತ್ಸವ ವೇದಿಕೆಯಲ್ಲಿ ಸಂಪನ್ನಗೊಂಡಿತು.

ಕುತ್ಯಾರು ಕೇಂಜ ಬ್ರಹ್ಮಶ್ರೀ ಶ್ರೀಧರ ತಂತ್ರಿಗಳ ಮಾರ್ಗದರ್ಶನದಲ್ಲಿ ಶಿರ್ವ ಶ್ರೀವಿಷ್ಣುಮೂರ್ತಿ ದೇವಳದ ಹಿರಿಯ ವೈದಿಕರಾದ ವೇದಮೂರ್ತಿ ಶ್ರೀನಿವಾಸ ಭಟ್ ನೇತೃತ್ವದಲ್ಲಿ ಧಾರ್ಮಿಕ ಅನುಷ್ಠಾನಗಳು ಸಂಪನ್ನಗೊಂಡವು. ಪೂಜಾನುಷ್ಠಾನದಲ್ಲಿ ಸಾರ್ವಜನಿಕ ಶ್ರೀಗಣೇಶೋತ್ಸವ ಸಮಿತಿ ಅಧ್ಯಕ್ಷ ವಿಠಲ ಬಿ.ಅಂಚನ್ ದಂಪತಿ ಉಪಸ್ಥಿತರಿದ್ದರು. ಜ್ಞಾನಚೇತನ ಎಜ್ಯುಕೇಶನ್ ಟ್ರಸ್ಟ್ ಸ್ಥಾಪಕ, ಅಕಾಡೆಮಿಕ್ ಡೀನ್ ಗುರುಪ್ರಸಾದ್ ಧಾರ್ಮಿಕ ಉಪನ್ಯಾಸದಲ್ಲಿ ಶ್ರೀಸತ್ಯನಾರಾಯಣ ಪೂಜಾ ವ್ರತ, ಅಶ್ವತ್ಥ ಪೂಜಾ ಮಹತ್ವ ಹಾಗೂ ಯುಗಾದಿ ಹಬ್ಬದ ಬಗ್ಗೆ ಮಾಹಿತಿ ನೀಡಿದರು. ಶಿರ್ವ ಮಹಿಳಾ ಮಂಡಲದ ಅಧ್ಯಕ್ಷೆ ಡಾ. ಸ್ಫೂರ್ತಿ ಶೆಟ್ಟಿ ಉಪಸ್ಥಿತರಿದ್ದರು.

ಶಿರ್ವ ಅಂಕಮಾರು ಕೆರು ರಾಮರಾಯ ಪ್ರಭು, ವಿನೋದಾ ದಂಪತಿಗೆ ಯುಗಾದಿ ಹಬ್ಬದ ಗೌರವ ನೀಡಿ ಸನ್ಮಾನಿಸಲಾಯಿತು. ಶಿರ್ವ ಹೊಸಂಗಡಿಯ ಶಿವಾನಂದ ಕಾಮತ್ ಯುಗಾದಿ ಕನಿ ಇಡುವ ಸಾಂಪ್ರದಾಯಿಕ ಪ್ರಾತ್ಯಕ್ಷಿಕೆ ನೆರವೇರಿಸಿದರು.

ಬಾಲವಾಡಿ ಶಿಕ್ಷಕಿ ಸುನೀತಾ ಟೀಚರ್ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ಸ್ಪರ್ಧೆಗಳು ನಡೆದವು. ಕಾರ್ಯದರ್ಶಿ ಪ್ರಶಾಂತ್ ಆಚಾರ್ಯ ಸ್ವಾಗತಿಸಿದರು. ವಿಷ್ಣುಮೂರ್ತಿ ಸರಳಾಯ ಪರಿಚಯಿಸಿದರು.

ವಿಶ್ವ ರಂಗಭೂಮಿ, ಮಹಿಳಾ ದಿನಾಚರಣೆ, ಯುವರಂಗ ಪುರಸ್ಕಾರ



ಕೋಟ: ಜೀವನಕ್ಕೊಂದು ಸಂಸ್ಕಾರ ಮತ್ತು ಸಂವೇದನೆಯನ್ನು ನೀಡುವುದು ರಂಗಭೂಮಿ. ಇಂತಹ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಕೊಂಡಿರುವ ರಸರಂಗದಂತಹ ಸಂಸ್ಥೆಗಳು ಸಮಾಜಕ್ಕೆ ಉತ್ತಮ ಕೊಡುಗೆಯನ್ನು ನೀಡುತ್ತಿವೆ ಎಂದು ನಿವೃತ ಪ್ರಾಧ್ಯಾಪಕ ಹಾಗೂ ಕಲಾಪೋಷಕ ಶ್ರೀನಿವಾಸ ಸೋಮಯಾಜಿ ನುಡಿದರು.

ಅವರು ಭಾನುವಾರ ಕೋಟ ರಸರಂಗ ದವರು ರಂಗಚಾವಡಿ ಕದ್ರಿಕಟ್ಟು ಇಲ್ಲಿ ಹಮ್ಮಿಕೊಂಡಿದ್ದ ವಿಶ್ವರಂಗಭೂಮಿ ಹಾಗೂ ವಿಶ್ವಮಹಿಳಾ ದಿನಾಚರಣೆಯ ಮುಖ್ಯ ಅಭ್ಯಾಗತರಾಗಿ ಮಾತನಾಡಿದರು.

ರಂಗನಿರ್ದೇಶಕಿ, ಪ್ರಾಂಶುಪಾಲೆ ಅಭಿಲಾಷ ಸೋಮಯಾಜಿ ಮಾತನಾಡಿ, ನಾಟಕದಂತಹ ಕ್ರಿಯೆಗಳು ಒಂದು ಆನಂದ ಹಾಗೂ ಅನುಭೂತಿ. ಅದೂ ಶಾಲಾಮಕ್ಕಳೊಂದಿಗೆ ನಡೆಸುವ ರಂಗಪ್ರಕ್ರಿಯೆಗಳು ಉತ್ತಮ ಫಲಿತಾಂಶವನ್ನೇ ನೀಡುತ್ತವೆ ಎಂದರು.

ಈ ಸಂದರ್ಭ ದಿ.ಗೋಪಾಲಕೃಷ್ಣನಾಯರಿ ಯುವರಂಗ ಪುರಸ್ಕಾರವನ್ನು ಕಲಾವಿದೆ ಸುಪ್ರೀತ ಪುರಾಣಿಕ್ ಇವರಿಗೆ ನೀಡಿ ಸಮ್ಮಾನಿಸಲಾಯಿತು.

ಬ್ರಹ್ಮಾವರ ಸಾಹಿತ್ಯ ಘಟಕದ ಅಧ್ಯಕ್ಷ ರಾಮಚಂದ್ರ ಐತಾಳ್, ಮಹಿಳಾ ಮಂಡಳದ ಅಧ್ಯಕ್ಷೆ ಗೀತಾ ಕುಂದರ್ , ಸುಲೋಚನ ನಾಯರಿ,ವನಿತಾ ಉಪಾಧ್ಯ ಉಪಸ್ಥಿತರಿದ್ದರು. ಭಾಗ್ಯಲಕ್ಷ್ಮೀ ವೈದ್ಯ ವಿಶ್ವರಂಗಭೂಮಿ ದಿನದ ಸಂದೇಶ ವಾಚಿಸಿದರು. ರಸರಂಗದ ಅಧ್ಯಕ್ಷೆ ಸುಧಾ ಮಣೂರು ಸ್ವಾಗತಿಸಿದರು. ಸದಸ್ಯೆ ವಸಂತೀ ಉಮೇಶ್ ವಂದಿಸಿದರು. ಪಾರ್ವತೀ ಮಯ್ಯ ನಿರೂಪಿಸಿದರು. ನಂತರ ಸುಪ್ರೀತ ಪುರಾಣಿಕ್ ಬಳಗದಿಂದ ರಂಗಗೀತೆಗಳ ಕಾರ್ಯಕ್ರಮ ನೆರವೇರಿತು.

ಪಿಪಿಸಿಯಲ್ಲಿ ಮಹಿಳಾ ದಿನಾಚರಣೆ, ಸಾಧಕಿಯರ ಪುಸ್ತಕಗಳ ಅನಾವರಣ



ಉಡುಪಿ: ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಐಕ್ಯೂಎಸಿ ಇದರ ಸಹಯೋಗದೊಂದಿಗೆ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಪಿಪಿಸಿ ಸಂಧ್ಯಾ ಕಾಲೇಜಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಾಕ್ರಮದಲ್ಲಿ ಮಹಿಳಾ ಸಾಹಿತಿಗಳು, ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರ ಕುರಿತ ನೂರಾರು ಪುಸ್ತಕಗಳನ್ನು ಒಂದೆಡೆ ಜೋಡಿಸುವ ಮೂಲಕ ವಿದ್ಯಾರ್ಥಿಗಳಿಗೆ ಮಹಿಳಾ ಸಾಧಕಿಯರ ಪರಿಚಯ ಮಾಡುವ ವಿನೂತನ ಪ್ರಯತ್ನ ನಡೆಯಿತು.

ಗ್ರಂಥಾಲಯಾಧಿಕಾರಿ ಅನಿಲ್ ಕುಮಾರ್ ಜೆ, ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ತಮ್ಮ ಛಾಪನ್ನೂ ಮೂಡಿಸಿದ್ದಾರೆ. ಸಾಹಿತ್ಯ, ಉದ್ಯಮ, ಆಡಳಿತ ಕ್ಷೇತ್ರದಿಂದ ಮೊದಲ್ಗೊಂಡು ಬಾಹ್ಯಾಕಾಶಕ್ಕೆ ಲಗ್ಗೆ ಇಡುವುದರವರೆಗೆ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಇಂತಹ ವಿವಿಧ ಕ್ಷೇತ್ರಗಳ ಸಾಧಕಿಯರ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ಎಂದರು.


ಪ್ರಾಂಶುಪಾಲ ಡಾ.ಚಂದ್ರಕಾಂತ್ ಭಟ್, ಐಕ್ಯೂಎಸಿ ಸಮನ್ವಯಕಾರ ಡಾ.ರಾಘವೇಂದ್ರ ಎಲ್, ಸಿಬ್ಬಂದಿಗಳಾದ ಜಯಕರ ಶೆಟ್ಟಿ ಮತ್ತು ಅಧೀಶ್ ಉಪಸ್ಥಿತರಿದ್ದರು.


- **ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ತಮ್ಮ ಛಾಪನ್ನೂ ಮೂಡಿಸಿದ್ದಾರೆ**
- **ವಿದ್ಯಾರ್ಥಿಗಳು ಸಾಧಕಿಯರ ಬಗ್ಗೆ ತಿಳಿದುಕೊಳ್ಳಬೇಕು**

ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಾಪು, ಉಡುಪಿ ಭೂ ನ್ಯಾ ಮಂಡಳಿಗಳಲಿ ಇತ್ಯರ್ಥವಾಗಬೇಕಾದ ಪ್ರಕರಣ

ಕಾಪು ತಾಲೂಕಿನಲ್ಲಿ 165, ಉಡುಪಿ ತಾಲೂಕಿನಲ್ಲಿ 41 ಪ್ರಕರಣ ವಿಚಾರಣೆ ಬಾಕಿ

ಕಾಪು: ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಾಪು ತಾಲೂಕಿನ ಭೂ ನ್ಯಾಯ ಮಂಡಳಿಯಲ್ಲಿ 165 ಪ್ರಕರಣಗಳು ಇತ್ಯರ್ಥಗೊಳ್ಳಲು ಬಾಕಿ ಇದ್ದು, ಕಾಪು ವಿಧಾನಸಭಾ ಕ್ಷೇತ್ರದ ಉಡುಪಿ ತಾಲೂಕಿನ ಭೂ ನ್ಯಾಯ ಮಂಡಳಿಯಲ್ಲಿ ಒಟ್ಟು 41 ಪ್ರಕರಣಗಳು ಬಾಕಿ ಇರುತ್ತದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದ್ದಾರೆ.





ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಬೆಂಗಳೂರು ರಾಜ್ಯ ಅಧಿವೇಶನದಲ್ಲಿ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಾಪು ಹಾಗೂ ಉಡುಪಿ ತಾಲೂಕಿನ ಭೂ ನ್ಯಾ ಮಂಡಳಿಗಳಲ್ಲಿ ಪ್ರಸ್ತುತ ಇತ್ಯರ್ಥಗೊಳಿಸಲು ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಬಾಕಿ ಪ್ರಕರಣಗಳಲ್ಲಿ ಸುಮಾರು 10 ವರ್ಷಗಳಿಂದ ಮೇಲ್ಪಟ್ಟು ವಿಚಾರಣೆಗೆ ಬಾಕಿ ಇರುವ ಪ್ರಕರಣಗಳು ಯಾವುವು? ಧೀರ್ಘಕಾಲಿಕ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಸರಕಾರ ಕೈಗೊಂಡ ಕ್ರಮವೇನು ಎಂದು ಪ್ರಶ್ನಿಸಿದ್ದರು.

ಕಂದಾಯ ಸಚಿವರಾದ ಕೃಷ್ಣ ಭೈರೇಗೌಡರು ಉತ್ತರಿಸುತ್ತಾ, ಕಾಪು ಭೂ ನ್ಯಾಯ ಮಂಡಳಿಯಲ್ಲಿ 165 ಪ್ರಕರಣಗಳು 10 ವರ್ಷಗಳಿಂದ ಮೇಲ್ಪಟ್ಟು ಹಾಗೂ ಉಡುಪಿ ಭೂ ನ್ಯಾಯ ಮಂಡಳಿಯಲ್ಲಿ 30 ಪ್ರಕರಣಗಳು 10 ವರ್ಷಗಳಿಂದ ಮೇಲ್ಪಟ್ಟು ವಿಚಾರಣೆಗೆ ಬಾಕಿ ಇರುತ್ತದೆ. ಕಾಪು ಹಾಗೂ ಉಡುಪಿ ತಾಲೂಕಿನಲ್ಲಿ ಭೂ ನ್ಯಾಯ ಮಂಡಳಿ ಸಮಿತಿಯು ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಇತ್ಯರ್ಥಗೊಳಿಸಲು ಕ್ರಮವಹಿಸಲಾಗುತ್ತಿದ್ದು, ದೀರ್ಘಕಾಲಿಕ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅವಶ್ಯಕತೆ ಕಂಡು ಬಂಡಲ್ಲಿ ಹೆಚ್ಚುವರಿ ನ್ಯಾಯಾಧಿಕರಣಗಳನ್ನು ಸರಕಾರಕ್ಕೆ ರಚಿಸುವ ಅಧಿಕಾರಕ್ಕೆ ಒಳಪಟ್ಟಿದ್ದು, ಜಿಲ್ಲಾಧಿಕಾರಿಯವರ ಆದೇಶದಂತೆ ಹೆಚ್ಚುವರಿ ನ್ಯಾಯಾಧಿಕರಣದ ಮೂಲಕ ಕಡತ ವಿಲೇವಾರಿ ಮಾಡಲು ಕ್ರಮವಹಿಸಲಾಗುವುದು ಎಂದು ಉತ್ತರಿಸಿದ್ದಾರೆ.

ವಸತಿ ಯೋಜನೆ: ಹೊಸ ಮನೆಗಳಿಗೆ 2 ಲಕ್ಷ ರೂ.ವರೆಗೆ ಪ್ರೋತ್ಸಾಹಧನ

2 ವರ್ಷಗಳಲ್ಲಿ ಕಾಪು ವಿಧಾನಸಭಾ ಕ್ಷೇತ್ರಕ್ಕೆ ವಸತಿ ಇಲಾಖೆಯಿಂದ ಎಷ್ಟು ವಸತಿ ಹಂಚಿಕೆ ಮಾಡಲಾಗಿದೆ ಹಾಗೂ ಈಗಾಗಲೇ ಮನೆಗಳ ಹಂಚಿಕೆ ಆಗಿದ್ದು, ತಾಂತ್ರಿಕ ಕಾರಣಗಳಿಂದ ಮನೆಗಳ ಪ್ರಗತಿ ಸಾಧಿಸಿದ್ದರೂ ಫಲಾನುಭವಿಗಳ ಖಾತೆಗೆ ಹಣ ಬಿಡುಗಡೆ ಆಗದೇ ಇರುವ ಪ್ರಕರಣವೆಷ್ಟು? ಹಾಗೆ ಯಾವ ಕಾಲಮಿತಿಯೊಳಗೆ ಫಲನುಭವಿಗಳ ಖಾತೆಗೆ ಹಣ ಬಿಡುಗಡೆ ಮಾಡಲಾಗುವುದು, ಪ್ರಸ್ತುತ ವಸತಿ ಯೋಜನೆಯಡಿಯಲ್ಲಿ ಪ್ರೋತ್ಸಾಹಧನವಾಗಿ 1.20 ಲಕ್ಷ ನೀಡುತ್ತಿದ್ದು, ಅದನ್ನು 5 ಲಕ್ಷಕ್ಕೆ ಹೆಚ್ಚಿಸಲು ಸರಕಾರದ ನಿಲುವೇನು ಎಂಬುದರ ಬಗ್ಗೆ ಕೇಳಲಾಗಿತ್ತು. ಇದಕ್ಕೆ ವಸತಿ ಮತ್ತು ವಕ್ಫ್ ಸಚಿವ ಬಿ.ಝಡ್ ಝಮೀರ್ ಅಹಮ್ಮದ ಖಾನ್ ಉತ್ತರಿಸುತ್ತಾ, 2023-24 ರಿಂದ 2024-25ನೇ ಸಾಲಿನಲ್ಲಿ ಕಾಪು ಕ್ಷೇತ್ರಕ್ಕೆ ದೇವರಾಜು ಅರಸು ವಸತಿ ಯೋಜನೆ ಗ್ರಾಮೀಣ ಮತ್ತು ನಗರ ಇದರಲ್ಲಿ 26 ಮನೆಗಳು ಹಂಚಿಕೆ ಆಗಿದ್ದು, 9 ಮನೆಗಳು ಪ್ರಗತಿಯಲ್ಲಿವೆ. 17 ಮನೆಗಳು ಪ್ರಾರಂಭವಾಗಿರುವುದಿಲ್ಲ, ಹಾಗೆಯೇ ಹಿಂದೆ ಮಂಜೂರಾದ ಮನೆಗಳಲ್ಲಿ ಭೌತಿಕ ಪ್ರಗತಿಗನುಗುಣವಾಗಿ 68 ಫಲಾನುಭವಿಗಳಿಗೆ 40.80 ಲಕ್ಷ ಬಿಡುಗಡೆ ಮಾಡಲು ಬಾಕಿ ಇದೆ. ಲಭ್ಯತೆ ಆಧಾರದ ಮೇಲೆ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.ಪ್ರಸಕ್ತ ಆಯವ್ಯಯ ಭಾಷಣದಲ್ಲಿ ಹೊಸ ಮನೆಗಳ ಗುಂ ನಿಗದಿಪಡಿಸಿ ಹೊಸ ಮನೆಗಳ ಗುಂಯಡಿ ಆಯ್ಕೆಯಾಗುವ ಸಾಮಾನ್ಯ ಫಲಾನುಭವಿ ಗಳಿಗೆ 2 ಲಕ್ಷದವರೆಗೆ ಪ.ಜಾತಿ ಮತ್ತು ಪ.ಪಂಗಡ ಫಲಾನುಭವಿಗಳಿಗೆ 3 ಲಕ್ಷದ ವರೆಗೆ ಪ್ರೋತ್ಸಾಹಧನ ಹೆಚ್ಚಿಸಲಾಗಿದೆ ಎಂದರು.

ವಿಶ್ವ ಕ್ಷಯ ರೋಗ ದಿನಾಚರಣೆ, ಕ್ಷಯ ಮುಕ್ತ ಗ್ರಾ.ಪಂ.ಗಳಿಗೆ ಪ್ರಶಸ್ತಿ ಪ್ರದಾನ | ನ್ಯಾ.ಮನು ಪಟೇಲ್ ಸಲಹೆ

ಇಲಾಖೆಗಳ ಸಮನ್ವಯತೆಯಿಂದ ಕ್ಷಯರೋಗ ನಿರ್ಮೂಲನೆ



ಉಡುಪಿ: ಕ್ಷಯರೋಗವು ಸಾರ್ವಜನಿಕ ಆರೋಗ್ಯ ವಲಯದಲ್ಲಿ ಸವಾಲನ್ನು ಒಡ್ಡುತ್ತಿದ್ದು ದೇಶದಲ್ಲಿಯೇ ಕ್ಷಯರೋಗ ಮರಣ ತರುವ ಗಂಭೀರ ಕಾಯಿಲೆಗಳಲ್ಲಿ ಮೊದಲನೇ ಸ್ಥಾನದಲ್ಲಿದೆ. ಕ್ಷಯರೋಗವನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಸಂಕಲ್ಪದೊಂದಿಗೆ ಎಲ್ಲಾ ಸಂಬಂಧಪಟ್ಟ ಇಲಾಖೆಗಳು, ಸಮನ್ವಯದಿಂದ ಕಾರ್ಯನಿರ್ವಹಿಸುವುದರೊಂದಿಗೆ ಉಡುಪಿ ಜಿಲ್ಲೆಯನ್ನು ಕ್ಷಯ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮನು ಪಟೇಲ್ ಬಿ.ವೈ ಹೇಳಿದರು.

ಅಜ್ಜರಕಾಡು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಶ್ರೀಕೃಷ್ಣ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ವಿಶ್ವ ಕ್ಷಯ ರೋಗ ದಿನಾಚರಣೆ, ಕ್ಷಯ ಮುಕ್ತ ಗ್ರಾಮ ಪಂಚಾಯತ್‌ಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಕ್ಷಯ ಮುಕ್ತ ಭಾರತ್ 100 ದಿನಗಳ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಭಿಯಾನದಲ್ಲಿ ಜನರ ಆರೋಗ್ಯ ಕಾಪಾಡುವಲ್ಲಿ ಪಂಚಾಯತ್ ಅಧಿಕಾರಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿಗಳೊಂದಿಗೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮಹತ್ವದ ಪಾತ್ರ ವಹಿಸಲಿದ್ದಾರೆ. ಕ್ಷಯರೋಗದ ಕುರಿತು ಜನರಲ್ಲಿ ಇರುವ ತಪ್ಪು ಕಲ್ಪನೆಯನ್ನು ದೂರಮಾಡಬೇಕು. ಹಂತಹಂತವಾಗಿ ಜಿಲ್ಲೆಯ ಎಲ್ಲಾ ಗ್ರಾ.ಪಂ.ಗಳನ್ನೂ ಸಹ ಕ್ಷಯಮುಕ್ತ ಮಾಡಬೇಕು ಎಂದರು.

ಪಂಚಾಯತ್ ಸಹಾಯವಿರಲಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ ಮಾತನಾಡಿ, ಕ್ಷಯ ಮುಕ್ತ ಅಭಿಯಾನದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತೆಯರು ತಪಾಸಣೆಗೆ ಮನೆಮನೆ ಭೇಟಿ ನೀಡಿದ ಸಂದರ್ಭದಲ್ಲಿ ಆಯಾ ವ್ಯಾಪ್ತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅಗತ್ಯ ಸಹಕಾರ ನೀಡಬೇಕು ಎಂದರು.

20 ಗ್ರಾ.ಪಂ.ಗಳಿಗೆ ಚಿನ್ನದ ಪದಕ

ಪ್ರಸಕ್ತ ಸಾಲಿನಲ್ಲಿ ಕ್ಷಯ ಮುಕ್ತ ಗ್ರಾಮ ಪಂಚಾಯತ್ ಎಂದು ಆಯ್ಕೆ ಮಾಡಲಾದ 64 ಗ್ರಾಮ ಪಂಚಾಯತ್‌ಗಳಲ್ಲಿ 18 ಗ್ರಾಮ ಪಂಚಾಯತ್‌ಗಳಿಗೆ ಕಂಚಿನ ಪದಕ, 26 ಗ್ರಾಮ ಪಂಚಾಯತ್‌ಗಳಿಗೆ ಬೆಳ್ಳಿ ಪದಕ ಹಾಗೂ 20 ಗ್ರಾಮ ಪಂಚಾಯತ್‌ಗಳಿಗೆ ಚಿನ್ನದ ಪದಕ ಹಾಗೂ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಯಿತು.

1500 ಕ್ಷಯರೋಗ ಪತ್ತೆ

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಚಿದಾನಂದ ಸಂಜು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತೀ ವರ್ಷ ಮಾ. 24ರಂದು ವಿಶ್ವಕ್ಷಯ ರೋಗ ದಿನವನ್ನಾಗಿ ಆಚರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ ಕ್ಷಯವನ್ನು ಪತ್ತೆಹಚ್ಚಲು 3 ಸಿಬಿನ್ಯಾಟ್ ಯಂತ್ರಗಳು 8 ಟ್ರುನ್ಯಾಟ್ ಯಂತ್ರಗಳಿದ್ದು ಪ್ರತೀ ವರ್ಷ 40,000-45,000 ಕ್ಷಯ ರೋಗ ಪರೀಕ್ಷೆಗಳನ್ನು ಮಾಡುವುದರೊಂದಿಗೆ ಸುಮಾರು 1,500 ಪ್ರಕರಣಗಳನ್ನು ಪತ್ತೆಹಚ್ಚಲಾಗುತ್ತಿದೆ. ಇದರಲ್ಲಿ 500-600 ಪ್ರಕರಣಗಳು ಹೊರ ಜಿಲ್ಲೆಗೆ ಸಂಬಂಧಿಸಿದ್ದು ಅವರುಗಳಿಗೂ ಸಹ ಚಿಕಿತ್ಸೆ ನೀಡಲಾಗುತ್ತಿದೆ. ಕ್ಷಯರೋಗದಿಂದಾಗುವ ಮರಣ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕ್ಷಯರೋಗ ಲಕ್ಷಣ ಹೊಂದಿರುವವರನ್ನು ಮುಂಚಿತವಾಗಿಯೇ ಪತ್ತೆಹಚ್ಚಲು ಕೇಂದ್ರ ಸರ್ಕಾರ ಎಲ್ಲಾ ಜಿಲ್ಲೆಗಳಿಗೂ ಹ್ಯಾಂಡ್‌ಹೆಲ್ಡ್ ಎಕ್ಸರೇ ಯಂತ್ರವನ್ನು ನೀಡಿದೆ ಎಂದರು. ಇದು ಶೀಘ್ರದಲ್ಲಿಯೇ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲಾಗುವುದು ಎಂದರು.

ಕ್ಷಯ ಮುಕ್ತ ಭಾರತ್ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ಅಭಿಯಾನದಲ್ಲಿ ಸರ್ಕಾರ ಗುರುತಿಸಿರುವ ಕ್ಷಯ ರೋಗ ಬಾಧಿಸಬಹುದಾದ ಹಳ್ಳಿಗಳಲ್ಲಿ, ದುರ್ಬಲ ವರ್ಗಗಳ ಜನಾಂಗದವರು ವಾಸಿಸುವ ಜನವಸತಿ ಪ್ರದೇಶಗಳಲ್ಲಿ ಟಿ.ಬಿ ಸ್ಕ್ರೀನಿಂಗ್ ನಡೆಸಿ, ರೋಗ ಲಕ್ಷಣಗಳು ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆ ನೀಡುವುದರೊಂದಿಗೆ ಗುಣಮುಖರಾಗಿ ಮಾಡಲಾಗುವುದು ಎಂದರು.

ಸುತ್ತ ಮುತ್ತ

ಇಂದು ಯಕ್ಷಗಾನ ಪ್ರದರ್ಶನ

ಕುಂದಾಪುರ: ಶ್ರೀ ಗಣೇಶ ಯಕ್ಷಗಾನ ಮಂಡಳಿ ಉಪ್ಪಿನಕುದ್ರು ಇದರ ವತಿಯಿಂದ ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವದ ಪ್ರಯುಕ್ತ ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದ ಮುಂಭಾಗ ಕಾವ್ಯಶ್ರೀ ನಾತಕ್ ಅಜೇರು ಅವರ ಸಾರಥ್ಯದಲ್ಲಿ ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ ವಿರಚಿತ 'ಸೂರ್ಯ ರತ್ನ' ಯಕ್ಷಗಾನ ಮಾ.25ರಂದು ಸಂಜೆ 7 ಗಂಟೆಗೆ ನಡೆಯಲಿದೆ. ಈ ಸಂದರ್ಭ ಕಟ್‌ಬೇಲ್ತೂರು ರಮೇಶ ಗಾಣಿಗ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾ.27: ಶ್ರೀ ಅಗ್ನಿ ಬನ್ನಿರಾಯ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಅಗ್ನಿ ಬನ್ನಿರಾಯ ಜಯಂತಿ ಕಾರ್ಯಕ್ರಮವು ಮಾರ್ಚ್ 27 ರಂದು ಬೆಳಗ್ಗೆ 10 ಗಂಟೆಗೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಸಾಂಸ್ಕೃತಿಕ ಚಿಂತಕ ಡಾ. ಶ್ರೀಕಾಂತ್ ಸಿದ್ದಾಪುರ ಉಪನ್ಯಾಸ ನೀಡಲಿದ್ದಾರೆ.

ಮಾ.30: ಭಗವಾನ್ ಮಹಾವೀರ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೈನ್ ಮಿಲನ್ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವು ಮಾರ್ಚ್ 30 ರಂದು ಬೆಳಗ್ಗೆ 10 ಗಂಟೆಗೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಎ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ವೇತಾ ಜೈನ್ ಉಪನ್ಯಾಸ ನೀಡಲಿದ್ದಾರೆ.

ಮಾ.26, 27: ಎಸ್‌ಡಿಎಂ ಝೇಂಕಾರ

ಬೆಳ್ತಂಗಡಿ: ಸಂಸ್ಕೃತಿ–ಪರಂಪರೆಯ ಮೌಲಿಕತೆಗೆ ಅನುಗುಣವಾದ ಶೈಕ್ಷಣಿಕ ಸ್ಪರ್ಧಾತ್ಮಕತೆಯ ಸೊಗಡನ್ನು ಪರಿಚಯಿಸುವ ಎಸ್.ಡಿ.ಎಂ ಝೇಂಕಾರದ ಆರನೇ ಸೀಸನ್‌ನ ಕಲಾತ್ಮಕ ಉತ್ಸವಕ್ಕೆ ಉಜಿರೆಯ ಎಸ್.ಡಿ.ಎಂ ಸ್ನಾತಕೋತ್ತರ ಕೇಂದ್ರವು ಸನ್ನದ್ಧಗೊಂಡಿದೆ. ರಾಷ್ಟ್ರಮಟ್ಟದ ಈ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮೇಳವು ಮಾ. 26 ಮತ್ತು 27ರಂದು ಜರುಗಲಿದೆ. ಈ ಸಲದ ಝೇಂಕಾರದ ಆರನೇ ಸೀಸನ್ ಮಾರ್ಚ್ 26 ರಂದು ಬೆಳಿಗ್ಗೆ 10 ಗಂಟೆಗೆ ಎಸ್.ಡಿ.ಎಂ ಕಾಲೇಜಿನ ಹಳೆಯ ವಿದ್ಯಾರ್ಥಿ, ಅಂತರರಾಷ್ಟ್ರೀಯ ಹಿರಿಮೆಯ ಚಿತ್ರ ಕಲಾವಿದ ವಿಲಾಸ್ ನಾಯಕ್ ಅವರಿಂದ ಚಾಲನೆ ಕಾಣಲಿದೆ. ಉದ್ಘಾಟನಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಎಸ್.ಡಿ.ಎಂ ಎಜ್ಯುಕೇಷನಲ್ ಸೊಸೈಟಿಯ ಕಾರ್ಯದರ್ಶಿ ಡಾ.ಸತೀಶ್ಚಂದ್ರ ಎಸ್ ಉಪಸ್ಥಿತರಿರಲಿದ್ದಾರೆ. ಎಸ್.ಡಿ.ಎಂ ಕಾಲೇಜಿನ ಪ್ರಾಚಾರ್ಯ ಪ್ರೊ.ವಿಶ್ವನಾಥ ಪಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 6.30ಕ್ಕೆ ಏರ್ಪಡಲಿರುವ ಝೇಂಕಾರ ಸ್ಟಾರ್ ನೈಟ್ ಕಾರ್ಯಕ್ರಮವನ್ನು ತುಳು ಮತ್ತು ಕನ್ನಡ ಚಲನಚಿತ್ರ ವಲಯಗಳಲ್ಲಿ ಗುರುತಿಸಿಕೊಂಡ ಜನಪ್ರಿಯ ನಟ ಪೃಥ್ವಿ ಅಂಬರ್ ನಡೆಸಿಕೊಡಲಿದ್ದಾರೆ. ಝೀ ಕನ್ನಡ ಸರಿಗಮಪ ಸೀಸನ್ 15ರ ಸ್ಪರ್ಧಿಯಾಗಿ ಸಂಚಲನ ಮೂಡಿಸಿದ್ದ ರಾಮ್ ರಜತ್ ಮಯ್ಯ ನೇತೃತ್ವದಲ್ಲಿ ವೈವಿಧ್ಯಮಯ ಯುವತರಂಗ ಮ್ಯೂಸಿಕ್ ತಂಡದ ಮೂಲಕ ಝೇಂಕಾರ ಕಲ್ಚರಲ್ ನೈಟ್ ಹೊಸ ಬಗೆಯ ಸಂಗೀತ ನಿನಾದ ಹೊಮ್ಮಿಸಲಿದೆ.

ಝೇಂಕಾರ ಉತ್ಸವದ ಎರಡೂ ದಿನಗಳ ಕಾಲ ಶೈಕ್ಷಣಿಕ ಇವೆಂಟ್, ಟೀಮ್ ಇವೆಂಟ್, ಹೊರಾಂಗಣ ಇವೆಂಟ್ ಮತ್ತು ಸ್ಪಾಟ್ ಇವೆಂಟ್ ಎಂಬ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಶೈಕ್ಷಣಿಕ ವಿಭಾಗದಲ್ಲಿ ಮಾಕ್ ಪ್ರೆಸ್, ಸೈಕಾಲಜಿ ಮಾಯಾಸ್ಟೋಕ್, ದ ರೈಟರ್ಸ್ ರೀಲ್, ಮೈಂಡ್ ಕ್ವೆಸ್ಟ್, ಟ್ರೆಷರ್ ಹಂಟ್, ಫ್ಲ್ಯಾಷ್ ಮಾಬ್, ಎಮಿನೆಂಟ್ ಯುವೆಂಟ್ರೊ, ಪ್ಯಾನೆಲ್ ಡಿಸ್ಕಷನ್ ಸ್ಪರ್ಧೆಗಳು ಏರ್ಪಡಲಿವೆ. ತಂಡ ವಿಭಾಗದಲ್ಲಿ ಸಮೂಹ ಶಿಕ್ಷಣ ಕೇಳಿಯಲ್ಲಿ ಐಸ್ ಬ್ರೇಕರ್, ಸಮೂಹ ನೃತ್ಯ, ಫ್ಯಾಷನ್ ಶೋ, ಮಿಸ್ಟರ್ ಆ?ಯಂಡ್ ಮಿಸ್ ಝೇಂಕಾರ ಸ್ಪರ್ಧೆಗಳು ಆಯೋಜಿತವಾಗಲಿವೆ. ಹೊರಾಂಗಣ ವಿಭಾಗದಲ್ಲಿ ಗಲ್ಲಿ ಕ್ರಿಕೆಟ್ ಏರ್ಪಡಲಿದೆ. ಸ್ಪಾಟ್ ಇವೆಂಟ್ ವಿಭಾಗದಡಿ ರೀಲ್ ಮೇಕಿಂಗ್, ಸ್ಪಾಟ್ ಫೋಟೋಗ್ರಫಿ ಸ್ಪರ್ಧೆಗಳು ಜರುಗಲಿವೆ.

ಶ್ರೀ ಮಾಲೇಶ್ವರ ದೇಗುಲ ಬ್ರಹ್ಮಕಲಶದಲ್ಲಿ ಸುಬ್ರಹ್ಮಣ್ಯ ಶ್ರೀ ಆಶೀರ್ವಚನ

ಧರ್ಮದ ತಳಹದಿ ಇದ್ದಾಗ ಬದುಕು ಸುರಕ್ಷಿತ



ಕಡಬ: ದೇವರ ಮೇಲಿನ ಭಕ್ತಿ ಮತ್ತು ಭಯ ಮನುಷ್ಯನನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಧರ್ಮದ ತಳಹದಿಯಲ್ಲಿ ನಾವು ಜೀವಿಸಿದಾಗ ಬದುಕು ಸುರಕ್ಷಿತವಾಗಲು ಸಾಧ್ಯ. ಧರ್ಮದ ಆಚರಣೆ ನಮ್ಮ ಬದುಕಿನ ಅವಿಭಾಜ್ಯ ಅಂಗ ಎಂದು ಸುಬ್ರಹ್ಮಣ್ಯದ ಶ್ರೀ ಮಧ್ವಾಚಾರ್ಯ ಮಹಾ ಸಂಸ್ಥಾನಂ ಶ್ರೀ ಸುಬ್ರಹ್ಮಣ್ಯ ಮಠದ ಪೀಠಾಧಿಪತಿ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಕಡಬ ತಾಲೂಕಿನ ಕೋಡಿಂಬಾಳ ಗ್ರಾಮದ ಮಾಲೇಶ್ವರ ಶ್ರೀ ಮಹಾಬಲೇಶ್ವರ ಸ್ವಾಮಿ ದೇವಸ್ಥಾನ ಮತ್ತು ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ 16ನೇ ವರ್ಷದ ವರ್ಧಂತಿ ಮಹೋತ್ಸವದ ಸಲುವಾಗಿ ಸೋಮವಾರ ಆಯೋಜಿಸಲಾಗಿದ್ದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ನಾವು ಧರ್ಮದ ಉಳಿವಿಗಾಗಿ ಕೆಲಸ ಮಾಡಿದರೆ ಧರ್ಮ ನಮ್ಮನ್ನು ಉಳಿಸುತ್ತದೆ. ಧರ್ಮದ ಕುರಿತು ಅರಿತುಕೊಂಡರೆ ಮಾತ್ರ ನಮ್ಮ ಮಕ್ಕಳು ಧರ್ಮದ ಆಧಾರದಲ್ಲಿ ಜೀವಿಸಲು ಸಾಧ್ಯ. ಇಲ್ಲದೇ ಹೋದರೆ ನಮ್ಮದಲ್ಲದ ಪಾಶ್ಚಾತ್ಯ ಸಂಸ್ಕೃತಿ ಅವರಿಗೆ ಆಕರ್ಷಣೀಯವಾಗಿ ಸೆಳೆಯುತ್ತದೆ. ಈ ನಿಟ್ಟಿನಲ್ಲಿ ಮಾತೆಯವರು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಸನ್ಮಾನ

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪಿ. ವಿಶ್ವೇಶ್ವರ ಭಟ್ ಎಲಿಯೂರು, ಪಾರ್ವತಿ ಭಟ್ ದಂಪತಿ, ಶ್ರೀ ಮಹಾಬಲೇಶ್ವರ ಸ್ವಾಮಿ ದೇವಸ್ಥಾನದ ಅರ್ಚಕ ಈಶ್ವರ ಭಟ್ ಮೇಗಿನಮನೆ, ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದ ಅರ್ಚಕ ಸಿದ್ದಯ್ಯ ಹಿರೇಮಠ ಅವರನ್ನು ಸಮ್ಮಾನಿಸಿ ಗೌರವಿಸಲಾಯಿತು.

ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿ ಶುಭ ಹಾರೈಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಪಿ. ವಿಶ್ವೇಶ್ವರ ಭಟ್ ಎಲಿಯೂರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಬಾಳೆಹೊನ್ನೂರು ರಂಭಾಪುರಿ ಮಠದ ವೇದಮೂರ್ತಿ ರಾಜಶೇಖರಯ್ಯ ತಂತ್ರಿ ಹಾಗೂ ಕ್ಷೇತ್ರದ ವಾಸ್ತುಶಿಲ್ಪಿ ಮಹೇಶ್ ಮುನಿಯಂಗಳ ಶುಭಾಶಂಸನೆಗೈದರು. ಬ್ರಹ್ಮಶ್ರೀ ಕೆಮ್ಮಿಂಜೆ ಕಾರ್ತಿಕ್ ತಂತ್ರಿ ಧಾರ್ಮಿಕ ಉಪನ್ಯಾಸ ನೀಡಿದರು. ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ ಆಳ್ವ ಬೆದ್ರಾಜೆ, ಮಹಿಳಾ ವೇದಿಕೆಯ ಅಧ್ಯಕ್ಷೆ ಪುಷ್ಪಾ ಕುಂಡಿಲು ಉಪಸ್ಥಿತರಿದ್ದರು.

ಕಾರ್ಯದರ್ಶಿ ರಮೇಶ್ ರಾವ್ ಹೊಸಮನೆ ವರದಿ ವಾಚಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ಹರೀಶ ಬೆದ್ರಾಜೆ ಸ್ವಾಗತಿಸಿ, ಶಿವಪ್ರಸಾದ್ ರಾವ್ ಹೊಸಮನೆ ವಂದಿಸಿದರು. ಶಿವಪ್ರಸಾದ್ ರೈ ಮೈಲೇರಿ ಕಾರ್ಯಕ್ರಮ ನಿರ್ವಹಿಸಿದರು. ಸಭಾ ಕಾರ್ಯಕ್ರಮಕ್ಕೆ ಮೊದಲು ಕಡಬದ ವಿಶ್ವ ಮೋಹನ ನೃತ್ಯ ಕಲಾ ಶಾಲೆಯ ಮಕ್ಕಳಿಂದ ವಿದುಷಿ ಮಾನಸ ಪುನೀತ್ ರೈ ನಿರ್ದೇಶನದಲ್ಲಿ ಭರತನಾಟ್ಯ ಪ್ರದರ್ಶನ ನಡೆಯಿತು.

ಮೆಸ್ಕಾಂ ವಿಟ್ಲ ಉಪವಿಭಾಗದ ಜನ ಸಂಪರ್ಕ ಸಭೆ | ಗ್ರಾಹಕರ ಮನವಿ

ಗ್ರಾಹಕರಿಗೆ ಪಡೆದ ದುಪ್ಪಟ್ಟು ಶುಲ್ಕ ಹಿಂತಿರುಗಿಸಿ



ವಿಟ್ಲ: ಪಂಚಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಮೆಸ್ಕಾಂ ವಿಟ್ಲ ಉಪವಿಭಾಗದ ಜನಸಂಪರ್ಕ ಸಭೆ ಮಂಗಳವಾರ ನಡೆಯಿತು.

ಮಾಣಿ ಭಾಗದ ಕರಿಂಕದಲ್ಲಿ 50 ವರ್ಷದ ಹಿಂದೆ ಹಾಕಿದ ತಂತಿ ತುಂಡಾಗಿ ಬೀಳುತ್ತಿದೆ. ಹಿಂದಿನ ಜನ ಸಂಪರ್ಕ ಸಭೆಯಲ್ಲಿ ಅರ್ಜಿ ನೀಡಲಾಗಿದ್ದು ಕ್ರಮವಾಗಿಲ್ಲ. ಮೀಟರ್ ಓದುವಾಗ ಯುನಿಟ್ ಹೆಚ್ಚು ಬರುತ್ತಿದೆ. ದುಪ್ಪಟ್ಟು ಹಣ ವಿಧಿಸಿದ್ದನ್ನು ಹಿಂತಿರುಗಿಸುವ ಕ್ರಮ ಆಗಬೇಕು. ರೀಡಿಂಗ್ ಸಮಯಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಕೋಡಪದವು ಭಾಗದಲ್ಲಿ ಲಿಂಕ್ ಲೈನ್ ನೀಡುವ ಬಗ್ಗೆ ಹಲವು ಸಮಯದಿಂದ ಬೇಡಿಕೆ ಸಲ್ಲಿಸಲಾಗುತ್ತಿದೆ. ಒಂದು ಭಾಗದಲ್ಲಿ ಸಮಸ್ಯೆಯಾದರೆ, ಎ.ಬಿ. ಸ್ವಿಚ್ ಮೂಲಕ ಎಲ್ಲಾ ಭಾಗಕ್ಕೂ ವಿದ್ಯುತ್ ಕಡಿತ ಮಾಡುವುದು ಸರಿಯಲ್ಲ ಎಂದು ಗ್ರಾಹಕರು ಸಮಸ್ಯೆ ಹೇಳಿದರು.

ಪೆರ್ನೆ ಕಚೇರಿ ಬೇಡಿಕೆ

ಮಜ್ದೂರು ಗ್ಯಾಂಗ್‌ಗೆ ಈಗಲೇ ಅಗತ್ಯ ಕ್ರಮ ತೆಗೆದುಕೊಂಡು ಮಳೆಗಾಲದಲ್ಲಾಗುವ ಸಮಸ್ಯೆಗಳನ್ನು ಸರಿಪಡಿಸಬೇಕು. 1200 ಚದರ ಅಡಿಯ ಮನೆಗೆ ಎನ್‌ಒಸಿ ಬೇಡ ಎಂದರೂ ಯಾಕೆ ಅದನ್ನು ಕೇಳುತ್ತಿರುವುದು ಸರಿಯಲ್ಲ. 250 ಟಿ.ಸಿ.ಗೆ 15 ಮಂದಿ ಲೈನ್ ಮಾತ್ರ ಇದ್ದಾರೆ. ಪೆರ್ನೆ ಸೆಕ್ಷನ್ ಕಚೇರಿ ಬೇಡಿಕೆಯನ್ನು 15ರಿಂದ 20 ಸಭೆಯಲ್ಲಿ ಇಡಲಾಗುತ್ತಿದೆ. ಈ ಬಗ್ಗೆ ಕಡತ ಎಲ್ಲಿದೆ ಎಂದು ತಿಳಿಸುವ ಕಾರ್ಯವೂ ಆಗುತ್ತಿಲ್ಲ, ಜಾಗ ನೀಡುತ್ತೇವೆ ಎಂದರೂ, ಕಚೇರಿ ನಿರ್ಮಾಣಕ್ಕೆ ಇಲಾಖೆ ಮುಂದಾಗದಿರಲು ಕಾರಣವೇನು ಎಂದು ಸ್ಥಳೀಯರು ಪ್ರಶ್ನಿಸಿದರು.

ಪಿಂಚಣಿಗೆ ಗ್ರಾಹಕರ ಹಣ ಬೇಡ

ಕೆಲವು ಸಮಯದಿಂದ ಮೆಸ್ಕಾಂ ಮೀಟರ್ ರೀಡಿಂಗ್ ಬಿಲ್‌ನಲ್ಲಿ ಮೆಸ್ಕಾಂ ನೌಕರರಿಗೆ ನೀಡುವ ಪಿಂಚಣಿಯನ್ನು ಸೇರಿಸುವುದು ಸರಿಯಲ್ಲ, ಮೆಸ್ಕಾಂಗೆ ಎಲ್ಲಾ ವಿಚಾರಕ್ಕೂ ಹಣವನ್ನು ಗ್ರಾಹಕರಿಂದ ಕಟ್ಟಿಸಿಕೊಂಡ ಬಳಿಕ ಮತ್ತೆ ಪಿಂಚಣಿಗೂ ಗ್ರಾಹಕರಿಂದ ವಸೂಲಿ ಮಾಡುವುದು ಸರಿಯಲ್ಲ. ಪಿಂಚಣಿ ಹೆಸರಿನಲ್ಲಿ 36 ಪೈಸೆ ಬಿಲ್ ವಸೂಲಿ ಮಾಡುತ್ತಿರುವ ಕಾರಣ ವಿದ್ಯುತ್ ದುರ್ಘಟನೆಗಳಿಂದ ಗ್ರಾಹಕರಿಗೆ ಹಾನಿ ಸಂಭವಿಸಿದರೆ, ರೂ.10 ಲಕ್ಷ ಪರಿಹಾರ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಹಕರು ಆಗ್ರಹಿಸಿದರು.

ಓವರ್‌ಲೋಡ್ ಸಮಸ್ಯೆ

15 ವರ್ಷದಿಂದ ಓವರ್ ಲೋಡ್ ಸಮಸ್ಯೆಗೆ ಪರಿಹಾರ ನೀಡಲು ಸಾಧ್ಯವಾಗುತ್ತಿಲ್ಲ. ಕೋಡಂದೂರು ಭಾಗದಲ್ಲಿ ಒಟ್ಟು 9 ಕಂಬ ಇದ್ದು, ಮೂರು ಕಂಬ ತಂತಿ ಎಳೆಯಲು ಬಾಕಿಯಾಗಿದೆ. ಒಂದು ಯೋಜನೆ ಸಿದ್ಧಪಡಿಸುವ ಸಮಯ ಸರಿಯಾಗಿ ಗಮನಿಸದಿದ್ದರೆ ಮಾತ್ರ ಇಂತಹ ಸಮಸ್ಯೆ ಎದುರಾಗಲು ಸಾಧ್ಯ. ಸಂಪರ್ಕ ಸರಿಪಡಿಸಲು ಬಾಕಿ ಇದ್ದರೂ, ಪಾಲನಾ ವರದಿಯಲ್ಲಿ ಕೆಲಸ ಪೂರ್ಣಗೊಂಡಿದೆ ಎಂದು ಹಾಕಿರುವುದು ಸರಿಯಲ್ಲ ಎಂದು ದೂರುದಾರರು ಹೇಳಿದರು.

ಸಭೆಯಲ್ಲಿ ಪುತ್ತೂರು ಗ್ಯಾರೆಂಟಿ ಸಮಿತಿ ಅಧ್ಯಕ್ಷ ಉಮಾನಾಥ ರೈ, ಬಂಟ್ವಾಳ ಕಾರ್ಯನಿರ್ವಾಹಕ ಇಂಜಿನಿಯರ್ ಸಂತೋಷ್ ನಾಯಕ್, ಬಂಟ್ವಾಳದ ಲೆಕ್ಕಾಧಿಕಾರಿ ಚಂದ್ರಶೇಖರ್, ವಿಟ್ಲದ ಸಹಾಯಕ ಕಾರ್ಯನಿರ್ವಹಕ ಇಂಜಿನಿಯರ್ ಗೋವಿಂದರಾಜು ಉಪಸ್ಥಿತರಿದ್ದರು.

ಮಣಿಪಾಲ ಕೆಎಂಸಿ: ರಾಜ್ಯದ ಮೊದಲ ನೇತ್ರ ಮೈಕ್ರೋಸರ್ಜಿಕಲ್ ಸಿಮ್ಯುಲೇಶನ್ ಲ್ಯಾಬ್ ಆರಂಭ



ಉಡುಪಿ: ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಮಹಾವಿದ್ಯಾಲಯ (ಕೆಎಂಸಿ)ದ ನೇತ್ರಶಾಸ್ತ್ರ ವಿಭಾಗವು ಶಸ್ತ್ರಚಿಕಿತ್ಸಾ ಶಿಕ್ಷಣ ಮತ್ತು ತರಬೇತಿಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಕಸ್ತೂರ್ಬಾ ಆಸ್ಪತ್ರೆಯಲ್ಲಿ ನೇತ್ರ ಮೈಕ್ರೋಸರ್ಜಿಕಲ್ ಕೌಶಲ್ಯ ಮತ್ತು ಸಿಮ್ಯುಲೇಶನ್ ಲ್ಯಾಬ್ ಅನ್ನು ಮಂಗಳವಾರ ಉದ್ಘಾಟಿಸಲಾಗಿದ್ದು, ನೇತ್ರಶಾಸ್ತ್ರ ಸ್ನಾತಕೋತ್ತರ ತರಬೇತಿಗಾಗಿ ಇಂತಹ ಅತ್ಯಾಧುನಿಕ ಸೌಲಭ್ಯವನ್ನು ನೀಡುತ್ತಿರುವ ಕರ್ನಾಟಕದ ಮೊದಲ ವೈದ್ಯಕೀಯ ಕಾಲೇಜು ಎಂಬ ಹೆಗ್ಗಳಿಕೆಗೆ ಕೆಎಂಸಿ ಪಾತ್ರವಾಗಿದೆ.

ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ಸಹ ಉಪ ಕುಲಪತಿ ಡಾ. ಶರತ್ ಕೆ. ರಾವ್ ಲ್ಯಾಬ್ ಉದ್ಘಾಟಿಸಿ ಮಾತನಾಡಿ, ನೈಜ ಶಸ್ತ್ರಚಿಕಿತ್ಸೆಗೆ ಮುನ್ನ ತರಬೇತಿ ಪಡೆಯುವ ವೈದ್ಯರ ನಿಖರತೆ, ರೋಗಿಗಳ ಸುರಕ್ಷತೆ ಮತ್ತು ಆತ್ಮವಿಶ್ವಾಸ ಹೆಚ್ಚಿಸುವಲ್ಲಿ ಸಿಮ್ಯುಲೇಶನ್ ಆಧಾರಿತ ತರಬೇತಿ ಅತ್ಯಂತ ಮುಖ್ಯ. ವೈದ್ಯಕೀಯ ಶಿಕ್ಷಣದಲ್ಲಿ ಶೈಕ್ಷಣಿಕ ಶ್ರೇಷ್ಠತೆ ಮತ್ತು ನವೀನತೆಗೆ ಮಾಹೆ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ಅತ್ಯಾಧುನಿಕ ಸೌಲಭ್ಯಗಳು

ಈ ಲ್ಯಾಬ್‌ನಲ್ಲಿ ಸುರಕ್ಷಿತ ವಾತಾವರಣದಲ್ಲಿ ಮೈಕ್ರೋಸರ್ಜಿಕಲ್ ಕೌಶಲ್ಯಗಳನ್ನು ವೃದ್ಧಿಸಲು ಪೂರಕವಾದ ಹಲವು ಸೌಲಭ್ಯಗಳಿವೆ. ಇದರಲ್ಲಿ ಕಣ್ಣಿನ ಪೊರೆ ಹಾಗೂ ವಿಟ್ರಿಯೋರೆಟಿನಲ್ ಶಸ್ತ್ರಚಿಕಿತ್ಸಾ ಮಾಡ್ಯೂಲ್‌ಗಳನ್ನು ಹೊಂದಿರುವ ಐಸಿ ಸರ್ಜಿಕಲ್ ಸಿಮ್ಯುಲೇಟರ್ ಉನ್ನತ ಮಟ್ಟದ ಮೈಕ್ರೋಸರ್ಜಿಕಲ್ ವೆಟ್ ಲ್ಯಾಬ್, ಅಲ್ಕೋನ್ ಲಾರಿಯೇಟ್ ಫೇಕೋ ಸಿಸ್ಟಮ್ ಹಾಗೂ ಝೈಸ್ ಒಪ್ಮಿ ವಿಸು ಎಸ್7 ಆಪರೇಟಿಂಗ್ ಮೈಕ್ರೋಸ್ಕೋಪ್‌ಗಳು ಸೇರಿವೆ. ಕಾರ್ಯಕ್ರಮದಲ್ಲಿ ಕೆಎಂಸಿ ಮಣಿಪಾಲದ ಡೀನ್ ಡಾ. ಅನಿಲ್ ಕೆ. ಭಟ್, ಕಸ್ತೂರ್ಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ಶೆಟ್ಟಿ, ನೇತ್ರ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ, ಮುಖ್ಯಸ್ಥ ಡಾ. ಯೋಗಿಶ್ ಎಸ್. ಕಾಮತ್ ಇದ್ದರು. ವಿಭಾಗದ ಸಹ ಪ್ರಾಧ್ಯಾಪಕಿ, ಕೋರ್ಸ್ ಸಂಯೋಜಕಿ ಡಾ. ಸೌಮ್ಯ ಎಸ್., ಸ್ನಾತಕೋತ್ತರ ವಿದ್ಯಾರ್ಥಿ ಪ್ರತಿನಿಧಿ ಡಾ. ರುತ್ವಿ ದೋಷಿ ಲ್ಯಾಬ್‌ನ ಮುಂದಿನ ಶೈಕ್ಷಣಿಕ ಕಾರ್ಯಕ್ರಮಗಳ ಮಾಹಿತಿ ನೀಡಿದರು. ವಿಭಾಗದ ಅಧ್ಯಾಪಕರು, ಪಿಜಿ ವಿದ್ಯಾರ್ಥಿಗಳು, ಸಿಬ್ಬಂದಿ ಇದ್ದರು.

ಮಾ.31-ಏ.4: ನಡ್ವಾಲ್ ಸಿರಿ ಜಾತ್ರೆ

ಬೆಳ್ತಂಗಡಿ: ನಡ ಗ್ರಾ.ಪಂ.ವ್ಯಾಪ್ತಿಯ ಕನ್ಯಾಡಿ ಲೋಕನಾಡು ಶ್ರೀ ಲೋಕನಾಥೇಶ್ವರ ದೇಗುಲದಲ್ಲಿ ಮಾ.31ರಿಂದ ಏ.4ರವರೆಗೆ ನಡ್ವಾಲ್ ಸಿರಿ ಜಾತ್ರೆ ನಡೆಯಲಿದೆ ಎಂದು ಜಾತ್ರೆ ಸಮಿತಿ ಅಧ್ಯಕ್ಷ ಕೆ.ಎಂ. ನಾಗೇಶ್ ಕುಮಾರ್ ಗೌಡ ಮಾಹಿತಿ ನೀಡಿದರು.

ಬೆಳ್ತಂಗಡಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮಾ.31ರಂದು ಬೆಳಿಗ್ಗೆ 6ರಿಂದ ದೇವತಾ ಕಾರ್ಯಗಳು, ಹೊರೆಕಾಣಿಕೆ ಸಮರ್ಪಣೆ, ಧ್ವಜಾರೋಹಣ, ದೇವರ ಬಲಿ, ರಾತ್ರಿ ಭೂತರಾಜ, ಮಹಿಷಂತಾಯ, ಮೂರ್ತಿಲ್ಲಾಯ ದೈವಗಳ ನೇಮ, ಏ.1ರಂದು ಬೆಳಿಗ್ಗೆ ಶ್ರೀ ದೇವರ ಉತ್ಸವ, ಭಜನಾ ಸಂಕೀರ್ತನೆ ಉದ್ಘಾಟನೆ, ಕುಮಾರ ದರ್ಶನ ,ರಾತ್ರಿ ಅಬ್ಬಗ–ದಾರಗರ ಚೆನ್ನೆಮಣೆ ಆಟ, ಮಹಿಷಂತಾಯ, ರಕ್ತೇಶ್ವರಿ, ಪ್ರಧಾನ ದೈವ ನೇಮಕಲ್ಲ ಪಂಜುರ್ಲಿ ನೇಮ ಜರಗಲಿದೆ.

ಏ.2ರಂದು ಬೆಳಿಗ್ಗೆ ನಾಗದರ್ಶನ ಸೇವೆ, ದೇವರ ಉತ್ಸವ, ಸಂಜೆ 7ರಿಂದ ನಡ್ವಾಲ್ ಸಿರಿಜಾತ್ರೆ ಹಾಗೂ ರಾತ್ರಿ 8ರಿಂದ ಧಾರ್ಮಿಕ ಸಭೆ, ರಾತ್ರಿ 10ರಿಂದ ಚೈತನ್ಯ ಕಲಾವಿದರು ಬೈಲೂರು ಇವರಿಂದ 'ರಾಘು ಮಾಸ್ಟ್ರು' ನಾಟಕ ನಡೆಯಲಿದೆ. ಏ.3ರಂದು ಗಣಹೋಮ, ರುದ್ರಾಭಿಷೇಕ, ಶ್ರೀ ದೇವರ ಬಲಿ, ಸಂಜೆ ರಂಗಪೂಜೆ, ಭೂತಬಲಿ, ಶಯನೋತ್ಸವ, ಏ.4ರಂದು ಬೆಳಿಗ್ಗೆ ಕವಾಟೋದ್ಘಾಟನೆ, ಗ್ರಾಮ ದೈವ ಪಿಲಿಚಾಮುಂಡಿ ದೈವದ ನೇಮ, ಅವಭೃತ ಸ್ನಾನ, ದರ್ಶನ ಬಲಿ, ಬಟ್ಟಲು ಕಾಣಿಕೆ, ಧ್ವಜಾವರೋಹಣ ನೆರವೇರಲಿದೆ.

ಏ.1ರಂದು ಸಂಜೆ 5 ಗಂಟೆಗೆ ಭಜನಾ ಸಂಕೀರ್ತನೆಯನ್ನು ಶಾಸಕ ಹರೀಶ್ ಪೂಂಜ ಉದ್ಘಾಟಿಸಲಿದ್ದಾರೆ. ಏ.2ರಂದು ರಾತ್ರಿ 8ರಿಂದ ನಡೆಯಲಿರುವ ಧಾರ್ಮಿಕ ಸಭೆಯಲ್ಲಿ ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡುವರು. ಜಾತ್ರೆ ಸಮಿತಿ ಗೌರವಾಧ್ಯಕ್ಷ ರಕ್ಷಿತ್ ಶಿವರಾಂ ಅಧ್ಯಕ್ಷತೆಯಲ್ಲಿ ಉಜಿರೆ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್‌ಕೃಷ್ಣ ಪಡುವೆಟ್ನಾಯ, ಶ್ರೀ ಆರಿಕೋಡಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ, ಎಸ್‌ಕೆಡಿಆರ್‌ಡಿಪಿಯ ಸಿಇಒ ಅನಿಲ್‌ಕುಮಾರ್ ಎಸ್.ಎಸ್.,. ಎಕ್ಸೆಲ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಮಂತ್ ಕುಮಾರ್ ಜೈನ್ ಭಾಗವಹಿಸುವರು.

ಮುಂದಿನ ವರ್ಷ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯ ನಡೆಯಲಿದ್ದು, ನಾಗದೇವರ ಕಟ್ಟೆ, ರಕ್ತೇಶ್ವರಿ ದೈವಸ್ಥಾನ, ನೂತನ ಧ್ವಜಸ್ತಂಭ, ಸಮುದಾಯ ಭವನ ನಿರ್ಮಾಣ, ನಿಡಿಗಲ್‌ನಿಂದ ದೇವಸ್ಥಾನಕ್ಕೆ ಬರಲು ಅನುಕೂಲವಾಗುವಂತೆ ನೇತ್ರಾವತಿ ನದಿಗೆ ಸೇತುವೆ ಸಹಿತ ಕಿಂಡಿ ಅಣೆಕಟ್ಟು ತಡೆಗೋಡೆ ನಿರ್ಮಾಣ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುರಾಜ್ ಗುರಿಪಳ್ಳ, ಪ್ರಧಾನ ಸಂಚಾಲಕ ಪಾಂಡುರಂಗ ಮರಾಠೆ, ಪ್ರಸಾದ್ ಕುಮಾರ್, ಸಂತೋಷ್ ಗೌಡ, ಯಶೋಧರ ಗೌಡ ಇದ್ದರು.

ಉಳಿ ಕಕ್ಕೆಪದವು: ಭೂಮಿಕ ಜ್ಞಾನವಿಕಾಸ ಕೇಂದ್ರದ ವಾರ್ಷಿಕೋತ್ಸವ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬಂಟ್ವಾಳ ಇದರ ಉಳಿ ಭೂಮಿಕ ಜ್ಞಾನವಿಕಾಸ ಕೇಂದ್ರದಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮ ಉಳಿ ಒಕ್ಕೂಟದ ಅಧ್ಯಕ್ಷ ವಿಶ್ವನಾಥ್ ಅಧ್ಯಕ್ಷತೆಯಲ್ಲಿ ಉಳಿ ಕಕ್ಕೆಪದವಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಒಕ್ಕೂಟದ ನಿಕಟ ಪೂರ್ವ ಅಧ್ಯಕ್ಷರಾದ ಗಿರಿಯಪ್ಪ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಕೇಂದ್ರ ಒಕ್ಕೂಟದ ಅಧ್ಯಕ್ಷರಾದ ಚಿದಾನಂದ ರೈ ಮಾತಾಡಿ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳೆಯರ ಸಬಲೀಕರಣಕ್ಕಾಗಿ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹ 'ಮ್ಮಿಕೊಳ್ಳಲಾಗುತ್ತಿದ್ದು, ಮಾತೃಶ್ರೀ ಹೇಮಾವತಿ ಅಮ್ಮನವರ ದೂರ ದೃಷ್ಟಿಯ ಸಮಾಜಮುಖಿ ಕಾರ್ಯಕ್ರಮದಿಂದ ಅದೆಷ್ಟು ಕುಟುಂಬ ಸ್ವಾವಲಂಬಿಗಳಾಗಲು ಸಹಕಾರಿಯಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ವಿದ್ಯಾ ಮಹಿಳೆಯರ ಹಕ್ಕು ಮತ್ತು ಕಾನೂನಿನ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಿದರು. ಕೇಂದ್ರದ ಸದಸ್ಯರಿಗೆ ವಿವಿಧ ಸ್ಪರ್ಧೆ ಏರ್ಪಡಿಸಿ . ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕೇಂದ್ರದ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. ವಲಯದ ಮೇಲ್ವಿಚಾರಕಿ ಸವಿತ. ಸೇವಾಪ್ರತಿನಿಧಿ ಉಷಾ, ಸುಧಾ ಉಪಸ್ಥಿತರಿದ್ದರು. ಶೇಖರ್ ಸ್ವಾಗತಿಸಿ, ಜ್ಞಾನ ವಿಕಾಸ ಸಮನ್ವಯಧಿಕಾರಿ ಸವಿತಾ ಕಾರ್ಯಕ್ರಮ ನಿರೂಪಿಸಿದರು.

ಕೋಟೆಕಾರು ಪಟ್ಟಣ ಪಂಚಾಯತ್ ಸಾಮಾನ್ಯಸಭೆ | ಗುಡ್ಡ ಪ್ರದೇಶಗಳಲ್ಲಿ ಹೊಳೆ ಪರಂಬೋಕು ಬರಲು ಹೇಗೆ ಸಾಧ್ಯ?: ಸದಸ್ಯ ಸುಜಿತ್ ಮಾಡೂರು ಪ್ರಶ್ನೆ

ನಿವೇಶನ ರಹಿತರಿಗೆ ಮೀಸಲಿಟ್ಟ ಜಮೀನಿಗೆ ಸಂಬಂಧಿಸಿ ತಹಶೀಲ್ದಾರ್ ದಾರಿತಪ್ಪಿಸುತ್ತಿದ್ದಾರೆ



ಉಳ್ಳಾಲ: ಕೋಟೆಕಾರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ಕಾದಿರಿಸಿದ ಜಮೀನನ್ನು ತಹಶೀಲ್ದಾರ್ ಹೊಳೆ ಪರಂಬೋಕೆಂದು ಹೇಳಿ ಹೊಸತಾಗಿ ತಗಾದೆ ತೆಗೆದಿದ್ದಾರೆ. ಗುಡ್ಡ ಪ್ರದೇಶಗಳಲ್ಲಿ ಹೊಳೆ ಪರಂಬೋಕು ಬರಲು ಹೇಗೆ ಸಾಧ್ಯ. ತಹಶೀಲ್ದಾರ್ ನಮ್ಮ ದಾರಿ ತಪ್ಪಿಸುತ್ತಿದ್ದಾರ ಎನ್ನುವ ಶಂಕೆ ಇದೆ. ಇದನ್ನೆಲ್ಲ ಮುಖ್ಯಾಧಿಕಾರಿಗಳು ಪರಿಶೀಲಿಸಬೇಕಲ್ಲವೆ ಎಂದು ಕೋಟೆಕಾರು ಪಟ್ಟಣ ಪಂಚಾಯತ್ ಸದಸ್ಯರಾದ ಸುಜಿತ್ ಮಾಡೂರು ಪ್ರಶ್ನಿಸಿದ್ದಾರೆ.

ಮಂಗಳವಾರದಂದು ಕೋಟೆಕಾರು ಪಟ್ಟಣ ಪಂಚಾಯತ್‌ನ ಸಾಮಾನ್ಯಸಭೆಯು ಪಂಚಾಯತ್ ಅಧ್ಯಕ್ಷೆ ದಿವ್ಯಾ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸರ್ಕಾರಿ ನಿವೇಶನಗಳ ಗಡಿ ಗುರುತಿನ ಬಗ್ಗೆ ಸಭೆಯಲ್ಲಿ ಕೌನ್ಸಿಲರ್ ಸುಜಿತ್ ಮಾಡೂರು ಅವರು ಮತ್ತೆ ಅಧಿಕಾರಿಗಳನ್ನ ತರಾಟೆಗೆ ತೆಗೆದುಕೊಂಡಿದ್ದಾರೆ. ಸಾಮಾನ್ಯ ಸಭೆಗಳಲ್ಲಿ ಮುಖ್ಯಾಧಿಕಾರಿಯ ಪಾತ್ರವೇನು?ಸಾಮಾನ್ಯ ಸಭೆಗಳಲ್ಲಿ ಆಗುವ ನಿರ್ಣಯಗಳ ಅನುಷ್ಠಾನಕ್ಕಾಗಿ ನಾವು ತಹಶೀಲ್ದಾರರ ಬಳಿ ಹೋಗಿ ಅಲವತ್ತು ಕೊಂಡಾಗಲೂ ಮುಖ್ಯಾಧಿಕಾರಿಗಳು ಅಲ್ಲಿಗೆ ಬರುವುದಿಲ್ಲ, ಒಂದೊವರೆ ವರ್ಷಗಳ ಹಿಂದೆ ಕೈಗೊಂಡ ಸರ್ಕಾರಿ ಜಾಗದ ಗಡಿ ಗುರುತು ನಿರ್ಣಯ ಇದುವರೆಗೆ ಪಾಲನೆ ಆಗಿಲ್ಲ. ಕೌನ್ಸಿಲರ್ ಗಳಿಗೆ ಮಾಸಿಕ 800 ರೂ. ಭತ್ಯೆ ಸಿಗುತ್ತದೆ. ಅಧಿಕಾರಿಗಳು ಸರಕಾರಿ ಸಂಬಳ ಎಣಿಸಿದರೂ ಸಹ ನೀವು ಮಾಡಬೇಕಾದ ಕೆಲಸಗಳನ್ನು ನಾವು ಮಾಡುವ ಅನಿವಾರ್ಯತೆ ಬಂದೊದಗಿದೆ ಎಂದು ಸುಜಿತ್ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ಜಾಗ ಗಡಿಗುರುತು ಬಗ್ಗೆ ನಾವು ತಹಸೀಲ್ದಾರ್‌ಗೆ ಪತ್ರ ಬರೆದಿದ್ದೇವೆ,ಎಷ್ಟು ದಿನಗಳಲ್ಲಿ ಕೆಲಸ ಆಗುತ್ತದೆ ಎನ್ನುವುದು ತಹಸೀಲ್ದಾರ್ ಅವರಿಗೆ ಬಿಟ್ಟ ವಿಚಾರ. ಅಧ್ಯಕ್ಷರು, ಸದಸ್ಯರನ್ನು ತಹಸೀಲ್ದಾರ್ ಬಳಿ ನಾನು ಕಳಿಸಿಲ್ಲವೆಂದು ಮುಖ್ಯಾಧಿಕಾರಿ ಮಾಲಿನಿ ಸ್ಪಷ್ಟನೆ ನೀಡಿದರು. 14ರಿಂದ 15 ವರ್ಷದೊಳಗಿನ ಹೆಣ್ಮಕ್ಕಳಿಗೆ ಸರ್ಕಾರದಿಂದ ನೀಡಲಾಗುವ ವ್ಯಾಕ್ಸಿನ್ ಬಗ್ಗೆ ಜಾಲತಾಣದಲ್ಲಿ ಹರಿದಾಡುತ್ತಿರುವ ಅಪಪ್ರಚಾರಕ್ಕೆ ಸಂಬಂಧಿಸಿ ಏನು ಕ್ರಮ ಕೈಗೊಂಡಿದ್ದೀರೆಂದು ಸುಜಿತ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಆರೋಗ್ಯಾಧಿಕಾರಿ ಡಾ. ಸುನಿತಾ, ಇಲಾಖೆಯಿಂದ ಮೇಲಾಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಿದ್ದು, ಧರ್ಮಗುರುಗಳ ಮೂಲಕವೂ ಜನರಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆಯೆಂದು ಸಮಜಾಯಿಷಿ ನೀಡಿದರು.

ಬೀದಿನಾಯಿ ಆಶ್ರಯತಾಣ ನಿರ್ಮಿಸಿ

ಸಾರ್ವಜನಿಕರಿಗೆ ಯಾವುದೇ ತೊಂದರೆಗಳಾಗದಂತೆ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಿಸಬೇಕಿದೆ ಯೆಂದು ಸದಸ್ಯ ಹರೀಶ್ ರಾವ್ ಮಡ್ಯಾರ್ ಕಳಕಳಿ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ಪಂಚಾಯತ್ ಆರೋಗ್ಯ ನಿರೀಕ್ಷಕ ವಿಕ್ರಂ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪ್ರತಿಯೊಂದು ಸ್ಥಳೀಯ ಸಂಸ್ಥೆಗಳು ಕೂಡಾ ಅವರವರ ವ್ಯಾಪ್ತಿಯ ಬೀದಿ ನಾಯಿಗಳಿಗೆ ಆಶ್ರಯ ತಾಣ ನಿರ್ಮಿಸುವುದು ಕಡ್ಡಾಯ ಎಂದರು. ಉಪಾಧ್ಯಕ್ಷ ಪ್ರವೀಣ್.ಐ ಬಗಂಬಿಲ, ಸ್ಥಾಯಿ ಸಮಿತಿ ಅಧ್ಯಕ್ಷ ಧೀರಜ್ ಕುಸಾಲ್ ನಗರ ಇದ್ದರು.

ತ್ರಿವಳಿ ಹೆಣ್ಮಕ್ಕಳಿಗೆ 'ಭಾಗ್ಯಲಕ್ಷ್ಮೀ'

ಭಾಗ್ಯಲಕ್ಷ್ಮಿ ಯೋಜನೆ ಬಂದ ಬಳಿಕ ಉಳ್ಳಾಲ ತಾಲೂಕಿನಲ್ಲಿ ಪ್ರಥಮ ಬಾರಿಗೆ ತ್ರಿವಳಿ ಶಿಶುಗಳ ಜನನವಾಗಿದ್ದು ಅವರಿಗೆ ಸರ್ಕಾರದಿಂದ ಯೋಜನೆ ಲಭಿಸಿದೆ. ನಿಯಮ ಪ್ರಕಾರ ಒಂದು ಕುಟುಂಬದ ಇಬ್ಬರು ಹೆಣ್ಮಕ್ಕಳಿಗೆ ಭಾಗ್ಯಲಕ್ಷ್ಮಿ ಯೋಜನೆ ಸಿಗುತ್ತದೆ. ಆದರೆ ಇತ್ತೀಚೆಗೆ ಅಂಬ್ಲಮೊಗರು ಗ್ರಾಮದ ಗಾಂಧಿ ನಗರದಲ್ಲಿ ಮಹಿಳೆಯೋರ್ವರಿಗೆ ಮೊದಲ ಹೆಂಗೆಯಲ್ಲೇ ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದವು. ನಿರಂತರ ಹೋರಾಟದ ಫಲವಾಗಿ ಮಕ್ಕಳಿಗೆ 8 ತಿಂಗಳು ಪೂರ್ತಿಗೊಂಡ ಬಳಿಕ ಇದೀಗ ಅವರಿಗೆ ಭಾಗ್ಯಲಕ್ಷ್ಮಿ ಯೋಜನೆ ಲಭಿಸಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಶಂಕರಿ ಸಭೆಗೆ ಮಾಹಿತಿ ನೀಡಿದರು.

ಸುತ್ತಮುತ್ತ

ಬೆಳ್ತಂಗಡಿ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಅನುದಾನ ಬಿಡುಗಡೆ

ಬೆಳ್ತಂಗಡಿ: ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಒಟ್ಟು ರೂ.2.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಿರುವುದಾಗಿ ಶಾಸಕ ಹರೀಶ್ ಪೂಂಜ ತಿಳಿಸಿದ್ದಾರೆ.

ಈ ಅನುದಾನದಡಿ ಪಡಂಗಡಿ ಗ್ರಾಮದ ಪೊಯ್ಯೆಗುಡ್ಡೆ–ಪಲ್ಕೆ ರಸ್ತೆ (ರೂ.25.00 ಲಕ್ಷ), ನೈಕುಳಿ –ಕಳೆಂಜಿರೋಡಿ ರಸ್ತೆ (ರೂ.25.00 ಲಕ್ಷ), ಮಿತ್ತೊಟ್ಟು ರಸ್ತೆ (ರೂ.25.00 ಲಕ್ಷ), ಮಲ್ಲಿಪ್ಪಾಡಿ ರಸ್ತೆ (ರೂ.25.00 ಲಕ್ಷ), ಪರಾರಿ ರಸ್ತೆ (ರೂ.25.00 ಲಕ್ಷ), ಪದೆಂಜಿಲ ರಸ್ತೆ (ರೂ.25.00 ಲಕ್ಷ) ಹಾಗೂ ಗರ್ಡಾಡಿ ಗ್ರಾಮದ ಪೈಕರ–ಬಂಗಟ ರಸ್ತೆ (ರೂ.25.00 ಲಕ್ಷ), ಕೆಲ್ಲಾಡಿ–ಉದಲೋಡಿ ರಸ್ತೆ (ರೂ.25.00 ಲಕ್ಷ)ಗಳಿಗೆ ತಲಾ ರೂ.25.00 ಲಕ್ಷ ಅನುದಾನ ಮಂಜೂರಾಗಿದೆ. ಈ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆಗೊಳಿಸಿದ ರಾಜ್ಯ ಸರ್ಕಾರಕ್ಕೆ ಶಾಸಕರು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

ಸಂತ ಫಿಲೊಮಿನಾ ಕಾಲೇಜು: ಪೈ ದಿನಾಚರಣೆ

ಪುತ್ತೂರು: ನಗರದ ಸಂತ ಫಿಲೊಮಿನಾ ಕಾಲೇಜಿನ (ಸ್ವಾಯತ್ತ) ಸ್ನಾತಕೋತ್ತರ ಗಣಿತಶಾಸ್ತ್ರ ವಿಭಾಗವು ಗಣಿತದ ಸ್ಥಿರಾಂಕವಾದ (ಪೈ ಯ ಮಹತ್ವ ಪರಿಚಯಿಸುವ ಉದ್ದೇಶದಿಂದ 'ಸಂಗೀತದಲ್ಲಿನ ಗಣಿತಶಾಸ್ತ್ರ' ವಿಷಯದ ಅತಿಥಿ ಉಪನ್ಯಾಸದ ಮೂಲಕ ಪೈ ದಿನವನ್ನು ಆಚರಿಸಿತು. ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆಂಟನಿ ಪ್ರಕಾಶ್ ಮೊಂತೇರೊ ಅಧ್ಯಕ್ಷತೆ ವಹಿಸಿ, ಆಲ್ಬರ್ಟ್ ಐನ್‌ಸ್ಟೈನ್ ಅವರನ್ನು ಉದಾಹರಣೆಯಾಗಿ ಉಲ್ಲೇಖಿಸಿ, ಗಣಿತ ಮತ್ತು ತತ್ತ್ವ ಶಾಸ್ತ್ರದ ನಡುವಿನ ಸಂಬಂಧವನ್ನು ವಿವರಿಸಿ ಸಮಗ್ರ ಅಧ್ಯಯನದ ಮಹತ್ವವನ್ನು ಹೇಳಿದರು. ಸಂಪನ್ಮೂಲ ವ್ಯಕ್ತಿಯಾಗಿದ್ದ ಉಜಿರೆ ಎಸ್.ಡಿ.ಎಂ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ. ಪ್ರಕಾಶ್ ಪ್ರಭು ಅವರು ಪೈ ಸಂಖ್ಯೆಯ ವಿಶೇಷತೆಗಳ ಬಗ್ಗೆ ಉಪನ್ಯಾಸ ನೀಡಿದರು. ಪೈ ಒಂದು ಅನಿರ್ಣಿತ ಸಂಖ್ಯೆ ಆಗಿದ್ದು, ಅದರ ದಶಮಾಂಶಗಳು ಅಂತ್ಯವಿಲ್ಲದೆ ಮುಂದುವರಿಯುತ್ತವೆ. ಗಣಿತದ ಆಟಗಳ ಮೂಲಕ ಕಾರ್ಯಕ್ರಮವನ್ನು ಆಕರ್ಷಕವಾಗಿಸಿ, ಸಂಗೀತದ ಮೂಲಕ ಗಣಿತದ ಪರಿಕಲ್ಪನೆಗಳನ್ನು ವಿವರಿಸಿ, ವಿದ್ಯಾರ್ಥಿಗಳಿಗೆ ಕ್ಲಾಸಿಕಲ್ ಸಂಗೀತದೊಂದಿಗೆ ಗಣಿತದ ಸಂಬಂಧ ತಿಳಿಸಿದರು.

ಉದ್ಯೋಗಾವಕಾಶ : ನಾಳೆ ನೇರ ಸಂದರ್ಶನ

ಮಂಗಳೂರು: ಸ್ವಿಗ್ಗಿ ಇನ್‌ಸ್ಟಾ ಮಾರ್ಟ್ ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿಯಿರುವ ಇನ್ ಸೈಡ್ ಸ್ಟೋರ್ ಕೆಲಸಗಳಿಗಾಗಿ ಪಿಕ್ಕರ್ ಮತ್ತು ಪ್ಯಾಕರ್ ಹಾಗೂ ಲೋಡಿಂಗ್ ಹುದ್ದೆಗಳಿಗೆ ಪಾರ್ಟ್‌ಟೈಮ್ ಹಾಗೂ ಫುಲ್ ಟೈಮ್ ಉದ್ಯೋಗದ ಅವಕಾಶ ಲಭ್ಯವಿದ್ದು, ಈ ಸಂಬಂಧ ಸ್ವಿಗ್ಗಿ ಇನ್‌ಸ್ಟಾ ಮಾರ್ಟ್ ಕಂಪೆನಿಯ ವತಿಯಿಂದ ನೇರ ಸಂದರ್ಶನ ಮಾ.26 ರಂದು ಬೆಳಿಗ್ಗೆ 10.30 ರಿಂದ 1.30 ರವರೆಗೆ ಪಾಂಡೇಶ್ವರ ಫಾರಮ್ ಫಿಜಾ ಮಾಲ್ ಎದುರುಗಡೆ ಅಲ್ಬುಕರ್ಕ್ ಹೌಸ್, ಆದಾಯ ತೆರಿಗೆ ಕಚೇರಿ ಕಟ್ಟಡದ ಸ್ವಿಗ್ಗಿ ಇನ್‌ಸ್ಟಾ ಮಾರ್ಟ್‌ನಲ್ಲಿ ಆಯೋಜಿಸಲಾಗಿದೆ.

ಸಂದರ್ಶನದಲ್ಲಿ ಎಸ್ಸೆಸ್ಸೆಲ್ಸಿ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾದೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ವೇತನದೊಂದಿಗೆ ಪಿ.ಎಫ್. ಇ.ಎಸ್.ಐ ಮತ್ತು ಇನ್ಸೆಂಟಿವ್ ಸೌಲಭ್ಯವಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂದಿಗಳಿಗೆ ಲಸಿಕಾ ಕಾರ್ಯಕ್ರಮ

ಮಂಗಳೂರು: 2025–26ನೇ ಸಾಲಿನ ರಾಷ್ಟ್ರೀಯ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಾದ್ಯಂತ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖಾ ವತಿಯಿಂದ ಹಂದಿಗಳಿಗೆ ಉಚಿತವಾಗಿ ಸಿ.ಎಸ್.ಎಫ್ (ಕ್ಲಾಸಿಕಲ್ ಸ್ವೈನ್ ಫೀವರ್) ಲಸಿಕಾ ಕಾರ್ಯಕ್ರಮ ಮಾ. 16 ರಿಂದ 30ರವರೆಗೆ ಹಮ್ಮಿಕೊಳ್ಳಲಾಗಿದೆ.

ಈ ಲಸಿಕೆ ಹಂದಿ ಸಾಕಾಣಿಕೆದಾರರು 2 ತಿಂಗಳಿಗೂ ಮೇಲ್ಪಟ್ಟ ವಯಸ್ಸಿನ ಹಂದಿಗಳಿಗೆ ಹಾಕಿಸಿಕೊಳ್ಳಬೇಕು. ಹಂದಿಗಳಲ್ಲಿ ಈ ರೋಗವು ಸಾಕಷ್ಟು ಪ್ರಮಾಣದಲ್ಲಿ ಸಾವಿಗೆ ಕಾರಣವಾಗುವುದರಿಂದ ರೈತರು ಆರ್ಥಿಕವಾಗಿ ನಷ್ಟ ಅನುಭವಿಸುತ್ತಾರೆ. ಆದ್ದರಿಂದ ಸಾಕಾಣಿಕೆದಾರರು ಈ ಅವಧಿಯಲ್ಲಿ ತಮ್ಮ ಹತ್ತಿರದ ಪಶು ವೈದ್ಯಕೀಯ ಸಂಸ್ಥೆಗಳನ್ನು ಸಂಪರ್ಕಿಸಿ, ಹಂದಿಗಳಿಗೆ ತಪ್ಪದೇ ಲಸಿಕೆ ಹಾಕಿಸಬೇಕೆಂದು ಪಶುಪಾಲನಾ– ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ.29, 30 ರಂದು ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನ | ಪೂರ್ವಭಾವಿ ಸಭೆ

ಕನ್ನಡ ಭಾಷೆ-ಸಾಹಿತ್ಯಕ್ಕೆ ಒಗ್ಗಟ್ಟಾಗಿ ದುಡಿಯೋಣ: ಟಿ.ಪಿ.ರಮೇಶ್



ಸುಂಟಿಕೊಪ್ಪ: ಕೊಡಗು ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನ ಎ.29,30 ರಂದು ಸುಂಟಿಕೊಪ್ಪ ಜಿ. ಎಂ.ಪಿ. ಶಾಲಾ ಮೈದಾನದಲ್ಲಿ ನಡೆಯಲಿದೆ.

ಮಂಗಳವಾರ ಸುಂಟಿಕೊಪ್ಪ ಕೊಡವ ಸಮಾಜದ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಕೇಶವ್ ಕಾಮತ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸುಂಟಿಕೊಪ್ಪದಲ್ಲಿ ನಡೆಯಲಿದೆ ಸಮ್ಮೇಳನ

ಸಭೆಯಲ್ಲಿ ಸಾಹಿತ್ಯ ಸಮ್ಮೇಳನದ ಯಶಸ್ವಿಗಾಗಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ , ಕೊಡಗು ಜಿಲ್ಲೆಯಲ್ಲಿ ತನ್ನದೆಯಾದ ವೈಶಿಷ್ಟ್ಯತೆ ಪರಂಪರೆಯನ್ನು ಹೊಂದಿರುವ ಸುಂಟಿಕೊಪ್ಪ ಹೋಬಳಿಯಲ್ಲಿ ಈ ಸಾಲಿನ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತಿರ್ಮಾನಿಸಲಾಗಿದೆ. ಸಮ್ಮೇಳನವು 2 ದಿನಕಾಲ ನಡೆಯಲಿದ್ದು, 29 ರ ಸಂಜೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮತ್ತು 30 ರಂದು ಸಮ್ಮೇಳನದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದ ಯಶಸ್ವಿಗಾಗಿ ಅಂದಾಜು 18 ರಿಂದ19 ಲಕ್ಷ ರೂ ವೆಚ್ಚ ತಗುಲಿದ್ದು ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲು 11 ಉಪ ಸಮಿತಿಗಳ ಅಗತ್ಯವಿದೆ. ಈ ಹಿನ್ನಲೆಯಲ್ಲಿ ನಾವೆಲ್ಲರೂ ಕನ್ನಡ ಭಾಷೆ ಮತ್ತು ಸಾಹಿತ್ಯದ ಒಂದೇ ದೃಷ್ಟಿಕೋನದ ಹಿನ್ನಲೆಯಲ್ಲಿ ಒಂದಾಗಿ ದುಡಿಯೋಣವೆಂದು ಕರೆ ನೀಡಿದರು. ರೂ.5 ಲಕ್ಷ ಅನುದಾನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ನೀಡುತ್ತದೆ ಆದರೆ ಈಗಾಗಲೇ ಸರಕಾರದ ನೀತಿ ನಿಯಮಗಳಿಗೆ ಅನುಗುಣ ಅರ್ಥಿಕ ವರ್ಷ ಮುಗಿದಿದ್ದು ಎ.30 ರೊಳಗೆ ಲೆಕ್ಕ ಪತ್ರ ಮಂಡಿಸಬೇಕಾದ ಹಿನ್ನಲೆ ಏಪ್ರಿಲ್ ತಿಂಗಳಿನಲ್ಲೇ ಸಮ್ಮೇಳನ ಮಾಡಬೇಕಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಮಾತನಾಡಿದ ಶಾಲಾ ಶಿಕ್ಷಕ ಶಿಕ್ಷಕಿಯರು ಎಸ್ಸೆಸೆಲ್ಸಿ ಪರೀಕ್ಷೆ, ಪಿಯುಸಿ ಪರೀಕ್ಷಾ ಮೌಲ್ಯಮಾಪನ 1 ತಿಂಗಳ ಕಾಲ ನಡೆಯುವ ಜನಗಣತಿ ಕುರಿತು ಮಾಹಿತಿ ನೀಡಿದರಲ್ಲದೆ , ಸಮ್ಮೇಳನದ ಯಶಸ್ವಿಗೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಅಸಾಧ್ಯ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಈ ವಿಚಾರವನ್ನು ಜಿಲ್ಲಾಧಿ ಕಾರಿಗಳ ಗಮನಕ್ಕೆ ತಂದು ಶಿಕ್ಷಣ ಇಲಾಖೆಯ ಮೂಲಕ ಸಮ್ಮೇಳನ ನಡೆಯುವ 2 ದಿನಗಳ ಮಟ್ಟಿಗೆ ಅನುಮತಿ ನೀಡುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಜಿಲ್ಲಾಡಳಿತದ ಕಾನೂನು ಸಲಹೆಗಾರ ಎ.ಲೋಕೇಶ್ ಕುಮಾರ್ ಭರವಸೆ ನೀಡಿದ್ದಾರೆಂದು ಟಿ.ಪಿ.ರಮೇಶ್ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಸುಂಟಿಕೊಪ್ಪ ಹೋಬಳಿ ಕ.ಸಾ.ಪ. ಅಧ್ಯಕ್ಷರಾದ ಪಿ.ಎಫ್. ಸಬಾಸ್ಟೀನ್,ಕುಶಾಲನಗರ ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್, ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಎಸ್.ಎ.ಮುನಿರ್ ಆಹ್ಮದ್, ರೇವತಿ ರಮೇಶ್, ಗೌರವ ಕೋಶಾಧಿಕಾರಿ ಎಸ್.ಎಸ್.ಸಂಪತ್‌ಕುಮಾರ್, ಸುಂಟಿಕೊಪ್ಪ ಗ್ರಾ.ಪಂ.ಮಾಜಿ ಅಧ್ಯಕ್ಷ ಪಿ.ಆರ್.ಸುನಿಲ್ ಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಎನ್.ದೇವರಾಜ್, ಸುಂಟಿಕೊಪ್ಪ ಹೋಬಳಿ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಅನಿಲ್‌ಕುಮಾರ್, ಮಹಿಳಾ ಕಾರ್ಯದರ್ಶಿ ಲೀಲಾ ಮೇದಪ್ಪ, ನಿಕಟಪೂರ್ವ ಎಂ.ಎಸ್.ಸುನಿಲ್, ಸುಂಟಿಕೊಪ್ಪ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, 7ನೇ ಹೊಸಕೋಟೆ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ನಂದೀಶ್, ಕೊಡಗರಹಳ್ಳಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರವೀಶ್, ನಾಕೂರು ಶಿರಂಗಾಲ ಗ್ರಾ.ಪಂ. ಕಾರ್ಯದರ್ಶಿ , ಸುಂಟಿಕೊಪ್ಪ ವಾಹನ ಚಾಲಕರ ಸಂಘದ ಅಧ್ಯಕ್ಷ ಕಿಟ್ಟಣ್ಣ ರೈ, ಆಟೋ ಚಾಲಕರ ಸಂಘದ ಅಧ್ಯಕ್ಷ ಕೆ.ಎಚ್.ಶರೀಫ್ ಮತ್ತಿತರರಿದ್ದರು.

- ಅಂದಾಜು 18 ರಿಂದ19 ಲಕ್ಷ ರೂ ವೆಚ್ಚದಲ್ಲಿ ನಡೆಯಲಿದೆ ಸಮ್ಮೇಳನ
- ಸಮ್ಮೇಳನದ ಯಶಸ್ವಿಗೆ ವಿವಿಧ ಉಪಸಮಿತಿಗಳ ರಚನೆ
- ಎ.29 ರ ಸಂಜೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ , 30 ರಂದು ನಡೆಯಲಿವೆ ವಿವಿಧ ಕಾರ್ಯಕ್ರಮಗಳು

ಕಟಪಾಡಿಯಲ್ಲಿ ಎ.11ರಂದು ಶ್ರೀನಿವಾಸ ಕಲ್ಯಾಣೋತ್ಸವ: ಕಾರ್ಯಾಲಯ ಉದ್ಘಾಟನೆ



ಶಿರ್ವ: ತಿರುಮಲ ತಿರುಪತಿ ದೇವಸ್ಥಾನದ ನೇತೃತ್ವದಲ್ಲಿ ಕೆ. ಕೃಷ್ಣಮೋಹನ್ ಪೈ ಯುಎಸ್‌ಎ ಅವರ ಸಂಕಲ್ಪದಂತೆ ಕಟಪಾಡಿ ಶ್ರೀಮತಿ ವಿಜಯಾ ಪೈ, ಪುರುಷೋತ್ತಮ ಪೈ ಮತ್ತು ಕುಟುಂಬಸ್ಥರ ವತಿಯಿಂದ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಹಾಗೂ ಕಟಪಾಡಿಯ ನಾಗರಿಕರು, ಗಣ್ಯರು, ಸಂಘ ಸಂಸ್ಥೆಗಳು ದೇವಸ್ಥಾನ ದೈವಸ್ಥಾನ, ಭಜನಾ ಮಂಡಳಿಗಳ ಆಡಳಿತ ಮಂಡಳಿಯ ಸಹಕಾರದೊಂದಿಗೆ ಎ.11 ರಂದು ಎಸ್ ವಿಎಸ್ ಕ್ರೀಡಾಂಗಣದಲ್ಲಿ ಜರಗಲಿರುವ 'ಶ್ರೀನಿವಾಸ ಕಲ್ಯಾಣೋತ್ಸವ' ಕಾರ್ಯಕ್ರಮದ ಕಾರ್ಯಾಲಯ ಉದ್ಘಾಟಿಸಲಾಯಿತು.

ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ವಿದ್ಯಾಸಂಸ್ಥೆ ಕಟ್ಟಡದಲ್ಲಿ ಆರಂಭಿಸಲಾದ ಕಾರ್ಯಾಲಯವನ್ನು ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಮಟ್ಟಾರು ದಿನೇಶ್ ಕಿಣಿ, ಕಾರ್ಯಕ್ರಮ ರೂವಾರಿ ಎಸ್‌ವಿಎಸ್ ವಿದ್ಯಾವರ್ಧಕಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ , ಮೂಡಬಿದ್ರೆ ಆರ್‌ಕೆ ಎಂಟರ್ ಪ್ರೈಸಸ್ ಸಂಸ್ಥೆ ಮುಖ್ಯಸ್ಥ ಆರ್‌ಕೆ ಭಟ್ ಜಂಟಿಯಾಗಿ ನೆರವೇರಿಸಿದರು.

ಈ ಸಂದರ್ಭ ಕಟಪಾಡಿ ಶ್ರೀ ವಿಶ್ವನಾಥ ಕ್ಷೇತ್ರದ ಆಡಳಿತ ಮಂಡಳಿ ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಡಿ.ಬಂಗೇರ, ಎಸ್ ವಿಎಸ್ ವಿದ್ಯಾವರ್ಧಕ ಸಂಘದ ಸದಸ್ಯರಾದ ನಿತ್ಯಾನಂದ ಶೆಣೈ, ಬಿ. ಚಂದ್ರಕಾಂತ್ ಪೈ, ಶ್ರೀನಿವಾಸ ವಾಸುದೇವ ಕಿಣಿ, ವೆಂಕಟರಮಣ ಭಟ್, ಕೃಷ್ಣಾನಂದ ಕಾಮತ್, ಗಣೇಶ್ ಕಿಣಿ, ಆಡಳಿತಾಧಿಕಾರಿ ಸುಧಾಕರ್ ಬ್ರಹ್ಮಾವರ, ಐರಥ ಆಟೋ ಸಂಸ್ಥೆ ಪಾಲುದಾರ ಕಾರ್ತಿಕ್, ಶಿವಾನಂದ ಶೆಣೈ ಹೊಸಮಾರ್, ಪತ್ರಕರ್ತ ಪ್ರಕಾಶ್ ಸುವರ್ಣ, ಸ್ಕೂಲ್ ಲೀಡರ್ ತಂಡದ ಸದಸ್ಯರಾದ ಮೋಹನ್ ಪತ್ರೆ, ನಾಗೇಶ್ ಕಾಮತ್, ಅಶ್ವಿನಿ ಸಂದೀಪ್, ಪ್ರಭಾವತಿ ದೇವಾಡಿಗ, ಅನುಸೂಯ ಮತ್ತಿತರರಿದ್ದರು.

ಬೊಳುವಾರಿನಲ್ಲಿ ಬಿರು ಬೇಸಿಗೆಯಲ್ಲೇ ಪೋಲಾಗುತ್ತಿದೆ ಕುಡಿಯುವ ನೀರು..!



ಪುತ್ತೂರು: ಎಲ್ಲೆಡೆ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹಾಹಾಕಾರ ಉಂಟಾಗುತ್ತಿದೆ. ಆದರೆ, ಪುತ್ತೂರಿನ ಬೊಳುವಾರು ಪರಿಸರದಲ್ಲಿ ಸಾರ್ವಜನಿಕ ಕುಡಿಯುವ ನೀರು ವಾರದಿಂದ ವ್ಯಾಪಕ ಪ್ರಮಾಣದಲ್ಲಿ ಪೋಲಾಗುತ್ತಿದೆ.!

ಬೊಳುವಾರಿನಿಂದ ಹಾರಾಡಿ ಚತುಷ್ಪಥ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಆಂಜನೇಯ ಮಂತ್ರಾಲಯದ ಬಳಿಯಲ್ಲಿ ನಗರಕ್ಕೆನೀರು ಸರಬರಾಜಿನ ಪೈಪ್ ಒಡೆದು ವಾರದಿಂದ ರಸ್ತೆಯಲ್ಲೇ ನೀರು ಹರಿಯುತ್ತಿದೆ. 2 ದಿನಗಳಿಂದ ಈ ಹರಿಯುವಿಕೆಯ ಪ್ರಮಾಣ ವ್ಯಾಪಕವಾಗಿದೆ.

ಇಲ್ಲಿ ನೆಕ್ಕಿಲಾಡಿಯಿಂದ ಪುತ್ತೂರು ನಗರಕ್ಕೆ ನೀರು ಪೂರೈಕೆಯಾಗುವ ಜಲಸಿರಿ ಪೈಪ್‌ಲೈನ್,ಬಹುಗ್ರಾಮಕುಡಿಯುವನೀರಿನ ಪೈಪ್‌ಲೈನ್ ಇದೆ. ಆದರೆ ಯಾವ ಪೈಪ್‌ಲೈನ್ ಒಡೆದು ನೀರು ಪೋಲಾಗುತ್ತಿದೆ ಎನ್ನುವುದು ಅರಿವಾಗುತ್ತಿಲ್ಲ. ಇಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸುತ್ತಿರುವ ಲೋಕೋಪಯೋಗಿ ಇಲಾಖೆ ಮಾತ್ರ ನಿರ್ಲಕ್ಷ್ಯ ವಹಿಸಿ ಒಡೆಯುವ ಕೆಲಸ ಮಾಡುತ್ತಿದ್ದಾರೆಂಬ ಆರೋಪ ಸ್ಥಳೀಯರದ್ದು. ನೀರಿಗೆ ತೊಂದರೆ ಪಡುತ್ತಿರುವ ಸಮಯದಲ್ಲಿ ನೀರು ವ್ಯರ್ಥವಾಗುತ್ತಿರುವುದು ಸಾರ್ವ ಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಸಂಬಂಧಿಸಿದ ಸ್ಥಳೀಯಾಡಳಿತ, ಇಲಾಖೆ ಗಳು ಗಮನಹರಿಸಬೇಕಾಗಿದೆ.

ನಿರ್ಲಕ್ಷ್ಯ ವಹಿಸುತ್ತಿದೆ

ಜಲಸಿರಿ ಪೈಪ್‌ಲೈನ್, ಬಹುಗ್ರಾಮ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದ್ದು, ಇದರಿಂದ ಸಮಸ್ಯೆಯಾಗುತ್ತಿದ್ದರೂ ಲೋಕೋಪಯೋಗಿ ಇಲಾಖೆ ಮಾತ್ರ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಸ್ಥಳೀಯರು ಆರೋಪಿಸುತಿದ್ದಾರೆ.

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು: ಬೃಹತ್ ರಕ್ತದಾನ ಶಿಬಿರ



ಪುತ್ತೂರು: ದಾನಗಳಲ್ಲಿ ಅತಿ ಶ್ರೇಷ್ಠವಾದದ್ದು ರಕ್ತದಾನ. ರಕ್ತಕ್ಕೆ ರಕ್ತವೇ ಪರ್ಯಾಯವಲ್ಲದೆ ಅದನ್ನು ಕೃತಕವಾಗಿ ತಯಾರಿಸುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲ, ರಕ್ತದಾನ ಮಾಡುವ ಮೂಲಕ ಅಮೂಲ್ಯ ಜೀವವನ್ನುಳಿಸಿದ ಸಾರ್ಥಕತೆ ಹೊಂದುವುದಲ್ಲದೆ ಆರೋಗ್ಯಕರ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಪುತ್ತೂರಿನ ರೋಟರಿ–ಕ್ಯಾಂಪ್ಕೋ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ರಾಮಕೃಷ್ಣ ರಾವ್ ಹೇಳಿದರು.

ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿ ಯೂತ್ ರೆಡ್‌ಕ್ರಾಸ್ ಮತ್ತು ಎನ್ನೆಸ್ಸೆಸ್ ಘಟಕ ಹಾಗೂ ಪುತ್ತೂರಿನ ರೋಟರಿ ಕ್ಯಾಂಪ್ಕೋ ರಕ್ತನಿಧಿ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯಲ್ಲಿ ನಡೆದ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿತ್ಯವೂ ನೂರಾರು ರೋಗಿಗಳಿಗೆ ರಕ್ತದ ಅವಶ್ಯಕತೆ ಇರುತ್ತದೆ. ಇಂತಹ ಸಂದರ್ಭ ರಕ್ತದಾನ ಸಂಜೀವಿನಿಯಂತೆ ಕೆಲಸ ಮಾಡುತ್ತದೆ. ಸಂಗ್ರಹಿಸಿದ ರಕ್ತವನ್ನು ನೇರವಾಗಿ ರೋಗಿಗೆ ನೀಡಲು ಸಾಧ್ಯವಿಲ್ಲ ಆದಕ್ಕಾಗಿ ರಕ್ತ ನಿಧಿ ಕೇಂದ್ರಗಳಲ್ಲಿ ಇದನ್ನು ಸೂಕ್ತ ಪರೀಕ್ಷೆಗೊಳಪಡಿಸಿಸಂಸ್ಕರಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ವಿಶ್ವಾಸ್ ಶೆಣೈ , ವಿವೇಕಾನಂದ ಸಂಸ್ಥೆ ಸಮಾಜಮುಖಿ ಕಾರ್ಯ ದಲ್ಲಿ ಮುಂಚೂಣಿಯಲ್ಲಿದ್ದು, ಸಮಾಜಕ್ಕೆ ಒಳಿತು ಮಾಡುವ ಕಾರ್ಯದಲ್ಲಿ ನಿರತವಾಗಿದೆ ಎಂದರು.

ಕಾಲೇಜಿನ ಎನ್ನೆಸ್ಸೆಸ್ ಘಟಕ ಸಂಯೋಜಕ ಡಾ. ರಾಜೇಶ್ ಆರ್. ಸ್ವಾಗತಿಸಿ, ಎನ್ನೆಸ್ಸೆಸ್ ಘಟಕ ಸ್ವಯಂಸೇವಕಿ ಹರ್ಷಿತಾ ವಂದಿಸಿ, ಅನೂಷಾ ನಿರೂಪಿಸಿದರು.

ಅವಶ್ಯಕತೆಗೆ ತಕ್ಕಂತೆ ಒಟ್ಟು 53 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ರಕ್ತದಾನ ಶ್ರೇಷ್ಠದಾನ

ರಕ್ತ ದಾನ ಶ್ರೇಷ್ಟವಾದದು. ವ್ಯಕ್ತಿಯೊಬ್ಬನ ಜೀವ ಉಳಿಸುವ ಮಹತ್ಕಾರ್ಯದಲ್ಲಿ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ತೊಡಗಿಸಿಕೊಳ್ಳಬೇಕು.

• ವಿಶ್ವಾಸ್ ಶೆಣೈ

ಶಾಸ್ತಾವು ಭಾರ್ಗವ ಮಿತ್ರ ವೃಂದದಿಂದ ನೂತನ ಆ್ಯಂಬುಲೆನ್ಸ್ ಲೋಕಾರ್ಪಣೆ



ಕೈಕಂಬ: ಬಡಗ ಎಡಪದವಿನ ಶಾಸ್ತಾವು ಶ್ರೀ ಭೂತನಾಥೇಶ್ವರ ದೇವಸ್ಥಾನ ಹಾಗೂ ಭಾರ್ಗವ ಮಿತ್ರವೃಂದದ ವತಿಯಿಂದ ನೂತನ ಆ್ಯಂಬುಲೆನ್ಸ್ ಭಾನುವಾರ ಸಂಜೆ ದೇವಸ್ಥಾನದ ಆವರಣದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಗ್ರಾಮೀಣ ಜನರಿಗೆ ಉಪಯೋಗ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೇವಸ್ಥಾನದ ಆಡಳಿತ ಮೊಕ್ತೇಸರ ಹಾಗೂ ಭಾರ್ಗವ ಮಿತ್ರವೃಂದದ ಗೌರವಾಧ್ಯಕ್ಷ ವಿಜಯನಾಥ ವಿಠಲ ಶೆಟ್ಟಿ ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ತುರ್ತು ಅವಶ್ಯಕತೆಗೆ ಲಭ್ಯವಾಗುವಂತಾಗಬೇಕು ಎಂಬ ಉದ್ದೇಶದಿಂದ ಈ ಆ್ಯಂಬುಲೆನ್ಸ್ ಸೇವೆ ಆರಂಭಿಸಲಾಗಿದೆ ಎಂದರು.

ಭಾರ್ಗವ ಮಹಿಳಾ ಮಿತ್ರವೃಂದ ಎಂಬ ಮಹಿಳಾ ಸಂಘಟನೆಗೆ ಇದೇ ವೇಳೆ ಅಧಿಕೃತವಾಗಿ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ವೈ. ಭರತ್ ಶೆಟ್ಟಿ ಅತಿಥಿಯಾಗಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಪ್ರಮುಖರಾದ ಜನಾರ್ದನ ಗೌಡ ಮುಚ್ಚೂರು, ಮುರಳೀಧರ ಕೋಟ್ಯಾನ್ ಪುತ್ತಿಗೆ, ವಾಸು ಮಾಸ್ಟರ್ ಎಡಪದವು, ಸತೀಶ್ಚಂದ್ರ ಸಾಲ್ಯಾನ್ ಪಾಣಿಲ ಇರುವೈಲು, ಉದ್ಯಮಿ ಶಕ್ತಿಪ್ರಸಾದ್ ಮಿಜಾರ್, ಧರ್ಮದರ್ಶಿ ಮನೋಜ್ ಕುಮಾರ್ ಕಟ್ಟೆಮಾರ್ , ಚಂದನ್ ಆಳ್ವ ದಿವಾರ್, ಉದಯ್ ಶೆಟ್ಟಿ ಮುಂಡಬೆಟ್ಟು, ಭಾರ್ಗವ ಮಿತ್ರವೃಂದದ ಅಧ್ಯಕ್ಷ ಹೇಮಚಂದ್ರ ಶೆಟ್ಟಿ ಕಿನ್ನಿಮಜಲು, ಪದ್ಮ ಶೆಟ್ಟಿ ಮುಂಡಬೆಟ್ಟು, ಮಾಜಿ ಅಧ್ಯಕ್ಷ ತಾರನಾಥ್ ಸಾಲ್ಯಾನ್, ದೇವಸ್ಥಾನದ ಅರ್ಚಕ ಚಂದನ್ ಭಟ್, ತಿಮ್ಮಪ್ಪ ಭಟ್, ಸದಾನಂದ ಶೆಟ್ಟಿ, ಅಮ್ಮಿಯಣ್ಣ ಹಾಗೂ ಮಿತ್ರವೃಂದದ ಸದಸ್ಯರು ಮತ್ತು ಗ್ರಾಮಸ್ಥರು ಮೊದಲಾದವರು ಉಪಸ್ಥಿತರಿದ್ದರು.

ಪದವು ವ್ಯವಸಾಯ ಸೇವಾ ಸಹಕಾರಿ ಸಂಘ: ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ



ಮಂಗಳೂರು: ಪದವು ವ್ಯವಸಾಯ ಸೇವಾ ಸಹಕಾರಿ ಸಂಘದ ಆಶ್ರಯದಲ್ಲಿ ಯೆನೆಪೋಯ ಆಯುರ್ವೇದ ವೈದ್ಯಕೀಯ ಕಾಲೇಜ್ ಮತ್ತು ಆಸ್ಪತ್ರೆ ದೇರಳಕಟ್ಟೆ, ಮಂಗಳೂರು ಇವರ ಸಹಭಾಗಿತ್ವದಲ್ಲಿ ಇತ್ತೀಚೆಗೆ ಸಂಘದ ಸದಸ್ಯರು ಮತ್ತು ಅವರ ಕುಟುಂಬದವರಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಹಾಗೂ ಕಣ್ಣಿನ ಚಿಕಿತ್ಸಾ ಶಿಬಿರವನ್ನು ಸಂಘದ ಪ್ರಧಾನ ಕಚೇರಿಯ ಯಶಸ್ವಿ ಸಭಾಭವನದಲ್ಲಿ ಏರ್ಪಡಿಸಲಾಯಿತು.

ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸುಮನ ಶರಣ್ ವಹಿಸಿದ್ದರು. ಉಪಾಧ್ಯಕ್ಷ ಗೌತಮ್ ನೊರೋನ್ಹಾ, ನಿರ್ದೇಶಕರಾಗಿರುವ ತಾರಾನಾಥ ಬಿ., ಕಿಶೋರ್ ಕುಮಾರ್, ಶಿವರಾಮ ಭಂಡಾರಿ, ಎಂ. ಶ್ರೀನಿಧಿಭಾರಧ್ವಾಜ್,ಸದಾಶಿವಕೋಟ್ಯಾನ್, ಅನಿಲ್ ಕೆ. ರಾವ್, ದೇವಿಪ್ರಸಾದ್, ಜಿನ್ನಪ್ಪ ನ್ಯಾಕ್ ಕೆ., ಗೋಪಾಲ ಸಮಗಾರ ಹಾಗೂ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಪರಶುರಾಮ ಎಂ. ಹಾಜರಿದ್ದರು.

ಶಿಬಿರಕ್ಕೆ ಮಂಗಳೂರು ದಕ್ಷಿಣ ಶಾಸಕ ಡಿ. ವೇದವ್ಯಾಸ್ ಕಾಮತ್ ಆಗಮಿಸಿದ್ದರು. ಯೆನೆಪೋಯ ಆಸ್ಪತ್ರೆಯ ಆಯುರ್ವೇದ ಚಿಕಿತ್ಸಾ ವಿಭಾಗದಿಂದ ಡಾ. ಶಿಲ್ಪ ಮತ್ತು ಕಣ್ಣಿನ ಚಿಕಿತ್ಸಾ ವಿಭಾಗದಿಂದ ಡಾ.ಅಬ್ದುಲ್ ರಜಾಕ್ ಮತ್ತಿತರರು ಉಪಸ್ಥಿತರಿದ್ದರು.

ಶಿಬಿರದಲ್ಲಿ ತಜ್ಞ ವೈದ್ಯರಿಂದ ಸದಸ್ಯರು ಮತ್ತು ಅವರ ಕುಟುಂಬದವರಿಗೆ ಸಾಮಾನ್ಯ ರೋಗ ತಪಾಸಣೆ, ಕಣ್ಣಿನ ತಪಾಸಣೆ, ಕಿವಿ ಮೂಗು ಮತ್ತು ಗಂಟಲು ಸಂಬಂಧಿ ಕಾಯಿಲೆಗಳು, ಚರ್ಮರೋಗ ತಪಾಸಣೆ, ಎಲುಬು –ಕೀಲು ತಪಾಸಣೆ, ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆಯನ್ನು ನಡೆಸಲಾಯಿತು.

ಕನ್ನಡಕ ವಿತರಣೆ

ಸಂಘದಿಂದ ಅಗತ್ಯವುಳ್ಳವರಿಗೆ ಉಚಿತ ಔಷಧ, ಕನ್ನಡಕ ವಿತರಿಸಲಾಯಿತು.

ತೆಲುಗು ಕಲಾ ಸಮಿತಿಯಿಂದ ಯುಗಾದಿ ಆಚರಣೆ: ನೂತನ ಪದಾಧಿಕಾರಿಗಳ ಆಯ್ಕೆ



ಮಂಗಳೂರು: ಮಂಗಳೂರಿನ ತೆಲುಗು ಕಲಾ ಸಮಿತಿಯು ಲಯನ್ಸ್ ಕ್ಲಬ್ ಸುರತ್ಕಲ್‌ನಲ್ಲಿ 'ಶ್ರೀ ಪರಾಭವ ನಾಮ ಸಂವತ್ಸರ ಯುಗಾದಿ'ಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬಳಿಕ ನೆಡೆದ ವಾರ್ಷಿಕ ಮಹಾ ಸಭೆಯಲ್ಲಿ 2026–28 ಕ್ಕೆ ಹೊಸ ಸಮಿತಿಯನ್ನುಆಯ್ಕೆಮಾಡಲಾಯಿತು ನಳಿನಿ ಚೆರುಕೂರಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು.

ನಾಗವರಪು ಶ್ರೀನಿವಾಸ ರಾವ್ ಪ್ರಧಾನ ಕಾರ್ಯದರ್ಶಿಯಾಗಿ, ನಾದೆಳ್ಳ ವೆಂಕಟ ಫಣಿ, ಉಪಾಧ್ಯಕ್ಷರಾಗಿ ರಾವೂರಿ ನಾಗಫಣಿ ಕುಮಾರ್, ಕೋಶಾಧಿಕಾರಿಯಾಗಿ ಕುಮಾರ್ ರಾವ್ ಅಮರ ಮತ್ತು ಚಂದ್ರಶೇಖರ್ ಅವರನ್ನು ಜಂಟಿ ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು. ಪ್ರಭು ನಾಯ್ಡು, ರಾಮಕೃಷ್ಣಅವರನ್ನು ಜಂಟಿ ಕಾರ್ಯದರ್ಶಿಗಳಾಗಿ ಆಯ್ಕೆಯಾದರು.

ಸನ್ಮಾನಿತರು

ನಿ.ಪೂ. ಅಧ್ಯಕ್ಷ ಪ್ರೊ. ಕರ್ರಾ ರಾಮಚಂದ್ರರ್ , ನಿರ್ಗಮಿತ ಕಾರ್ಯದರ್ಶಿ ಇನುಮಲ ಶ್ರೀನಿವಾಸ ರಾವ್ ಅವರನ್ನು ಸನ್ಮಾನಿಸಲಾಯಿತು. ಗೌರವ ಅಧ್ಯಕ್ಷ ನಾದೆಳ್ಳ ಸಾಂಬಶಿವ ರಾವ್ ಮತ್ತು ಸಂಸ್ಥಾಪಕ ಅಧ್ಯಕ್ಷ ಡಾ. ಜಿ.ಆರ್.ಕೃಷ್ಣ ಉಪಸ್ಥಿತರಿದ್ದರು.

ಸದ್ದಿಲ್ಲದೆ ಮರೆಯಾದ 'ಗರುಡ' ಕಾರ್ಯಾಚರಣೆ | ಯಾವುದೇ ಕ್ರಮ ಕೈಗೊಳ್ಳದ ಪುರಸಭೆ ಅಧಿಕಾರಿಗಳು!

ಬಿ.ಸಿ.ರೋಡು, ಬಂಟ್ವಾಳದಾದ್ಯಂತ ರಾರಾಜಿಸುತ್ತಿರುವ ಅನಧಿಕೃತ ಫ್ಲೆಕ್ಸ್‌ಗೆ ಕಡಿವಾಣ ಎಂದು?

ಬಂಟ್ವಾಳ: ಇಲ್ಲಿನ ಪುರಸಭಾ ವ್ಯಾಪ್ತಿಯ ಅಲ್ಲಲ್ಲಿ ಅಳವಡಿಸಲಾದ ಅನಧಿಕೃತ ಫ್ಲೆಕ್ಸ್ ತೆರವುಗೊಳಿಸುವ 'ಗರುಡ' ಹಾರಿಹೋಗಿದೆ! ಚುನಾಯಿತ ಪ್ರತಿನಿಧಿಗಳ ಆಡಳಿತಾವಧಿಯಲ್ಲಿ ಆಗಿನ ಮುಖ್ಯಾಧಿಕಾರಿ ರೇಖಾ ಶೆಟ್ಟಿ ಅನಧಿಕೃತ ಫ್ಲೆಕ್ಸ್‌ಗಳನ್ನು 'ಗರುಡ' ಕಾರ್ಯಾಚರಣೆ ಮೂಲಕ ತೆರವುಗೊಳಿಸುವುದಾಗಿ ಘೋಷಿಸಿ ಬಳಿಕ ತೋರಿಕೆಗೆಂಬಂತೆ ಒಂದೆರಡು ಫ್ಲೆಕ್ಸ್‌ಗಳ ತೆರವು ಕಾರ್ಯಾಚರಣೆ ನಡೆಸಲಾಗಿತ್ತು.

ರೇಖಾ ಶೆಟ್ಟಿ ಅವರು ಇಲ್ಲಿಂದ ವರ್ಗಾವಣೆಯಾಗುತ್ತಿದ್ದಂತೆ 'ಗರುಡ' ಕೂಡ ಅವರ ಹಿಂದೆಯೇ ಹಾರಿ ಹೋಗಿದೆ. ಇದೀಗ ಬಿ.ಸಿ.ರೋಡು, ಬಂಟ್ವಾಳದಾದ್ಯಂತ ಅನಧಿಕೃತ ಫ್ಲೆಕ್ಸ್‌ಗಳದ್ದೇ ಹಾವಳಿಯಾಗಿದ್ದು, ಬಿ.ಸಿ.ರೋಡು ವೃತ್ತ, ಮೇಲ್ಸ್ತುವೆಯ ಅಡಿಭಾಗ, ಬಸ್ ತಂಗುದಾಣ ಬಳಿ ಸಹಿತ ಆಯಕಟ್ಟಿನ ಜಾಗದಲ್ಲಿ ಫ್ಲೆಕ್ಸ್‌ಗಳೇ ರಾರಾಜಿಸುತ್ತಿದೆ. ಒಂದೊಮ್ಮೆ ತಾಲೂಕಾಡಳಿತ ರಸ್ತೆ ಬದಿ ಅಪಾಯಕಾರಿ ಸ್ಥಿತಿಯಲ್ಲಿ ಫ್ಲೆಕ್ಸ್ ಅಳವಡಿದಂತೆ ಎಚ್ಚರಿಕೆ ನೀಡಿತ್ತು. ಆದರೆ ಅನುಮತಿ ಪಡೆಯುವುದು ಬಿಡಿ,ರಸ್ತೆ ಬದಿ ಅಪಾಯಕಾರಿ ರೀತಿಯಲ್ಲಿ ಫ್ಲೆಕ್ಸ್ ಅಳವಡಿಸುವುದನ್ನು ನಿರ್ಬಂಧಿಸಲು ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ, ಸ್ಥಳೀಯ ಪೊಲೀಸ್ ಇಲಾಖೆ ಶಿಫಾರಸ್ಸಿನ ಮೇರೆ ನಿಗದಿತ ಸ್ಥಳದಲ್ಲಿ ಮಾತ್ರ ಫ್ಲೆಕ್ಸ್ ಅಳವಡಿಸಲು ಪುರಸಭೆ ಅವಕಾಶ ಕಲ್ಪಿಸಬೇಕೆಂಬ ಚರ್ಚೆ ನಡೆದಿತ್ತಾದರೂ ರಸ್ತೆ ಬದಿ ಅಪಾಯಕಾರಿ ರೀತಿಯಲ್ಲಿ ಫ್ಲೆಕ್ಸ್ ಅಳವಡಿಸುವಾಗ ಇದೆಲ್ಲ ಗೌಣವಾಗಿ ಬಿಟ್ಟಿದೆ.

ನಾರಾಯಣಗುರು ವೃತ್ತದಲ್ಲಿ ಅಪಾಯಕಾರಿ ತಿರುವುಗಳಿದ್ದು, ಈಗಾಗಲೇ ಇಲ್ಲಿ ವಾಹನ ಅಪಘಾತಗಳಿಂದಾಗಿ ಸಾಕಷ್ಟು ಸಾವು, ನೋವುಗಳು ಉಂಟಾಗಿದೆ. ಹೀಗಿದ್ದು ವೃತ್ತದ ಅಕ್ಕಪಕ್ಕ ಸುತ್ತಲು ಅನಧಿಕೃತವಾಗಿ ಫ್ಲೆಕ್ಸ್‌ಗಳೇ ರಾರಾಜಿಸುತ್ತಿದೆ.





ಧರಾಶಾಹಿಯಾದ ಫ್ಲೆಕ್ಸ್

ಬಿ.ಸಿ.ರೋಡಿನ ನಾರಾಯಣ ಗುರು ವೃತ್ತದ ಸುತ್ತ ಅನಧಿಕೃತ ಫ್ಲೆಕ್ಸ್‌ಗಳು ತುಂಬಿವೆ. ಸೋಮವಾರ ರಾತ್ರಿ ಈ ವೃತ್ತದ ಬಳಿ ಅಳವಡಿಸಲಾಗಿದ್ದ ಎರಡು ಫ್ಲೆಕ್ಸ್‌ಗಳು ಧರಾಶಾಹಿಯಾಗಿವೆ. ಈ ಫ್ಲೆಕ್ಸ್ ಗಳು ಹಿಂಭಾಗಕ್ಕೆ ಕವಚಿ ಬಿದ್ದಿರುವುದರಿಂದ ರಸ್ತೆಯಲ್ಲಿ ಉಂಟಾಗಬಹುದಾದ ಅಪಾಯವೊಂದು ತಪ್ಪಿದೆ.

ಆದಾಯಕ್ಕೂ ಖೋತಾ!

ಅನಧಿಕೃತ ಫ್ಲೆಕ್ಸ್ ಅಳವಡಿಕೆಯಿಂದ ಒಂದೆಡೆ ಪುರಸಭೆಯ ಆದಾಯಕ್ಕು ಖೋತಾ! ಆದರೂ ಪುರಸಭೆಯ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಮಾತ್ರ ವಿಪರ್ಯಾಸವಾಗಿದೆ.

ಚುನಾಯಿತ ಪ್ರತಿನಿಧಿಗಳ ಆಡಳಿತವಿದ್ದಾಗ ಪುರಸಭೆಗೆ ಆದಾಯ ಬರುವ ನಿಟ್ಟಿನಲ್ಲಿ ಫ್ಲೆಕ್ಸ್ ಅಳವಡಿಕೆಗೆ ಕಡ್ಡಾಯ ಶುಲ್ಕ ಪಾವತಿಸಿ ಪರವಾನಿಗೆ ಪಡೆಯಬೇಕೆಂಬ ತೀರ್ಮಾನ ಕೈಗೊಂಡಿತ್ತಾದರೂ, ಸದ್ಯ ಪುರಸಭಾ ವ್ಯಾಪ್ತಿಯಲ್ಲಿ ಅಳವಡಿಸಲಾದ ಫ್ಲೆಕ್ಸ್‌ಗಳ್ಯಾವುದಕ್ಕು ಶುಲ್ಕ ವಸೂಲಿ ಮಾಡಿರುವ ಉದಾಹರಣೆ ಇಲ್ಲ, ಫ್ಲೆಕ್ಸ್ ಅಳವಡಿಸುವವರು ಪುರಸಭೆಗೆ ಶುಲ್ಕ ಪಾವತಿಸಿ ಇಂತಿಷ್ಟು ದಿನದ ಮಟ್ಟಿಗೆ ಪರವಾನಿಗೆ ಪಡೆದ ನಿದರ್ಶನ ಕಡಿಮೆಯೇ ! ಅಭಿನಂದನೆ, ಧಾರ್ಮಿಕ,ಉದ್ಘಾಟನಾ ಕಾರ್ಯಕ್ರಮ ಗಳ ಸಹಿತ ವಿವಿಧ ಫ್ಲೆಕ್ಸ್‌ಗಳು ಉಚಿತ ಅಳವಡಿಸಲು ಪುರಸಭೆ ಅವಕಾಶ ಕಲ್ಪಿಸಿದಂತಿದೆ.

ಪಾಲನೆಯಾಗದ ಆದೇಶ

ಬ್ಯಾನರ್, ಫ್ಲೆಕ್ಸ್ ಅಳಡಿಸುವುದಿದ್ದರೆ ಕಡ್ಡಾಯ ಅನುಮತಿ ಪಡೆಯಬೇಕು, ಬಟ್ಟೆಯ ಬ್ಯಾನರ್‌ಗೆ ಮಾತ್ರ ಅವಕಾಶವಿದ್ದು,ತಪ್ಪಿದಲ್ಲಿ ಯಾವುದೇ ಸೂಚನೆ ನೀಡದೆ ಅಂತಹ ಫ್ಲೆಕ್ಸ್‌ಗಳನ್ನು ತೆರವುಗೊಳಿಸಲಾಗುವುದು. ಹೀಗಂತ ಜ.31ರಂದು ಬಂಟ್ವಾಳ ಪುರಸಭೆ ಅಧಿಕೃತ ಆದೇಶ ಹೊರಡಿಸಿತ್ತು. ಬಿ.ಸಿ.ರೋಡು ಮಾತ್ರವಲ್ಲ ಪುರಸಭಾ ವ್ಯಾಪ್ತಿಯ ಬಂಟ್ವಾಳ, ಪಾಣೆಮಂಗಳೂರು, ಮೆಲ್ಕಾರ್ ಮೊದಲಾದೆಡೆಯಲ್ಲು ಅನಧಿಕೃತ ಫ್ಲೆಕ್ಸ್‌ಗೇನು ಕೊರತೆಯಿಲ್ಲ, ಆದೇಶ ಹೊರಡಿಸಿದವರೇ ಇದನ್ನು ಪಾಲಿಸುತ್ತಿಲ್ಲ ಅಂದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬುದೇ ಮುಂದಿರುವ ಪ್ರಶ್ನೆಯಾಗಿದೆ.